ಹೈಯರ್ ಸೆಕೆಂಡರಿ

# ಕನ್ನಡ

ಐಚ್ಛಿಕ

HIGHER SECONDARY

# KANNADA

OPTIONAL

## ತರಗತಿ

## XI

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

*ತಯಾರಿಸಿದವರು*

**ರಾಜ್ಯ ವಿದ್ಯಾಭ್ಯಾಸ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ**

**2015**

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by :*

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition : 2014
Typesetting : SCERT
Lay out : SCERT
Cover design : SCERT
Printed at : Centre for Advanced Printing and Training, Thiruvananthapuram-695013
© Department of Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಕನ್ನಡವು ಪರಂಪರೆಯಿಂದಲೂ ಸಾಹಿತ್ಯ ಸಂಪತ್ತಿನಿಂದಲೂ ಸಮೃದ್ಧವಾದ ಭಾಷೆಯಾಗಿದೆ. ಶಾಸ್ತ್ರೀಯ ಭಾಷೆಯ ಸ್ಥಾನಮಾನವು ಕನ್ನಡಕ್ಕೆ ಲಭಿಸಿದೆ. ಹೈಯರ್ ಸೆಕೆಂಡರಿಯಲ್ಲಿ ಐಚ್ಛಿಕ ವಿಷಯವಾಗಿ ಕನ್ನಡವನ್ನು ಕಲಿಯುತ್ತಿರುವವರಿಗಾಗಿ ಸಿದ್ಧಪಡಿಸಿದ ಈ ಪುಸ್ತಕದಲ್ಲಿ ಐದು ವಿಭಾಗಗಳಲ್ಲಾಗಿ ನಿಮ್ಮ ಮನಸೂರೆಗೊಳಿಸುವಂತಹ ಸಣ್ಣಕತೆ, ಕವಿತೆ, ವಚನ, ಕೀರ್ತನೆ, ಜಾನಪದ, ವಿಮರ್ಶೆ, ಖಂಡಕಾವ್ಯ, ಕಾದಂಬರಿ ಇತ್ಯಾದಿ ಪ್ರಕಾರಗಳನ್ನು ಕೊಡಲಾಗಿದೆ. ನಿಮ್ಮ ಆಶಯಗಳನ್ನೂ, ಭಾವನೆಗಳನ್ನೂ, ಅನುಭವಗಳನ್ನೂ ಹಂಚಿಕೊಳ್ಳಲು ಮತ್ತು ಪ್ರಕಟಿಸಲು ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು, ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಾವೆಲ್ಲ ಒಂದಾಗಿ ಶ್ರಮಿಸೋಣ ಎಂದು ಹಾರೈಸುತ್ತಾ.

ಪ್ರೀತಿಪೂರ್ವಕ ಹಾರೈಕೆಗಳೊಂದಿಗೆ,

**ಪ್ರೊ. ಕೆ.ಎ. ಹಾಶಿಂ**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXTBOOK DEVELOPMENT TEAM

## KANNADA OPTIONAL
## STANDARD XI

### Participants

Harisha N., HSST Kannada, HHSIB Swamiji's HSS, Edneer, Kasaragod.
Hemalatha T.K., HSST (Jr) Kannada, GHSS, Bandadka.
Prakasha N. HSST (Jr) Kannada, GFHSS, Bekal
Saraswathi Prasanna P.N., HSST Kannada, SSHSS, Katukukke.
Vishwanatha O., HSST (Jr) Kannada, GHSS, Udma.

### Experts

Dr. M. Rama, Prof. (Rtd.) Kerala University, Thiruvananthapuram.

Dr. Srikrishna Bhat P., Prof. (Rtd.) Govt. College, Kasaragod.

Dr. Maheshwari U., HOD, Kannada, Govt. College, Kasaragod.

Shreenatha A., Vice Principal, Govt. College, Kasaragod.

### External Experts

Dr. Subrahmanya Bhat, Rtd. HOD, Kannada, Govt. college, Kasaragod.
Padmanabha Poojari K., Rtd. Professor, Kannada, Govt. college, Kasaragod.

### Artist

Dinesh Holla, Mangaluru.

### Academic Co-ordinator

Dr. C. Bhamini, Research Officer SCERT, Thiruvananthapuram.

---

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಅನುಕ್ರಮಣಿಕೆ


| | | ಪುಟ ಸಂಖ್ಯೆ |
|---|---|---|
| **1.** | **ವಚನ ಸಿರಿ** | 7–18 |
| | • ಅಳಿಮನದವನ ಭಕ್ತಿ – ಜೇಡರ ದಾಸಿಮಯ್ಯ | |
| | • ದಯೆಯೇ ಧರ್ಮದ ಮೂಲವಯ್ಯ – ಬಸವಣ್ಣ | |
| | • ಚಂದನದ ಕಂಪು – ಅಕ್ಕಮಹಾದೇವಿ | |
| | • ಕಲಿಸು ಜೀವನ ಕಲೆಯ – ಎಸ್. ವಿ. ಪರಮೇಶ್ವರ ಭಟ್ಟ | |
| **2.** | **ಕೀರ್ತನ ಮಾಧುರಿ** | 19–28 |
| | • ಬೇವು ಬೆಲ್ಲದೊಳಿಡಲೇನು ಫಲ– ಪುರಂದರದಾಸ | |
| | • ಸತ್ಯವಂತರ ಸಂಗವಿರಲು ತೀರ್ಥವೇತಕೆ – ಕನಕದಾಸ | |
| | • ಮಳೆಯ ದಯಮಾಡೊ – ಹೆಳವನಕಟ್ಟೆ ಗಿರಿಯಮ್ಮ | |
| **3.** | **ಜನಪದ ಕುಸುಮ** | 29–36 |
| | • ಉತ್ರಾಜಿ – ಜನಪದ ಗೀತೆ | |
| | • ಕಣ್ಣ ಮುಂದೈತೆ ಕೈಲಾಸ – ಜನಪದ ತ್ರಿಪದಿಗಳು | |
| **4.** | **ಕಾವ್ಯ ಕಸ್ತೂರಿ** | 37–64 |
| | • ವೈಶಾಖ ಪೂರ್ಣಿಮಿಯ ಮಾರ್ತಂಡನುದಯಿಸಿದಂ – ಗೋವಿಂದ ಪೈ | |
| | • ಮೊದಲಗಿತ್ತಿ – ಅಂಬಿಕಾತನಯದತ್ತ | |
| | • ಅಶ್ವತ್ಥಾಮ – ಸು.ರಂ. ಎಕ್ಕುಂಡಿ | |
| | • ಬರಿಗೊಡಗಳಿಗೆ ಸಮಾಧಾನ – ಕೆ. ಎಸ್. ನರಸಿಂಹಸ್ವಾಮಿ | |
| | • ಪೆಂಟಯ್ಯನ ಅಂಗಿ – ಕೆ. ವಿ. ತಿರುಮಲೇಶ್ | |
| | • ಪೆಟ್ರೋಮ್ಯಾಕ್ಸ್ ಹೊತ್ತವರು – ಜಂಬಣ್ಣ ಅಮರಚಿಂತ | |
| | • ಬೆಳಸು – ಸವಿತಾ ನಾಗಭೂಷಣ | |
| **5.** | **ಗದ್ಯ ಚಂದನ** | 65–158 |
| | • ಪಂಜರ ಪರೀಕ್ಷೆ – ಕೆಂಪು ನಾರಾಯಣ | |
| | • ಹೇಮಕೂಟದಿಂದ ಬಂದಮೇಲೆ – ಶ್ರೀನಿವಾಸ | |
| | • ಬಾಶಿಂಗ ಬಲ – ಶ್ರೀನಿವಾಸ ವೈದ್ಯ | |
| | • ಚಂದ್ರಗಿರಿಯ ತೀರದಲ್ಲಿ – ಡಾ. ಸಾರಾ ಅಬೂಬಕ್ಕರ್ | |
| | • ಹಸು ಪುಣ್ಯಕೋಟಿ ಮತ್ತು ಹುಲಿ ಅರ್ಭುತ – ಪು.ತಿ.ನ. | |
| | • ತಾಳಮದ್ದಲೆ – ಎಂ. ಪ್ರಭಾಕರ ಜೋಷಿ | |
| | • ಏಳಯ್ಯ ಬೆಳಗಾಯಿತು – ಅ.ರಾ. ಮಿತ್ರ | |
| | • ಪತ್ರಿಕೋದ್ಯಮ | |
| | • ಕನ್ನಡ ಭಾಷೆ ಮತ್ತು ಸಾಹಿತ್ಯ | |
| | **ಅನುಬಂಧ** | 159–162 |

# ಭಾರತದ ಸಂವಿಧಾನ

## ಭಾಗ 4(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.


(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ, ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ವಚನಸಿರಿ

ಸುಮಾರು 12ನೆಯ ಶತಮಾನದಲ್ಲಿ ಬೆಳೆದು ಬಂದ ಸಾಹಿತ್ಯದ ಒಂದು ಪ್ರಕಾರವೇ 'ವಚನ'. ವಚನ ಎಂದರೆ ಮಾತು, ನುಡಿ ಎಂಬರ್ಥಗಳಿವೆ. ಶಿವಶರಣರು ತಮ್ಮ ಅನುಭವದಿಂದ ನುಡಿದ ಮಾತುಗಳೇ ವಚನಗಳು. ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಅಸಮಾನತೆಗಳನ್ನು ಹೋಗಲಾಡಿಸುವುದು ವಚನಕಾರರ ಮುಖ್ಯಉದ್ದೇಶ. ನಡುಗನ್ನಡ ಕಾಲದಲ್ಲಿ ಉಂಟಾದ ಆಧ್ಯಾತ್ಮಿಕ ಸ್ಥಿತ್ಯಂತರ ಸಾಹಿತ್ಯರೂಪದಲ್ಲಿ ಅಭಿವ್ಯಕ್ತಿ ಪಡೆದವುಗಳಲ್ಲಿ ವಚನಗಳ ವೈಶಿಷ್ಟ್ಯ ಹಿರಿದು. ಅಚ್ಚಗನ್ನಡ ಶೈಲಿ, ಜನ ಸಾಮಾನ್ಯರ ಪದಪ್ರಯೋಗಗಳು ವಚನಗಳ ಮಹತ್ವವನ್ನು ಸಾರುತ್ತವೆ. ದೈವಭಕ್ತಿ, ಆಚಾರ–ವಿಚಾರ, ಕಾಯಕ ನಿಷ್ಠೆ, ದಾಸೋಹ, ಸ್ತ್ರೀ–ಪುರುಷ ಸಮಾನತೆ, ಮೇಲು–ಕೀಳು ಎಂಬ ಅಸಮಾನತೆಯ ದೂರೀಕರಣ ಇತ್ಯಾದಿಗಳನ್ನು ವಚನಗಳಲ್ಲಿ ಕಾಣಬಹುದು. ಶಿವಶರಣರು ವಚನಗಳಲ್ಲಿ ತಮ್ಮ ಇಷ್ಟದೈವದ ಮುಂದೆ ಅಂತರಂಗದ ದನಿಯನ್ನು ನಿವೇದಿಸಿದ್ದಾರೆ. ಸಾರ್ವಕಾಲಿಕ, ಸಾಮಾಜಿಕ ಮೌಲ್ಯಗಳನ್ನು ಅಭಿವ್ಯಕ್ತಿಪಡಿಸಿದ್ದಾರೆ. ವಚನ ಸಾಹಿತ್ಯದಲ್ಲಿ ಜೇಡರ ದಾಸಿಮಯ್ಯನನ್ನು ಆದ್ಯವಚನಕಾರನೆಂದು ಗುರುತಿಸಲಾಗಿದೆ.

ಕಾಯಕನಿಷ್ಠೆಯ ಮಹತ್ವವನ್ನು ಸಾರುವ ಬಸವಣ್ಣನವರ ವಚನಗಳು ಕ್ರಾಂತಿಕಾರಕವಾದವುಗಳು. ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಮಾದಾರಚೆನ್ನಯ್ಯ, ಡೋಹರಕಕ್ಕಯ್ಯ, ಗಜೇಶ ಮಸಣಯ್ಯ, ಚೆನ್ನಬಸವಣ್ಣ, ಅಮುಗೆ ರಾಯಮ್ಮ, ಅಲ್ಲಮಪ್ರಭು ಮೊದಲಾದವರು ವಚನಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವಾದುದು.

ಆಧುನಿಕ ಕಾಲದಲ್ಲಿಯೂ ವಚನಗಳ ಮಹತ್ವ ಕುಸಿಯಲಿಲ್ಲ. ಎಸ್.ವಿ. ಪರಮೇಶ್ವರ ಭಟ್ಟ, ಸಿದ್ಧಯ್ಯ ಪುರಾಣಿಕ, ಕಮಲಾ ಹಂಪನಾ, ಅಮೃತ ಸೋಮೇಶ್ವರ ಮೊದಲಾದವರು ಆಧುನಿಕ ಕಾಲದಲ್ಲಿ ವಚನಗಳನ್ನು ರಚಿಸಿದರು. ವಚನಗಳ ಸ್ವರೂಪ, ವೈಶಿಷ್ಟ್ಯ ಹಾಗೂ ಅವು ಸಾರುವ ಮೌಲ್ಯಗಳನ್ನು ಗುರುತಿಸುವುದು ಈ ಘಟಕದ ಮುಖ್ಯ ಉದ್ದೇಶ. ಪ್ರಮುಖ ವಚನಕಾರರಾದ ಜೇಡರದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿಯವರ ವಚನಗಳು ಮತ್ತು ಆಧುನಿಕ ವಚನಕಾರರಲ್ಲಿ ಎಸ್.ವಿ. ಪರಮೇಶ್ವರ ಭಟ್ಟರ ವಚನಗಳು ಇವುಗಳನ್ನು ಈ ಘಟಕದಲ್ಲಿ ಅಭ್ಯಾಸಕ್ಕಾಗಿ ಅಳವಡಿಸಲಾಗಿದೆ.



# ಅಳಿಮನದವನ ಭಕ್ತಿ

*ಜೇಡರ ದಾಸಿಮಯ್ಯ*

ಅಳಿಮನದವನ ಭಕ್ತಿ ನಿರರ್ಥಕವೆಂದು ಸಾರುವ ವಚನಕಾರ ಇಲ್ಲಿ ಶರಣರ ಅನುಭಾವದ ನುಡಿ ಸರ್ವಶ್ರೇಷ್ಠವಾದ ಸಂಪತ್ತೆಂದೂ ಆಧ್ಯಾತ್ಮಿಕ ಬದುಕಿಗೆ ದಾರಿದೀಪವೆಂದೂ ಘೋಷಿಸುತ್ತಾನೆ. ಕಷ್ಟ ಬಂದಾಗ ಮಾತ್ರ ದೇವರನ್ನು ನೆನೆಯುವ, ಆ ಕಷ್ಟವು ಮರೆಯಾದ ಬೆನ್ನಲ್ಲೇ ದೇವರನ್ನು ಮರೆತು ಬಿಡುವ ಲೋಕರೂಢಿಯನ್ನು ವಿಡಂಬಿಸಿದ್ದಾನೆ.



ಎಡರಡಸಿದಲ್ಲಿ ಮೃಡ ನಿಮ್ಮ ನೆನೆವರು
ಎಡರಡಸಿದ ವಿಪತ್ತು ಕಡೆಯಾಗಲೊಡನೆ
ಮೃಡ, ನಿಮ್ಮನೆಡಹಿಯೂ ಕಾಣರು ರಾಮನಾಥ.

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕಂಜಿ
ಕಳವೆಯೆಲ್ಲ ಹೋಗಿ ಬರಿಗೋಣಿ ಉಳಿಯಿತ್ತು!
ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ.

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರೆಗಳಿಗೆ
ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ.

ಕಡೆಗೀಲಿಲ್ಲದ ಬಂಡಿ ಹೊಡೆಗೆಡಹದೆ ಮಾಬುದೆ?
ಕಡೆಗೀಲು ಬಂಡಿಗಾಧಾರ
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ.

ಒರತೆಗಳ ಕಂಡಿಂತು ಕೆಲರು ಬಾವಿಯ ತೋಡೆಂಬರು!
ಅರವಟ್ಟಿಗೆ ಛತ್ರವು ತಮ್ಮದೆಂಬರು
ಎಲೆ ಪೈಯಿರೈದದಿರೆ, ಸುರಿವ ಮಳೆ ಸುರಿಸದಿದ್ದರೆ
ಅವರೇತರಲ್ಲಿ ನೀಡುವರಯ್ಯ! ರಾಮನಾಥ.

## ಜೇಡರ ದಾಸಿಮಯ್ಯ

ಜೇಡರ ದಾಸಿಮಯ್ಯನನ್ನು ಆದ್ಯವಚನಕಾರನೆಂದು ಗುರುತಿಸಲಾಗಿದೆ. ಈತನ ಊರು ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು. ಮುದನೂರಿನ ರಾಮನಾಥ ಇವನ ಆರಾಧ್ಯದೈವ. 'ರಾಮನಾಥ' ಎಂಬುದು ಈತನ ವಚನಗಳ ಅಂಕಿತವೂ ಆಗಿದೆ. ಇವನು ೧೧ನೇ ಶತಮಾನದ ಮಧ್ಯಭಾಗದಲ್ಲಿ ಜೀವಿಸಿದ್ದನು. ವೃತ್ತಿಯಲ್ಲಿ ನೇಯ್ಗೆಯವನು. ಇವನ ಸುಮಾರು ೧೫೦ ರಷ್ಟು ವಚನಗಳು ದೊರೆತಿವೆ. ಇವುಗಳು ಸರಳ, ಸುಂದರ ಉಪಮಾನಗಳಿಂದ, ಅರ್ಥದ ಹಿರಿತನದಿಂದ ಆಕರ್ಷಿಸುತ್ತವೆ. ಭಕ್ತಿಯ ಮೇಲ್ಮೆ, ಉತ್ಕಟವಾದ ವೀರಶೈವ ನಿಷ್ಠೆಯನ್ನು ಇವುಗಳಲ್ಲಿ ಕಾಣಬಹುದು. ಬಸವಣ್ಣ ಮೊದಲಾದ ಮುಂದಿನ ಎಲ್ಲ ಶಿವಶರಣರ ಮೇಲೆ ಈತನ ಪ್ರಭಾವವಿದೆ.

### ಪದಗಳ ಅರ್ಥ

ಎಡರು – ತೊಂದರೆ; ತಡೆ
ಮೃಡ – ಶಿವ
ಅಳಿಮನದವ – ಶುದ್ಧ ಭಕ್ತಿ ಇಲ್ಲದವ
ಕರಿ – ಆನೆ
ಸೂಳ್ನುಡಿ – ಶ್ರೇಷ್ಠನುಡಿ
ಕಡೆಗೀಲು – ಬಂಡಿಯ ಕೊನೆಯ ಕೀಲು
ಗಡಣ – ಸಮೂಹ
ಒರತೆ – ನೀರಿನ ಒಸರು
ಐದದಿರೆ – ಬರದಿದ್ದರೆ
ಅಡಸು – ಬಂದೊದಗು
ಕಡೆಯಾಗು – ಕೊನೆಯಾಗು
ಎಡಹು – ಮುಗ್ಗರಿಸು; ಎಡವು
ಅರವಟ್ಟಿಗೆ – ದಾರಿಹೋಕರಿಗೆ ನೀರುಣಿಸುವ ತಾಣ,
ಕಳವೆ – ಧಾನ್ಯ

### ಚಟುವಟಿಕೆಗಳು

- 'ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ ........ ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ' ಈ ವಚನದ ಸ್ವಾರಸ್ಯವನ್ನು ಬರೆಯಿರಿ.
- ಪ್ರಕೃತಿಯೆಲ್ಲವೂ ಭಗವಂತನ ಅನುಗ್ರಹ ಎಂಬುದನ್ನು ಜೇಡರ ದಾಸಿಮಯ್ಯ ತನ್ನ ವಚನಗಳಲ್ಲಿ ಅಭಿವ್ಯಕ್ತಿಪಡಿಸಿದ ಬಗೆಯನ್ನು ತಿಳಿಸಿರಿ.
- ವಚನಗಳಲ್ಲಿ ಮೂಡಿ ಬಂದಿರುವ ಸಾಮಾಜಿಕ ವಿಡಂಬನೆಯನ್ನು ಗುರುತಿಸಿ ಟಿಪ್ಪಣಿ ಬರೆಯಿರಿ.

# ದಯೆಯೇ ಧರ್ಮದ ಮೂಲವಯ್ಯಾ

**ಬಸವಣ್ಣ**

ಮಾತಿನ ಮಹತ್ವವನ್ನು, ದಯೆಯೇ ಧರ್ಮದ ಮೂಲವೆಂಬ ತತ್ವವನ್ನು ಪ್ರತಿಪಾದಿಸುವ ಬಸವಣ್ಣನವರು ಆತ್ಮಶೋಧನೆಯೊಂದಿಗೆ ಸಮಾಜ ವಿಮರ್ಶೆಯನ್ನು ನಡೆಸುತ್ತಾರೆ.



ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ!

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ

ಎನ್ನವರೊಲಿದು ಹೊನ್ನಶೂಲದಲ್ಲಿಕ್ಕಿದರೆನ್ನ ಹೊಗಳಿ, ಹೊಗಳಿ!
ಎನ್ನ ಹೊಗಳತೆ ಎನ್ನನಿಮ್ಮೈಗೊಂಡಿತಲ್ಲಾ।
ಅಯ್ಯಾ! ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ।
ಅಯ್ಯೋ ನೊಂದೆನು, ಸೈರಿಸಲಾರೆನು.
ಕೂಡಲ ಸಂಗಮದೇವಾ, ನೀನೆನಗೊಳ್ಳಿದನಾದರೆ
ಎನ್ನ ಹೊಗಳತೆಗಡ್ಡ ಬಾರಾ ಧರ್ಮೀ!

ಏನು ಬಂದಿರಿ, ಹದುಳವಿದ್ದಿರೆ? ಎಂದಡೆ
ನಿಮ್ಮೈಸಿರಿ ಹಾರಿ ಹೋಹುದೆ?
ಕುಳ್ಳಿರೆಂದಡೆ ನೆಲ ಕುಳಿ ಹೋಹುದೆ?
ಒಡನೆ ನುಡಿದಡೆ ಸಿರ–ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿರ್ದಡೆ
ಮೂಗ ಕೊಯ್ವುದ ಮಾಬನೆ ಕೂಡಲ ಸಂಗಮದೇವಯ್ಯ?

## ಬಸವಣ್ಣ

‘ಭಕ್ತಿ ಭಂಡಾರಿ’ ಎಂದೇ ಪ್ರಸಿದ್ಧರಾದ ಬಸವಣ್ಣನವರು ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದರು. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಕಲಚುರಿ ಬಿಜ್ಜಳನ ಆಸ್ಥಾನದಲ್ಲಿ ಕರಣಿಕ, ಭಂಡಾರಿ, ಮಂತ್ರಿ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ‘ಕಾಯಕವೇ ಕೈಲಾಸ’ ಎಂಬುದು ಇವರ ಧ್ಯೇಯ. ‘ಕೂಡಲಸಂಗಮದೇವ’ ಎಂಬುದು ಬಸವಣ್ಣನವರ ವಚನಗಳ ಅಂಕಿತ. ಸಮಾಜದಲ್ಲಿ ನೆಲೆಯೂರಿರುವ ಜಾತಿಪದ್ಧತಿ, ವರ್ಣವ್ಯವಸ್ಥೆ, ಸ್ತ್ರೀ ಪುರುಷ ಅಸಮಾನತೆಗಳ ವಿರುದ್ಧ ದನಿಯೆತ್ತಿದ ಬಸವಣ್ಣನವರು ಧಾರ್ಮಿಕ, ಸಾಮಾಜಿಕ ಕ್ರಾಂತಿಯ ನೇತಾರರೆನಿಸಿದರು. ದಾಸೋಹಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತರು. ಸರಳವಾದ ಉಪಮೆ, ರೂಪಕಗಳ ಮೂಲಕ ಇವರು ತಮ್ಮ ವಚನಗಳನ್ನು ಕಟ್ಟಿದ್ದಾರೆ. ಇವರನ್ನು ಕುರಿತು ಇತರ ಕವಿಗಳು ರಚಿಸಿದ ಬಸವರಾಜದೇವರ ರಗಳೆ, ಬಸವಪುರಾಣ, ವೃಷಭೇಂದ್ರವಿಜಯ ಮುಂತಾದ ಕೃತಿಗಳು ಪ್ರಸಿದ್ಧವಾಗಿವೆ.

### ಪದಗಳ ಅರ್ಥ

ಮನ್ನಣೆ – ಗೌರವ

ನಿಮ್ಮೈಸಿರಿ (ನಿಮ್ಮ+ಐಸಿರಿ) – ನಿಮ್ಮ ಸಂಪತ್ತು

ಮಾಬನೆ – ಮಾಣ್ಬನೆ; ಮಾಡದೆ ಬಿಡುತ್ತಾನೆಯೇ

ಏವುದು – ಯಾವುದು

ಇಮ್ಮೈ – ಎರಡು ಮಗ್ಗಲು

ಕುಳಿ – ತಗ್ಗು

ಹದುಳ – ಕ್ಷೇಮ

ದೀಪ್ತಿ – ಕಾಂತಿ

ಸಲಾಕೆ – ಸರಳು; ಸಲಿಕೆ

ಇಕ್ಕು – ಹೊಡೆ

ಅಲಗು – ಕತ್ತಿಯ ಬಾಯಿ

ಒಳ್ಳಿದ – ಒಳ್ಳೆಯವನು

### ಚಟುವಟಿಕೆಗಳು

- ಮನುಷ್ಯನ ಯಶಸ್ಸಿನಲ್ಲಿ ಮಾತಿನಂತೆ ನಡೆಯುವುದು ಎಷ್ಟು ಅಗತ್ಯ ಎಂಬುದನ್ನು ಬಸವಣ್ಣನವರ ವಚನದ ಹಿನ್ನೆಲೆಯಲ್ಲಿ ಚರ್ಚಿಸಿರಿ.
- ಮನುಷ್ಯನಲ್ಲಿ ಸಾಮಾನ್ಯವಾಗಿ ಇರಬೇಕಾದ ಗುಣನಡತೆಗಳ ಬಗ್ಗೆ ಬಸವಣ್ಣನವರ ಅನಿಸಿಕೆಗಳನ್ನು ಚುಟುಕಾಗಿ ಬರೆಯಿರಿ.
- ಬಸವಣ್ಣನವರು ತಮ್ಮ ವಚನಗಳಲ್ಲಿ ವ್ಯಕ್ತಪಡಿಸುವ ಆಶಯಗಳು ಇಂದಿನ ಸಮಾಜಕ್ಕೆ ಎಷ್ಟರ ಮಟ್ಟಿಗೆ ಅನ್ವಯವಾಗುತ್ತದೆ? ಕಿರುಲೇಖನ ಬರೆಯಿರಿ.
- ಬಸವಣ್ಣನವರ ಜೀವನ ಚರಿತ್ರೆಯನ್ನು ಸಂಗ್ರಹಿಸಿ ಬರೆಯಿರಿ.
- ವಚನಗಳ ಧ್ವನಿ ಸುರುಳಿಯನ್ನು ಆಲಿಸಿರಿ.

# ಚಂದನವ ಕಂಪು

**ಅಕ್ಕಮಹಾದೇವಿ**

ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ದೃಢಭಕ್ತಿಯನ್ನು ಬಿಡದ ಸಂಕಲ್ಪ ಅಕ್ಕಮಹಾದೇವಿಯದ್ದು. ಸ್ತುತಿ, ನಿಂದೆಗಳನ್ನು ಸಮಭಾವದಿಂದ ಸ್ವೀಕರಿಸುವ ಮನೋಭಾವವನ್ನು ರೂಢಿಸಿಕೊಳ್ಳಬೇಕು ಎಂಬ ಸಂದೇಶ ಆಕೆಯದು.



ಚಂದನವ ಕಡಿದು ಕೊರೆದು ತೇದೊಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದೊಡೆ ಬೆಂದು ಕಳಂಕ ಹಿಡಿದಿತ್ತೆ?
ಸಂದು ಸಂದನು ಕಡಿದು ಕಬ್ಬನು ತಂದು ಗಾಣದಲಿಕ್ಕಿ ಅರೆದಡೆ
ಬೆಂದು ಪಾಕಗೊಳೆ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೇ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು
ನಿಮಗೆ ಹಾನಿ ।
ಎನ್ನ ತಂದೆ ಚೆನ್ನಮಲ್ಲಿಕಾರ್ಜುನ ದೇವಯ್ಯ
ಕೊಂದೊಡೆ ಶರಣೆಂಬುದ ಮಾಣೆ!

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯಾ

ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ – ನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

## ಅಕ್ಕಮಹಾದೇವಿ

ಅಕ್ಕಮಹಾದೇವಿ ಬಸವಣ್ಣನವರ ಸಮಕಾಲೀನ ವಚನಕಾರ್ತಿ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿ ಈಕೆಯ ಊರು. ತಂದೆ ನಿರ್ಮಲಶೆಟ್ಟಿ, ತಾಯಿ ಸುಮತಿ. ಉಡುತಡಿಯ ಕೌಶಿಕ ರಾಜನನ್ನು ವಿವಾಹವಾಗಿ ಗುರುಲಿಂಗ ಜಂಗಮ ಪೂಜೆಗೆ ಅಡ್ಡಿಯುಂಟಾದ ಸಂದರ್ಭದಲ್ಲಿ ಸಾಂಪ್ರದಾಯಿಕ ಸಂಕೋಲೆಗಳನ್ನು ಮುರಿದು ದಿಟ್ಟ ಹೆಜ್ಜೆ ಇಟ್ಟವಳು. ಶಿವನನ್ನೇ ಪತಿಯೆಂದು ಭಾವಿಸುವ ಅಕ್ಕನ ವಚನಗಳಲ್ಲಿ 'ಶರಣಸತಿ – ಲಿಂಗಪತಿ' ಭಾವವನ್ನು ಕಾಣಬಹುದು. ಶಿವಭಕ್ತಿ, ಶಿವಾಚರಣೆಗೆ ಸಂಬಂಧಿಸಿದ ಈಕೆಯ ವಚನಗಳು ಶಿವದರ್ಶನಕ್ಕಾಗಿ ಹಾತೊರೆಯುವ ಉತ್ಕಟ ಹಂಬಲವನ್ನು ಪ್ರಕಟಿಸಿವೆ. 'ಚೆನ್ನಮಲ್ಲಿಕಾರ್ಜುನ' ಎಂಬುದು ಈಕೆಯ ವಚನಗಳ ಅಂಕಿತ. 'ಯೋಗಾಂಗ ತ್ರಿವಿಧಿ'ಯನ್ನು ಬರೆದ ಕವಯಿತ್ರಿ ಅಕ್ಕಮಹಾದೇವಿ. ಭಾವಗೀತಾತ್ಮಕಗುಣ, ಆಪ್ತಶೈಲಿ, ರೂಪಕಗಳ ಬಳಕೆ, ಅಕ್ಕನ ವಚನಗಳ ವೈಶಿಷ್ಟ್ಯ.

### ಪದಗಳ ಅರ್ಥ

| | |
|---|---|
| ಕಂಪು – ಪರಿಮಳ | ಕಳಂಕ – ದೋಷ |
| ಮಾಣೆ – ಬಿಡೆನು | ಕೊರೆ – ತುಂಡುಮಾಡು |
| ಒರೆ – ತಿಕ್ಕು | ಸಂದು – ಗಂಟು |

### ಚಟುವಟಿಕೆಗಳು

- ಅಕ್ಕಮಹಾದೇವಿಯು ತನ್ನ ಭಕ್ತಿ ನಿಷ್ಠೆಯನ್ನು ನಿರೂಪಿಸುವಲ್ಲಿ ಕಂಡುಬರುವ ಲೋಕಾನುಭವವನ್ನು ಕುರಿತು ಬರೆಯಿರಿ.

- ಬಸವಣ್ಣನವರ ವಚನಗಳನ್ನು ಕೆಳಗೆ ನೀಡಲಾಗಿದೆ. ಈ ವಚನದೊಂದಿಗೆ ಅಕ್ಕಮಹಾದೇವಿಯ 'ಬೆಟ್ಟದ ಮೇಲೊಂದು ........... ಸಮಾಧಾನಿಯಾಗಿರಬೇಕು' ವಚನವನ್ನು ತುಲನೆಮಾಡಿ ಟಿಪ್ಪಣಿ ತಯಾರಿಸಿರಿ.

  ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ?
  ತನಗಾದ ಆಗೇನು? ಅವರಿಗಾದ ಚೇಗೇನು?
  ತನುವಿನ ಕೋಪ ತನ್ನ ಹಿರಿತನದ ಕೇಡು
  ಮನದ ಕೋಪ ತನ್ನ ಅರಿವಿನ ಕೇಡು
  ಮನೆಯೊಳಗಣ ಕಿಚ್ಚು ಮನೆಯಸುಟ್ಟಲ್ಲದೆ
  ನೆರೆಮನೆಯ ಸುಡದು ಕೂಡಲ ಸಂಗಮದೇವ!

- ಅಕ್ಕಮಹಾದೇವಿಯ ಬದುಕಿನ ಕುರಿತಾದ ವಿವರಗಳನ್ನು ಸಂಗ್ರಹಿಸಿರಿ.
- 'ಕನ್ನಡ ಸಾಹಿತ್ಯಕ್ಕೆ ವಚನಕಾರರ ಕೊಡುಗೆ' ಎಂಬ ವಿಷಯದಲ್ಲಿ ಪ್ರಬಂಧವೊಂದನ್ನು ಬರೆದು ವಿಚಾರಗೋಷ್ಠಿಯಲ್ಲಿ ಮಂಡಿಸಿರಿ.

# ಕಲಿಸು ಜೀವನ ಕಲೆಯ

*ಎಸ್.ವಿ. ಪರಮೇಶ್ವರ ಭಟ್ಟ*

ಆಧುನಿಕ ಕವಿಗಳಲ್ಲಿ ಕೆಲವರು ವಚನಗಳನ್ನು ರಚಿಸಿದ್ದಾರೆ. ಜೀವನಾನುಭವ ಈ ವಚನಗಳಲ್ಲಿ ಸಮೃದ್ಧವಾಗಿದೆ. ಸಣ್ಣದೊಂದು ತಪ್ಪು ಕೂಡಾ ಸರ್ವನಾಶಕ್ಕೆ ಕಾರಣವಾಗಬಹುದು. ಪ್ರತಿಯೊಂದು ಕೆಲಸದಲ್ಲೂ ಎಚ್ಚರವಿರಬೇಕು; ಯಾವುದೇ ಕೆಲಸಕ್ಕೂ ಇನ್ನೊಬ್ಬರ ಸಹಾಯ ಅಗತ್ಯ, ಈ ಎಲ್ಲ ಕೆಲಸಗಳಿಗೂ ಸಹಾಯ ದೊರೆಯಲು ಭಗವಂತನ ಅನುಗ್ರಹ ಮುಖ್ಯ. ಲೋಕದಲ್ಲಿ ಎಲ್ಲ ವಸ್ತುಗಳಿಗೂ ಆಕಾರವಿರಲು ಸಾಧ್ಯವಿಲ್ಲ. ಹಾಗೆಯೇ ಭಕ್ತರ ಭಕ್ತಿಗೂ ಆಕಾರ, ಆಳ, ಅಗಲಗಳಿಲ್ಲ; ಬದುಕಿನ ಬೆಲೆ, ನೆಲೆ, ಕಲೆಯನ್ನು ತಿಳಿಸು ಎಂದು ದೇವರಲ್ಲಿ ಪ್ರಾರ್ಥಿಸುವುದು – ಇಲ್ಲಿನ ವಚನಗಳ ಆಶಯವಾಗಿದೆ.

ದೋಣಿ ಮುಳುಗಲು ಸಣ್ಣದೊಂದು ತೂತು ಸಾಲದೆ
ಮನೆ ಸುಡಲು ಸಣ್ಣದೊಂದು ಕಿಡಿ ಸಾಲದೆ
ಮನೆ ಕೆಡಲು ಸಣ್ಣದೊಂದು ಮಾತು ಸಾಲದೆ
ಸರ್ವ ಚಿತ್ತಾರವ ಮಸಿ ನುಂಗಿತೆಂಬ ಗಾದೆಯೆ ಇಲ್ಲವೆ ಸದಾಶಿವಗುರು
ಕವಲು ದಾರಿಯ ಬಳಿಯೆ ಕೈಕಂಬವಿರಬೇಕು
ಹಳ್ಳ ಹಾಯುವುದಾಗೆ ಸಂಕವೊಂದಿರಬೇಕು
ಇರುಳಾಗೆ ತಂಗುವಡೆ ಛತ್ರವೊಂದಿರಬೇಕು
ದಾರಿಯೊಳು ನಡೆವಾಗ ಜತೆಗೊಬ್ಬರಿರಬೇಕು
ಕಾಸು ಕೈಯೊಳು ಬೇಕು ಕಸುವು ಮೈಯೊಳು ಬೇಕು
ಇಷ್ಟೆಲ್ಲ ದೊರೆಯುವುದಕೆ ನಿನ್ನನುಗ್ರಹವಿರಬೇಕು ಸದಾಶಿವಗುರು



ಹೂವಿಗೆ ಆಕಾರವುಂಟಲ್ಲದೆ ಕಂಪಿಗೆ ಆಕಾರವಿಲ್ಲ
ಹಣತೆಗೆ ಆಕಾರವುಂಟಲ್ಲದೆ ಬೆಳಕಿಗೆ ಆಕಾರವಿಲ್ಲ
ಚಂದ್ರನಿಗೆ ಆಕಾರವುಂಟಲ್ಲದೆ ಬೆಳದಿಂಗಳಿಗೆ ಆಕಾರವಿಲ್ಲ
ನಾಮ ಮುದ್ರೆ ವಿಭೂತಿ ರುದ್ರಾಕ್ಷಿಗಳಿಗೆ ಆಕಾರವುಂಟಲ್ಲದೆ
ನಿಮ್ಮ ಭಕ್ತನ ಎದೆಯೊಳಗ ತನಿಯೊಲುಮೆಗೆ ಆಕಾರವಿಲ್ಲ ಸದಾಶಿವಗುರು

ನೆಲದ ನೆಲೆಯನೆ ಅರಿಯದವನು ಅರಿತಾನೆ ನೀರಿನ ನೆಲೆಯ
ಬದುಕಿನ ಬೆಲೆಯನೆ ಅರಿಯದವನು ಅರಿತಾನೆ ಕಾವ್ಯದ ಬೆಲೆಯ
ಜೀವನ ಕಲೆಯನೆ ಕಲಿಯದವನು ಕಲಿತಾನೆ ಕಾವ್ಯದ ಕಲೆಯ
ನಿಂತ ನೆಲೆಯ ಬದುಕಿನ ಕಲೆಯ ಬೆಲೆಯ
ನನಗೆ ಮೊದಲು ಕಲಿಸು ಜೀವನದ ಕಲೆಯ ಕೋವಿದ ಸದಾಶಿವಗುರು

## ಎಸ್.ವಿ. ಪರಮೇಶ್ವರ ಭಟ್ಟ



ಎಸ್.ವಿ. ಪರಮೇಶ್ವರ ಭಟ್ಟರು ಆಧುನಿಕ ವಚನಗಳನ್ನು ಬರೆದವರಲ್ಲಿ ಪ್ರಮುಖರು. ೦೮–೦೨–೧೯೧೪ ರಂದು ಶಿವಮೊಗ್ಗ ಜಿಲ್ಲೆಯ ಮೂಳೂರಿನಲ್ಲಿ ಜನಿಸಿದರು. ವೃತ್ತಿಯಲ್ಲಿ ಶಿಕ್ಷಕರಾಗಿದ್ದ ಇವರು ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ೬೦ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾರೆ. ಇಂದ್ರಚಾಪ, ಉಪ್ಪುಕಡಲು, ತುಂಬೆಹೂವು, ಕನ್ನಡ ಕಾಳಿದಾಸ ಸಂಪುಟ, ಭಾಸಸಂಪುಟ, ಭವಭೂತಿ ಸಂಪುಟ, ಗಾಥಾಸಪ್ತಶತಿ ಸಂಪುಟ, ಸೀಳುನೋಟ, ಭಾವಗೀತೆ, ಅದ್ಭುತರಾಮಾಯಣ ಕಥೆ ಮೊದಲಾದವು ಇವರ ಕೆಲವು ಪ್ರಸಿದ್ಧ ಕೃತಿಗಳು. ಮುದ್ದಣ ಕವಿಯ ಶ್ರೀ ರಾಮಪಟ್ಟಾಭಿಷೇಕ ಇವರ ಸಂಪಾದಿತ ಕೃತಿ. ಮಂಥಾನ ಇವರ ಜಾನಪದಕೃತಿ. ಕರ್ನಾಟಕ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. 'ಆರ್ಯಭಟ' ಪ್ರಶಸ್ತಿಯೂ ಇವರಿಗೆ ಲಭಿಸಿದೆ. 'ಪೂರ್ಣಕುಂಭ' ಇವರಿಗೆ ಸಮರ್ಪಿಸಿದ ಅಭಿನಂದನ ಗ್ರಂಥ. 'ಉಪ್ಪುಕಡಲು' ಕೃತಿಯಿಂದ ಇಲ್ಲಿನ ವಚನಗಳನ್ನು ಆರಿಸಲಾಗಿದೆ.

## ಪದಗಳ ಅರ್ಥ

ಚಿತ್ತಾರ – ಚಿತ್ರ

ಹಾಯು – ದಾಟು

ಮುದ್ರೆ – ಚಿಹ್ನೆ; ಮೊಹರು

ತನಿ – ಸವಿ

ಕಸುವು – ಶಕ್ತಿ; ಚೈತನ್ಯ

ವಿಭೂತಿ – ಭಸ್ಮ

ತನಿಯೊಲುಮೆ – ನೈಜ ಪ್ರೀತಿ

ಕೋವಿದ – ಪರಿಣತ; ನುರಿತ

ಛತ್ರ – ದಾರಿಹೋಕರಿಗಾಗಿ ನಿರ್ಮಿಸಿದ ಉಚಿತ ತಂಗುದಾಣ

ರುದ್ರಾಕ್ಷಿ – ಒಂದು ತರದ ಕಾಯಿ (ಶಿವಭಕ್ತರು ಅದನ್ನು ಮಾಲೆ ಮಾಡಿ ಧರಿಸುವರು)

## ಚಟುವಟಿಕೆಗಳು

- ಆತ್ಮೀಯ ಸಂಬಂಧಗಳಲ್ಲಿ ಬಿರುಕು ಮೂಡಲು ಕ್ಷುಲ್ಲಕ ಕಾರಣ ಸಾಕು ಎಂಬುದನ್ನು ಎಸ್.ವಿ. ಪರಮೇಶ್ವರ ಭಟ್ಟರು ತಮ್ಮ ವಚನಗಳಲ್ಲಿ ಹೇಗೆ ನಿರೂಪಿಸಿರುವರು? ನಿಮ್ಮ ಮಾತಿನಲ್ಲಿ ಬರೆಯಿರಿ.
- ಪ್ರತಿಯೊಂದು ಕಾರ್ಯಕ್ಕೂ ಮಾರ್ಗದರ್ಶನದ ಅನಿವಾರ್ಯತೆ ಇದೆ ಎಂಬುದನ್ನು ವಚನಕಾರರು ಯಾವ ಉದಾಹರಣೆಗಳ ಮೂಲಕ ಸಮರ್ಥಿಸುತ್ತಾರೆ? ವಿವರಿಸಿ ಬರೆಯಿರಿ.
- ನಿರ್ಮಲ ಭಕ್ತಿಗೆ ನಿರ್ದಿಷ್ಟವಾದ ಸ್ವರೂಪ ಇಲ್ಲ ಎಂಬುದನ್ನು ಎಸ್.ವಿ.ಪಿ.ಯವರು ತಮ್ಮ ವಚನಗಳಲ್ಲಿ ಸ್ಪಷ್ಟಪಡಿಸಿದ ಬಗೆ ಹೇಗೆ? ಟಿಪ್ಪಣಿ ಬರೆಯಿರಿ.
- ರಚನೆಯ ದೃಷ್ಟಿಯಲ್ಲಿ ಪ್ರಾಚೀನ ವಚನಗಳೊಂದಿಗೆ ಆಧುನಿಕ ವಚನಗಳನ್ನು ಹೋಲಿಸಿರಿ.
- ಬದುಕಿನ ನೆಲೆ, ಬೆಲೆ, ಕಲೆಗಳನ್ನು ತಿಳಿಯುವ ಅಗತ್ಯವನ್ನು ಎಸ್.ವಿ.ಪಿ. ಯವರ ವಚನಗಳಲ್ಲಿ ಹೇಗೆ ನಿರೂಪಿಸಲಾಗಿದೆ ಎಂಬುದನ್ನು ತಿಳಿಸಿರಿ.

## ಕಲಿಕಾ ಸಾಧನೆಗಳು

- ನಡುಗನ್ನಡ ಕಾಲದ ವಚನಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ, ಆಶಯಗಳನ್ನು ಸೂಕ್ತ ಸಂದರ್ಭಗಳಲ್ಲಿ ಬಳಸುತ್ತಾರೆ.
- ಸಾಹಿತ್ಯ ಕೃತಿಗಳಲ್ಲಿನ ಸಾಂಸ್ಕೃತಿಕ ಪರಂಪರೆಗಳನ್ನು ಕಂಡುಕೊಂಡು ವಿಮರ್ಶಿಸಿ, ಟಿಪ್ಪಣಿ ಬರೆದು, ವಿಚಾರ ಸಂಕಿರಣಗಳನ್ನು ನಡೆಸುತ್ತಾರೆ.
- ಸಾಹಿತ್ಯ ಕೃತಿಗಳನ್ನು ಅವಲೋಕಿಸಿ ಅವುಗಳಲ್ಲಿನ ಸಾಮಾಜಿಕ ಜೀವನ ಹಾಗೂ ಮೌಲ್ಯಗಳನ್ನು ತಿಳಿದುಕೊಳ್ಳುತ್ತಾರೆ.

# ಕೀರ್ತನ ಮಾಧುರಿ

ಕನ್ನಡ ಸಾಹಿತ್ಯದಲ್ಲಿ ವಚನಗಳದು ಭಕ್ತಿ ಸಾಹಿತ್ಯ ಪರಂಪರೆಯ ಒಂದು ಘಟ್ಟವಾದರೆ ಕೀರ್ತನೆಗಳದು ಮತ್ತೊಂದು ಘಟ್ಟವಾಗಿದೆ. ಹರಿದಾಸರು ರಚಿಸಿದ ಒಂದು ಪ್ರಕಾರವನ್ನು ಕೀರ್ತನೆಗಳು ಎಂದು ಕರೆಯುವುದು ರೂಢಿ. 'ಕೀರ್ತನೆ' ಪದದ ಅರ್ಥ ಸ್ತುತಿ, ಹೊಗಳಿಕೆ. ದೇವರ ಹಿರಿಮೆಯನ್ನು ಸ್ತುತಿಸುವ ಹಿನ್ನೆಲೆಯಲ್ಲಿ ರಚಿತವಾದ ಭಕ್ತಿ ಸಾಹಿತ್ಯವೇ ಕೀರ್ತನೆಗಳು. ಪಲ್ಲವಿ, ಅನುಪಲ್ಲವಿ ಮತ್ತು ನುಡಿಗಳಿಂದ ಕೂಡಿದ ಸಂಗೀತ ಬದ್ಧವಾದ ಸಾಹಿತ್ಯ ಪ್ರಕಾರ ಇದು. ಕೊನೆಯ ನುಡಿಯಲ್ಲಿ ಕೀರ್ತನಕಾರನ ಅಂಕಿತವಿದ್ದು, ಪಲ್ಲವಿಯಲ್ಲಿ ಬರುವ ಹೇಳಿಕೆಯನ್ನು ನುಡಿಗಳು ಸಮರ್ಥಿಸುತ್ತವೆ. ಸತ್ಯವನ್ನು ಪ್ರತಿಪಾದಿಸಲು ಲೌಕಿಕವಾದ ದೃಷ್ಟಾಂತಗಳನ್ನು ನೀಡಿರುವುದು ಇಲ್ಲಿಯ ಗಮನಾರ್ಹ ಅಂಶ. ಕೀರ್ತನೆಗಳು ಸಮಾಜದಲ್ಲಿ ಸತ್ಯ, ಧರ್ಮ, ಭಕ್ತಿ, ಸಜ್ಜನಿಕೆ ಇರಬೇಕೆಂದು ಬಯಸುತ್ತವೆ. ನರಹರಿತೀರ್ಥ, ಶ್ರೀಪಾದರಾಯ, ವ್ಯಾಸರಾಯ, ವಾದಿರಾಜ ಮೊದಲಾದವರು ಮೊದಲ ಹಂತದ ಕೀರ್ತನಕಾರರಾದರೆ ಪುರಂದರದಾಸರು ಹಾಗೂ ಕನಕದಾಸರು ಕನ್ನಡದ ಅತ್ಯಂತ ಜನಪ್ರಿಯ ಕೀರ್ತನಕಾರರು. ಹರಿಸ್ತುತಿಯೊಂದಿಗೆ ಸಮಾಜ ಸುಧಾರಣೆಯ ಉದ್ದೇಶವನ್ನು ಹೊಂದಿದ್ದ ದಾಸಸಾಹಿತ್ಯವು ತನ್ನ ಸರಳ ಭಾಷೆಯಿಂದ ಜನ ಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಯಿತು. ಪುರಂದರದಾಸರ, ಕನಕದಾಸರ ಹಾಗೂ ಹೆಳವನಕಟ್ಟೆ ಗಿರಿಯಮ್ಮನವರ ಒಂದೊಂದು ಕೀರ್ತನೆಯನ್ನು ಈ ಭಾಗದಲ್ಲಿ ನೀಡಲಾಗಿದೆ.



# ಬೇವು ಬೆಲ್ಲದೊಳಿಡಲೇನು ಫಲ

*ಪುರಂದರದಾಸ*

ಡಂಭಾಚಾರದ ಮೂಲಕ ತಾವು ದೊಡ್ಡ ಭಕ್ತರೆಂದು ಬಿಂಬಿಸುತ್ತಾ ಜನರನ್ನು ಮೋಸಗೊಳಿಸುವ ಹುಸಿ ಭಕ್ತರ ಜೀವನಕ್ಕೆ ಹಿಡಿದ ಕೈಗನ್ನಡಿಯಂತೆ ಇಲ್ಲಿನ ಕೀರ್ತನೆಗಳಿವೆ. ಜೀವನದಲ್ಲಿ ಜನರು ಸ್ವತಃ ಆತ್ಮಾವಲೋಕನ ಮಾಡಿ ತಮ್ಮನ್ನು ತಿದ್ದಿಕೊಳ್ಳಬೇಕೆಂಬ ಆಶಯವನ್ನು ಕೀರ್ತನಕಾರರು ವ್ಯಕ್ತಪಡಿಸಿದ್ದಾರೆ.

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ ॥ಪ॥

ಕುಟಿಲವ ಬಿಡದಿಹ ಮನುಜರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ ॥೧॥



ಕಪಟತನದಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ
ಕುಪಿತತನವನು ಬಿಡದೆ ನಿರಂತರ
ತಪವನು ಮಾಡಿದರೇನು ಫಲ ॥೨॥

ಮಾತಾಪಿತರನು ಬಳಲಿಸಿದಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ ॥೩॥

ಪತಿಗಳ ನಿಂದಿಪ ಸತಿಯರು ಬಹು ವಿಧ
ವ್ರತಗಳ ಮಾಡಿದರೇನು ಫಲ
ಅತಿಥಿಗಳೆಡೆಯಲಿ ಭೇದವ ಮಾಡುತ
ಗತಿಯನು ಬಯಸಿದರೇನು ಫಲ ॥೪॥

ಹೀನ ಗುಣಂಗಳು ಹಿಂಗದೆ ಗಂಗೆಯ
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ ||೫||

## ಪುರಂದರದಾಸ

'ಕರ್ನಾಟಕ ಸಂಗೀತದ ಪಿತಾಮಹ' ಎಂದೇ ಪ್ರಸಿದ್ಧರಾದ ಪುರಂದರದಾಸರು ಹುಟ್ಟಿದ್ದು ಪುರಂದರಗಡದಲ್ಲಿ. ಶ್ರೀನಿವಾಸನಾಯಕ ಎಂಬುದು ಇವರ ಮೊದಲಿನ ಹೆಸರು. ರತ್ನ ವ್ಯಾಪಾರಿಯಾಗಿದ್ದ ಶ್ರೀನಿವಾಸ ವೈರಾಗ್ಯ ತಾಳಿ ವ್ಯಾಸರಾಯರಿಂದ ದೀಕ್ಷೆ ಪಡೆದು ಪುರಂದರದಾಸರೆನಿಸಿಕೊಂಡರು. ಕೀರ್ತನೆ, ಉಗಾಭೋಗ, ಸುಳಾದಿ ಪ್ರಕಾರಗಳಲ್ಲಿ ಬರೆದಿರುವ ಇವರ ಕೀರ್ತನೆಗಳು ಗೇಯ ಗುಣಗಳಿಂದ ತುಂಬಿಕೊಂಡಿವೆ. ಇವರು 'ದಾಸರೆಂದರೆ ಪುರಂದರದಾಸರಯ್ಯ' ಎಂದು ಗುರುಗಳಿಂದಲೇ ಹೊಗಳಿಸಿಕೊಂಡವರು. ಸಮಾಜ ವಿಮರ್ಶೆ, ನೀತಿಬೋಧೆ, ಮಾನವಧರ್ಮ, ಸದಾಚಾರಗಳ ಮಹತ್ವ ಇವುಗಳ ಪ್ರತಿಪಾದನೆ ಕೀರ್ತನೆಗಳ ವೈಶಿಷ್ಟ್ಯ. ಸಾಹಿತ್ಯ ಗುಣವುಳ್ಳ ಅತಿ ಹೆಚ್ಚು ಕೀರ್ತನೆಗಳನ್ನು ರಚಿಸಿದವರಲ್ಲಿ ಪುರಂದರದಾಸರು ಮೊದಲಿಗರು. ಕೃಷ್ಣ ಭಕ್ತಿಯ ಪಾರಮ್ಯವುಳ್ಳ ಇವರ ಕೀರ್ತನೆಗಳಲ್ಲಿ 'ಪುರಂದರ ವಿಠಲ' ಎಂಬ ಅಂಕಿತವಿರುತ್ತದೆ. ಭಕ್ತಿಯ ಬಹಿರಂಗದ ಆಚರಣೆಗಿಂತ ನಾವು ನಿತ್ಯ ಜೀವನದಲ್ಲಿ ಇಟ್ಟುಕೊಳ್ಳಬೇಕಾದ ಮೌಲ್ಯಗಳನ್ನು ದಾಸರು ಇಲ್ಲಿ ಗುರುತಿಸಿದ್ದಾರೆ. ಈ ಕೀರ್ತನೆಯನ್ನು ಪುರಂದರ ಸಾಹಿತ್ಯ ದರ್ಶನ (ಸಂ. ಸಾ. ಕೃ. ರಾಮಚಂದ್ರ ರಾವ್) ದಿಂದ ಆರಿಸಲಾಗಿದೆ.

### ಪದಗಳ ಅರ್ಥ

ಕುಟಿಲ – ಕುತಂತ್ರ; ಮೋಸಗಾರಿಕೆ
ಸಟೆ – ಸುಳ್ಳು
ಕಪಟ – ವಂಚನೆ
ಗೀತೆ – ಭಗವದ್ಗೀತೆ
ಹಿಂಗದೆ – ಬತ್ತದೆ, ನಾಶವಾಗದೆ
ಪಠನೆ – ಓದು, ಉಚ್ಚಾರ
ಸಂತತ – ಯಾವಾಗಲೂ
ಘಾತಕ – ದ್ರೋಹ
ಗತಿ – ಸದ್ಗತಿ; ಮೋಕ್ಷ

## ಚಟುವಟಿಕೆಗಳು

- ಸಮಾಜದಲ್ಲಿ ನಡೆಯುವ ಅನಾಚಾರಗಳನ್ನು ಕುರಿತು ಪುರಂದರದಾಸರ ಕೀರ್ತನೆಗಳು ವ್ಯಕ್ತಪಡಿಸುವ ಆಶಯಗಳನ್ನು ಬರೆಯಿರಿ.
- ಮನುಷ್ಯರು ತಮ್ಮಲ್ಲಿ ಅಳವಡಿಸಿಕೊಳ್ಳಬೇಕಾದ ಗುಣಧರ್ಮಗಳೇನು? ಎಂಬುದನ್ನು 'ಬೇವು ಬೆಲ್ಲದೊಳಿಡಲೇನು ಫಲ' ಎಂಬ ಕೀರ್ತನೆಯ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ಬರೆಯಿರಿ.
- 'ಹೆತ್ತವರನ್ನು ಕಡೆಗಣಿಸುತ್ತಿರುವ ಇಂದಿನ ಸಮಾಜ' ಎಂಬ ವಿಷಯದ ಕುರಿತು ವಿಚಾರಗೋಷ್ಠಿಯೊಂದರಲ್ಲಿ ಮಂಡಿಸುವುದಕ್ಕಾಗಿ ಪ್ರಬಂಧವನ್ನು ತಯಾರಿಸಿರಿ.

## ಭಾಷಾಭ್ಯಾಸ

- ಅರು, ಅಂದಿರುಗಳು ಮುಂತಾದ ಬಹುವಚನ ಪ್ರತ್ಯಯಗಳಿಂದ ಕೂಡಿದ ಪದಗಳನ್ನು ಪಟ್ಟಿಮಾಡಿರಿ. ಉದಾ:– ಮನುಜರು, ಗುಣಂಗಳು, ತಾಯಂದಿರು.
- ಈ ರೀತಿಯಲ್ಲಿ ಪ್ರತ್ಯಯಗಳನ್ನು ಸೇರಿಸಿ ಪದಗಳನ್ನು ಬರೆಯಿರಿ.

## ಹೆಚ್ಚಿನ ಓದಿಗೆ

ಹರಿದಾಸ ಸಾಹಿತ್ಯ ಸಾರ – ಜೀ. ವರದರಾಜ ರಾವ್

# ಸತ್ಯವಂತರ ಸಂಗವಿರಲು ತೀರ್ಥವೇತಕೆ

**ಕನಕದಾಸ**

ಸಮಾಜದಲ್ಲಿ ಪ್ರತಿಯೊಬ್ಬನೂ ಸದಾಚಾರವನ್ನರಿತುಗೊಂಡು ಪರೋಪಕಾರಿಯಾಗಿ ಜೀವನ ನಡೆಸಬೇಕು. ಭಕ್ತಿಯ ಮಾರ್ಗದಲ್ಲಿ ಸಾಗಿ ಸ್ನೇಹ, ಸೌಹಾರ್ದತೆಗಳೊಂದಿಗೆ ಬಾಳಿ ಜೀವನವನ್ನು ಸಾರ್ಥಕಗೊಳಿಸಬೇಕೆಂಬ ಸಂದೇಶ ಇಲ್ಲಿದೆ.

ಸತ್ಯವಂತರ ಸಂಗವಿರಲು ತೀರ್ಥವೇತಕೆ !
ನಿತ್ಯ ಅನ್ನದಾನವಿರಲು ಭಯವು ಏತಕೆ? ॥ಪ॥

ಗುರುಹಿರಿಯರ ಅರಿಯದವನ ಅರಿವದೇತಕೆ !
ಪರಹಿತಾರ್ಥಕಿಲ್ಲದವನ ಶರೀರವೇತಕೆ ॥
ಹರಿಯ ಪೂಜೆ ಮಾಡದವನ ಜನುಮವೇತಕೆ ।
ಸೇರಿದವರ ಹೊರೆಯದಂಥ ದೊರೆಯು ಏತಕೆ? ॥೧॥



ಮಾತು ಕೇಳದೆ ಮಲೆತು ನಡೆವ ಮಕ್ಕಳೇತಕೆ ।
ಭೀತನಾಗಿ ಓಡಿಬರುವ ಬಂಟನೇತಕೆ॥
ಪ್ರೀತಿಯಿಂದ ಎಡೆಯನಿಕ್ಕದ ಊಟವೇತಕೆ ।
ಸೋತ ಹೆಣ್ಣಿಗೆ ಇದಿರು ನಡೆವ ಸುಗುಣನೇತಕೆ ? ॥೨॥

ತಾನು ಉಣ್ಣದೆ ಪರರಿಗಿಕ್ಕದ ಧನವಿದ್ದೇತಕೆ ।
ಮಾನಹೀನವಾಗಿ ಬಾಳುವ ಮನುಜರೇತಕೆ ॥
ನ್ಯೂನ ಹೆಚ್ಚು ನೋಡುವಲ್ಲಿ ಇರುವುದೇತಕೆ।
ತನ್ನ ಬಳಗವೆರಸಿ ಉಣ್ಣದ ಭಾಗ್ಯವೇತಕೆ? ॥೩॥

ತಾನು ತನ್ನನರಿಯದಂಥ ಪ್ರೌಢನೇತಕೆ।
ಸ್ನಾನ – ಸಂಧ್ಯಾನವಿಲ್ಲದ ಶೀಲವೇತಕೆ।।
ಜ್ಞಾನವಿಲ್ಲದೆ ನೂರುಕಾಲ ಬದುಕಲೇತಕೆ।
ಧ್ಯಾನದೊಳಗೆ ಕೃಷ್ಣನಿಲ್ಲದ ತನುವಿದ್ದೇತಕೆ? ।।೪।।

ಸನ್ನೆಯರಿತು ನಡೆಯದಂಥ ಸತಿಯಿದ್ದೇತಕೆ।
ಭಿನ್ನವರಿತು ನಡೆಯದಂಥ ಸ್ನೇಹವೇತಕೆ।।
ಮುನ್ನಕೊಟ್ಟು ಹುಟ್ಟಲಿಲ್ಲ ಬಯಸಲೇತಕೆ ।
ಚೆನ್ನ ಆದಿಕೇಶವನಿರಲು ದೈವವೇತಕೆ? ।।೫।।

## ಕನಕದಾಸ

ಪುರಂದರದಾಸರ ಸಮಕಾಲೀನರಾದ ಕನಕದಾಸರು ಹಾವೇರಿ ಜಿಲ್ಲೆಯ ಬಾಡಗ್ರಾಮದವರು. ತಂದೆ ಬೀರಪ್ಪ, ತಾಯಿ ಬಚ್ಚಮ್ಮ. ಇವರು ಡಣಾಯಕರಾಗಿದ್ದು ಅನೇಕ ಗ್ರಾಮಗಳ ಪಾಳೇಗಾರ ವೃತ್ತಿಯನ್ನು ನೋಡಿಕೊಂಡಿದ್ದರು. ಕಾಗಿನೆಲೆಯಲ್ಲಿ ನಿಧಿಯಾಗಿ ದೊರೆತ ಧನ, ಕನಕ ರಾಶಿಯಿಂದಾಗಿ 'ಕನಕನಾಯಕ' ನೆಂದು ಪ್ರಸಿದ್ಧರಾದರೆಂದು ವದಂತಿ. ಉಗಾಭೋಗ, ಸುಳಾದಿ, ಕೀರ್ತನೆ ಎಂಬ ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳನ್ನು ಬರೆದಿರುವ ಕನಕದಾಸರು ರಾಮಧಾನ್ಯ ಚರಿತ್ರೆ, ಮೋಹನ ತರಂಗಿಣಿ, ಹರಿಭಕ್ತಿಸಾರ, ನಳಚರಿತ್ರೆ ಮೊದಲಾದ ಪದ್ಯ ಕಾವ್ಯಗಳನ್ನು ರಚಿಸಿದ್ದಾರೆ. 'ಕಾಗಿನೆಲೆ ಆದಿಕೇಶವ' ಎಂಬುದು ಇವರ ಕೀರ್ತನೆಗಳ ಅಂಕಿತ. ಸದಾಚಾರ, ಪರೋಪಕಾರ, ಆತ್ಮವಿಮರ್ಶೆ, ಡಾಂಭಿಕಭಕ್ತಿ, ನೀತಿಬೋಧೆ ಇತ್ಯಾದಿ ಅಂಶಗಳನ್ನು ಈ ಕೀರ್ತನೆಗಳಲ್ಲಿ ಕಾಣಬಹುದು. ಈ ಕೀರ್ತನೆಯನ್ನು ಶ್ರೀ ಕನಕದಾಸರ ಭಕ್ತಿಗೀತೆಗಳು (ಸಮಾಜ ಪುಸ್ತಕಾಲಯ ಧಾರವಾಡ) ಕೃತಿಯಿಂದ ಆರಿಸಲಾಗಿದೆ.

### ಪದಗಳ ಅರ್ಥ

ಸಂಗ – ಸಹವಾಸ
ಮಲೆತು – ಕೊಬ್ಬಿ; ಗರ್ವದಿಂದ
ನ್ಯೂನ – ಕೊರತೆ
ಸನ್ನೆ – ಸಂಕೇತ
ಎಡೆಯನಿಕ್ಕು – ಊಟವನ್ನು ನೀಡು
ಹೊರೆ – ಕಾಪಾಡು
ಬಂಟ – ಸೇವಕ; ಯೋಧ
ಸುಗುಣ – ಒಳ್ಳೆಯ ಗುಣ
ಭಿನ್ನ – ವ್ಯತ್ಯಾಸ

## ಚಟುವಟಿಕೆಗಳು

- ಕನಕದಾಸರ ಕೀರ್ತನೆಗಳಲ್ಲಿ ಮೂಡಿಬಂದಿರುವ ಸಾಮಾಜಿಕ ವಿಡಂಬನೆಯ ಕುರಿತು ಕಿರು ಲೇಖನ ತಯಾರಿಸಿರಿ.
- 'ಮೊದಲು ಮಾನವನಾಗು' ಎಂಬ ತತ್ವವು ಕನಕದಾಸರ ಕೀರ್ತನೆಗಳಲ್ಲಿ ಹೇಗೆ ಪ್ರತಿಪಾದಿತವಾಗಿದೆ – ಸೋದಾಹರಣವಾಗಿ ವಿವರಿಸಿರಿ.
- 'ಪರೋಪಕಾರಾರ್ಥಂ ಇದಂ ಶರೀರಂ' ಎಂಬ ಹೇಳಿಕೆಯು ಇಂದಿನ ಸಮಾಜದಲ್ಲಿ ಅನ್ಯವಾಗುತ್ತಿದೆ, ಬದಲಾಗಿ ಸಾಮಾಜಿಕ ಅನಾಚಾರಗಳು ಹೆಚ್ಚುತ್ತಿವೆ – ಈ ವಿಷಯದತ್ತ ಓದುಗರ ಗಮನಸೆಳೆದು ಸಮಾಜದಲ್ಲಿ ಪರೋಪಕಾರದ ಮನೋಭಾವವನ್ನು ರೂಢಿಸುವ ಅಗತ್ಯವನ್ನು ಮನಗಾಣಿಸುವ ಸಲುವಾಗಿ ಓದುಗರ ಓಲೆಗೆ ಕಳುಹಿಸುವುದಕ್ಕಾಗಿ ಲೇಖನವೊಂದನ್ನು ಬರೆಯಿರಿ.
- ಸಮಾಜದಲ್ಲಿ ಅನರ್ಥ ವಿಚಾರಗಳು ದಟ್ಟವಾಗಿ ಹರಡಿರುವುದನ್ನು ತೊಡೆದು ಹಾಕಲು ಕೀರ್ತನಕಾರರು ಮಾಡಿದ ಪ್ರಯತ್ನಗಳನ್ನು ಸಂಗ್ರಹಿಸಿ ಬರೆಯಿರಿ.
- ಕೀರ್ತನೆಗಳಲ್ಲಿ ಬರುವ ಉತ್ತಮ ಅಂಶಗಳನ್ನು ದೈನಂದಿನ ಜೀವನದಲ್ಲಿ ಹೇಗೆ ಅಳವಡಿಸಬಹುದು ಎಂಬುದನ್ನು ಲೇಖನ ರೂಪದಲ್ಲಿ ವ್ಯಕ್ತಪಡಿಸಿರಿ.



# ಮಳೆಯ ದಯಮಾಡೊ

ಹೆಳವನಕಟ್ಟೆ ಗಿರಿಯಮ್ಮ

ಪ್ರಪಂಚದ ಪ್ರತಿಯೊಂದು ಜೀವಜಾಲಗಳ ಬದುಕಿಗೆ ನೀರು ಅನಿವಾರ್ಯವಾಗಿದೆ. ನೀರಿನ ಕೊರತೆಯುಂಟಾದಾಗ ಮನುಷ್ಯರಾದಿಯಾಗಿ ಎಲ್ಲಾ ಜೀವಿಗಳು ಪರದಾಡುತ್ತವೆ. ಋತುಗಳು ಉರುಳಿಹೋಗುತ್ತಿದ್ದರೂ ಮಳೆಯ ಸುಳಿವೇ ಕಾಣದಾದಾಗ ಮಳೆಯ ಅಧಿದೇವತೆಯಾದ ಇಂದ್ರನಿಗೆ ಆದೇಶ ನೀಡುವಂತೆ ಇಷ್ಟದೇವರಲ್ಲಿ ಆರ್ತಭಾವದಿಂದ ಕವಯಿತ್ರಿ ಕೇಳಿಕೊಳ್ಳುತ್ತಾರೆ. ಸಮಾಜದ ಜನರ ಮಿಡಿತಗಳಿಗೆ ಕೀರ್ತನಕಾರರು ಹೇಗೆ ಸ್ಪಂದಿಸುತ್ತಿದ್ದರು ಎಂಬುದಕ್ಕಿದು ಮಾದರಿಯಾಗಿದೆ.

ಮಳೆಯ ದಯಮಾಡೊ ರಂಗಯ್ಯ ನಿಮ್ಮ
ಕರುಣ ತಪ್ಪಿದರೆ ಉಳಿಯದೀ ಲೋಕ

ಪಶು ಜಾತಿ ಹುಲ್ಲೆ ಸಾರಂಗ ಮೃಗಗಳು ಬಹಳ
ಹಸಿದು ಬಾಯಾರಿ ಬತ್ತಿದ ಕೆರೆಗೆ ಬಂದು
ತೃಷೆಯಡಗದೆ ತಲ್ಲಣಿಸಿ ಮೂರ್ಛೆಗೊಂಡು
ದೆಸೆದೆಸೆಗೆ ಬಾಯಿ ಬಿಡುತಿಹವಯ್ಯ ಹರಿಯೆ



ಧಗೆಯಾಗಿ ದ್ರವಗುಂದಿ ಇರುವ ಬಾವಿಯ ನೀರ
ಮೊಗೆ ಮೊಗೆದು ಪಾತ್ರೆಯಲಿ ನಾರಿಯರು
ಹಗಲೆಲ್ಲ ತರುತಿಹರು ಯೋಚನೆಯ ಮಾಡುತ್ತ
ಬೇಗದಿಂದಲಿ ತರಿಸೊ ವೃಷ್ಟಿಯನು ಹರಿಯೆ.

ಸಂದು ಹೋದವು ಜೇಷ್ಠ ಆಷಾಡ ಶ್ರಾವಣ
ಬಂದಿದೆ ಭಾದ್ರಪದ ಮಾಸವೀಗ
ಇಂದು ಪುರಂದರಗೆ ಹೇಳಿ ವೃಷ್ಟಿಯ ತರಿಸೊ
ಸಂದೇಹವಿನ್ಯಾಕೆ ಹೆಳವನ ಕಟ್ಟೆಯ ರಂಗ

## ಹೆಳವನಕಟ್ಟೆ ಗಿರಿಯಮ್ಮ

ಹೆಳವನಕಟ್ಟೆ ಗಿರಿಯಮ್ಮನ (ಕ್ರಿ.ಶ. ೧೭೫೦) ಜನ್ಮಸ್ಥಳ ಹಾವೇರಿ ಜಿಲ್ಲೆಯ ರಾಣಿಬೆನ್ನೂರು. ಮಲೆಬೆನ್ನೂರಿನ ತಿಪ್ಪರಸ ಕುಲಕರ್ಣಿ ಈಕೆಯ ಪತಿ. ಗಿರಿಯಮ್ಮ ಮಲೆಬೆನ್ನೂರಿನ ಸಮೀಪದ ಹೆಳವನಕಟ್ಟೆಯ ರಂಗನಾಥನ ಭಕ್ತಳಾಗಿದ್ದಳು. ತನ್ನ ಇಷ್ಟದೈವವಾದ ಹೆಳವನಕಟ್ಟೆಯ ರಂಗನಾಥನ ಅಂಕಿತದಲ್ಲಿ ಕೀರ್ತನೆಗಳನ್ನೂ ಹಾಡುಗಬ್ಬಗಳನ್ನೂ ರಚಿಸಿದ್ದಾಳೆ. ಚಂದ್ರಹಾಸನ ಕತೆ, ಕೃಷ್ಣ ಕೊರವಂಜಿ, ಬ್ರಹ್ಮ ಕೊರವಂಜಿ, ಉದ್ಧಾಲಕನ ಕತೆ, ಲವಕುಶರ ಕಾಳಗ – ಮೊದಲಾದುವು ಗಿರಿಯಮ್ಮನ ಕೃತಿಗಳು.

### ಪದಗಳ ಅರ್ಥ

ಹುಲ್ಲೆ – ಜಿಂಕೆಮರಿ

ತೃಷೆ – ಬಾಯಾರಿಕೆ

ಧಗೆ – ಕಾವು; ಬೇಗೆ

ಮೊಗೆ – ಬೊಗಸೆಯಲ್ಲಿ ಎತ್ತಿಕೊಳ್ಳು

ವೃಷ್ಟಿ – ಮಳೆ

### ಚಟುವಟಿಕೆಗಳು

- ಕುಡಿಯುವ ನೀರಿನ ಸಮಸ್ಯೆಯು ಈಗ ಎಲ್ಲೆಡೆಗಳಲ್ಲೂ ತೀವ್ರವಾಗಿ ಕಂಡುಬರುತ್ತಿದೆ. ನಿಮ್ಮ ಪರಿಸರದಲ್ಲಿಯೂ ಇದೇ ಸ್ಥಿತಿ ಇದೆಯೆಂದು ಭಾವಿಸಿಕೊಳ್ಳಿರಿ. ಇದರ ಪರಿಹಾರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯಲು ಮನವಿ ಪತ್ರವೊಂದನ್ನು ಸಿದ್ಧಪಡಿಸಿರಿ.
- ನೀರಿನ ಅಭಾವ ನೀಗಿಸಲು ಕೊಳವೆಬಾವಿ ನಿರ್ಮಾಣ ಮಾಡುವುದೇ ಪರಿಹಾರವೇ? ಈ ವಿಷಯದಲ್ಲಿ ಚರ್ಚಾಕೂಟವೊಂದನ್ನು ಏರ್ಪಡಿಸಿ ಅಲ್ಲಿ ಮೂಡಿಬಂದ ಅಭಿಪ್ರಾಯವನ್ನು ಸಂಗ್ರಹಿಸಿ ಲೇಖನ ಬರೆಯಿರಿ.
- ನೀರಿಗಾಗಿ ಬವಣೆ ಪಡುವ ನಾರಿಯರು ಹಾಗೂ ಇತರ ಜೀವಜಾಲಗಳ ಕುರಿತು ಕವಯಿತ್ರಿ ಸ್ಪಂದಿಸಿದ ಬಗ್ಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ.
- ಈ ಕೀರ್ತನೆಯ ಆಸ್ವಾದನ ಟಿಪ್ಪಣಿಯನ್ನು ಬರೆಯಿರಿ.

## ಕಲಿಕಾ ಸಾಧನೆಗಳು

- ನಡುಗನ್ನಡ ಹಾಗೂ ಹೊಸಗನ್ನಡ ಸಾಹಿತ್ಯದಲ್ಲಿನ ಕೀರ್ತನ ಪ್ರಕಾರಗಳನ್ನು ಆಳವಾಗಿ ಅಧ್ಯಯನ ಮಾಡುತ್ತಾರೆ.
- ಸಾಹಿತ್ಯ ಕೃತಿಗಳನ್ನು ಓದಿ ಅಲ್ಲಿ ಪ್ರತಿಬಿಂಬಿತವಾದ ಸಾಮಾಜಿಕ ಜೀವನ, ಸಮಾಜ ವಿಮರ್ಶೆ ಹಾಗೂ ಮೌಲ್ಯಗಳನ್ನು ತಿಳಿದುಕೊಳ್ಳುತ್ತಾರೆ.
- ಜೀವನಾನುಭವಗಳನ್ನು ಗದ್ಯ, ಪದ್ಯರೂಪಗಳಲ್ಲಿ ನಿರೂಪಿಸುತ್ತಾರೆ.

# ಜನಪದ ಕುಸುಮ

ಸಾಮಾನ್ಯವಾಗಿ ಸಾಹಿತ್ಯವನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಒಂದು ಜನಪದವಾದರೆ ಮತ್ತೊಂದು ಶಿಷ್ಟ. ಜನಪದ ಸಾಹಿತ್ಯವು ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಮೌಖಿಕ ಸಾಹಿತ್ಯವಾಗಿದೆ. ಕನ್ನಡದಲ್ಲಿ ಜನಪದ ಸಾಹಿತ್ಯ, ಸಂಸ್ಕೃತಿಯು ಸಮೃದ್ಧವಾಗಿ, ಶ್ರೀಮಂತವಾಗಿ ಬೆಳೆದು ಬಂದಿರುವುದನ್ನು ಕಾಣಲು ಸಾಧ್ಯವಾಗುತ್ತದೆ. ಜನಪದ ಗೀತೆ, ಕಥನಗೀತೆ, ಕತೆ, ಗಾದೆ, ಒಗಟು ಮುಂತಾದವುಗಳು ವೈವಿಧ್ಯಮಯವಾದ ಜನಪದ ಸಂಪತ್ತನ್ನು ನಮ್ಮ ಮುಂದೆ ತೆರೆದಿಡುತ್ತವೆ. ಇವುಗಳಲ್ಲಿ ಹೆಚ್ಚಿನ ಪಾಲು ಜನಪದ ಗೀತೆಗಳಿಗೆ ಸಲ್ಲುತ್ತದೆ. ಇವುಗಳಲ್ಲಿ ಜನಪದರು ತಮ್ಮ ಜೀವನದ ಕಷ್ಟ – ಸುಖ, ನೋವು – ನಲಿವು, ಸೋಲು – ಗೆಲುವು ಗಳನ್ನೊಳಗೊಂಡಂತೆ ತಮ್ಮ ಜೀವನಾನುಭವಗಳನ್ನು ಹೇಳಿಕೊಂಡಿದ್ದಾರೆ. ಈ ಮೂಲಕ ಅವರ ಜೀವನ, ಸಂಸ್ಕೃತಿಗಳ ಪರಿಚಯವು ನಮಗೆ ಲಭಿಸುತ್ತದೆ. ಆಧುನಿಕ ಯುಗದಲ್ಲಿ ಮೂಲ ಸ್ವರೂಪ ಕಳೆದುಕೊಂಡು ಕಣ್ಮರೆಯಾಗುತ್ತಿರುವ ಜನಪದ ಸಾಹಿತ್ಯ, ಸಂಸ್ಕೃತಿ, ಕಲೆ, ಕ್ರೀಡೆಗಳನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಪ್ರತಿಯೊಬ್ಬರೂ ಮಾಡಬೇಕಾಗಿದೆ. ಜನಪದ ಕಥನಗೀತೆ ಹಾಗೂ ತ್ರಿಪದಿಗಳನ್ನು ಈ ಭಾಗದಲ್ಲಿ ಅಭ್ಯಾಸಕ್ಕಾಗಿ ಕೊಡಲಾಗಿದೆ.



# ಉತ್ರಾಜಿ

***ಜನಪದ ಕಥನಗೀತೆ***

ಇದು ಕರ್ನಾಟಕದಲ್ಲಿ ತುಂಬಾ ಪ್ರಚಾರದಲ್ಲಿರುವ ಜನಪದ ಕಥನಗೀತೆಗಳಲ್ಲೊಂದಾಗಿದೆ. ರೈತನ ಬದುಕಿನಲ್ಲಿ ಉತ್ತರೆ ಮಳೆಗೆ ಮಹತ್ವದ ಸ್ಥಾನವಿದೆ. ಉತ್ತರೆ ಮಳೆಯಾದರೆ ಮಾತ್ರ ತೆನೆಗಳ ಕಾಳು ಗಟ್ಟಿಗೊಳ್ಳುತ್ತವೆ ಎಂಬ ನಂಬಿಕೆ ಇದೆ. ಅಂಥ ಉತ್ತರೆ ಮಳೆ ಒಬ್ಬ ಮುಗ್ಧ ಹೆಣ್ಣು ಮಗಳ ಪ್ರತಿರೂಪವಾಗಿದೆಯೆಂಬ ವಿಶಿಷ್ಟ ನಂಬಿಕೆಯೂ ಜನಪದರಲ್ಲಿದೆ. ಉತ್ರಾಜಿ (ಉತ್ತರೆ)ಯ ತಪ್ಪಿಲ್ಲದಿದ್ದರೂ ಅವಳನ್ನು ಗಂಡನ ಮನೆಯಿಂದ ಹೊರಹಾಕುತ್ತಾರೆ. ತವರು ಮನೆಯವರೂ ಅವಳಿಗೆ ಆಶ್ರಯ ನೀಡಲಿಲ್ಲ. ಕೊನೆಗೆ ತಾಯಿಯ ಸೂಚನೆಯಂತೆ ಅವಳು ಉತ್ತರೆ ಮಳೆಯಾಗಿ ನಾಡ ಮೇಲೆ ಹೋದಳೆಂಬುದು ಕಥಾವಸ್ತು.



ಅತ್ತೆಗೂ ಸೊಸೆಗೂ ಹಿತ್ಲಾಗೆ ಏಕಾಂತ
ಉತ್ತು ಬಂದಾ ಮಗ್ಗೇ ಉಣಲಿಕ್ಕುತೇನೆಂದಳೇ
ಉತ್ರಾಜಿನೆಂಬೋ ಸೊಸೆ ಬೇಡ ನನಮಗನೇ
ಬಿಟ್ಟು ಽ ಬಿಡವಳ ತವರ್ಽಗೆ – ಸುಯ್ಯೋ ॥೧॥

ಬಿಟ್ಟುಬಿಡುವ್ಹೋಕೆ ಎತ್ತಲ್ಲ ಎಮ್ಮೆಲ್ಲ
ಒಂದೊರಾ ಮುಟ್ಟಿ ತೆರಮುಟ್ಟಿ ಬಂದೋಳ
ಮಿತ್ರೇನ ನಾನ್ ಹೆಂಗೆ ಬಿಡಲವ್ವಾ – ಸುಯ್ಯೋ ॥೨॥

ಒಂದು ವರಕೆ ನನ್ ಬಂದಿಯ ಮಾರೇನು
ಮೇಲೊಬ್ಬ ರಾಣೀ ತರೀಸೇನು – ನನ ಮಗನೇ
ಬಿಟ್ಟು ಽ ಬಿಡವಳ ತವರ್ಽಗೆ– ಸುಯ್ಯೋ ॥೩॥

ಬಿಟ್ಟು ಬಿಡುವ್ಹೋಕೆ ಆಡಲ್ಲ ಕುರಿಯಲ್ಲ
ಮೂರೊರ ಮುಟ್ಟಿ ತೆರಮುಟ್ಟಿ – ತಂದೋಳ
ಮಿತ್ರೇನ ನಾನ್ ಹೆಂಗೆ ಬಿಡಲವ್ವಾ – ಸುಯ್ಯೋ ॥೪॥

ಮೂರು ವರಕೆ ನನ್ ಮೂಗ್ತೀಯ ಮಾರುವೆ
ಬೇರೊಬ್ಬ ರಾಣಿ ತರಿಸುವೆ – ನನ ಮಗನೇ
ಬಿಟ್ಟುಽ ಬಿಡವಳ ತವರ್ಽಗೆ – ಸುಯ್ಯೋ ॥೫॥

* * * * *

ನೆಲೀನ ಮ್ಯಾಗಿರುವೋ ನೆಲ್ಲಕ್ಕಿ ಬಾನವ
ಉಂಡಾರೆ ಹೋಗೆ ಸೊಸೆ ಮುದ್ದೇ–ಸುಯ್ಯೋ ।।೬।।

ನೀನಾರೆ ಉಣ್ಣೇ ನಿನ್‌ಮಗನಿಗಾರ ಇಕ್ಕೇ
ಮತ್ತೆ ಬರುವವಳಿಗೆ ಮಡಗಿರೆ – ಸುಯ್ಯೋ ।।೭।।

ಒಲೆಯ ಮ್ಯಾಗಿರುವೋ ದೊಡ್ಡ ಹಸುವಿನ ಹಾಲ
ಕುಡಿದಾರ ಹೋಗೆ ಸೊಸೆ ಮುದ್ದೇ– ಸುಯ್ಯೋ ।।೮।।

ನೀನಾರ ಕುಡಿಯೆ ನಿನ್ ಮಗನಿಗಾರ ಕುಡಿಸೆ
ಮುಂದೆ ಬರುವವಳಿಗೆ ಮಡಗಿರೆ – ಸುಯ್ಯೋ ।।೯।।

ಬಾಗಿಲಾಗಿರವೋ ಬಾಳೆಯ ವನಗಳಿರ
ಹೋಗುತೀನಿ ನನ್ನ ತವರಿಗೆ – ಸುಯ್ಯೋ ।।೧೦।।

ಹೋಗೋಳ್ ಹೋಗುತೀಯ ನೀರ್ ಯಾರೆ ಹುಯ್ಯೋರು
ಹಣ್ಣಾದರ್ಯಾರೆ ಮೆಲುವೋರು – ಸುಯ್ಯೋ ।।೧೧।।

ನೀರು ಹುಯ್ಯೋಳವಳೆ ಹಣ್ಣು ಮೆಲ್ಲೋಳವಳೆ
ನನಗಿಂತ ಜಾಣೆ ಮನೆಯಾಗೆ – ಸುಯ್ಯೋ ।।೧೨।।

* * * * *

ಒಂದನೆತ್ತಿಕೊಂಡು ಕಂದನ ಕೈಲ್ಹಿಡಕೊಂಡು
ಗೆಜ್ಜೆವಜ್ಜರನ ನಡೆಸುತ ಉತ್ತರದೇವಿ
ಹೋಗ್ತಾಳೆ ತನ್ನ ತವರೀಗೆ – ಸುಯ್ಯೋ ।।೧೩।।

ಹಾಸನದ ಗೌಡ ತಡೆದು ಕೇಳ್ಯಾರಲ್ಲೆ
ನೀನ್ಯಾವ ರಾಜರ ಸೊಸೆಯಮ್ಮ – ಸುಯ್ಯೋ ।।೧೪।।

ನಾನ್ಯಾವ ರಾಜರ ಸೊಸೆಯೆಂದು ಹೇಳಲಿ
ಅತ್ಯಮ್ಮ ನನ್ನ ಉರಿಸಿ ಕಳಿವ್ಯಾಳು
ಹೋಗ್ತೀನಿ ನನ್ನ ತವರೀಗೆ ಸುಯ್ಯೋ ।।೧೫।।

ಅಪ್ಪಾ ಕದ ತೆಗಿಯೋ ಅಪ್ಪಾಜಿ ಕದಾ ತೆಗಿಯೋ
ನನ್ನಪ್ಪಾ ನನಗೆ ಕದಾ ತೆಗಿಯೋ – ಸುಯ್ಯೋ ।।೧೬।।

ಚಾಪೆಯ ಹಾಸೀತೆ ದೀಪವ ತುಂಬೈತೆ
ಕಂದವ್ವ ತೋಳಾಗೆ ಮಲಗ್ಯವ್ವೆ – ನನ ಮಗಳೆ
ಹೋಗೆ ನಿನ್ನಣ್ಣನರಮನೆಗೆ – ಸುಯ್ಯೋ ।।೧೭।।

ಅಣ್ಣಾ ಕದ ತೆಗಿಯೋ ಅಣ್ಣಯ್ಯ ಕದಾ ತೆಗಿಯೋ
ನನ್ನಣ್ಣಾ ನನಗೆ ಕದ ತೆಗಿಯೋ – ಸುಯ್ಯೋ ॥೧೮॥

ಚಾಪೆಯ ಹಾಸೀತೆ ದೀಪವ ತುಂಬೈತೆ
ಮಲ್ಲಯ್ಯೊಡೆಯಾಗೆ ಮಲಗೈತೆ – ನನತಂಗಿ
ಹೋಗೆ ನಿಮ್ಮಕ್ಕನರಮನೆಗೆ – ಸುಯ್ಯೋ ॥೧೯॥

ಅಕ್ಕಾ ಕದಾ ತೆಗಿಯೇ ಅಕ್ಕಯ್ಯಾ ಕದಾ ತೆಗಿಯೇ
ನನ್ನಕ್ಕ ನನಗೆ ಕದಾ ತೆಗಿಯೇ – ಸುಯ್ಯೋ ॥೨೦॥

ಚಾಪೆಯ ಹಾಸೀತೆ ದೀಪವ ತುಂಬೈತೆ
ನೀಲವ್ವ ತೋಳಾಗೆ ಮಲಗೈತೆ – ತಂಗ್ಯಮ್ಮ
ಹೋಗೆ ನಿಮ್ಮವ್ವನರಮನೆಗೆ – ಸುಯ್ಯೋ ॥೨೧॥



ಅವ್ವಾ ಕದ ತೆಗಿಯೇ ಅವ್ವಯ್ಯ ಕದಾ ತೆಗಿಯೇ
ನನ್ನವ್ವಾ ನನಗೆ ಕದಾ ತೆಗಿಯೇ–ಸುಯ್ಯೋ ॥೨೨॥

ಅವ್ವಾ ಕದ ತೆಗೆದಾಳು ತಲೆಯನು ತಡವ್ಯಾಳು
ಕಣ್ಣೀರ ಕೋಡಿ ಹರಿಸ್ಯಾಳು – ಸುಯ್ಯೋ ॥೨೩॥

ಕಣ್ಣೀರ ಕೋಡಿ ಹರಿಸುತೇನೆಂದಳು
ನಿಮ್ಮಪ್ಪ ನನ್ನ ಉರಸಿದ – ನನಮಗಳೆ
ನನ್ ಹಾಡು ನಿನಗೆ ಇಗಟೀತೆ – ನನ ಮಗಳೆ
ಉತ್ರಿ ಮಳೆಯಾಗಿ ಹೊರಡವ್ವಾ – ಸುಯ್ಯೋ ॥೨೪॥

ಒಂದನೆತ್ತಿಕೊಂಡು ಕಂದನ ಕೈಲ್ಹಿಡಕೊಂಡು
ಗೆಜ್ಜೆವಜ್ಜರನ ನಡೆಸುತ – ಸುಯ್ಯೋ
ಗೆಜ್ಜೆವಜ್ಜರನ ನಡೆಸುತ – ಉತ್ತರದೇವಿ
ಉತ್ರಿ ಮಳೆಯಾಗಿ ಹೊರಟಳು – ಸುಯ್ಯೋ ॥೨೫॥

ಸಂಗ್ರಹ: ಗೀತೆಗಳು – ಸಂ. ಮತಿಘಟ್ಟ ಕೃಷ್ಣಮೂರ್ತಿ

## ಪದಗಳ ಅರ್ಥ

ಹಿತ್ಲಾಗ ಏಕಾಂತ – ಮನೆಯ ಹಿಂಭಾಗದಲ್ಲಿ ಅತ್ತೆಗೂ ಸೊಸೆಗೂ ಜಗಳ, ಮಗ್ಗೆ – ಮಗನಿಗೆ, ಕೋಡಿ – ಪ್ರವಾಹ, ಒಂದೊರಾ – ಒಂದು ವರಹ; ನಾಲ್ಕು ರೂಪಾಯಿ, ತೆರಮುಟ್ಟಿ – ತೆರಕೊಟ್ಟು (ಕನ್ಯಾಶುಲ್ಕ), ಬಂದಿ – ತೋಳಬಂದಿ; ಆಭರಣ, ನೆಲೀನ – ನೆಲುವಿನ; ಅಡಿಗೆ ಪದಾರ್ಥಗಳನ್ನು ತೂಗುಹಾಕುವ ಸಾಧನ, ನೆಲ್ಲಕ್ಕಿ ಬಾನ– ಭತ್ತದ ಅಕ್ಕಿಯ ಅನ್ನ

(ಇತರೆ ಅಕ್ಕಿ; ನವಣೆ ಅಕ್ಕಿ,  ಹಾರಕದ ಅಕ್ಕಿ, ಸಾವೆ ಅಕ್ಕಿ ಇತ್ಯಾದಿ), ಮಡಗು – ಇಡು, ಗೆಜ್ಜೆ ವಜ್ಜರನ ನಡೆಸುತ – ವಜ್ರ ಬಿಗಿದ ಗೆಜ್ಜೆ ಕಟ್ಟಿದ ಮಗನನ್ನು ನಡೆಸುತ್ತ, ಉರಸು – (ಉರಿಸು) ಪೀಡಿಸು, ಹಿಂಸಿಸು, ದೀಪವ ತುಂಬೈತಿ – ದೀಪ ಆರಿಸಿದೆ (ಸೌಮ್ಯೋಕ್ತಿ), ಇಗಟೀತೇ – ತಟ್ಟೀತೆ, ಬಂದೀತೇ, ನನ್‌ಹಾಡು –ನನ್ನ ಹಾಡು.

## ಚಟುವಟಿಕೆಗಳು

- ಜನಪದರ ಬದುಕು ಉತ್ರಾಜಿ ಕಥನಗೀತೆಯಲ್ಲಿ ಹೇಗೆ ಮೂಡಿಬಂದಿದೆ ಎಂಬುದರ ಕುರಿತು ಚರ್ಚಾಕೂಟವನ್ನು ಏರ್ಪಡಿಸಿರಿ.
- ಉತ್ರಾಜಿ ಮತ್ತು ಅವಳ ಅತ್ತೆಯ ಸಂಭಾಷಣೆಯಲ್ಲಿ ಕಂಡುಬರುವ ವ್ಯಂಗ್ಯವನ್ನು ಗುರುತಿಸಿ ಟಿಪ್ಪಣಿ ಬರೆಯಿರಿ.
- ಉತ್ರಾಜಿಯ ಜೀವನ ದುರಂತಮಯವಾಗಿ ಪರಿಣಮಿಸಲು ಉಂಟಾದ ಕಾರಣಗಳನ್ನು ಕಿರುಲೇಖನ ರೂಪದಲ್ಲಿ ಬರೆಯಿರಿ.
- ಕೌಟುಂಬಿಕ ವ್ಯವಸ್ಥೆಯ ಸೂಕ್ಷ್ಮ ವಿಚಾರಗಳು – ಉತ್ರಾಜಿಯ ಕತೆಯಲ್ಲಿ ಹೇಗೆ ಮೂಡಿಬಂದಿವೆ ಎಂಬುದನ್ನು ವಿಮರ್ಶಾತ್ಮಕವಾಗಿ ಬರೆಯಿರಿ.
- ತವರಿಗೆ ಹೊರಟ ಉತ್ರಾಜಿಯ ಮಾನಸಿಕ ತುಮುಲವನ್ನು ಕುರಿತು ಲೇಖನ ಬರೆಯಿರಿ.
- 'ಜನಪದ ಸಾಹಿತ್ಯದಲ್ಲಿ ಸ್ತ್ರೀ' ಎಂಬ ವಿಷಯದ ಕುರಿತು ಪ್ರಬಂಧ ಬರೆದು ವಿಚಾರಗೋಷ್ಠಿಯಲ್ಲಿ ಮಂಡಿಸಿರಿ.
- ಉತ್ರಾಜಿಗೆ ತಾಯಿಯು ನೀಡಿದ ಪ್ರತಿಕ್ರಿಯೆಯ ಮಹತ್ವವೇನು?

## ಭಾಷಾಭ್ಯಾಸ


- ನಾಮ ಪದಗಳಲ್ಲಿ ರೂಢ ನಾಮ. ಅಂಕಿತ ನಾಮ, ಅನ್ವರ್ಥ ನಾಮಗಳೆಂಬ ಬೇರೆ ಬೇರೆ ರೂಪಗಳಿವೆ. ಅಂತಹ ಪದಗಳನ್ನು ಪಾಠಭಾಗದಿಂದ ಆರಿಸಿ ಬರೆಯಿರಿ. ಉದಾ: ರಾಣಿ, ಸೊಸೆ (ರೂಢನಾಮ), ಹಾಸನ, ಉತ್ರಾಜಿ (ಅಂಕಿತನಾಮ), ಮೂಕ, ಕುರುಡ (ಅನ್ವರ್ಥನಾಮ).

- ಕ್ರಿಯಾಪದದ ಮೂಲರೂಪವೇ ಧಾತು. ಧಾತುವಿಗೆ ಇಕೆ, ಇಗೆ, ಕೆ ಮೊದಲಾದ ಕೃತ್‌ಪ್ರತ್ಯಯಗಳು ಸೇರಿದರೆ ಕೃದಂತ ಭಾವನಾಮಗಳಾಗುತ್ತವೆ. ಪಾಠದಲ್ಲಿ ಬಂದಿರುವ ಧಾತುಗಳ ಪ್ರತ್ಯಯಗಳನ್ನು ಸೇರಿಸಿ ಭಾವನಾಮ ರೂಪಗಳನ್ನು ಬರೆಯಿರಿ. ಉದಾ: ಹೇಳು – ಹೇಳಿಕೆ, ಹಾಸು –ಹಾಸಿಗೆ, ಕುಡಿಯು – ಕುಡಿಯುವಿಕೆ.

# ಕಣ್ಣ ಮುಂದೈತಿ ಕೈಲಾಸ

***ಜನಪದ ತ್ರಿಪದಿಗಳು***

ಹಳ್ಳಿಯ ಸಾಮಾನ್ಯ ಜನರು ತಮ್ಮ ನಿತ್ಯ ಜೀವನದಲ್ಲಿ ಕಂಡುಕೊಂಡ ಅಪಾರವಾದ ಅನುಭವಗಳು ಜನಪದ ಸಾಹಿತ್ಯ ರೂಪವನ್ನು ಹೊಂದಿದ ರೀತಿಯೇ ಅಪೂರ್ವ. ಅವರ ಅನುಭವಗಳಾದ ನೋವು–ನಲಿವು, ಪ್ರೀತಿ–ಪ್ರೇಮ , ಭಕ್ತಿ–ನೀತಿಗಳು ಕಥೆಯಾಗಿ, ಗೀತೆಯಾಗಿ, ಗಾದೆಯಾಗಿ, ಒಗಟು, ನಾಟಕಗಳಾಗಿ ಜನಮನದಲ್ಲಿ ಅಳಿಸಲಾಗದ ಪ್ರಭಾವ ಬೀರಿವೆ. ನಿರ್ದಿಷ್ಟ ಲಿಖಿತ ದಾಖಲೆಗಳಿಲ್ಲದೆ ಬಾಯಿಂದ ಬಾಯಿಗೆ ಹರಿದು ಬರುವ ಈ ಪ್ರಕಾರಗಳು ಸ್ಥಳದಿಂದ ಸ್ಥಳಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುವುದನ್ನು ಕಾಣಬಹುದು. ಜನಪದ ಸಾಹಿತ್ಯದಲ್ಲಿ ತ್ರಿಪದಿ ಛಂದಸ್ಸಿಗೆ ಅಗ್ರಸ್ಥಾನವಿದೆ. ಸರಳವೂ ಸುಂದರವೂ ಆದ ನಡಿಗೆಯಿಂದ ಕೂಡಿದ ಈ ರಚನೆಗಳು ಸಾಮಾಜಿಕ ಮೌಲ್ಯಗಳನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತವೆ. ಇಲ್ಲಿ ಕೊಡಲಾದ ಜನಪದ ತ್ರಿಪದಿಗಳಲ್ಲಿ ಅತ್ತೆ – ಸೊಸೆ ಸಂಬಂಧ, ನೀತಿ, ಬಡತನದ ದಾರುಣತೆ ಇತ್ಯಾದಿ ವಿಚಾರಗಳು ಅಭಿವ್ಯಕ್ತಿಗೊಂಡಿವೆ.



ಹಲಗೆಯ ಹಿಡಿದಿಲ್ಲ ಬಳಪದಿ ಬರೆದಿಲ್ಲ
ಶ್ರೀ ಗುರುವು ನಮಗ ಬರೆಸಿಲ್ಲ ಕೇಳಿರವ್ವ
ಲೆಕ್ಕಣಿಗೆ ನಮಗ ಗೊತ್ತಿಲ್ಲ

ತನ್ನಂಗ ನೋಡಿದರೆ ಭಿನ್ನಿಲ್ಲ ಭೇದಿಲ್ಲ
ತನ್ನಂಗ ತನ್ನ ಮಗಳಂಗ ನೋಡಿದರ
ಕಣ್ಣ ಮುಂದೈತಿ ಕೈಲಾಸ

ಸೊಸಿಯು ಬರತಾಳಂತ ಖುಷಿ ಬಾಳ ಮನದಾಗ
ಸೊಸೆ ಬಂದು ಮಗನ ಕಸಗೊಂಡು ಬಾಳ್ವಾಗ
ಮುಗಿಲೀಗೆ ಬಾಯಿ ಬಿಡತಾಳ

ಬಾಳುವೆ ಮಾಡಿದರೆ ಬಾ ತಂಗಿ ಅಂದಾರು
ಬಾಳುವೆಗೆಟ್ಟು ಮತಿಗೆಟ್ಟು ತಿರುಗಿದರೆ
ಹೆತ್ತವರ ಕುಲಕ್ಕೆ ಹಗೆಯಾದೆ

ಬಂಗಾರ ಬಳಿಯಿದ್ರೆ ಬೈಬ್ಯಾಡ ಬಡವರಿಗೆ
ಬಂಗಾರ ನಿನಗೆ ಸ್ಥಿರವಲ್ಲ – ಮಧ್ಯಾಹ್ನದ

ಬಿಸಿಲು ಹೊರಳುವುದು ತಡವಲ್ಲ
ಬಡವರು ಸತ್ತರೆ ಸುಡಲಿಕ್ಕೆ ಸೌದಿಲ್ಲ
ಒಡಲ ಕಿಚ್ಚಿನಲಿ ಹೆಣ ಬೆಂತೊ – ದೇವರೆ
ಬಡವರಿಗೆ ಸಾವ ಕೊಡಬ್ಯಾಡ
ಕೊಟ್ಟು ಕುದಿಯಲು ಬೇಡ ಮಾಡಿ ಹಂಗಿಸಬೇಡ
ಇಷ್ಟುಂಡರೇನು ಎನಬೇಡ ಇವು ಮೂರು
ಮುಟ್ಟುವುದು ಶಿವನ ಬಳಿಯಲ್ಲಿ

ಸಂಗ್ರಹ : ಜನಪದ ಗೀತಾಂಜಲಿ – ಸಂ. ದೇ. ಜವರೇಗೌಡ

## ಪದಗಳ ಅರ್ಥ

| | |
|---|---|
| ಹಲಗೆ – ಬರೆಯುವ ಹಲಗೆ | ತನ್ನಂಗ – ತನ್ನ ಹಾಗೆ |
| ಬಳಪ – ಬರೆಯಲು ಬಳಸುವ ಕಲ್ಲು | ಭಿನ್ನಿಲ್ಲ – ಭಿನ್ನತೆಯಿಲ್ಲ |
| ಕಸಗೊಂಡು – ಕಸಿದುಕೊಂಡು | ಕುದಿಯು – ದುಃಖಿಸು |

## ಚಟುವಟಿಕೆಗಳು

- ಜನಪದ ಹಾಡುಗಳನ್ನು ತಾಳ–ಲಯ ಬದ್ಧವಾಗಿ ಹಾಡಿರಿ.
- ಜನಪದ ಹಾಡುಗಳಲ್ಲಿ ವ್ಯಕ್ತವಾಗುವ ಕೌಟುಂಬಿಕ ಬದುಕಿನ ಚಿತ್ರಣವನ್ನು ನೀಡಿರಿ.
- ನಿಮ್ಮ ಸ್ಥಳೀಯ ಜನಪದ ಹಾಡುಗಾರರೊಬ್ಬರನ್ನು ಸಂದರ್ಶಿಸಲು ಅಗತ್ಯವುಳ್ಳ ಪ್ರಶ್ನಾವಳಿಯನ್ನು ತಯಾರಿಸಿರಿ. ಸಂದರ್ಶನ ಲೇಖನವನ್ನು ಬರೆಯಿರಿ.
- 'ಜನಪದ ಗೀತೆಗಳ ಸಂಗ್ರಹ ಹಾಗೂ ವಿಶ್ಲೇಷಣೆ' ಎಂಬ ವಿಷಯದ ಕುರಿತು ಕಾರ್ಯಯೋಜನೆಯೊಂದನ್ನು ತಯಾರಿಸಿರಿ.
- 'ಬಡವರು ಸತ್ತರೆ..... ಬಡವರಿಗೆ ಸಾವ ಕೊಡಬ್ಯಾಡ' ಈ ತ್ರಿಪದಿಯ ಆಶಯದ ಕುರಿತು ಕಿರುಟಿಪ್ಪಣಿಯನ್ನು ಬರೆಯಿರಿ.

## ಭಾಷಾಭ್ಯಾಸ

- ಬರತಾಳಂತ, ಭೇದಿಲ್ಲ, ಮಗಳಂಗ, ಸೌದಿಲ್ಲ, ಬೈಬ್ಯಾಡ ಇತ್ಯಾದಿ ಪದಗಳ ಶಿಷ್ಟ ಕನ್ನಡ ರೂಪವನ್ನು ಬರೆಯಿರಿ.

## ಕಲಿಕಾ ಸಾಧನೆಗಳು

- ಜನಪದ ಸಾಹಿತ್ಯದ ಹುಟ್ಟು, ಬೆಳವಣಿಗೆ, ವಿಶೇಷತೆಗಳನ್ನು ತಿಳಿಯುತ್ತಾರೆ.
- ಜನಪದಗೀತೆ, ಜನಪದ ನಂಬಿಕೆ ಮೊದಲಾದುವುಗಳಲ್ಲಿನ ಆಶಯಗಳು, ಆಚಾರ, ಅನುಷ್ಠಾನ, ಸಾಮಾಜಿಕ ದೃಷ್ಟಿ ಮೊದಲಾದವುಗಳನ್ನು ತಿಳಿಯುತ್ತಾರೆ.
- ವಿವಿಧ ರೀತಿಯ ಸಾಹಿತ್ಯ ರಚನೆಗಳನ್ನು ವಿಶ್ಲೇಷಿಸಿ ಸ್ವಂತ ದೃಷ್ಟಿಕೋನದಿಂದ ವಿಮರ್ಶಿಸುತ್ತಾರೆ.
- ಭಾಷಾ ಪ್ರಭೇದ, ಮೌಖಿಕ ಸಾಹಿತ್ಯಗಳ ಪರಿಚಯ ಮಾಡಿ ಆಶಯಗಳನ್ನು ರೂಪಿಸುತ್ತಾರೆ.

# ಕಾವ್ಯಕಸ್ತೂರಿ

ಕನ್ನಡದಲ್ಲಿ ಕಾವ್ಯದ ಸಮೃದ್ಧವಾದ ಪರಂಪರೆಯಿದೆ. ಇದು ಮುಂದುವರಿದು ಕ್ರಿ.ಶ. ೧೯–೨೦ ನೇ ಶತಮಾನದಲ್ಲಿ ಕಾವ್ಯ ತನ್ನ ಸಂವೇದನೆ, ಅಭಿವ್ಯಕ್ತಿ ವಿಧಾನಗಳಲ್ಲಿ ಹೊಸ ರೂಪವನ್ನು ಪಡೆಯಿತು. ಇಂಗ್ಲೀಷ್ ಸಾಹಿತ್ಯದ ಪ್ರೇರಣೆಯೂ ಕೂಡ ಇದಕ್ಕೆ ಕಾರಣವಾಯಿತು. ಕನ್ನಡ ಕಾವ್ಯವು ಆಯಾ ಕಾಲದ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳಿಗೆ ಅನುಗುಣವಾಗಿ ಬೆಳೆದು ಬಂದಿದೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಪ್ರಕೃತಿ ಪ್ರೇಮ, ಕನ್ನಡತನ, ಸ್ವಾತಂತ್ರ್ಯದ ಬಯಕೆ, ಹೊಸ ಸಮಾಜದ ನಿರ್ಮಾಣ ಮುಂತಾದುವು ವಸ್ತುಗಳಾದವು. ಸ್ವಾತಂತ್ರ್ಯಾನಂತರ ಕೈಗಾರಿಕೀಕರಣದಿಂದ ಉಂಟಾದ ಸಾಮಾಜಿಕ ಪಲ್ಲಟ, ದೇಶ ಕಟ್ಟುವ ಬಯಕೆ, ವ್ಯಕ್ತಿ ವಿಕಾಸ ಮುಂತಾದುವು ವಸ್ತುಗಳಾದುವು. ದೇಶ ರಾಜಕೀಯವಾಗಿ, ಸಾಮಾಜಿಕವಾಗಿ ಪಲ್ಲಟಗೊಂಡಾಗ ಸಾಮಾಜಿಕ ಬದುಕು, ಸ್ತ್ರೀ ಸ್ವಾತಂತ್ರ್ಯ, ಸಮಾನತೆ ಮುಂತಾದುವು ವಸ್ತುಗಳಾದುವು. ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯ ಮುಂತಾದ ರೀತಿಯಲ್ಲಿ ಕಾವ್ಯದ ಬೆಳವಣಿಗೆಯನ್ನು ಗುರುತಿಸಲಾಗಿದೆ. ಸ್ತ್ರೀ ಸಂವೇದನೆ ಕೂಡಾ ಕಾವ್ಯದಲ್ಲಿ ಪ್ರೇರಣೆಯಾಯಿತು.

ಹೊಸಗನ್ನಡ ಕಾಲದಲ್ಲಿ ಹೊಸ ಛಂದೋಪ್ರಕಾರಗಳ ಆವಿಷ್ಕಾರವಾಯಿತು. ಮುಂದೆ ಕಾವ್ಯಕ್ಕೆ ಛಂದಸ್ಸಿಗಿಂತ ಸುಲಲಿತ ಲಯ ಮುಖ್ಯ ಎಂಬ ಮನೋಭಾವ ಬೆಳೆಯಿತು. ಹೀಗೆ ವಿಭಿನ್ನ ಲಯಗಳ, ವಿಭಿನ್ನ ಮನೋಧರ್ಮದ ಕಾವ್ಯ ಬೆಳೆಯುತ್ತಾ ಬಂದಿದೆ. ಆಧುನಿಕ ಕಾವ್ಯ ಸಾಗಿಬಂದ ಹೆಜ್ಜೆಯ ಗುರುತುಗಳನ್ನು ತೋರಿಸುವ ಪ್ರಾತಿನಿಧಿಕ ಕವನಗಳನ್ನು ಪ್ರಸ್ತುತ ಭಾಗದಲ್ಲಿ ನೀಡಲಾಗಿದೆ.



# ವೈಶಾಖ ಪೂರ್ಣಿಮೆಯು ಮಾರ್ತಾಂಡನುದಯಿಸಿದಂ

***ಗೋವಿಂದ ಪೈ***

ಬುದ್ಧನ ಕೊನೆಯ ದಿನವನ್ನು ನಿರೂಪಿಸುವ 'ವೈಶಾಖಿ'ಯ ಈ ಭಾಗವು ಬುದ್ಧ ಮತ್ತು ಆತನ ಶಿಷ್ಯ ಆನಂದ ಇವರ ಸಂಭಾಷಣೆಯೊಂದಿಗೆ ಆರಂಭವಾಗುತ್ತದೆ. ಅಜ್ಞಾನದಲ್ಲಿರುವವರನ್ನು ಎಚ್ಚರಿಸುವುದು ಬುದ್ಧನ ಬದುಕಿನ ಗುರಿ. ಅಜ್ಞಾನದಲ್ಲಿದ್ದ ಶಿಷ್ಯ ಆನಂದನನ್ನು ತನ್ನ ಮಹರ್ದ್ಧಿಕತೆಯ ಮೂಲಕ ಅರಿವಿನೆಡೆಗೆ ಕೊಂಡೊಯ್ಯುವ ಬುದ್ಧನ ಹಿರಿಮೆಯೇ ಪ್ರಸ್ತುತ ಕಥಾಸಂದರ್ಭ. ಜಗತ್ತಿಗೆ ಅಹಿಂಸೆಯ ತತ್ವವನ್ನು ಸಾರಿದ ಬುದ್ಧನ ಜೀವನದಲ್ಲಿ ವೈಶಾಖ ಶುಕ್ಲ ಪೂರ್ಣಿಮೆಗೆ ಅತ್ಯಂತ ಪ್ರಮುಖ ಸ್ಥಾನವಿದೆ. ಆತ ಜನಿಸಿದುದು, ಜ್ಞಾನೋದಯ ಹೊಂದಿದ್ದು ಹಾಗೂ ಪರಿನಿರ್ವಾಣ ಪಡೆದದ್ದು ವೈಶಾಖ ಶುಕ್ಲ ಪೂರ್ಣಿಮೆಯಂದು. ಆದುದರಿಂದ ಗೋವಿಂದ ಪೈಯವರು ಈ ದಿನಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತು, ಬುದ್ಧನ ಮಹಿಮಾನ್ವಿತ ವ್ಯಕ್ತಿತ್ವವನ್ನು ಕಾವ್ಯದಲ್ಲಿ ಚಿತ್ರಿಸಿದ್ದಾರೆ.



ಆನಂದನಂತೆ ಕಂಥೆಯ ಹಾಸೆ ಕುಳಿತಲ್ಲಿ
ಮರಳಿ ಇಂತೆಂದ – 'ಆನಂದ ಬಾಯಾರುತಿದೆ,
ಕೊಂಚ ನೀರಂ ತಾರ, ಕುಡಿವೆ ನಾನಾನಂದ.'
ಆನಂದನಾಗ, 'ಭಗವಂತ ಈ ದಾರಿಯಿಂ
ದೀಗ ಹೋದಯ್ನೂರು ಬಂಡಿಗಳ ಗಾಲಿಯಿಂ
ಕದಡಿ ಕೆಸರಾದ ತೊರೆಯಿ‌ಾ ನೀರಪಾನೀಯ
ಇಲ್ಲೆ ಬಳಿಯಣ ಕಕುತ್ಥಾನದಿಯ ನೀರೆನಿತೊ
ಶೀತಲಂ ನಿರ್ಮಲಂ ಮಧುರಮಾ ನದಿಗಯ್ದಿ
ನೀರ್ಕುಡಿದು ಮೆಯ್ತೊಳೆದುಕೊಳುವೆ' ಎನೆ ಮತ್ತೊಮ್ಮೆ
ಸುಗತನಿಂತೆಂದ – 'ಆನಂದ ಬಾಯಾರುತಿದೆ,
ಕೊಂಚ ನೀರಂ ತಾರ, ಕುಡಿವೆ ನಾನಾನಂದ.'

ಆನಂದನಂತೆ ಉತ್ತರವಿತ್ತ, ಬಳಿಕೊಮ್ಮೆ
ಬುದ್ಧನಿಂತೆಂದ– 'ಬಾಯಾರುತಿದೆ ಆನಂದ,
ಕೊಂಚ ನೀರಂ ತಾರ, ಕುಡಿವೆ ನಾನಾನಂದ.'
ಮೂರನೆಯ ಬಾರಿ ಅಂತೆಂಬುದೆ ತಥಾಗತಂ
ತಟ್ಟನೆ ತಥಾಸ್ತು ಎಂದಾನಂದ ಪಾತ್ರವ
ನ್ನೆತ್ತಿ ತೊರೆಗಯ್ದಿದಂ. ಬಂಡಿಗಳ ಗಾಲಿಯಿಂ
ದೀಗತಾಂ ಕದಡಿ ಕೆಸರಾದ ನೀರನಿತರೊಳೆ,
ಕಿಲುಬಿಡಿದ ಕನ್ನಡಿಗೆ ಹುಳಿಹಿಡಿಸೆ ಹೊಳೆವಂತೆ,
ವಿಸ್ಮರಿಸೆ ದುಃಸ್ವಪ್ನವೆಚ್ಚರಂ ತಿಳಿವಂತೆ,
ಗಾಳಿ ಮೋಡವ ಸೋಹೆ ಬೆಳರ್ವ ಚಂದ್ರಿಕೆಯಂತೆ
ಎನಿತಚ್ಛವೆನಿತನಾವಿಲವಾಗೆ ಕಂಡು ನಿ
ಬ್ಬೆರಗಾಗಿ, ಆತನಮಮೇನಚ್ಚರಿಯೊ ತಥಾ
ಗತನಾ ಮಹರ್ದ್ಧಿಕತೆ ! ಏನದ್ಭುತವೊ ಅಮಮ
ಸುಗತನ ಮಹಾನುಭಾವತೆ ! ಎಂದು ಕೊಂಡಾಡಿ
ನೀರಂ ತುಂಬಿಸಿ ತಂದ ಪಾತ್ರವ ತಥಾಗತಂ
ಗಿತ್ತು, 'ಭಗವಂತ ಅಮಮೇನಚ್ಚರಿಯೊ ತಥಾ
ಗತನಾ ಮಹರ್ದ್ಧಿಕತೆ ! ಏನದ್ಭುತವೊ ಅಮಮ
ಸುಗತನ ಮಹಾನುಭಾವತೆ ! ಬಂಡಿಗಳ ಗಾಲಿ
ಯಿಂದೀಗ ಕದಡಿ ಕೆಸರಾದ ನೀರನಿತರೊಳೆ
ಎನಿತಚ್ಛವೆನಿತನಾವಿಲ ! ಕುಡಿಯ ಭಗವಂತ'
ಎನಲು ಬುದ್ಧಂ ಪಾತ್ರವಿಸಕೊಂಡು ನೀರ್ಕುಡಿದು
ಸಂಬಾಳಿಸುತ್ತ ಕಣ್ಮುಗಿದು ಪದ್ಮಾಸನದಿ,
ಡಿಂಡೀರ ಪಿಂಡದಿ ಮರಾಲ ಮಂಡಿಸಿದಂತೆ,
ತೆರೆದ ರೆಪ್ಪೆಯಲಿ ಕಣ್ಣಿನ ಗೊಂಬೆ ನೆಲೆತಂತೆ,
ಕುಳಿತಿರಲು ಮೂಡಣದಿ ತಣ್ಮುಗಿಲ ಮರೆಗೆ ವೈ
ಶಾಖ ಪೂರ್ಣಮಿಯ ಮಾರ್ತಂಡನುದಯಿಸಿದಂ.

# ಗೋವಿಂದ ಪೈ



ಕನ್ನಡದ ಪ್ರಥಮ ರಾಷ್ಟ್ರಕವಿ ಎಂದು ಪ್ರಸಿದ್ಧರಾದ ಗೋವಿಂದ ಪೈಯವರು ೨೩.೩.೧೮೮೩ ರಂದು ತಿಮ್ಮಪ್ಪ – ದೇವಕಿ ದಂಪತಿಗಳ ಪುತ್ರರಾಗಿ ಮಂಗಳೂರಿನಲ್ಲಿ ಜನಿಸಿದರು. ಆದರೆ ತಮ್ಮ ಜೀವಿತದ ಬಹುಭಾಗವನ್ನು ಮಂಜೇಶ್ವರದ ತಮ್ಮ ಹಿರಿಯರ ಮನೆಯಲ್ಲಿ ಕಳೆದು ಮಂಜೇಶ್ವರ ಗೋವಿಂದ ಪೈ ಎಂದೇ ಖ್ಯಾತರಾದರು. ಮಂಗಳೂರಿನ ಮಿಷನ್ ಶಾಲೆ, ಕೆನರಾ ಹೈಸ್ಕೂಲು, ಸರಕಾರಿ ಕಾಲೇಜು ಮತ್ತು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಶಿಕ್ಷಣವನ್ನು ಪಡೆದರು. ಬಾಲ್ಯದಲ್ಲಿಯೇ ಸಾಹಿತ್ಯಾಭಿರುಚಿಯನ್ನು ಮೈಗೂಡಿಸಿಕೊಂಡಿದ್ದ ಪೈಯವರು ಕವಿತೆ, ಖಂಡಕಾವ್ಯ, ನಾಟಕ, ಸಂಶೋಧನೆ ಮೊದಲಾದ ಸಾಹಿತ್ಯ ಪ್ರಕಾರಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಗಿಳಿವಿಂಡು, ನಂದಾದೀಪ, ಹೃದಯರಂಗ ಇವು ಇವರ ಪ್ರಕಟಿತ ಕವನ ಸಂಕಲನಗಳು. ಹೆಬ್ಬೆರಳು, ಚಿತ್ರಭಾನು ಪ್ರಕಟಿತ ನಾಟಕಗಳು ತಾಯಿ ಮತ್ತು ನೋ ಅವರ ಅತ್ಯಂತ ಕಿರಿಯ ಅನುವಾದ ನಾಟಕಗಳು. 'ಗೊಲ್ಗೊಥಾ' ಮತ್ತು 'ವೈಶಾಖಿ' ಗಳಲ್ಲದೆ ಪ್ರಭಾಸ (ಶ್ರೀಕೃಷ್ಣನ ಅವತಾರದ ಕೊನೆಯ ಕಥೆ), ದೆಹಲಿ (ಮಹಾತ್ಮಾಗಾಂಧಿಯ ಕಡೆಯದಿನ) ಎಂಬಿವು ಖಂಡಕಾವ್ಯಗಳು. ಇಂಗ್ಲೀಷ್ ಹಾಗೂ ಕೊಂಕಣಿ ಕವನಗಳನ್ನೂ ಇವರು ಬರೆದಿದ್ದಾರೆ. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರವು ೧೯೯೫ ರಲ್ಲಿ ಗೋವಿಂದ ಪೈಯವರ ಕನ್ನಡ ಸಂಶೋಧನ ಲೇಖನಗಳ ಸಂಕಲನ 'ಗೋವಿಂದ ಪೈ ಸಂಶೋಧನ ಸಂಪುಟ' ಮತ್ತು ೧೯೯೭ ರಲ್ಲಿ ಇಂಗ್ಲಿಷ್ ಲೇಖನಗಳ ಸಂಗ್ರಹ 'ಇಂಡಿಯಾನ' ಗಳನ್ನು ಪ್ರಕಟಿಸಿದೆ. ಹೊಸಗನ್ನಡದಲ್ಲಿ ಪ್ರಾಸವನ್ನು ತ್ಯಜಿಸಿ ಬರೆಯುವ ಮಾರ್ಗವನ್ನು ನಿರ್ಮಿಸಿದ್ದು ಗೋವಿಂದ ಪೈಯವರ ಮಹತ್ವದ ಕೊಡುಗೆ. ೧೯೪೯ ರಲ್ಲಿ ಮದ್ರಾಸು ಸರಕಾರವು 'ರಾಷ್ಟ್ರಕವಿ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೬.೯.೧೯೬೩ ರಂದು ಪೈಗಳು ಇಹಲೋಕ ತ್ಯಜಿಸಿದರು. ಪ್ರಸ್ತುತ ಕಾವ್ಯಭಾಗವನ್ನು 'ವೈಶಾಖಿ' ಖಂಡಕಾವ್ಯದಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

ಗಾಲಿ – ಚಕ್ರ
ಕಂಥೆ – ಸನ್ಯಾಸಿಗಳು ಬಳಸುವ ಬಟ್ಟೆ
ತಥಾಗತಂ – ಬುದ್ಧ
ತಥಾಸ್ತು – ಹಾಗೇ ಆಗಲಿ
ವಿಸ್ಮರಿಸು – ಮರೆಯು
ಸೋಹೆ – ಅಟ್ಟಲು
ಬೆಳರ್ವ – ಬೆಳಗುವ
ನೆಲೆತಂತೆ – ನೆಲೆಸಿದಂತೆ; ಇರುವಂತೆ
ಸುಗತ – ಬುದ್ಧ
ಸಂಬಾಳಿಸು – ಸುಧಾರಿಸು
ಮಾರ್ತಂಡ – ಸೂರ್ಯ
ಮಹಾನುಭಾವತೆ – ಮಹಾತ್ಮೆ
ಋದ್ಧಿ – ಸಂಪತ್ತು
ಅಚ್ಚ – ಶುಭ್ರ
ಅನಾವಿಲ – ನಿರ್ಮಲ; ಕದಡದಿರುವ.
ಪದ್ಮಾಸನ – ಒಂದು ಬಗೆಯ ಆಸನ ರೀತಿ; ಯೋಗದಲ್ಲಿ ಕುಳಿತುಕೊಳ್ಳುವ ಒಂದು ವಿಧಾನ

## ಹೆಚ್ಚಿನ ಮಾಹಿತಿ

- ಆನಂದ – ಬುದ್ಧನ ಅಕ್ಕರೆಯ ಶಿಷ್ಯ (ಬುದ್ಧನ ಚಿಕ್ಕಪ್ಪನಾದ ಅಮಿತೋದನನ ಮಗ).
- ಕಕುತ್ಥಾನದಿ – ಕುಶಿನಾರದಿಂದ ೮ ಮೈಲು ದೂರದಲ್ಲಿ ಹರಿಯುತ್ತಿರುವ ಸಣ್ಣ ಹೊಳೆ.
- ಡಿಂಡೀರ ಪಿಂಡದಲಿ ಮರಾಲ ಮಂಡಿಸಿದಂತೆ – ಸಮುದ್ರದಲ್ಲಿನ ನೊರೆಯ ರಾಶಿಯಲ್ಲಿ ರಾಜಹಂಸ ಕುಳಿತಂತೆ.
- 'ಕಿಲುಬಿಡಿದ ಕನ್ನಡಿಗೆ ಹುಳಿ ಹಿಡಿಸೆ ಹೊಳೆವಂತೆ' (ಬುದ್ಧನ ಕಾಲದಲ್ಲಿದ್ದ ಕನ್ನಡಿಗಳು ಕಂಚಿನವು, ಗಾಜಿನವಲ್ಲ.)

## ಚಟುವಟಿಕೆಗಳು

- ಬುದ್ಧ ಹಾಗೂ ಆನಂದರ ಮಾತುಗಳನ್ನು ಸಂಭಾಷಣೆಯ ರೂಪಕ್ಕೆ ಪರಿವರ್ತಿಸಿರಿ.
- 'ಆನಂದನಂತೆ ಕಂಥೆಯ ಹಾಸೆ........ ಮಾರ್ತಂಡನುದಯಿಸಿದಂ' ಕಾವ್ಯಭಾಗದ ಆಶಯವನ್ನು ಗದ್ಯರೂಪದಲ್ಲಿ ಬರೆಯಿರಿ.

- ಕಿಲುಬಿಡಿದ ಕನ್ನಡಿಗೆ ಹುಳಿಹಿಡಿಸೆ ಹೊಳೆವಂತೆ, ಗಾಳಿ ಮೋಡವ ಸೋಹೆ ಬೆಳರ್ವ ಚಂದ್ರಿಕೆಯಂತೆ ಏನದ್ಭುತವೊ ಅಮಮ ಸುಗತನ ಮಹಾನುಭಾವತೆ! – ಈ ಮಾತುಗಳ ಆಧಾರದಲ್ಲಿ ಬುದ್ಧನ ಮಹಾತ್ಮೆಯ ಕುರಿತು ವ್ಯಾಖ್ಯಾನಿಸಿರಿ. ಈ ಮಾತುಗಳ ಸ್ವಾರಸ್ಯವನ್ನು ಬರೆಯಿರಿ.
- ಕಿಲುಬಡಿದ ಕನ್ನಡಿಗೆ ಹುಳಿಹಿಡಿಸೆ – ಎಂಬಲ್ಲಿ ಕನ್ನಡಿ ಹೊಳೆವಂತೆ ಬಂಡಿಯ ಗಾಲಿಯಿಂದ ಕೆಸರಾದ ನೀರು ಶುದ್ಧವಾಯಿತು. ಇದೇ ರೀತಿಯಲ್ಲಿ ಕಾವ್ಯಭಾಗದಲ್ಲಿ ಬಂದಿರುವ ಉಪಮಾಲಂಕಾರದ ಸಾಲುಗಳನ್ನು ಗುರುತಿಸಿ ಬರೆಯಿರಿ.
- ನೀಡಿರುವ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

  ಬಂಡಿಗಳ ಗಾಲಿಯಿಂದೀಗ ತಾಂ ಕದಡಿ ಕೆಸರಾದ ನೀರನಿತರೊಳೆ<br>
  ಕಿಲುಬಿಡಿದ ಕನ್ನಡಿಗೆ ಹುಳಿಹಿಡಿಸೆ ಹೊಳೆವಂತೆ<br>
  ಬುದ್ಧಂ ಪಾತ್ರವಿಸಕೊಂಡು ನೀರ್ಕುಡಿದು ಸಂಬಾಳಿಸುತ್ತ ಕಣ್ಮುಗಿದು ಪದ್ಮಾಸನದಿ,<br>
  ಡಿಂಡೀರ ಪಿಂಡದಿ ಮರಾಲ ಮಂಡಿಸಿದಂತೆ
- ‘ಬುದ್ಧ’ ಹೆಸರಿಗೆ ಸಮಾನಾರ್ಥವಾಗಿ ಬಳಕೆಯಾದ ಪದಗಳನ್ನು ಬರೆಯಿರಿ.
- ಬುದ್ಧನ ಜೀವನ ಚರಿತ್ರೆಯನ್ನು ಸಂಗ್ರಹಿಸಿರಿ.
- ಗೋವಿಂದ ಪೈಯವರ ಗೊಲ್ಗೊಥಾ ಮತ್ತು ವೈಶಾಖಿ ಖಂಡಕಾವ್ಯಗಳನ್ನು ಓದಿ ‘ಓದಿನ ಟಿಪ್ಪಣಿ’ ಬರೆಯಿರಿ.

## ಭಾಷಾಭ್ಯಾಸ

- ನೀರ್ಕುಡಿದು ಮೆಯ್ತೊಳೆದುಕೊಳ್ಳುವೆನು (ಭವಿಷತ್ ಕಾಲ)

  ನೀರ್ಕುಡಿದು ಮೆಯ್ತೊಳೆದುಕೊಳ್ಳುತ್ತೇನೆ (ವರ್ತಮಾನ ಕಾಲ)

  ನೀರ್ಕುಡಿದು ಮೆಯ್ತೊಳೆದುಕೊಂಡೆನು (ಭೂತ ಕಾಲ)

  ಈ ರೀತಿಯ ವಾಕ್ಯಗಳನ್ನು ಪಾಠದಿಂದ ಆಯ್ದುಕೊಂಡು ಕಾಲಪರಿವರ್ತನೆ ಮಾಡಿ ಬರೆಯಿರಿ.

  ಉದಾ : ಮಾರ್ತಂಡನುದಯಿಸಿದಂ, ಮಾರ್ತಂಡನುದಯಿಸಿದಪಂ, ಮಾರ್ತಂಡನುದಯಿಸುವಂ
- ತಲೆದೂಗು – ಬುದ್ಧನ ಮಹರ್ದ್ಧಿಕತೆಯನ್ನು ಕಂಡ ಆನಂದನು ತಲೆದೂಗಿದನು. ಈ ರೀತಿಯ ನುಡಿಗಟ್ಟುಗಳನ್ನು ಪಾಠಭಾಗದಿಂದ ಆಯ್ದುಕೊಂಡು ವಾಕ್ಯದಲ್ಲಿ ಪ್ರಯೋಗಿಸಿರಿ.

# ಮೊದಲಗಿತ್ತಿ

**ಅಂಬಿಕಾತನಯದತ್ತ**

ಪ್ರಸ್ತುತ ಕವಿತೆಯಲ್ಲಿ ಭಾರತ ಭೂಮಿಯನ್ನು ಮೊದಲಗಿತ್ತಿಯೆಂದು ಕಲ್ಪಿಸಿಕೊಂಡ ಕವಿ ಇತಿಹಾಸದ್ದುದ್ದಕ್ಕೂ ಮಣ್ಣಿಗಾಗಿ ನಡೆದ ಯುದ್ಧ, ರಕ್ತಪಾತದ ಹಿನ್ನೆಲೆಯಲ್ಲಿ ಆ ರಕ್ತದ ದಾಹ ಇಂಗಿ ಸತ್ಪುತ್ರರನ್ನು ಒಡಲಲ್ಲಿ ಧರಿಸುವ ಮಾತೃತ್ವದ ಆರ್ದ್ರತೆ ಅವಳಲ್ಲಿ ಮೂಡಿಬರಬೇಕೆಂಬ ಹಂಬಲವನ್ನು ಅಭಿವ್ಯಕ್ತಿಸಿದ್ದಾರೆ.

ಮೊದಲಗಿತ್ತಿಯಂತೆ ಮೆರೆಯುವಿಯೇ ತಾಯಿ।
ಮೊದಲಗಿತ್ತಿಯಂತೆ ಮೆರೆಯುತಿಹೆ

ಹಿಂಡಾಗಿ ಪುಂಡರು ಅಂಡಲೆಯಲು ನಿನ್ನ,
ನೆತ್ತರು ಒರೆಹಚ್ಚಿ ನೋಡಿರುವೆ
ಪಾತಾಳ ಕಂಡರು ಕೆಲ ತಾಯಿಗ್ಗಂಡರು
ಅವರನ್ನೂ ಮಡಿಲಾಗ ಮಡಗಿಸಿಹೆ

ಹದಿನಾರು ರಾಜರು ತಲೆಕೆಳಗಾದರು
ಆದರು ತಲೆಯೆತ್ತಿ ನಿಂತಿರುವೆ
ನಿನ್ನ ತೇಜದ ಮುಂದೆ ರಾಜತೇಜವು ಕೂಸು!
ಮೊದಲಗಿತ್ತಿಯು ನೀನು ಮೆರೆಯುತಿಹೆ

ಒಕ್ಕುಡಿತೆ ಅರೆಮುಕ್ಕು ಎನುತೆನುತೆ ಹಲಕೆಲವು
ಪಾನಿಪತ್ತುಗಳನ್ನು ಮುಕ್ಕುಳಿಸುವೆ
ಕೊಡಲಿ ರಾಮನು ಎರೆದ ಕೆನ್ನೀರ ಜಳಕಕ್ಕೆ
ಕೂದಲು ನನೆಯಲಿಲ್ಲೆನ್ನುತಿಹೆ



ಅವತಾರಕೊಂದೊಂದು ಅಭಿಷೇಕ ಮಾಡಿದರು
ಎಣ್ಣೆಮಜ್ಜನ ಬೇರೆ ಬೇಕೆನುವೆ
ನೆತ್ತರ ಮೀಯಿಸುವ ಕೆಂಚರ ಕೈಯಿಳಿಸಿ
ಮೊದಲಗಿತ್ತಿಯೆ ನೀನು ಮೆರೆಯುತಿಹೆ,

ಹಾಲಿನ ಹೃದಯಕ್ಕೆ ಕುಬ್ಬುಸವನು ತೊಡಿಸಿ
ಹೂ ಮುಡಿಸಿಕೊಂಡೆಂದು ನೀನಲಿವೆ?
ಬಸಿರು ತುಂಬಲು ಹಸಿರುಡುಗೆಯನುಟ್ಟೆಂದು
ವನವಾಸ ನವಮಾಸ ತೀರಿಸುವೆ?

ಮುನ್ನಿಲ್ಲ ಇನ್ನಾರೆ ಮಕ್ಕಳ ದಿನವೆಂದು
ಮೂಡೀತು ಹೇಳವ್ವ ಬಿನ್ನವಿಸುವೆ
ಎಂದು ಮಂಗಲ ನಿನ್ನ ದೇವಗರ್ಭಕೆ?–ಇನ್ನೂ
ಮೊದಲಗಿತ್ತಿಯಂತೆ ಮೆರೆಯುತಿಹೆ

## ಅಂಬಿಕಾತನಯದತ್ತ



ನವೋದಯ ಕಾವ್ಯ ಪಂಥದಲ್ಲಿ 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದೊಂದಿಗೆ ಪ್ರಸಿದ್ಧರಾದವರು ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ಇವರು ೩೧.೦೧.೧೮೯೬ರಲ್ಲಿ ಧಾರವಾಡದಲ್ಲಿ ಜನಿಸಿದ ಇವರು 'ಗೆಳೆಯರ ಬಳಗ' ದ ಮೂಲಕ ಉತ್ತರ ಕರ್ನಾಟಕದಲ್ಲಿ ಸಾಹಿತ್ಯಕ, ಸಾಂಸ್ಕೃತಿಕ ವಾತಾವರಣವನ್ನು ಹುಟ್ಟು ಹಾಕಿದರು. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ರಾಷ್ಟ್ರೀಯ ಶಾಲೆಗಳನ್ನು ಪ್ರಾರಂಭಿಸಿ ಶಿಕ್ಷಕ ವೃತ್ತಿಯನ್ನು ಕೈಗೊಂಡು ದುಡಿದರು. ಹೊಸಗನ್ನಡ ಕಾವ್ಯಕ್ಕೆ ಜನಪದ ಕಾವ್ಯದ ಸೊಗಡನ್ನು ನೀಡಿ ನಾಡು ನುಡಿಯ ಬಗೆಗಿನ ಕಾಳಜಿಯನ್ನು ತಮ್ಮ ಕವಿತೆಗಳಲ್ಲಿ ಚಿತ್ರಿಸಿದ್ದಾರೆ. ತಮ್ಮ ಅಪಾರ ಕಾವ್ಯ ಪ್ರತಿಭೆಯಿಂದ 'ಕನ್ನಡದ ವರಕವಿ' ಎನಿಸಿಕೊಂಡಿದ್ದರೆ, ತಮ್ಮ ಮಾತಿನ ಮೋಡಿಯಿಂದ 'ಕನ್ನಡದ ಗಾರುಡಿಗ ಕವಿ' ಎಂದು ಕರೆಸಿಕೊಂಡಿದ್ದಾರೆ. ಗಂಗಾವತರಣ, ನಾದಲೀಲೆ, ಸಖೀಗೀತ, ಅರಳು–ಮರಳು (ಕವನ ಸಂಕಲನಗಳು), ಹುಚ್ಚಾಟಗಳು, ಹೊಸ ಸಂಸಾರ (ನಾಟಕಗಳು), 'ಸಾಹಿತ್ಯದ ವಿರಾಟ್ ಸ್ವರೂಪ'ವೇ ಮೊದಲಾದ ವಿಮರ್ಶಾ ಕೃತಿಗಳು ಈ ಕವಿ ಕನ್ನಡಕ್ಕಿತ್ತ ಅಮೂಲ್ಯ ಕೊಡುಗೆಗಳಾಗಿವೆ. ಇವರ 'ನಾಕುತಂತಿ' ಭಾರತೀಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವನ ಸಂಕಲನವಾಗಿದೆ. ಈ ಕವನವನ್ನು ನಾದಲೀಲೆ ಕೃತಿಯಿಂದ ಆರಿಸಲಾಗಿದೆ.

## ಪದಗಳ ಅರ್ಥ

ಮೊದಲಗಿತ್ತಿ – ಮದುಮಗಳು

ತಾಯಿಗ್ಗಂಡರು – ದುಷ್ಟರು

ಮಡಗು – ಇಡು

ಅರೆಮುಕ್ಕು – ಅರ್ಧಹಿಡಿ

ಕೆಂಚರು – ಬ್ರಿಟಿಷರು

ಜಳಕ – ಸ್ನಾನ

ಒರೆ ಹಚ್ಚು – ಪರೀಕ್ಷಿಸು

ತೇಜ – ಕಾಂತಿ

ಒಕ್ಕುಡಿತೆ – ಒಂದು ಬೊಗಸೆ

ಕೆನ್ನೀರು – ಕೆಂಪು ನೀರು; ರಕ್ತ

ಕುಬ್ಬುಸ – ಕುಪ್ಪಸ; ರವಿಕೆ

ಕೊಡಲಿರಾಮ – ಪರಶುರಾಮ

ಪಾನಿಪತ್ತು – ಐತಿಹಾಸಿಕ ಯುದ್ಧ ನಡೆದ ಸ್ಥಳ

ಮುಕ್ಕಳಿಸು – ಬಾಯಲ್ಲಿ ನೀರು ತುಂಬಿಕೊಂಡು ಗುಳುಗುಳಿಸು

## ಚಟುವಟಿಕೆಗಳು

- ಕವಿತೆಯ ಆಶಯವನ್ನು ಬರೆಯಿರಿ.
- 'ಭೂಮಿ ಸಕಲ ಜೀವಿಗಳಿಗೆ ಆಶ್ರಯ ತಾಣ' ಈ ನೆಲೆಯಲ್ಲಿ ಭೂಮಿಯ ಕುರಿತು ಒಂದು ಕವಿತೆ ರಚಿಸಿರಿ.
- ಕವಿತೆಯಲ್ಲಿ ವ್ಯಕ್ತವಾದ ಚಾರಿತ್ರಿಕ ಅಂಶಗಳ ಬಗ್ಗೆ ವಿಮರ್ಶಾತ್ಮಕ ಕಿರು ಟಿಪ್ಪಣಿ ಬರೆಯಿರಿ.
- 'ಬಸಿರು ತುಂಬಲು ಹಸಿರುಡಿಗೆಯನುಟ್ಟೆಂದು ವನವಾಸ ನವಮಾಸ ತೀರಿಸುವೆ' ಈ ಸಾಲಿನ ಸ್ವಾರಸ್ಯವನ್ನು ಬರೆಯಿರಿ.
- ಬಿ.ಎಂ.ಶ್ರೀ. ಅವರು ಅನುವಾದಿಸಿದ 'ಬ್ಲೆನ್‌ಹೀಮ್ ಕದನ' ಕವನದ ಆಶಯದೊಂದಿಗೆ 'ಮೊದಲಗಿತ್ತಿ' ಕವನದ ಆಶಯವನ್ನು ತುಲನೆ ಮಾಡಿ ಲೇಖನವೊಂದನ್ನು ಬರೆಯಿರಿ.

## ಹೆಚ್ಚಿನ ಓದಿಗೆ

ಅಂಬಿಕಾತನಯದತ್ತರ ಭಾವಗೀತೆಗಳು – ರುಕ್ಮಿಣಿ ಪರ್ವತಿ.

# ಅಶ್ವತ್ಥಾಮ

**ಸು.ರಂ. ಎಕ್ಕುಂಡಿ**

ಮಹಾಭಾರತದಲ್ಲಿ ದ್ರೋಣರ ಪುತ್ರ ಅಶ್ವತ್ಥಾಮ ಹಾಲಿಗಾಗಿ ಹಟಹಿಡಿದ ಕಥೆ ಬರುತ್ತದೆ. ಆ ಸಂದರ್ಭದಲ್ಲಿ ಮಗುವಿಗೆ ಕೊಡಲು ಹಾಲಿಲ್ಲದ ಬಡತನ ದ್ರೋಣರದ್ದಾಗಿತ್ತು. ಈ ಕಥೆಯ ಎಳೆಯನ್ನು ಹಿಡಿದು ಪ್ರಸ್ತುತ ಕವನವನ್ನು ರಚಿಸಲಾಗಿದೆ. ಬಡತನದ ಬವಣೆಯನ್ನು ಅನುಭವಿಸುತ್ತಿರುವ ಕುಟುಂಬದಲ್ಲಿ ಹುಟ್ಟಿದ ಅಶ್ವತ್ಥಾಮ ಎಂಬ ಬಾಲಕನ ದಾರುಣ ಚಿತ್ರಣ ಈ ಕವನದ ಕೇಂದ್ರ ಆಶಯವಾಗಿದೆ. ಹಾಲನ್ನು ಬಯಸಿದ ಮಗನಿಗೆ ಹಾಲನ್ನು ನೀಡಲಾರದೆ ಅಸಹಾಯಕರಾದ ಹೆತ್ತವರ ದೀನಸ್ಥಿತಿ ಓದುಗರ ಹೃದಯವನ್ನು ಆರ್ದ್ರವಾಗಿಸುತ್ತದೆ.



ಓಡಿ ಬಂದವನು ಹುಡುಗ ನೋಡಿ ಬಂದನು
ಆಡಿ ಬಂದವನೆ ತಾಯ ಬಳಿ ತಬ್ಬಿಕೊಂಡು
ಮರುಕ ತುಂಬಿರುವ ಎದೆಯಲ್ಲಿ
ತಲೆಯಾಡಿಸುತ, ಮೆಲ್ಲನೆಂದನು ಅವಳ
ಮುಖವ ಕಂಡು

'ಹಸಿವಾಗಿದಮ್ಮ ಏನೂ ಇಲ್ಲವೆ ತಿನಲು?
ಮಗನ ಸಂತೈಸಿ ಮೆಲುನುಡಿಯ ತಾಯಿ
'ಇಲ್ಲೆ ಹೋಗಿದ್ದೆ ಮಗು, ನೆರೆಮನೆಗೆ ಅಲ್ಲಿಷ್ಟು
ಹಿಟ್ಟು ತಂದಿರುವೆ ತುಸು ಹೊತ್ತು ಕಾಯಿ'

ಬೀಸಿ ಆಗುವವರೆಗು ನಿಂತಿದ್ದೆ. ಕಲ್ಲಿನ
ಸುತ್ತೆಲ್ಲ ಚೆಲ್ಲಿ ಉಳಿದಷ್ಟು ಹಿಟ್ಟು
ಪುಣ್ಯವಂತರು ಆಕೆ ನೀಡಿದರು ಆ
ಮೇಲೆ ನಮಗೆಂದು ಉಳಿದಿದ್ದನೆಲ್ಲ
ಬಿಟ್ಟು

ಏನಾದರೂ ಕೊಡುವೆ ತುಸುನಿಲ್ಲು. ಹಿ
ತ್ತಿಲದಿ ನೀರುಣಿಸಿ ಬಂದೆಯಾ? ಬ
ಳ್ಳಿಗಿಡಕೆ? ಹೂ ತುಳಸಿ ತಂದೆಯಾ? ಪಾ
ಠಗಳ ಅಂದೆಯಾ? ಕೈಮುಗಿದೆಯಾ? ಕೂ
ತು ಒಂದುಗಳಿಗೆ?

'ಹಾಲುಕೊಡು ನನಗೂ ಇಷ್ಟು ಹಾಲು ಕೊ
ಡು. ಎಲ್ಲರೂ ಬರುವರು ಹಾಲು ಕುಡಿದು!'
ಮಗನ ಹಟಮಾರಿತನ ಬಲ್ಲ ತಾಯಂ
ದಳು 'ಏನಾದರೂ ಕೊಡುವೆ ಸ್ವಲ್ಪ
ತಡೆದು'

'ಏನಾದರೂ ಬೇಡಮ್ಮ ಹಾಲೇ ಬೇಕು.
ಹಾಲು ಕೊಡು. ತಿನ್ನಲು ಬೇಡ ನನಗೆ.'
ಅಷ್ಟರಲ್ಲೆ ಹೆಗಲಗಂಟು ತೂಗಾಡಿಸುತ
ದಣಿದು ಬಂದರು ವೃದ್ಧ ತಂದೆ
ಮನೆಗೆ.

ಕೊಯ್ಲು ಮಾಡಿದ ಹೊಲದ ತೆನೆಯ ಕಾ
ಳನು ಹೆಕ್ಕಿ ದಿನದ ಅಮೃತ ಪಡಿಯ
ಮನೆಗೆ ತಂದು, ತೃಪ್ತಿಯಲಿ ಬಾಳಿರಲು
ಹಾಲಿನಾಸೆಯ ಹುಡುಗ ತಂದೆಗಂದನು
'ಹಾಲು ಬೇಕು' ಎಂದನು.

ತಂದೆ ತಲೆ ಕೊಡವಿದರು, ಒಂದು ಕ್ಷಣ
ನೋಡಿದರು: ತಾಯಿ ಕಂಬನಿ ದುಂಬಿ ನ
ಡೆದು ಒಳಗೆ. ಹಿಟ್ಟು ನೀರನು ಕಲಸಿ ಬೆ
ಳ್ಳಗಿರುವದ ತಂದು. 'ಹಾಲು ಕುಡಿ ಬಾ
ಮಗೂ' ಎಂದಳವಗೆ

ಬೆಳ್ಳಗಿರುವದ ಕುಡಿದು ಕುಣಿದಾಡಿ
ದನು ಹುಡುಗ, ಗೆಳೆಯರಿಗೆ ಹೇಳಿದ್ದ.
'ಹಾಲು ಕುಡಿದೆ'! ಆಮೇಲೆ ಒಂದು ದಿನ
ನಿಜವಾದ ಹಾಲು ಕುಡಿದನು. ಆಡಿ ಸಿರಿ
ವಂತ ಗೆಳೆಯರೊಡನೆ,

ಹಿಟ್ಟು ನೀರನು ಕಲಸಿ ಕೊಟ್ಟಾಗ ಮರು
ದಿವಸ, ಹುಡುಗ ಅಂದನು 'ಅಮ್ಮ ಹಾ
ಲು ಒಲ್ಲೆ, ಬೆಳ್ಳಗಿರುವದನೆಲ್ಲ ಹಾಲೆಂ
ದು ಕುಡಿದವರ ಬವಣೆಗಳ ಕತೆಯ
ನಾನೀಗ ಬಲ್ಲೆ.'

ನೊಂದುಕೊಂಡಳು ತಾಯಿ. ಅಂದುಕೊಂ
ಡರು ತಂದೆ. 'ಇಂದು ಕಂಡೆವು ಭಯದ
ಒರೆಯ ನಾವು. ಕರುಣೆಯಿಲ್ಲದ ಕೈ
ಯ ಕರವಾಳ ಹಿರಿಯುವದು. ಹಾಲಿ
ರದ ಹಸಿದವರು ನೊಂದ ನೋವು.'

## ಸು.ರಂ. ಎಕ್ಕುಂಡಿ



ಸು.ರಂ. ಎಕ್ಕುಂಡಿ ಎಂದೇ ಪ್ರಸಿದ್ಧರಾದ ಸುಬ್ಬಣ್ಣ ರಂಗನಾಥ ಎಕ್ಕುಂಡಿಯವರು ೨೦.೦೧.೧೯೨೩ರಂದು ರಾಣಿಬೆನ್ನೂರಿನಲ್ಲಿ ಜನಿಸಿದರು. ಸಾಗರದ ವಿಲ್ಲಿಂಗ್ಟನ್ ಕಾಲೇಜಿನಲ್ಲಿ ವ್ಯಾಸಂಗ ಮುಗಿಸಿದ ಇವರು ಉತ್ತರ ಕನ್ನಡದ ಬಂಕಿಕೊಡ್ಲದ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ದುಡಿದರು. ಸಂತಾನ, ಆನಂದ ತೀರ್ಥರು, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬೆಳ್ಳಕ್ಕಿಗಳು, ಕಥನಕವನ, ಬಕುಲದ ಹೂವುಗಳು, ಗೋಧಿಯ ತೆನೆಗಳು ಮುಂತಾದವು ಇವರ ಕವನ ಸಂಕಲನಗಳು. 'ನೆರಳು' ಕಥಾಸಂಕಲನ, 'ಪಂಜುಗಳು', 'ಪು.ತಿ.ನ.' ವಿಮರ್ಶಾ ಸಂಕಲನಗಳು. 'ಎರಡು ರಷ್ಯನ್ ಕಾದಂಬರಿಗಳು', 'ಪ್ರತಿಬಿಂಬ', 'ಮೌನದ ಸೊತ್ತು' ಇವು ಅನುವಾದಿತ ಕೃತಿಗಳು. ಸೋವಿಯತ್‌ಲ್ಯಾಂಡ್ ನೆಹರೂ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ದೊರಕಿವೆ. ಎಕ್ಕುಂಡಿಯವರು ಪ್ರಗತಿಪರ ನಿಲುವಿನ, ಸಾಮಾಜಿಕ ಬದ್ಧತೆಯ ಲೇಖಕರು. ಈ ಕವಿತೆಯನ್ನು ಬಕುಲದ ಹೂವುಗಳು ಎಂಬ ಕೃತಿಯಿಂದ ಆರಿಸಲಾಗಿದೆ.

## ಪದಗಳ ಅರ್ಥ

ಕೊಡವು – ಜಾಡಿಸು

ಕೊಯ್ಲು – ಬೆಳೆ ಕೊಯ್ಯುವುದು

ಪಡಿ – ಧಾನ್ಯ ರೂಪದಲ್ಲಿ ಹಂಚುವ ದಿನಗೂಲಿ

ಅಮೃತಪಡಿ – ದೇವತೆಗಳಿಗೆ ದಿನಾ ಅರ್ಪಿಸುವ ನೈವೇದ್ಯ

ಕರವಾಳ – ಖಡ್ಗ

ಒರೆ – ಕತ್ತಿಯನ್ನಿಡುವ ಚೀಲ

ಬವಣೆ – ಕಷ್ಟ

## ಚಟುವಟಿಕೆಗಳು

- 'ಜೀವನಾನುಭವಗಳು ಒಬ್ಬ ವ್ಯಕ್ತಿಯನ್ನು ಚಿಂತನೆಗೊಳಪಡಿಸುತ್ತವೆ' ಎಂಬುದು ಬಾಲಕನ ಪಾತ್ರದಲ್ಲಿ ವ್ಯಕ್ತವಾಗುತ್ತದೆಯಲ್ಲವೇ? ನಿಮ್ಮ ಅಭಿಪ್ರಾಯಗಳನ್ನು ಬರೆದು ಚರ್ಚಾಕೂಟದಲ್ಲಿ ಮಂಡಿಸಿರಿ.
- ಬಡತನದ ಕಾರಣದಿಂದ ಸುಳ್ಳು ನೆಪಗಳ ಮೂಲಕ ಮಕ್ಕಳನ್ನು ಕ್ಷಣಿಕವಾಗಿ ಶಾಂತಗೊಳಿಸುವ ಹಿರಿಯರ ಅಸಹಾಯಕ ಸ್ಥಿತಿಯನ್ನು ಈ ಕವನದ ಆಧಾರದಲ್ಲಿ ಟಿಪ್ಪಣಿರೂಪದಲ್ಲಿ ಬರೆಯಿರಿ.
- ಎಳವೆಯಲ್ಲಿಯೇ ಮಕ್ಕಳಿಗೆ ಅವರ ಮನೆಯ ಸ್ಥಿತಿಗತಿಗಳನ್ನು ತಿಳಿಸಿಕೊಡುವ ಅಗತ್ಯದ ಕುರಿತು ನಿಮ್ಮ ಅಭಿಪ್ರಾಯವನ್ನು ಕಿರುಲೇಖನ ರೂಪದಲ್ಲಿ ಬರೆಯಿರಿ.
- 'ಎಲ್ಲರೂ ಬರುವರು ಹಾಲು ಕುಡಿದು' ಎಂಬ ಸಾಲಿನಲ್ಲಿ ಮಗುವು ತನ್ನ ಪರಿಸರವನ್ನು ನಿರೀಕ್ಷಿಸುವ ವಿಚಾರವಿದೆಯಲ್ಲವೇ? ಅಲ್ಲಿ ಕಾಣುವ ಮಗುವಿನ ಮಾನಸಿಕ ಸ್ಥಿತಿಯ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ.
- 'ಬೆಳ್ಳಗಿರುವುದೆಲ್ಲಾ ಹಾಲಲ್ಲ'– ಎಂಬ ಗಾದೆ ಮಾತನ್ನು ಉದಾಹರಣೆ ಸಹಿತ ವಿಸ್ತರಿಸಿರಿ.
- ಈ ಕವನದ ಕೇಂದ್ರ ಆಶಯ 'ಹಸಿವು' ಎಂಬುದನ್ನು ನೀವು ಒಪ್ಪುವಿರಾ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.
- ಅರಿವು ಮೂಡಿದಲ್ಲಿ ಕ್ರಾಂತಿಯು ಜರಗುವುದು – ಈ ಹೇಳಿಕೆಯನ್ನು ಕವನದ ಕೇಂದ್ರ ಆಶಯದ ಹಿನ್ನೆಲೆಯಲ್ಲಿ ಚರ್ಚಿಸಿ.

## ಹೆಚ್ಚಿನ ಓದಿಗೆ

ಎಕ್ಕುಂಡಿ ನಮನ – ಸಂ: ಜಿ.ಎನ್. ಮೋಹನ್

# ಬರಿಗೊಡಗಳಿಗೆ ಸಮಾಧಾನ

**_ಕೆ.ಎಸ್. ನರಸಿಂಹ ಸ್ವಾಮಿ_**

ಈ ಕವನವು ಸಮಕಾಲೀನ ಬದುಕಿನ ವಾಸ್ತವಕ್ಕೆ ಹಿಡಿದ ಕನ್ನಡಿಯಂತಿದೆ. ಬಡವರ ಬೇಡಿಕೆಗಳಿಗೆ ಪೊಳ್ಳು ಭರವಸೆಯ ಮೂಲಕ ಸ್ಪಂದಿಸುವ ರಾಜಕಾರಣಿಗಳ ಪ್ರವೃತ್ತಿಯನ್ನು 'ಬರಿಗೊಡಗಳಿಗೆ ಸಮಾಧಾನ' ಹೇಳುವ ನೀರಿಲ್ಲದ ನಲ್ಲಿಯ ಉದಾಹರಣೆಯ ಮೂಲಕ ವ್ಯಂಗ್ಯವಾಗಿ ಕವಿ ಚಿತ್ರಿಸಿದ್ದಾರೆ.



ಬರಿಗೊಡಗಳಿಗೆ ಸಮಾಧಾನ ಹೇಳುತಿದೆ ನೀರಿಲ್ಲದ ನಲ್ಲಿ
ಮಟಮಟ ಮಧ್ಯಾಹ್ನದಲ್ಲಿ
ಬೀದಿಯೊಳಗಾಗಿ ಒಂದು ತಲೆಯಿಲ್ಲ;
ಬಿಸಿಲೇ ಎಲ್ಲ!

ನಿರ್ಜೀವವಾಗಿದೆ ನಿರಂತರ ನಿರ್ಭಾಗ್ಯ ನೀಲಗಗನ
(ರಾತ್ರಿಯ ಮಾತು ರಾತ್ರಿಗಾಯಿತು; ಈಗ ಹೇಳಿ!)
ಒಂದಾದರೂ ಬಿಳಿಮುಗಿಲೇ, ಶಾಂತಿಯೇ, ರಾಮ ರಾಮಾ!
ಹತ್ತು ಲಕ್ಷ ಜನದುಸಿರಾಚೆಗೆ, ಊರಾಚೆಗೆ
ಯಾರದೋ ಪಾಳು ಹೊಲದೊಳಗೆ
ತಲೆಯ ತಗ್ಗಿಸಿ ಸುಟ್ಟ ಕೊಳೆಯನು ಮೇಯುತಿವೆ
ಊರ ದನ ಗುಂಪುಗುಂಪಾಗಿ; ನಿಮಿಷದ ಹಿಂದೆ
ಕೊರಳ ಗೆಜ್ಜೆಯ ಇಂಪು ಹರಿದಿತ್ತು ಬೇಲಿಗಳ ಮೇಲೆ
ಹೊಗೆಯ ಗೋಪುರವೇಳುತಿದೆ ಬಂಡೆಗಳ ಮೇಲೆ
ತರಗೆಲೆ ರಾಸಿಗಾಗುತಿದೆ ನಿಷ್ಕಾಮದಹನ
ಗುಡಿಯ ಬಾಗಿಲಲಿ ಬಿಸಿಲ್ಗುದುರೆಗಳ ನೀರವ ನಿರ್ಗಮನ;
ಮುತ್ತಿನ ಹಾರವಿಲ್ಲ, ಹತ್ತುವ ದೇವರಿಲ್ಲ;
ಕಚ್ಚುವುದಿಲ್ಲ, ಒದೆಯುವುದಿಲ್ಲ– ಹೆಸರಿಗೆ ಕುದುರೆ!

ಯಾರಿಗೆ ಬೇಕೀ ಗತವೈಭವಗಳ ಪರಂಪರೆ?
ಬೋರೆಯಿಂದ ಬಳಲಿ ಬಂದ ಕುಂಟುಗಾಳಿಗೆ
ಪರ್ವತವಾಗಿದೆ ಮಣ್ಣು ಮಾಳಿಗೆ
ದೂರ ದಾರಿಯಲಿ ಎದ್ದ ದೂಳಿನಲಿ
ಉಸಿರೆಳೆಯುತ್ತಿದೆ ಲಾರಿ
ಬಾಂದಳದ ವಿಮಾನ
ಅದೆಷ್ಟು ನಿಧಾನ?


ದಾರವಿಲ್ಲದ ಸೂಜಿ ನಾಟಿದೆ ನೀಲಿಬಟ್ಟೆಯಲ್ಲಿ
ತಲೆಗೆದರಿದ ಗಿಡಬಳ್ಳಿ ಬೆಂಡಾಗಿವೆ ಬಿಸಿಲಲ್ಲಿ.
ಮಣ್ಣಿನ ಬಣ್ಣ ಬಂದಿದೆ ಚೆಲುವಿನ ಕಣ್ಣಿಗೆ;
ನೀರಡಿಕೆಯ ದೀಪವುರಿಯುತಿದೆ
ಕವಿತೆಯ ತುಟಿಯಲಿ ಸಣ್ಣಗೆ.
ಇದು ಹಸಿರಿಲ್ಲದ ಕೆಸರಿಲ್ಲದ ಉಸಿರಿಲ್ಲದ ನರಕ
ಜಳ್ಳಾಗಿದೆ ಈ ಮುದಿಮರವನಕ;
ಹಕ್ಕಿ ತಂಗುವುದಿಲ್ಲ;
ಕೋತಿ ಜಗ್ಗುವುದಿಲ್ಲ–
ಏನಿದರ ಅಮರ ಭಾವ?
ನೂರು ವಸಂತಗಳ ಹೀರಿ ಕಟ್ಟರೆಯಾಗಿದೆ ಇದರ ಜೀವ
ಹಾವಿನ ಸಂಸಾರದ ಪೊಟ್ಟರೆಯಾಗಿದೆ ಇದರ ದೇಹ.
ಯಾರಿಗೆ ಬೇಕು ಇದರ ಸ್ನೇಹ?
ಬಿರುಗಾಳಿಯಾದರೂ ಬೀಸಿ
ಇದು ಬಿದ್ದರೆ ವಾಸಿ!

ಯಾವ ಬಣ್ಣ ಬಂತಂತೆ ಚೆಲುವಿನ ಕಣ್ಣಿಗೆ?
ಕವಿತೆಯ ತುಟಿಯಲಿ ಉರಿವುದೇನು ಸಣ್ಣಗೆ?
ಹಳೆಯ ಪುಸ್ತಕದಲ್ಲಿ ಹಿಂದೆಯೇ ಬರೆದಿದೆ;
"ತುಂಬಿದ ಕೊಡ ತುಳುಕುವುದಿಲ್ಲ"
(ಭೇಷಾಗಿದೆ ಬರವಣಿಗೆ)
ಸಾವಿರ ಬೀದಿಗಳಲ್ಲಿ ನಾಳೆ ನಡೆಯಲಿದೆ

ಭಾಗೀರಥಿಯ ಮೆರವಣಿಗೆ.
ಬರಿಗೊಡಗಳಿಗೆ ಸಮಾಧಾನ ಹೇಳಿದ್ದೂ ಹೇಳಿದ್ದೆ.
ನೀರಿಲ್ಲದ ನಲ್ಲಿ
ಮೃದು ಸ್ವರದಲ್ಲಿ;
'ತುಂಬಿದ ಕೊಡ ತುಳುಕುವುದಿಲ್ಲ'
ಬರಿಗೊಡವೂ ತುಳುಕುವುದಿಲ್ಲ
ತುಳುಕಿದರೂ ಚಿಂತೆಯಿಲ್ಲ,
ಎಂದಿಗೆ ಬರುವುದು ನೀರು?

ಉತ್ತರವೇ ಇಲ್ಲ
ಬರಿಗೊಡಗಳಿಗೆ ಸಮಾಧಾನ ಹೇಳುತಿದೆ ನೀರಿಲ್ಲದ ನಲ್ಲಿ;
'ತುಂಬಿದ ಕೊಡ ತುಳುಕುವುದಿಲ್ಲ'

## ಕೆ.ಎಸ್. ನರಸಿಂಹಸ್ವಾಮಿ



ಕೆ.ಎಸ್.ನ ಎಂದೇ ಪ್ರಸಿದ್ಧರಾದ ಕೆ.ಎಸ್. ನರಸಿಂಹಸ್ವಾಮಿಯವರ ಹುಟ್ಟೂರು ಮಂಡ್ಯ ಜಿಲ್ಲೆಯ ಕಿಕ್ಕೇರಿ. ಇವರ 'ಮೈಸೂರು ಮಲ್ಲಿಗೆ' ಎಂಬ ಕವನ ಸಂಕಲನ ಅತ್ಯಂತ ಪ್ರಸಿದ್ಧವಾದುದು. ಕಂದಾಯ, ಗೃಹಮಂಡಳಿ ಮುಂತಾದ ಕಛೇರಿಗಳಲ್ಲಿ ಕೆಲಸ ಮಾಡಿದರು. ಆಧುನಿಕ ಕನ್ನಡ ಕಾವ್ಯದಲ್ಲಿ ನವೋದಯ ಮತ್ತು ನವ್ಯ ಮಾರ್ಗಗಳಲ್ಲಿ ಸಮರ್ಥವಾದ ಮತ್ತು ಅರ್ಥಪೂರ್ಣವಾದ ಕಾವ್ಯಗಳನ್ನು ರಚಿಸಿದ್ದಾರೆ. ೧೯೪೨ರಲ್ಲಿ ಪ್ರಕಟವಾದ ಮೈಸೂರು ಮಲ್ಲಿಗೆಯಿಂದ ಹಾಡು – ಹಸೆಯ ವರೆಗೆ ಹದಿನಾರು ಕವನ ಸಂಕಲನಗಳನ್ನು ರಚಿಸಿದ್ದಾರೆ. ಐದು ಗದ್ಯ ಬರಹಗಳಲ್ಲದೆ ಬೇರೆ ಭಾಷೆಗಳಿಂದ ಹತ್ತು ಕೃತಿಗಳನ್ನು ಅನುವಾದಿಸಿದ್ದಾರೆ. ಹಲವಾರು ಪ್ರಶಸ್ತಿಗಳಿಂದ ಪುರಸ್ಕೃತರಾದವರು ಕೆಎಸ್‌ನ. ಇವುಗಳಲ್ಲಿ ಕೇಂದ್ರ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ಕುಮಾರನಾಶಾನ್ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಪಂಪ ಪ್ರಶಸ್ತಿ ಉಲ್ಲೇಖನೀಯ. ೧೯೯೦ರಲ್ಲಿ ಮೈಸೂರಿನಲ್ಲಿ ನಡೆದ ೬೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡ ಭಾಷೆಗೆ ಭಾರತೀಯ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ದೊರಕಿಸಿಕೊಟ್ಟ ಕೆ.ಎಸ್.ನ. ೨೦೦೩ರಲ್ಲಿ ಇಹಲೋಕ ತ್ಯಜಿಸಿದರು. ಈ ಕವನವನ್ನು ಶಿಲಾಲತೆ ಕವನ ಸಂಕಲನದಿಂದ ಆರಿಸಲಾಗಿದೆ.

## ಪದಗಳ ಅರ್ಥ

ನಿಷ್ಕಾಮ ದಹನ – ಬರಿದೆ ಉರಿಯುವುದು
ಬಿಸಿಲ್ಗುದುರೆ – ಮರೀಚಿಕೆ
ಕೊಡ – ನೀರು ತುಂಬುವ ಪಾತ್ರೆ
ವ್ಯರ್ಥ – ನಾಶ
ಬೋರೆ – ದಿಣ್ಣೆ
ನೀರವ – ಶಾಂತ

## ಚಟುವಟಿಕೆಗಳು

- ರಾಜಕಾರಣಿಗಳು ನೀಡುವ ಭರವಸೆಗೆ ಸ್ಪಷ್ಟ ಉದಾಹರಣೆಯಾಗಿದೆ 'ನೀರಿಲ್ಲದ ನಲ್ಲಿ' ಎಂಬ ಮಾತಿನ ಕುರಿತು ವಿಮರ್ಶಾತ್ಮಕ ಲೇಖನ ಬರೆಯಿರಿ.
- 'ಶುದ್ಧನೀರಿನ ಸಮಸ್ಯೆ' ಎಂಬ ವಿಷಯದ ಕುರಿತು ಪ್ರಬಂಧ ಬರೆದು ವಿಚಾರಗೋಷ್ಠಿಯಲ್ಲಿ ಮಂಡಿಸಿರಿ.
- ನಿಮ್ಮ ಪ್ರದೇಶದ ಕುಡಿಯುವ ನೀರಿನ ಸಮಸ್ಯೆಯ ಕುರಿತು ಕಾರ್ಯಯೋಜನೆಯೊಂದನ್ನು ಸಿದ್ಧಪಡಿಸಿರಿ.
- ಕವಿತೆಯ ಆಸ್ವಾದನ ಟಿಪ್ಪಣಿಯೊಂದನ್ನು ಬರೆಯಿರಿ.
- ಈ ನವ್ಯ ಕವನದ ಶೈಲಿ, ಭಾಷೆ, ಗದ್ಯಾತ್ಮಕ ಅನಿಯತ ಸಾಲುಗಳು – ಇವುಗಳ ಕುರಿತು ಕಿರು ಲೇಖನವನ್ನು ತಯಾರಿಸಿರಿ.

## ಹೆಚ್ಚಿನ ಓದಿಗೆ

ಮೈಸೂರು ಮಲ್ಲಿಗೆ – ಕೆ.ಎಸ್.ನ

# ಪೆಂಟಯ್ಯನ ಅಂಗಿ

ಕೆ.ವಿ. ತಿರುಮಲೇಶ್

ದೈನಂದಿನ ಸರ್ವೇಸಾಧಾರಣ ಸಂಗತಿಗಳನ್ನು ಬಳಸಿಕೊಂಡು ಬದುಕಿನ ಸಂಕೀರ್ಣತೆಯನ್ನು ಶೋಧಿಸುವುದು ತಿರುಮಲೇಶರ ಕವಿತೆಗಳ ಲಕ್ಷಣ. ವರ್ಣನೆಗಳ ಮೂಲಕವೇ ಈ ಕವಿತೆಯಲ್ಲಿ ಬಡವರ ಮನದಾಳದ ಕನಸುಗಳು ನನಸಾಗದೆ ಹಾಗೆಯೇ ಉಳಿದು ಬಿಡುವುದು, ಬಡತನದ ದಾರುಣ ಸ್ಥಿತಿ ಇತ್ಯಾದಿಗಳನ್ನು ಸೂಚಿಸುತ್ತಾರೆ. ಸರಳತೆ ಹಾಗೂ ಧ್ವನಿಪೂರ್ಣತೆ ಈ ಕವಿತೆಯ ಗಮನಾರ್ಹ ಅಂಶಗಳು.



ಇದ್ದಿಲಂಗಡಿ ಕೆಲಸದ ಪೆಂಟಯ್ಯನಿಗೆ
ಇದ್ದುದು ಒಂದೇ ಒಂದು ಅಂಗಿ, ಗಿರಾಕಿಗಳ ಮನೆಗೆ
ಇದ್ದಿಲು ಸಪ್ಲೈ ಮಾಡುವಾಗಲೂ ರಾತ್ರಿ

ನಿದ್ದೆ ಮಾಡುವಾಗಲೂ, ಪೇಟೆ ಕಡೆ ಹೋಗುವಾಗಲೂ
ಇದೇ ಅಂಗಿ ಮೂಸಿನದಿಯ ಕೊಚ್ಚೆಯಲ್ಲಿ
ಅದ್ದಿ ತೆಗೆದಂಥ ಬಣ್ಣ, ಇದರಿಂದ

ಬೇಸರಗೊಂಡ ಪೆಂಟಯ್ಯ ಕಾಸಿಗೆ
ಕಾಸು ಸೇರಿಸಿ ಖರೀದಿಸಿದ ಅನೇಕ ದಿನಗಳ ತನ್ನ
ಆಸೆಯಂತೆ ಒಂದು ಹೊಚ್ಚಹೊಸ ಅಂಗಿ ಎಂದೋ

ಹೋಗಬೇಕೆಂದಿದ್ದ ಅಡವಿರಾಮುಡು ಚಿತ್ರಕ್ಕೆ ಈ ಸಂಜೆಯೆ
ಹೋಗಿಬಿಡುವುದು ಎಂದುಕೊಂಡ – ಪೊಲೀಸು ಪಟೇಲನ ಮನೆಗೆ
ಅರ್ಜೆಂಟಾಗಿ ಬೇಕಾಗಿದ್ದ ಇದ್ದಿಲಿನ ಸಂಗತಿಯನ್ನು ಮರೆತು

ಗರೀಗರೀ ಬಿಳಿ ಅಂಗಿ ಮುಟ್ಟಿದರೆ ಎಲ್ಲಿ
ಮುರಿಯುತ್ತದೋ, ತೊಟ್ಟರೆ ಎಲ್ಲಿ ಇಸ್ತ್ರಿಯ ಗೆರೆಗಳು
ಮಾಯುತ್ತವೋ ಎಂದುಕೊಂಡೇ ಹಾಕಿ ಹೊರಟಿದ್ದ

ಇದ್ದಿಲಂಗಡಿಗೂ ತನಗೂ ಏನೇನೂ ಸಂಬಂಧವಿಲ್ಲದಂತೆ
ಇದ್ದಿಲಂಗಡಿ ಪಕ್ಕದಲ್ಲೇ ನಡೆದುಹೋದ ಇನ್ನೇನು ಗೆದ್ದೆ–
ನೆನ್ನುವಷ್ಟರಲ್ಲಿ ಎದುರಾದ್ದು ಮತ್ತಾರು ಅಲ್ಲ ಪೊಲೀಸ್ ಪಠೇಲ!

ಅಂದಿನಿಂದ – ಅಂದಿನಿಂದ ಯಾತಕ್ಕೆ ಆ ಕ್ಷಣ—
ದಿಂದ ಪೆಂಟಯ್ಯನ ಬಿಳಿ ಅಂಗಿ
ಎಂದೂ ಬಿಳಿಯಾಗಿರಲಿಲ್ಲ

## ಕೆ.ವಿ. ತಿರುಮಲೇಶ್



ಕೆ.ವಿ. ತಿರುಮಲೇಶ್ ಇವರು ಕೇರಳದ ಕಾಸರಗೋಡು ಜಿಲ್ಲೆಯ ಕಾರಡ್ಕ ಗ್ರಾಮದಲ್ಲಿ ೧೯೪೦ ರಲ್ಲಿ ಜನಿಸಿದರು. ಕನ್ನಡದ ಬಹುಮುಖ್ಯ ಕವಿ, ಭಾಷಾವಿಜ್ಞಾನಿ ಮತ್ತು ಖ್ಯಾತ ವಿಮರ್ಶಕರು. ಇವರು ಹೈದರಾಬಾದಿನ 'ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲೀಷ್ ಎಂಡ್ ಫಾರಿನ್ ಲೇಂಗ್ವೇಜಸ್' ಎಂಬ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದವರು. ಯೆಮನ್ ದೇಶದಲ್ಲಿ ಇಂಗ್ಲಿಷ್ ಅಧ್ಯಾಪನ ಮಾಡಿದವರು. ಇವರ ಪ್ರಕಟಿತ ಕೃತಿಗಳು ಒಟ್ಟು ೨೦. ಅವಧ, ವಠಾರ, ಮುಖವಾಡಗಳು, ಪಾಪಿಯೂ (ಕವನ ಸಂಕಲನಗಳು), ಆರೋಪ, ಮುಸುಗು, ತರಂಗಾಂತರ (ಕಾದಂಬರಿಗಳು), ಬೇಂದ್ರೆಯವರ ಕಾವ್ಯ ಶೈಲಿ, ನಮ್ಮ ಕನ್ನಡ, ಅಸ್ತಿತ್ವವಾದ (ವಿಮರ್ಶಾ ಕೃತಿಗಳು). ಮಾಲ್ಟ ಲವ್‌ರಿಡ್ಜ್ ಬ್ರಿಗ್ಗನ ಟಿಪ್ಪಣಿ ಪುಸ್ತಕ (ಅನುವಾದಿತ ಕೃತಿ) ಇವು ಇವರ ಪ್ರಮುಖ ಕೃತಿಗಳು. ಇವರು ಪ್ರಸಿದ್ಧ ಅಂಕಣಕಾರರೂ ಅಗಿದ್ದಾರೆ. (ಆಳ, ನಿರಾಳ) ಅಮೇರಿಕದ ಅಯೋವಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದವರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಿರಂಜನ ಪ್ರಶಸ್ತಿಗಳಿಗೆ ಪಾತ್ರರಾದವರು. ಈ ಕವಿತೆಯನ್ನು ಅವಧ ಕೃತಿಯಿಂದ ಆರಿಸಲಾಗಿದೆ.

## ಪದಗಳ ಅರ್ಥ

ಗಿರಾಕಿ – ಗ್ರಾಹಕ, ಇದ್ದಿಲು – ಆರಿಸಿದ ಕೆಂಡ; ಮಸಿ,
ಸಪ್ಲೈ – ವಿತರಣೆ / ಸರಬರಾಜು, ಅದ್ದು – ಮುಳುಗಿಸು,
ಕೊಚ್ಚೆ – ಕೆಸರು, ಕಾಸು – ಹಣ.

## ಚಟುವಟಿಕೆಗಳು

- ಈ ಪದ್ಯದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಆರಿಸಿ ಅವುಗಳ ಸಮಾನಾರ್ಥಕ ಕನ್ನಡ ಪದಗಳನ್ನು ಬರೆಯಿರಿ.
- 'ಪೆಂಟಯ್ಯನ ಅಂಗಿ' ಕವಿತೆಯ ಆಶಯವನ್ನು ಬರೆಯಿರಿ.
- ದುಡಿಮೆಯ ಯಾಂತ್ರಿಕತೆಯಿಂದ ಬಿಡುಗಡೆಗೊಳ್ಳಲು ತುಡಿಯುವ ಮನಸ್ಸು ಪೆಂಟಯ್ಯನ ಪಾತ್ರದಲ್ಲಿ ಹೇಗೆ ಪ್ರಕಟಗೊಳ್ಳುತ್ತದೆ? ಈ ಕುರಿತು ಒಂದು ಟಿಪ್ಪಣಿ ಬರೆಯಿರಿ.
- ಕನಸಿನ ಗೋಪುರ ಕಟ್ಟಿಕೊಂಡು – ಅಡವಿರಾಮುಡು ಸಿನಿಮಾ ನೋಡಲು ಬಸ್ಸೇರಿದ ಪೆಂಟಯ್ಯನ ಮನಸ್ಸಿನ ಭಾವಗಳನ್ನು ಊಹಿಸಿ ಬರೆಯಿರಿ.

# ಪೆಟ್ರೋಮ್ಯಾಕ್ಸ್ ಹೊತ್ತವರು

*ಜಂಬಣ್ಣ ಅಮರಚಿಂತ*

ಈ ಕವನ, ಆಯಗಾರ ವೃತ್ತಿಯನ್ನು ಮಾಡುವ ಬಡಜನಾಂಗದ ಸ್ಥಿತಿಗತಿಯ ಒಂದು ಹೃದಯಸ್ಪರ್ಶಿ ಶಬ್ದಚಿತ್ರ. ಉಳ್ಳವರು ನಡೆಸುವ ಮೆರವಣಿಗೆ ಸಂದರ್ಭಗಳಲ್ಲಿ ಪ್ರಖರ ಉರಿಯುವ ಗ್ಯಾಸ್ ದೀಪಗಳನ್ನು ತಲೆಯ ಮೇಲೆ ಹೊತ್ತು ಎಲ್ಲರಿಗೂ ಬೆಳಕಿನ ವೈಭವ – ಸಂಭ್ರಮ ನೀಡುವ ಈ ಅಶಿಕ್ಷಿತ ಜನರು ಬದುಕಿನುದ್ದಕ್ಕೂ ತಾವು ಮಾತ್ರ ಕತ್ತಲೆಯಲ್ಲಿರುತ್ತಾರೆ. ತಮಗೆ ತಾವೇ ಅಪರಿಚಿತರೂ ಅಜ್ಞಾತರೂ ಆಗಿರುವ ಇವರ ಬಗ್ಗೆ ಸಮಾಜದಲ್ಲಿ ಯಾರಿಗೂ ಗಮನವಿಲ್ಲ. ತಾಪತ್ರಯದ ಜೀವನ ನಡೆಸುವ ಈ ಶ್ರಮಜೀವಿಗಳಿಂದ ಸಮಾಜದಲ್ಲಿ ಲಾಭ ಪಡೆದವರು; ಮುಂದೆ ಸಾಗಿ ಹಣ, ಅಧಿಕಾರ ಪಡೆದವರು ಸಾಕಷ್ಟು ಜನ. ಶೋಷಿತರ, ನಿರ್ಗತಿಕರ ಅವಸ್ಥೆಯನ್ನು ಕವಿ ಸ್ವಭಾವೋಕ್ತಿಗಳಿಂದ ಪಡಿಮೂಡಿಸುತ್ತ ಓದುಗರಲ್ಲಿ ಅನುಕಂಪ ಮತ್ತು ಅರಿವನ್ನು ಮೂಡಿಸಿದ್ದಾರೆ.



ಯಾರಿವರು ಯಾರಿವರು?
ಯಾವ ಕಡೆ ನಡೆದಿರುವರು?

ತಲತಲಾಂತರ ತಲೆಯ ಮೇಲೆ
ಬೆಳಕು ಹೊತ್ತು ಸಾಗಿದವರು
ಅವರಿವರು, ಯಾರಿಗ್ಯಾಕೆ–
ತಮ್ಮ ನೆರಳಿಗೇ ಅಪರಿಚಿತರು
ಪಂಡಿತ ಕವಿಗಳು ಮರೆತ
ಜಾನಪದ ಛಂದಗಳು ಯಾರಿವರು

ತಲೆಯ ಮೇಲೆ ಬಿಜಲಿನ ಕಾವು
ಹೊಟ್ಟೆಯೊಳಗೆ ಹಸಿವಿನ ಗಾವು
ಜೀವನವೆಲ್ಲ ಕುದ್ದು ಕುದ್ದು
ಆವಿಯಾಗಿ ಹೋದವರು
ನಿತ್ಯ ನಿತ್ಯ ಹೊಟ್ಟೆಯಿಂದ
ಹಸಿವನ್ನು ಹೆತ್ತವರು                ಯಾರಿವರು

ಇದ್ದವರು ಕದ್ದವರು
ಚುನಾವಣೆ ಗೆದ್ದವರು
ಇವರು ಹೊತ್ತ ಬೆಳಕಿನಲ್ಲಿ
ಲಕಲಕ ಹೊಳೆದವರು!                ಯಾರಿವರು

ಯಾರಯ್ಯ ಯಾರಿವರು?
ಕಣ್ಣಿಗಂತೂ ಕಾಣರು
ಪೆಟ್ರೊಮ್ಯಾಕ್ಸ್ ಹೊತ್ತವರು
ಬೆಳಕಿನಡಿಯ ಕತ್ತಲಲ್ಲಿ
ಕತ್ತಲಾಗಿ ನಿಂತವರು
ಕತ್ತಲೆಯ ಹುದಲಲ್ಲಿ
ಹೂತು ಹೋಗುತ್ತಿರುವವರು                ಯಾರಿವರು

## ಜಂಬಣ್ಣ ಅಮರಚಿಂತ



ಬಂಡಾಯ ಕಾವ್ಯ ಸಂದರ್ಭದಲ್ಲಿ ಕೇಳಿ ಬರುವ ಪ್ರಮುಖ ದನಿಗಳಲ್ಲಿ ಕವಿ ಜಂಬಣ್ಣ ಅಮರಚಿಂತ (೧೯೪೫) ರದು ಗಮನಾರ್ಹ ಹೆಸರು. ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲೂಕಿನ ಅಂಕಸದೊಡ್ಡಿಯವರು. ಆರೋಗ್ಯ ಇಲಾಖೆಯಲ್ಲಿ ವೃತ್ತಿನಿರತರಾಗಿದ್ದುಕೊಂಡು ಎಂ.ಎ ಪದವೀಧರರಾದರು. ಸೇವೆಯಿಂದ ನಿವೃತ್ತಿಗೊಂಡು ಈಗ ರಾಯಚೂರಿನಲ್ಲಿ ನೆಲೆಸಿರುವ ಇವರು ಪ್ರವೃತ್ತಿಯಿಂದ ಪ್ರಗತಿಪರ– ಚಿಂತನಶೀಲ ಬರಹಗಾರರು. ಮುಂಜಾವಿನ ಕೊರಳು (೧೯೭೯) ಇವರ ಮೊದಲ ಕವನ ಸಂಕಲನ. ಅಧೋಜಗತ್ತಿನ ಅಕಾವ್ಯ (೧೯೮೨); ಮಣ್ಣಲ್ಲಿ ಬಿರಿದ ಅಕ್ಷರ; ಹರಿಯುವ ನದಿಗೆ

ಮೈಯೆಲ್ಲ ಕಾಯಿ (೨೦೦೩) ನಂತರ ಪ್ರಕಟವಾದ ಸಂಕಲನಗಳು. ಕುರುಮಯ್ಯ ಮತ್ತು ಅಂಕುಶದೊಳು ಇವರ ಕಾದಂಬರಿ ಕೃತಿ. ನಿಜಾಮ ಕರ್ನಾಟಕದ ಹಳ್ಳಿಗಾಡಿನ ಅಶಿಕ್ಷಿತ ಜನವರ್ಗಗಳ ಪಾಡುಗಳಿಗೆ ಹೃದಯಪೂರ್ವಕ ಸ್ಪಂದಿಸುವ ಭಾವವಸ್ತು ಮತ್ತು ವಿಶಿಷ್ಟ ಧಾಟಿ ಜಂಬಣ್ಣನವರ ಕೃತಿಗಳಲ್ಲಿ ಕಾಣುತ್ತವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ೨೦೦೩ ಗೌರವ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಈ ಕವಿತೆಯನ್ನು ಅಧೋಜಗತ್ತಿನ ಅಕಾವ್ಯ (ಕವನ ಸಂಗ್ರಹ)ದಿಂದ ಆರಿಸಲಾಗಿದೆ.

## ಪದಗಳ ಅರ್ಥ

ಪೆಟ್ರೋಮ್ಯಾಕ್ಸ್ – ಝಗ ಝಗನೆ ಬೆಳಕು ಕೊಡುವ ಸೀಮೆಎಣ್ಣೆ ಹಾಗೂ ಗ್ಯಾಸ್‌ನಿಂದ ಉರಿಯುವ ದೀಪ, ಹುದಲು – ಕೆಸರು

ಕುದ್ದು – ಕುದಿದು, ಗಾವು – ಉರಿ, ಬಿಜಲಿ – ದೀಪದುರಿ;

ಹಸಿವಿನ ಗಾವು– ಹೊಟ್ಟೆಯೊಳಗಿನ ಕಾವು (ಹಸಿವೆಯಬಿಸಿ),

## ಚಟುವಟಿಕೆಗಳು

- ಪೆಟ್ರೋಮ್ಯಾಕ್ಸ್ ಹೊತ್ತವರ ಜೀವನಾನುಭವಗಳ ಕುರಿತು ಕವನ ಅಭಿವ್ಯಕ್ತಪಡಿಸುವ ರೀತಿಯನ್ನು ವಿಮರ್ಶಾತ್ಮಕವಾಗಿ ಬರೆಯಿರಿ.
- 'ಕತ್ತಲೆ ಹುದಲಲ್ಲಿ ಹೂತು ಹೋಗುತ್ತಿರುವವರು' – ಎಂಬಲ್ಲಿ ಬಡಜನರನ್ನು ಇತರರು ನಿರ್ಲಕ್ಷಿಸುತ್ತಿದ್ದಾರೆ ಎಂಬ ಧ್ವನಿ ವ್ಯಕ್ತವಾಗಿದೆ. ಈ ಕುರಿತು ಚರ್ಚಾಕೂಟವನ್ನು ಏರ್ಪಡಿಸಿರಿ. ಅಲ್ಲಿ ಮೂಡಿಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಬರೆಯಿರಿ.

## ಭಾಷಾಭ್ಯಾಸ

- ದ್ವಿರುಕ್ತಿಗಳನ್ನು ಗಮನಿಸಿ ಅವು ಬೀರುವ ಪರಿಣಾಮ ಎಂತಹದು ಎಂದು ತಿಳಿಯಿರಿ.

  ಉದಾ : ಕುದ್ದು ಕುದ್ದು

## ಹೆಚ್ಚಿನ ಓದಿಗೆ

ಸಾವಿರಾರು ನದಿಗಳು – ಸಿದ್ಧಲಿಂಗಯ್ಯ

# ಬೆಕ್ಕಸು

***ಸವಿತಾ ನಾಗಭೂಷಣ***

ಪ್ರಸುತ್ತ ಕವಿತೆಯು ಪರಂಪರೆ ಮತ್ತು ಆಧುನಿಕ ತಲೆಮಾರಿನ ನಡುವಿನ ವ್ಯತ್ಯಾಸ, ಏಕಾಕಿಯಾಗಿ ಬೆಳೆಯುವ ಮಗುವಿನ ಸ್ವಾರ್ಥ ಚಿಂತನೆಗೆ ಹಿಡಿದ ಕೈಗನ್ನಡಿಯಾಗಿದೆ. ಯಾಂತ್ರಿಕ ಜೀವನದ ಕೈಗೊಂಬೆಯಂತಿರುವ ಮಕ್ಕಳು ಪಾರಂಪರಿಕ ಮೌಲ್ಯಗಳನ್ನು ಅರ್ಥೈಸದೆ ಭ್ರಾಮಕ ಲೋಕದಲ್ಲಿ ವಿಹರಿಸುವ ಚಿತ್ರಣ ಇಲ್ಲಿದೆ. ಆಧುನಿಕ ಬದುಕಿನ ಜಂಜಾಟದಲ್ಲಿರುವ ಮಗುವಿನ ಭವಿಷ್ಯದ ಬಗೆಗಿನ ತಾಯಿಯ ಆತಂಕವು ಇಲ್ಲಿ ವ್ಯಕ್ತವಾಗುತ್ತದೆ.



೧

ನನ್ನ ಅಜ್ಜಿಯದು
ತುಂಬು ಸಂಸಾರ
ನನ್ನ ಅವ್ವನಿಗೆ
ನಾಲ್ಕು ಮಂದಿ ಮಕ್ಕಳು
ನನಗೆ–
ಒಬ್ಬಳೇ ಹೆಣ್ಣು ಮಗಳು
ಎಲ್ಲ ನೆನಪಾಗುವುದು–
ನಾನು, ನನ್ನ ತಂಗಿ

ತಮ್ಮಂದಿರು ಹಂಚಿಕೊಂಡೆವು
ಅನ್ನದಂತೆಯೇ ಪ್ರೀತಿಯನ್ನು
ಸಾಧಿಸಿದೆವು ದ್ವೇಷವನ್ನು
ಬಿಟ್ಟುಕೊಟ್ಟೆವು ಹಠವನ್ನು
ಒಟ್ಟಾಗಿಯೆ ಕಂಡೆವು ಕನಸುಗಳನ್ನು

ಕಿತ್ತಾಡಿದೆವು, ರಾಜಿಯಾದೆವು
ಕರುಬಿದೆವು, ಮರುಗಿದೆವು
ಪರಸ್ಪರ ಜೊತೆಯಾಗಿಯೇ
ಇಟ್ಟೆವು ಹೆಜ್ಜೆಗಳನ್ನು

ಅವ್ವ ನೋಯುವಳೆಂದು
ಬಲಿಗೊಟ್ಟೆವು
ಸಣ್ಣ ಪುಟ್ಟ ಆಕಾಂಕ್ಷೆಗಳನ್ನು


ಅಪ್ಪ ಬಸವಳಿಯದಿರಲಿ
ಎಂದು ಹೆಗಲು ಕೊಟ್ಟೆವು ನೊಗಕ್ಕೆ
ಬಯಸದೆ ಪ್ರತಿಫಲವನ್ನು

ಕೊಟ್ಟು– ಕೊಂಡೆವು ಪ್ರೀತಿಯ
ಈಜಿ ಪ್ರವಾಹದ ವಿರುದ್ಧ
ಸೇರಿದೆವು ದಡ ಒಟ್ಟಾಗಿ

೨

ಈಗ :
ನನ್ನ ಮಗಳು ಇಡೀ
ಪರಿವಾರದ ಕಣ್ಮಣಿ
ಅಣ್ಣ, ತಂಗಿ, ತಮ್ಮ
ಸಂಬಂಧಗಳ ಒಳಸುಳಿ ಅರಿಯಳು
ರಾಜಿಯಾಗುವುದು, ಹಂಚಿಕೊಳ್ಳುವುದು
ಅವಳಿಗೆ ನಿಘಂಟಿನ ಪದಗಳು

ಅಚ್ಚೆಯ ಕುಂಡದಲ್ಲಿ
ಅವ್ವ ಅಪ್ಪನ ನೆರಳಲ್ಲೇ
ಬೆಳೆದ ಹೂಬಳ್ಳಿ
ಪ್ರಖರ ಸೂರ್ಯನನು
ಎದುರಿಸಲಾರಳು
ಅಂಜುಕುಳಿ–
ಗಾಳಿಯಾಟಕೂ ಬೆದರುವಳು

ವಿಚಿತ್ರವೆನಿಸುವುದು
ಎಷ್ಟು ಇತ್ತರೂ
ಏನೇ ಇತ್ತರೂ
ಮತ್ತಷ್ಟು ಬಯಸುವಳು
ಭಿಕ್ಷುಕಿಯಂತೆ.......

ಇಡೀ ಲೋಕವ
ತಂದು ಸುರಿದರೂ ತುಂಬದವಳ
ಭಿಕ್ಷಾಪಾತ್ರೆ
ಹಸಿವು ಹಸಿವೆಂದು ಚೀರುವಳು

೩

ನನಗೋ ಒಳಗೊಳಗೆ ವೇದನೆ
ಮಮತೆ ಮುಳುವಾಯಿತೇ?
ಅನುಮಾನ–

ನಿದ್ರೆಯಿಲ್ಲದ ರಾತ್ರಿಗಳಲ್ಲಿ
ಕೆಟ್ಟ ಕನಸುಗಳು...

ಶುಭ್ರವಾದ ಆಕಾಶ
ಹಕ್ಕಿಯಾಗಿದ್ದಾಳೆ ನನ್ನ ಮಗಳು
ಅವಳಿಗೆ ರೆಕ್ಕೆಗಳೇ ಇಲ್ಲ!
ನೀಲಿ ಸಮುದ್ರ
ದೋಣಿಯಲ್ಲಿದ್ದಾಳೆ ನನ್ನ ಮಗಳು
ಹುಟ್ಟೇ ಇಲ್ಲ!

ದೊಡ್ಡ ಹೂವಿನ ತೋಟ
ಹೂವಾಗಿದ್ದಾಳೆ ನನ್ನ ಮಗಳು
ಪರಿಮಳವೇ ಇಲ್ಲ!

ನಾನೇ ನೆಟ್ಟು ನೀರುಣಿಸಿ
ಬೆಳೆಸಿದ ಸಸಿ
ಭರಭರ ಬೆಳೆದು ಸೊಕ್ಕಿ ನಿಂತಿದೆ
ಮರವಾಗಿ –
ಸ್ವಾರ್ಥವೇ ಅದರ ಫಲವಾಗಿ.....

ಎದೆ ಹಾಲು
ಹಾಲಾಹಲವಾಗುವುದೆಂದರೆ.....

## ಸವಿತಾ ನಾಗಭೂಷಣ



ಸಮಕಾಲೀನ ಕನ್ನಡ ಕವಯಿತ್ರಿಯರ ನಡುವೆ ವಿಭಿನ್ನವೂ ವಿಶಿಷ್ಟವೂ ಆದ ವ್ಯಕ್ತಿತ್ವವುಳ್ಳ ಸವಿತಾ ನಾಗಭೂಷಣ (೧೯೬೧) ಚಿಕ್ಕಮಗಳೂರಿನಲ್ಲಿ ಜನಿಸಿದರು. ಶಿವಮೊಗ್ಗೆಯಲ್ಲಿ ಬಿ. ಕಾಂ. ಮತ್ತು ಮೈಸೂರು ವಿಶ್ವವಿದ್ಯಾಲಯದಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಿಂದ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದಿದ್ದಾರೆ. ನಾ ಬರುತ್ತೇನೆ ಕೇಳು, ಚಂದ್ರನನ್ನು ಕರೆಯಿರಿ ಭೂಮಿಗೆ, ಹೊಳೆ ಮಗಳು, ಜಾತ್ರೆಯಲ್ಲಿ ಶಿವ ಇವರ ಪ್ರಮುಖ ಕವನ ಸಂಕಲನಗಳು. ಇವರ ವಿಶಿಷ್ಟ ನಿರೂಪಣೆಯ ಸ್ತ್ರೀ ಲೋಕ ಕಾದಂಬರಿ ವಿಮರ್ಶಕರ ಗಮನ ಸೆಳೆದಿದೆ. ನಾ ಬರುತ್ತೇನೆ ಕೇಳು ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭಿಸಿದೆ. ಈ ಕವನವನ್ನು 'ಜಾತ್ರೆಯಲ್ಲಿ ಶಿವ' ಕವನ ಸಂಕಲನದಿಂದ ಆರಿಸಲಾಗಿದೆ.

## ಪದಗಳ ಅರ್ಥ

ಕರುಬು – ಅಸೂಯೆ ಪಡು
ಕಣ್ಮಣಿ – ಮುದ್ದಿನ ಮಗಳು
ಒಳಸುಳಿ – ಸಂಬಂಧದ ಒಳಅರ್ಥ
ಅಚ್ಚೆಯ ಕುಂಡದಲ್ಲಿ – ಪ್ರೀತಿಯಲ್ಲಿ
ಪ್ರಖರ – ತೀಕ್ಷ್ಣ
ಅಂಜುಕುಳಿ – ಭಯಪಡುವವಳು
ಮುಳುವಾಗು – ಕಂಟಕವಾಗು
ಹುಟ್ಟು – ದೋಣಿಯನ್ನು ನಡೆಸುವ ಸಾಧನ
ನೊಗ – ಉಳುವ ಎತ್ತುಗಳ ಕತ್ತಿನ ಮೇಲೆ ಇಡುವ ಮರದ ಒಂದು ಉಪಕರಣ.

## ಚಟುವಟಿಕೆಗಳು

- ಈ ಕವನಕ್ಕೆ ಕೊಟ್ಟಿರುವ 'ಬೆಳಸು' ಎಂಬ ಶೀರ್ಷಿಕೆಯ ಔಚಿತ್ಯವೇನು?
- ತಲೆಮಾರುಗಳ ಅಂತರದಲ್ಲಿ ಕಂಡುಬರುವ ಬದಲಾವಣೆಗಳನ್ನು ಈ ಕವಿತೆ ಹೇಗೆ ಧ್ವನಿಸುತ್ತದೆ? ಕಿರು ಟಿಪ್ಪಣಿ ಬರೆಯಿರಿ.
- 'ಪರಂಪರೆ ಹಾಗೂ ಆಧುನಿಕತೆಗಳ ಸಂಘರ್ಷ ಈ ಕವಿತೆಯ ಜೀವಾಳ' ಈ ಮಾತನ್ನು ಒಪ್ಪಬಹುದೇ? ಚರ್ಚಾಗೋಷ್ಠಿಯಲ್ಲಿ ಮಂಡಿಸಲು ಪ್ರಬಂಧವೊಂದನ್ನು ಸಿದ್ಧಪಡಿಸಿರಿ.
- 'ಈಗ ನನ್ನ ಮಗಳು ......... ಚೀರುವಳು' ಪದ್ಯಭಾಗದ ಆಧಾರದಲ್ಲಿ 'ಯುವ ಪೀಳಿಗೆಯ ಲೋಪದೋಷಗಳು' ಎಂಬ ವಿಷಯದ ಕುರಿತು ಭಾಷಣವೊಂದನ್ನು ಸಿದ್ಧಪಡಿಸಿರಿ.
- ಬದಲಾದ ಕೌಟುಂಬಿಕ ವ್ಯವಸ್ಥೆಯಲ್ಲಿನ ಸಂವೇದನೆಯನ್ನು ಈ ಕವಿತೆ ಹೇಗೆ ಗುರುತಿಸಿದೆ? ಚರ್ಚಿಸಿರಿ. ವರದಿ ತಯಾರಿಸಿರಿ.
- ಜೀವನ ಮೌಲ್ಯಗಳು ಎಂಬ ಆಶಯವನ್ನು ವ್ಯಕ್ತಪಡಿಸುವ ಕವನವೊಂದನ್ನು ರಚಿಸಿರಿ.

## ಹೆಚ್ಚಿನ ಓದಿಗೆ

ದಾರಿನೆಂಟ – ಲಲಿತಾ ಸಿದ್ಧಬಸವಯ್ಯ

### ಕಲಿಕಾ ಸಾಧನೆಗಳು

- ಕನ್ನಡ ಸಾಹಿತ್ಯ ಪಂಥಗಳಲ್ಲಿನ ಮೂಲ ಮನೋಭಾವವನ್ನು ತಿಳಿದು, ಆಶಯಗಳನ್ನು ಯೋಗ್ಯವಾದ ರೀತಿಯಲ್ಲಿ ರೂಪಿಸುತ್ತಾರೆ.
- ಹೊಸಗನ್ನಡ ಸಾಹಿತ್ಯದ ಖಂಡಕಾವ್ಯ, ಕವಿತೆ ಮುಂತಾದ ಪ್ರಕಾರಗಳನ್ನು ಆಳವಾಗಿ ಅಭ್ಯಾಸ ಮಾಡುತ್ತಾರೆ.
- ಭಾಷಾ ಸಾಹಿತ್ಯದ ವಿನ್ಯಾಸ, ಪರಿಣಾಮಗಳು, ಸ್ವಭಾವಗಳನ್ನು ಪರಿಚಯ ಮಾಡಿಕೊಳ್ಳುತ್ತಾರೆ.
- ಉನ್ನತ ಚಿಂತನೆಯ ಮಟ್ಟದ ಆಶಯವನ್ನು ಶಕ್ತಿಶಾಲಿಯಾದ ಭಾಷೆಯಲ್ಲಿ ಸ್ಪಷ್ಟವಾಗಿ ಸೂಕ್ತವಾದ ವ್ಯವಹಾರ ರೂಪದಲ್ಲಿ ನಿರೂಪಿಸುತ್ತಾರೆ.

# ಗದ್ಯ ಚಂದನ

ಹೊಸಗನ್ನಡ ಕಾಲದಲ್ಲಿ ಗದ್ಯ ಸಾಹಿತ್ಯವು ಅತ್ಯಂತ ವಿಸ್ತಾರವಾಗಿ ಬೆಳೆಯಿತು. ಸಣ್ಣ ಕತೆ, ಕಾದಂಬರಿ, ನಾಟಕ, ಪ್ರಬಂಧ, ಪ್ರವಾಸಕಥನ, ಜೀವನ ಚರಿತ್ರೆ, ವಿಮರ್ಶೆ, ಸಂಶೋಧನೆ ಮುಂತಾದ ಬಗೆಗಳಲ್ಲಿ ಬೆಳೆದು ಹಿಂದೆಂದೂ ಕಾಣದ ಅಪೂರ್ವ ಶಕ್ತಿಯನ್ನು ಪಡೆದುಕೊಂಡಿತು. ಕಥನಸಾಹಿತ್ಯ ಗದ್ಯದಲ್ಲಿ ವಿಶಿಷ್ಟವಾಗಿಯೂ ವಿಪುಲವಾಗಿಯೂ ಬೆಳೆಯಿತು. ಜನಪ್ರೀತಿಯನ್ನೂ ಗಳಿಸಿತು. ಕಥನ ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯ ಪ್ರಭೇದಗಳು ಸಾಕಷ್ಟು ಬಳಕೆಗೊಂಡುವು. ಕಥನದಲ್ಲಿ ಹೆಚ್ಚಿನ ನೈಜತೆಯನ್ನು ಸಾಧಿಸಲು ಇದರಿಂದ ಸಾಧ್ಯವಾಯಿತು. ಕೆಲವರ ಗದ್ಯ ಶೈಲಿಯಲ್ಲಿ ವಿನೂತನತೆಯೂ ಹೊಳಪೂ ಕಾಣಿಸಿಕೊಂಡುವು. ಸಾಂಪ್ರದಾಯಿಕ ಗದ್ಯಕಥನದ ಚೌಕಟ್ಟನ್ನು ಮೀರಿ ಆಧುನಿಕ ಶೈಲಿಯಲ್ಲಿ ಕೃತಿಗಳ ನಿರ್ಮಾಣದ ತುಡಿತವು ಕಂಡುಬಂದಿತು. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಈ ಎಲ್ಲ ಸಾಹಿತ್ಯ ಪಂಥಗಳಲ್ಲಿ ಆಧುನಿಕ ಗದ್ಯಸಾಹಿತ್ಯವು ಪುಷ್ಟಿಗೊಳ್ಳುತ್ತಾ ಸಾಗಿ ಬಂದಿದೆ. ಆಧುನಿಕ ಕಾಲದ ಕೃತಿಗಳು ಮನುಷ್ಯಕೇಂದ್ರಿತವಾಗಿವೆ. ಹೊಸಗನ್ನಡ ಗದ್ಯಸಾಹಿತ್ಯದ ವೈವಿಧ್ಯತೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ದೃಷ್ಟಿಯಿಂದ ಇಲ್ಲಿನ ಗದ್ಯಭಾಗವನ್ನು ನೀಡಲಾಗಿದೆ.



# ಪಂಜರ ಪರೀಕ್ಷೆ

ಕೆಂಪು ನಾರಾಯಣ

ನಡುಗನ್ನಡದ ಸಂಧಿಕಾಲವನ್ನು ದಾಟಿ ಹೊಸಗನ್ನಡದ ಸ್ಪಷ್ಟ ರೂಪುರೇಷೆಗಳನ್ನು ಈ ಗದ್ಯಭಾಗದಲ್ಲಿ ಕಾಣಬಹುದು. ಆರಂಭಕಾಲದ ಗದ್ಯದಲ್ಲಿ ಬರುವ ನಿರೂಪಣೆಯ ಸೊಗಸು, ಭಾಷಾ ಸೌಂದರ್ಯ, ಕಥನ ಶೈಲಿಗಳು, ಚಿತ್ತಾಕರ್ಷಕವಾಗಿ ಮೂಡಿ ಬಂದಿದೆ. ಸಂದಿಗ್ಧ ಪರಿಸ್ಥಿತಿಯಲ್ಲಿ ಬುದ್ಧಿವಂತಿಕೆಯನ್ನು ಬಳಸಿ ಹೇಗೆ ಪಾರಾಗಬಹುದು ಎಂಬುದನ್ನು ಇಲ್ಲಿ ಕಾಣಬಹುದು.

ಮತ್ತೆ ಕೆಲವುಂ ದಿವಸದ ಮೇಲೆ, ಪರ್ವತರಾಜ್ಯದಿಂದ ಸಿಂಹಪಂಜರ ಸಮೇತರಾಗಿ ಬಂದ ಭಟರು ಪಾಟಲೀಪುರಕ್ಕೆ ಬಂದು, ಆಸ್ಥಾನದ ಬಳಿಯಲ್ಲಿ ಆ ಪಂಜರವನ್ನಿಳುಹಿಸಿ, ವಾದ್ಯಸಮೇತವಾಗಿ ಹೀಗೆಂದು ಸಾರುತಲಿದ್ದರು, ಏನೆಂದರೆ–



"ಈ ಪುರದಲ್ಲಿ ಯಾರಾದರೂ ಪ್ರೌಢರಿದ್ದರೆ ಈ ಅಮಾನುಷಕೃತವಾದ ಪಂಜರವಂ ಭೇದಿಸದೆ ಇದರಲ್ಲಿ ಇರುವ ಸಿಂಹವಂ ಜೀವ ಸಹಿತ ಹೊರಗೆ ತೆಗೆಯುವವರಾಗಲಿ. ಅಂಥವರು ಇಲ್ಲದಿದ್ದರೆ, ಈಗ ನೋಡಿದ ದೇಶಗಳ ಜನದಂತೆ ನಮಗೆ ಸನ್ಮಾನಂ ಮಾಡಿ. ಮುಂದಕ್ಕೆ ಅಪ್ಪಣೆ ಕೊಡುವುದು'' ಎಂದು ಭುಜಗಳನ್ನೆತ್ತಿಕೊಂಡು ಸಾರುತ್ತಲಿರುವ ವಾಕ್ಯವಂ ಕೇಳಿ, ಆ ಪುರದ ಜನವು ನೆರೆದು ನೋಡಿ, ಅದರ ವಿವರವಂ ತಿಳಿಯಲಾರದೆ ಹೋಗುತ್ತಿರಲು, ಅದಂ ನೋಡಿದ ರಾಜಭಟರು ಆಸ್ಥಾನದಲ್ಲಿ ಕುಳಿತಿದ್ದ ನಂದರಿಗಿಂತೆಂದರು.

"ಜೀಯ, ಅಖಂಡವಾದ ಪಂಜರದಲ್ಲಿ ಸಿಂಹವಂ ಕೂಡಿಕೊಂಡು, ದೇಶಾಂತರದಿಂದ ಬಂದು, ಹೊರಗಣ

ರಾಜದ್ವಾರದ ಸಮೀಪದಲ್ಲಿಳುಹಿ, 'ಈ ಪುರದಲ್ಲಿ ಪ್ರೌಢರಿದ್ದರೆ ಪಂಜರವಂ ಖಂಡಿಸದೆ ಸಿಂಹವಂ ಹೊರಕ್ಕೆ ತೆಗೆ(ಯ)ತಕ್ಕದೆಂ'ದು ಭಟರು ಸಾರಿದ್ದರಿಂದ, ಈ ಪುರದಲ್ಲಿ ಇರುವ ಜನರೆಲ್ಲರೂ ಕೇಳಿ ಬಂದು, ಪಂಜರವಂ ನೋಡಿ, ಅದರ ವಿವರವು ಯಾರಿಗೂ ತಿಳಿಯದೆ ಇದ್ದದ್ದರಿಂದ, ನೋಡಿ ಸುಮ್ಮನೆ ಹೋದರಲ್ಲದೆ, ಪರೀಕ್ಷಕರು ಯಾರೂ ಕಾಣಿಸುವುದಿಲ್ಲಾ ಬುದ್ಧಿ" ಎಂದು ಕೈಮುಗಿದು ಹೇಳುತ್ತಿರಲು, ಅದಂ ಕೇಳಿ ನಂದರು, 'ತಮ್ಮ ಮಂತ್ರಿಗಳೆಲ್ಲರೂ ಹೋಗಿ ನೋಡಿ ಬರಲಿ' ಎಂದು ನೇಮಿಸಲು, ಅದೇ ರೀತಿಗೆ ರಾಕ್ಷಸನೊಬ್ಬ ಹೊರತು ಉಳಿದ ಮಂತ್ರಿಗಳೆಲ್ಲರೂ ನೋಡಿ, ಅದರ ವಿವರವು ತಿಳಿಯದೆ ಬಂದು ನಂದರ ಬಳಿಯಲ್ಲಿ ಸುಮ್ಮನೆ ನಿಲ್ಲಲು. ಆಗ ರಾಕ್ಷಸನು ನಂದರಂ ಕುರಿತಿಂತೆಂದನು.

"ರಾಜಕುಮಾರರುಗಳಿರ, ಸಿಂಹಸಮೇತವಾದ ಈ ಪಂಜರವು ಅಮಾನುಷಕೃತವಾಗದು, ಮತ್ತೇನೆಂದರೆ, ಇದು ನಮ್ಮೆಲ್ಲರ ಬುದ್ಧಿ ಪರೀಕ್ಷಾರ್ಥವಾಗಿ ಕಪಟಿಗಳಾದ ಪರರಾಯರಿಂದ ನಿರ್ಮಿಸಿ ಕಳುಹಿಸಿ ಇರುವ ಕಪಟಶಿಲ್ಪವೆಂದು ತೋರುತ್ತಲಿದೆ. ಆಗಲಿ ಈ ಪುರದ ಜನರು ಇನ್ನೂ ಬಹಳವಾಗಿ ಇದ್ದಾರು. ಯಾರಲ್ಲಿ ಬುದ್ಧಿಕೌಶಲ್ಯ ಹ್ಯಾಗೆ ಇರುವದೋ. ನಮ್ಮ ಭಟರುಗಳು ಹೋಗಿ, ರಾಜಬೀದಿಗಳಲ್ಲಿ ಸಾರುತ್ತ ಬರಲಿ. ಅದರ ಪರೀಕ್ಷಕರು ಉಂಟಾದಾರು. ಎಲ್ಲರೂ ನೋಡಿದ ಬಳಿಕ, ನಾವೇ ತರಿಸಿ ಆ ಪಂಜರವಂ ನೋಡೋಣ" ಎಂದು ನಂದರಿಗೆ ಹೇಳಿ,

ದೂತರ ಮುಖವಂ ನೋಡಿ, "ಎಲೈ, ಇದರ ಪರೀಕ್ಷಕರು ಈ ಪುರದಲ್ಲಿ ಉಂಟಾದರೆ ರಾಜಸನ್ನಿಧಿಯಲ್ಲಿ ಬಹುಮಾನಕ್ಕೆ ಪಾತ್ರರಾದಾರೆಂದು ಹೇಳಿ ಸಾರುತ್ತ ಜನಗಳೆಲ್ಲರಂ ಕರೆತಂದು ತೋರಿಸಿರೈ" ಎಂದು ರಾಕ್ಷಸರು ಭಟರಿಗೆ ನೇಮಿಸಲು,

ಅದೇ ರೀತಿಗೆ ದೂತರು ರಾಜಬೀದಿಯೆಲ್ಲ ಡಂಗುರವಂ ಹಾಕಿ, ಸಾರುತ್ತಾ ಬರುವ ದೂತರಂ ಚಂದ್ರಗುಪ್ತನು ಸೆರೆಮನೆ ಬಾಗಿಲಲ್ಲಿ ನೋಡಿ, "ಎಲೈ ಭಟರುಗಳಿರಾ, ಈ ಪುರದಲ್ಲಿ ಆ ಪಂಜರಪರೀಕ್ಷಕರು ಇಷ್ಟು ಮಾತ್ರ ಯಾರೂ ದೊರಕಲಿಲ್ಲವೇ?" ಎಂದು ಕೇಳಲು, ಆ ಚಂದ್ರಗುಪ್ತನ ವಾಕ್ಯವಂ ಕೇಳಿದ ಭಟರು ಅವನಂ ನೋಡಿ, ಪ್ರತ್ಯುತ್ತರವನ್ನೊರೆಯದೆ ಮುಂದೆ ನಡೆದು, ಜನರಂ ಕರೆತಂದು ಪಂಜರವಂ ತೋರಿಸಲು, ಪುರದ ಆಬಾಲವೃದ್ಧರು ಎಲ್ಲರೂ ನೋಡಿ, ಅದರ ವಿವರವು ಯಾರಿಗೂ ಆಗದೆ ಹಿಂದಕ್ಕೆ ಹೋಗುತ್ತಿರಲು, ಆ ಭಟರು ಪುನಃ ನಂದರಂ ಕುರಿತು:

"ಬುದ್ಧೀ, ಈ ಪುರದ ಆಬಾಲವೃದ್ಧರೆಲ್ಲರೂ ಬಂದು ಪಂಜರವಂ ನೋಡಿ, 'ಇದು ಅಮಾನುಷಕೃತವೇ ಅಹುದೆಂ' ದು ಹೇಳುತ್ತಾ ಸುಮ್ಮನೆ ಹೋದರಲ್ಲದೆ, ಯಾರಿಗೂ

ವಿವರವಾಗ(ಲಿ)ಲ್ಲ" ಎಂದು ಬಿನ್ನೈಸಲು, ಆ ಮಾತಿಗೆ ನಂದರು ವಿಸ್ಮಯಪಟ್ಟು ಆ ಪಂಜರವಂ ಸಮೀಪಕ್ಕೆ ತರಿಸಿನೋಡಲು, ಅದು ಅಖಂಡವಾದ ಎರಕದ ಪಂಜರವಾಗಿಯೂ ಅದರಲ್ಲಿ ಇರುವ ಸಿಂಹವು ಮಾಂಸವಂ ಕಚ್ಚುತ್ತ ತಿರುಗುವದಂ ಕಂಡು ಅವರಿಗೂ ಅದರ ವಿವರವಾಗದೆ ಇರಲು, ಪುನಃ ತಮ್ಮ ದೂತರ ಮುಖವಂ ನೋಡಿ, "ಎಲೈ ಈ ಪುರದಲ್ಲಿ ಒಬ್ಬನಾದರೂ ಪರೀಕ್ಷಕನು ದೊರಕದೆ ಹೋದನೆ? ಇನ್ನೂ ವಿಚಾರಿಸಿರಿ; ದೊರಕಿದರೆ ವಿಶೇಷ ಬಹುಮಾನಕ್ಕೆ ಪಾತ್ರನಾದಾನು" ಎಂದು ಹೇಳುತ್ತಲಿರಲು,

ಅದರಲ್ಲಿ ಒಬ್ಬ ದೂತನು ನಂದರಿಗೆ ಕೈಮುಗಿದು, "ಬುದ್ಧೀ, ಅಪ್ಪಣೆ ಮೇರೆಗೆ ಬೀದಿ ಬೀದಿಗಳಲ್ಲಿ ನಾವು ಸಾರಿಕೊಂಡು ಬರುವ ಅವಸರದಲ್ಲಿ, ಕಾರಾಗೃಹದ ಬಳಿಯಲ್ಲಿ ಸೆರೆಯವನು ಯಾರೋ ಒಬ್ಬನು ನಾವು ಸಾರುವುದಂ ಕೇಳಿ, ನಮ್ಮಂ ನೋಡಿ, 'ಎಲೈ, ಭಟರುಗಳಿರಾ, ಈ ಪುರದಲ್ಲಿ ಆ ಪಂಜರಪರೀಕ್ಷಕ ಇಷ್ಟು ಮಾತ್ರ ದೊರಕದೆ ಹೋದನೆ' ಎಂದು ಅವನೊಬ್ಬನು ನಮ್ಮಂ ಕೇಳಿದನಲ್ಲದೆ, ಮತ್ತೆ ಯಾರೂ ಹೀಗೆ ಹಾಗೆ ಎನಲಿಲ್ಲ" ಎಂದು ಬಿನ್ನೈಸಲು, ಆ ಮಾತಿಗೆ ನಂದರು "ಎಲೈ ಭಟರುಗಳಿರಾ, ಅವನಿಂದ ಇದು ಪರೀಕ್ಷಿತವಾದರೆ ಕಾರಾಗೃಹದಿಂದ ಆತನು ಮುಕ್ತನಾಗಿ ಬಹುಮಾನಕ್ಕೆ ಪಾತ್ರನಾದಾನು. ಕರೆತಂದು ತೋರಿಸಿ" ಎಂದು ನೇಮಿಸಲು, 'ಬುದ್ಧೀ' ಎಂದು ಆ ದೂತರು ಬಂದು ಸೆರೆಮನೆಯಲ್ಲಿ ಇರುವ ಚಂದ್ರಗುಪ್ತನಂ ಕಂಡು "ನಿಮಗೆ ಅಪ್ಪಣೆ ಆಗಿ ಇದೆ. ಈ ಪಂಜರ ಪರೀಕ್ಷೆಯು ನಿಮ್ಮಿಂದ ನಿರ್ವಹಿ(ಸಿ)ದರೆ ರಾಜಸನ್ಮಾನಕ್ಕೆ ಪಾತ್ರರಾಗಿ ಬಂಧನದಿಂದ ಮುಕ್ತರಾಗುವಿರಿ. ನೋಡಬಹುದು" ಎಂದು ಕರೆಯಲು, 'ಒಳ್ಳೆಯದು'ಎಂದು ಚಂದ್ರಗುಪ್ತನು ಅಲ್ಲಿಂದ ಎದ್ದು ಬರುತ್ತಿರಲು.

ಆಗ ರಾಕ್ಷಸನು ದೂರದಿಂದಲೇ ಆ ಪಂಜರವಂ ನೋಡಿ, ತನ್ನ ಮನಸ್ಸಿನಲ್ಲಿ "ಈ ಪಂಜರವು ಕುಹಕಿಗಳಾದ ಪರರಾಯರಿಂದ ನಮ್ಮ ಬುದ್ಧಿಪರೀಕ್ಷಾರ್ಥವಾಗಿ ಕಳುಹಿಸಿ ಇರಬೇಕು. ಪರೀಕ್ಷೆಯಂ ಮಾಡದಿದ್ದರೆ ನಮಗೆ ಅಪಮಾನವು. ಎಲ್ಲರಂತೆ ನಾವು ಹೋಗಿ ನೋಡಿ, ನಮ್ಮ ಬುದ್ಧಿಕೌಶಲ್ಯದಿಂದ ಪರೀಕ್ಷಿಸಿ, ಅದು ಸರಿಬಂದರೆ ಉತ್ತಮವು; ಅಲ್ಲದೆ ನನ್ನ ಪರೀಕ್ಷಾನಂತರದಲ್ಲಿ ಮತ್ತೊಬ್ಬ ಪರೀಕ್ಷಿಸಿ ಅಹುದೆನಿಸಿಕೊಂಡರೆ, ಜನದಲ್ಲಿ ನನಗೆ ಅಪಮಾನವು. ಈಗ ದೂತ ಹೇಳಿದ ವಾಕ್ಯದಿಂದ ಯಾರೋ ಒಬ್ಬ ಪರೀಕ್ಷಕ ಬರುವನಾಗಿ ತೋರುತ್ತಲಿದೆ. ಅವನು ಪರೀಕ್ಷೆಯಂ ಮಾಡಿದರೆ ಮಾಡಿಕೊಳ್ಳಲಿ. ಅವನೂ ಹಿಂದಾದರೆ ಎಲ್ಲರಿಗೂ ಅಶಕ್ಯವಾದುದಂ ನಾವು ಪರೀಕ್ಷಿಸಿ, ಸರಿಬಾರದಿದ್ದರೆ, ಎಲ್ಲರಂತೆ ನನಗೂ ಅಪಮಾನವಿಲ್ಲ" ಎಂದು ರಾಕ್ಷಸನು ತಟಸ್ಥನಾಗಿ ಇರಲು,

ಅಷ್ಟರಲ್ಲಿ ನಂದರು ಮತ್ತೊಂದು ಸ್ಥಾನಕ್ಕೆ ಹೋಗುತ್ತಲಿರಲು, ಆಗ ಚಂದ್ರಗುಪ್ತನು ಬಂದು ಆ ಪಂಜರವಂ ನೋಡುತ್ತಲಿರಲು, ಆಗ ಅದರ ರಕ್ಷಕರು ಮೊದಲಿನಂತೆ ಕೂಗಿ ಸಾರುತ್ತಿರಲು, ಆಗ ಚಂದ್ರಗುಪ್ತನು ತನ್ನ ಮನಸ್ಸಿನಲ್ಲಿ, "ಈ ಪಂಜರವು ಅಖಂಡವಾಗಿ ಎರಕವಾಗಿ ಇದೆ. ಇದರಲ್ಲಿ ಸಿಂಹವು ಪೋಷಕನು ಕೊಟ್ಟ ಮಾಂಸಕ್ಕೆ ಎರಗುತ್ತಾ, ಅವನು ಪಂಜರವಂ ಬಳಸಿ ಬಂದರೆ ಅವ(ನು)ಬಂದ ಕಡೆಯಲ್ಲಿ ಮಾಂಸಾಪೇಕ್ಷೆಯಿಂದ ಒಳಗೆ ಬಳಸಿ ಬರುತ್ತಲಿದೆ. ಪಂಜರವೂ ಅಖಂಡವಾಗಿ ಒಳಗಿನ ಸಿಂಹವೂ ಮಾಂಸಾಭಿಲಾಷಿಯಾಗಿ ಇರುವದರಿಂದ ಇದು ಅಮಾನುಷಕೃತವೆಂದು ಹೇಳುವುದಕ್ಕೆ ಆಸ್ಪದವಾಯಿತು" ಎಂದು ತಿಳಿಯುತ್ತ, ಅದರ ರಕ್ಷಕರು ಮಾಂಸವಂ ಕೊಡುವದಂ, ಆ ಸಿಂಹವು ಗ್ರಹಿಸುವದಂ ಸಹ ನೋಡಿ, ಅದರ ಭಾವವಂ ತನ್ನ ಮನಸ್ಸಿಗೆ ತಂದುಕೊಂಡು, ಸಮೀಪದಲ್ಲಿದ್ದ ರಾಜಭಟರಿಗೆ ಹೇಳಿ, ಮಾಂಸಖಂಡವಂ ತರಿಸಿ, ಅವರಂತೆ ಚಂದ್ರ ಗುಪ್ತನೂ ಅದಂ ಸಿಂಹಕ್ಕೆ ನೀಡಿ ಕೊಡಲು, ಆಗ ಆ ಸಿಂಹವು ಆ ಮಾಂಸಾಭಿಮುಖವಾಗದೆ ಸುಮ್ಮನಿರಲು,

ಆ ಪಂಜರರಕ್ಷ(ಕ)ರಂ ನೋಡಿ, "ಏನೈ, ನಾನು ಕೊಟ್ಟ ಮಾಂಸವಂ ಯಾಕೆ ಸಿಂಹವು ಗ್ರಹಿಸಲಿಲ್ಲವೆಂ"ದು ಚಂದ್ರಗುಪ್ತ ಕೇಳಲು, ಆ ಮಾತಿಗೆ ಆ ಪಂಜರರಕ್ಷಕರು ಮನದಲ್ಲಿ ಆತಂಕಪಡುತ್ತ. "ಅಯ್ಯ ನೋಟಕನೇ, ಸಿಂಹವು ಅಮಾನುಷಕೃತವಾದುದರಿಂದ ಅದರ ಉಪಾಸಕರ ಕೈ ಆಹಾರವಂ ಗ್ರಹಿಸುವದಲ್ಲದೆ ಅನ್ಯರಂ ಭಾವಿಸುವದುಂಟೇ?" ಎಂದು ಅಪಲಾಪವಾಕ್ಯವಂ ಹೇಳಲು. ಅದಂ ಅಪಲಾಪವಾಕ್ಯವೆಂದು ತಿಳಿಯುತ್ತ ಪುನಃ ಯೋಚಿಸುತ್ತಿದ್ದನು.

"ಈ ಪಂಜರವು ಅಖಂಡವಾದುದರಿಂದ ಜೀವ ಸಿಂಹ ಪ್ರವೇಶಕ್ಕೆ ನಿಮಿತ್ತವಿಲ್ಲ. ಈ ಪಂಜರರಕ್ಷಕನು ಪಂಜರವಂ ಬಳಸಿ ಬರುತ್ತಲಿದ್ದರೆ, ಈ ಸಿಂಹವೂ ಮಾಂಸವಂ ಕೊಡುವನಲ್ಲಿ ಮಾಂಸಾಭಿಲಾಷೆಯಿಂದಲೋ ಎಂಬಂತೆ, ಅವ(ನು) ಬಂದ ಕಡೆಗೆ ತಾನು ತಿರುಗುತ್ತಲಿದೆ; ಅವನು ದೂರಸ್ಥನಾದರೆ, ತಿರುಗುವ ಆಯಾಸದಿಂದಲೋ ಎಂಬ ಹಾಗೆ ಕಂಠವನ್ನಲುಗಿಸುತ್ತ ಶ್ವಾಸವಂ ಬಿಡುವಂತೆ ಜನಗಳಿಗೆ ತೋರುತ್ತಲಿದೆ. ಪಂಜರ ರಕ್ಷಕನು ನೀಡಿಕೊಟ್ಟ ಮಾಂಸದಲ್ಲಿ ಆಸಕ್ತಿಯಿಂದಲೋ ಎಂಬಂತೆ ಪುಚ್ಛಾಗ್ರವಂ ಶಿರಸ್ಸಿನಲ್ಲಿ ಕುಣಿಯಿಸುತ್ತ, ಮಾಂಸವಂ ಕಚ್ಚುವದರಿಂದ ಜೀವಸಿಂಹವೇ ಸರಿಯೆಂದು ತೋರುತ್ತಲಿದೆ. ಹೀಗಿದ್ದರೂ ಇದು ಜೀವಸಿಂಹವಾಗದು. ಏನೆಂದರೆ, ಅರಗು ಮೇಣ ಮುಖ್ಯವಾದ ಸರಿಗಳಿಂ ಲಿಪ್ತವಾದ ವಸ್ತ್ರಕ್ಕೆ ಸಿಂಹದ ರೋಮಗಳಂ ಹತ್ತಿಸಿ, ಅದಂ ಚರ್ಮದಂತೆ ಮಾಡಿ, ಹೊರಗಿದ್ದ ಪುರುಷನ ಕೌಶಲ್ಯದಿಂದ ಮಾಂಸವಂ ಕೊಡುವ ರಂಧ್ರಮುಖದಿಂದ ಅದರ ಅಧಿಷ್ಠಾನಕ್ಕೆ

ಕಬ್ಬಿಣದ ಶಲಾಕೆಗಳಂ ಜೋಡಿಸಿ, ಪುಚ್ಛ ಕಂಠಗಳಿಗೆ ರೋಮಸಹಿತವಾದ ಉಕ್ಕಿನ ತಂತಿಗಳಂ ಜೋಡಿಸಿ, ಅಲ್ಲಿಗಲ್ಲಿ ಬಣ್ಣಂಗಳಂ ಬರೆದು ಇದ್ದೀತು. ಅದರಿಂದ ಕೃತ್ರಿಮಸಿಂಹವೇ ಅಹುದಾದೀತು.

ಮತ್ತೆ ಒಂದು ಪರೀಕ್ಷೆಯಂ ಮಾಡುವೆನೆಂದು ಆನೆಲಾಯಕ್ಕೆ ಹೇಳಿ ಕಳುಹಿಸಿ, ಮರಿಯಾನೆಗೆ ಕಣ್ಣುಗಳಂ ಕಟ್ಟಿಸಿ, ಪಂಜರವಂ ಬಳಸಿ ಬರುವಂತೆ ಮಾಡಲು, ಆ ಸಿಂಹವು ಅದಂ ನೋಡಿ ಆರ್ಭಟಿಸದೆ ಇರಲು, ಕಪಟಸಿಂಹವು ಸಿದ್ಧವೆಂದು ತಿಳಿದು, ಆ ಸಿಂಹವು ಚಲಿಸುವುದಕ್ಕೆ, ಮಾಂಸವಂ ಚುಚ್ಚಿಕೊಡುವುದಕ್ಕೆ ಸಾಧನವಾದ ಶಲಾಕವಂ ಪಿಡಿದಿರುವ ಪಂಜರ ರಕ್ಷಕನಂ ನೋಡಿ, ಈತನ ಕೈಶಲಾಕವು ಸೂಜಿಕಲ್ಲಿನ ಸತ್ವದಿಂ ಮಾಡಿ ಇರಬೇಕು. ಇದರ ತುದಿಮಾಂಸಕ್ಕೆ ಸಿಂಹವೆರಗಿ ಕಚ್ಚುವದರಿಂದಲೂ ಶಲಾಕಹಸ್ತನಾಗಿ ಇರುವ ಈ ಪುರುಷ ತಿರುಗಿದ ಮುಖದಲ್ಲಿ ಒಳಗೆ ಸಿಂಹವು ತಾನೂ ತಿರುಗುತ್ತಿರುವುದರಿಂದ ಲೋಹವನ್ನಾಕರ್ಷಿಸುವ ಧರ್ಮವು ಸೂಜಿಕಲ್ಲಿನ ಸ್ವಭಾವವು" ಎಂದು ನಿಶ್ಚೈಸಿ, ಆ ಪಂಜರ ರಕ್ಷಕನಂ ನೋಡಿ, "ಎಲೈ ನಿನ್ನ ಕೈಶಲಾಕವಂ ಬಿಟ್ಟು ಪಂಜರವಂ ಬಳಸಿಬಾರೆ"ನಲು, ಅದರ ರಕ್ಷಕನು ಈ ವಾಕ್ಯವಂ ಕೇಳಿ, ತನ್ನ ಮನಸ್ಸಿನಲ್ಲಿ "ಯಾರಿಗೂ ತಿಳಿಯದಿರುವ ಈ ಶಲಾಕವಂ ಈ ನೋಟಕನು ಆಕ್ಷೇಪಿಸುತ್ತಲಿದ್ದಾನೆ. ಕಪಟಶಿಲ್ಪೋಪಾಯ ಪರೀಕ್ಷೆಯಲ್ಲಿ ಈತನು ಶಲಾಕಪರೀಕ್ಷಕನಂತೆ ತೋರುತ್ತಲಿದೆ. ನಮ್ಮ ಕಪಟವು ಈತನಿಂದ ಪ್ರಕಟಕ್ಕೆ ಬರುವಂತೆ ತೋರುತ್ತಲಿದೆ. ಈತನ ಆಕ್ಷೇಪಕ್ಕೆ ಹೀಗೆ ಹೇಳಬೇಕೆಂದು" ನಿಶ್ಚೈಸಿ, ಚಂದ್ರಗುಪ್ತನಂ ಕುರಿತು.

"ಅಯ್ಯ ನೋಟಕರೇ, ಜನ್ಮಾರಭ್ಯ ಶಲಾಕಾಗ್ರದ ಮಾಂಸದಿಂದಲೇ ಜೀವಿಸುವ ಈ ಸಿಂಹವು ಶಲಾಕವಂ ಬಿಟ್ಟರೆ ಮಾಂಸಾಹಾರರಹಿತವಾಗಿ ರಿಕ್ತಹಸ್ತನಾದ ನನ್ನಂ ನೋಡಿ ಸುಮ್ಮನಿರುವದು. ನನ್ನಲ್ಲಿ ಮುಂದೆ ಪೋಷಕವಿಶ್ವಾಸವಂ ಬಿಡುವದು. ಅದರಿಂದ ಶಲಾಕವಂ ಬಿಡಕೂಡದು" ಎಂದು ಹೇಳುವ ಪಂಜರರಕ್ಷಕನಂ ನೋಡಿ, "ಎಲೈ ಪ್ರಿಯನೆದುರಿಗೆ ವಿಲಾಸವಂ ತೋರುವ ಜಾರಸ್ತ್ರೀಯಂತೆ ಅಯಸ್ಕಾಂತದೆದುರಿಗೆ ಕೃಷ್ಣಲೋಹ ಶಲಾಕಾಯುಕ್ತವಾದ ಈ ಕಪಟಸಿಂಹವು ಹಲವು ಪರಿ ಚಲಿಸುವುದು ಆಶ್ಚರ್ಯವೇನು? ಇದರಂತೆ ಅರಗು ಮೇಣಗಳು ಅಗ್ನಿಸೆಕೆಗೆ ಕರಗುವದೆಂಬರ್ಥವು ಲೋಕಪ್ರಸಿದ್ಧವಲ್ಲವೇ? ಇನ್ನು ಈ ಕಪಟವಾಕ್ಯವ ಹೇಳುವದಂ ಸಾಕುಮಾಡೆಂ"ದು ಚಂದ್ರಗುಪ್ತನು ಹೇಳುತ್ತಿರಲು, ಅದಂ ಕೇಳಿ ಆ ಪಂಜರರಕ್ಷಕರು ಲಜ್ಜೆಯಿಂ ತಲೆಬಾಗಿ, ಕೈಮುಗಿದು, 'ತಾವುಜಿತರಾದೆವೆಂ'ದು ಹೇಳುತ್ತ, ಶಲಾಕವಂ ಚಂದ್ರಗುಪ್ತನ ಮುಂದೆ ಒಪ್ಪಿಸಲು,

ಆಗ ಚಂದ್ರಗುಪ್ತನು ಹೀಗೆಂದು ಆಲೋಚಿಸುತ್ತಿದ್ದನು : "ಕಪಟಶಿಲ್ಪವಾದ ಈ ಪಂಜರವಂ ದೇಶಾಂತರದಿಂದ ಪ್ರಯತ್ನಪೂರ್ವಕವಾಗಿ ತಂದು, ಈ ಆಸ್ಥಾನದ ಬಳಿಯಲ್ಲಿ ಇಳುಹಿ, ಸಾರುವುದಕ್ಕೆ ನಿಮಿತ್ತವೇನೆಂದರೆ, ನಂದರು ಕಪಟೋಪಾಯದಿಂದ ಮೌರ್ಯರಂ ಸಂಹರಿಸಿದರೆಂಬ ವಾರ್ತೆಯು ದೇಶಾಂತರದಲ್ಲಿ ಪ್ರಸಿದ್ಧವಾದುದರಿಂದ, ಅದಂ ಕೇಳಿ ಪರರಾಯರು ಯಾರೋ, ಕಪಟಿಗಳಾದ ನಂದರ ವಿಡಂಬನಾರ್ಥವಾಗಿ ಅಶಕ್ಯವಾದ ಕಪಟಶಿಲ್ಪವಂ ರಚಿಸಿ, ಇಲ್ಲಿಯ ಜನರ ಬುದ್ಧಿಪರೀಕ್ಷಾರ್ಥವಾಗಿ ಕಳುಹಿಸಿದವರಾಗಿ ಇರಬೇಕು. ಇದರಿಂದ ನಂದರಂ ಹೇಳನವಂ ಮಾಡುವ ಪರರಾಯರು ಉಂಟೆಂದು ಹೇಳಬೇಕು. ಆ ಕಪಟವು ಇಲ್ಲಿ ಪ್ರಕಟವಾದುದರಿಂದ ಕಪಟಿಗಳಾದ ಪರರಾಯರಂ ದಂಡಿಸುವುದಕ್ಕೆ ಶಕ್ತನಾದ ಅಮಾತ್ಯ ರಾಕ್ಷಸನು ಅವರ ಮುಖಭಂಗವಂ ಮಾಡುವುದಕ್ಕೆ ಅವರ ಕಡೆ ಪಂಜರರಕ್ಷಕರು 'ಈ ಸಿಂಹವು ಅಮಾನುಷಕೃತ' ವೆಂದು ಆಸ್ಥಾನದಲ್ಲಿ ಆ(ಡಿ)ದ ಅನೃತವಾಕ್ಯವನ್ನು ಆಕ್ಷೇಪಿಸುತ್ತ, ಇವರಿಗೆ ಯಥೋಕ್ತ ದಂಡನೆಯಂ ಮಾಡಿಯಾನು. ಹೀಗೆ ನಡೆದರೆ ನನ್ನ ನಿಮಿತ್ತದಿಂದ ಇವರಿಗೆ ದಂಡನೆ ಆದಂತೆ ಆಗುವದು ಮತ್ತು ಈ ಪಂಜರನಿಮಿತ್ತದಿಂದ ನನಗೆ ಬಂಧನವಿಮೋಚನವಾಗುವಂತೆ ತೋರುತ್ತಲಿದೆ. ಅದರಿಂದ ಈ ದೂತರ ದೇಶವಂ ತಿಳಿದು ಈಗಲೇ ಇಲ್ಲಿಂದ ಚದುರಿ ಹೋಗುವಂತೆ ಮಾಡಬೇಕು" ಎಂದು ನಿಶ್ಚೈಸಿ,

ಚಂದ್ರಗುಪ್ತನು ಆ ಪಂಜರರಕ್ಷ(ಕ)ರ ಉದ್ಘೂಷಣದಾಕಾರವಂ ನೋಡಿ, 'ಇವರು ಪಾರ್ವತೇಯರು' ಎಂದು ನಿಶ್ಚೈಸಿ, "ಎಲೈ, ನಿಮ್ಮ ದೇಶ ಯಾವುದೆಂದು" ಕೇಳಲು, "ಸ್ವಾಮಿ, ಗಟ್ಟಬೆಟ್ಟವಂ ಸೇರಿ ಪರರಿಂ ಜೀವಿಸುತ್ತ ಕಾಡ ಜೋಗಿಗಳಾಗಿ ತಿರುಗುತ್ತಿರುವವರಿಗೆ ಈ ದೇಶವೆಂದು ಪರಿಮಿತವುಂಟೇ?'' ಎಂದೆನಲು, ಅದಂ ಕೇಳಿ "ಪರ್ವತ ರಾಜ್ಯಾಧಿಪತಿಯಾದ ಅರಸಿನ ಭೃತ್ಯರೆಂದು ಗೂಡಾರ್ಥದಿಂದ ಈ ದೂತರು ಸೂಚಿಸಿದಂತಾಯಿತು" ಎಂದು ನಿಶ್ಚೈಸಿ, ಆ ದೂತರ ಮುಖವಂ ಚೆನ್ನಾಗಿ ನೋಡಿ, ಚಂದ್ರಗುಪ್ತನು ಈಗಲೇ ಹೊರಟುಹೋಗುವಂತೆ ಕಣ್ಣುಸನ್ನೆಯಿಂದ ಸೂಚನೆಯಂ ಮಾಡಲು, ಅದಂತಿಳಿದು ಆ ಪಂಜರರಕ್ಷಕರು "ತಾವು ಇಲ್ಲಿ ಇದ್ದರೆ ತಮಗೆ ಏನೋ ಅನಿಷ್ಟ ತಗಲುವದಾಗಿ ಇದೆ ಇಲ್ಲಿಂದ ಹೊರಟು ಹೋಗೀ" ಎಂದು ಚಂದ್ರ ಗುಪ್ತನು ಕಣ್ಣ ಸನ್ನೆಯಿಂದ ಸೂಚಿಸಿದನು ಎಂದು ತಿಳಿದು, ಅವರು ಜನದ ಸಂದಣಿಯಲ್ಲಿ ತಮ್ಮ ಸಾಮಗ್ರಿಗಳಂ ಬಿಟ್ಟು ಬೈರಾಗಿ ವೇಷದಿಂದ ಹೊರಟು ಹೋದರು.

## ಕೆಂಪು ನಾರಾಯಣ

ಕೆಂಪು ನಾರಾಯಣ ಹೊಸಗನ್ನಡದ ಆದ್ಯ ಗದ್ಯ ಬರಹಗಾರ. ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ಪಂಡಿತರಲ್ಲೊಬ್ಬನಾಗಿದ್ದ ಅವನ ನಿಜವಾದ ಹೆಸರು ನಾರಾಯಣ ಶರ್ಮ ಎಂದಾಗಿತ್ತು. ಕನ್ನಡದ ಮೊದಲ ಚಾರಿತ್ರಿಕ ಕಾದಂಬರಿಯಾದ "ಮುದ್ರಾಮಂಜೂಷವು" ಕೃತಿಯನ್ನು ೧೮೨೩ರಲ್ಲಿ ಕೆಂಪು ನಾರಾಯಣ ಬರೆದಿದ್ದಾನೆ. 'ಮುದ್ರಾಮಂಜೂಷ'ದ ಕಥೆ ಚಾಣಕ್ಯ – ಚಂದ್ರಗುಪ್ತರ ಬಗೆಗಿನದ್ದು. ನಂದರಿಂದ ಅಪಮಾನಿತನಾದ ಆಚಾರ್ಯ ಚಾಣಕ್ಯ ನಂದರಾಜರನ್ನು ಸಿಂಹಾಸನದ ಗದ್ದುಗೆಯಿಂದ ಪದಚ್ಯುತಿಗೊಳಿಸಿ ಚಂದ್ರಗುಪ್ತ ಮೌರ್ಯನನ್ನು ಮಗಧದ ರಾಜಗದ್ದುಗೆಗೆ ಪ್ರತಿಷ್ಠಾಪಿಸುವ ಮೂಲಕ ತನ್ನ ಅಪಮಾನಕ್ಕೆ ತಕ್ಕ ಪ್ರತೀಕಾರಗೈಯ್ಯುವುದು ಇತಿಹಾಸದ ಪ್ರಸಿದ್ಧ ಕಥೆ. ವಿಶಾಖದತ್ತನ ಮುದ್ರಾರಾಕ್ಷಸ ಹಾಗೂ ಇನ್ನಿತರ ಮೂಲಗಳಿಂದ ಕಥೆಯನ್ನು ಬಳಸಿಕೊಂಡರೂ ನಿರೂಪಣೆ, ಕಥನ ಕೌಶಲಗಳಲ್ಲಿ ಕೆಂಪು ನಾರಾಯಣ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ಕಥಾಚಿತ್ರಣದಲ್ಲಿ ಬಾಣ, ಭರ್ತೃಹರಿಗಳ ಪ್ರಭಾವ ಕಂಡುಬರುತ್ತದೆಯಾದರೂ ನಡುಗನ್ನಡದ ಸಂಧಿ ಕಾಲವನ್ನು ದಾಟಿ ಹೊಸಗನ್ನಡದ ಸ್ಪಷ್ಟ ರೂಪುರೇಷೆಗಳನ್ನು ತೋರಿ ತನ್ನದೇ ಆದ ಮನಮೋಹಕ ಶೈಲಿಯಲ್ಲಿ ಸಂಸ್ಕೃತದ ಶಬ್ದಗಳೊಂದಿಗೆ ಸಮಕಾಲೀನ ಆಡುನುಡಿಗಳನ್ನು ಮೇಳೈಸಿ ಕೌಶಲ್ಯ ಪೂರ್ಣವಾಗಿ ಪ್ರತಿಬಿಂಬಿಸಿರುವ ಕೆಂಪು ನಾರಾಯಣನ ಮುದ್ರಾಮಂಜೂಷವು ಕನ್ನಡದ ಒಂದು ಅನನ್ಯ ಕೃತಿ. ಈ ಕಥಾಭಾಗವನ್ನು ಮುದ್ರಾಮಂಜೂಷವು – ನಾರಾಯಣ ಶರ್ಮ (ಕೆಂಪು ನಾರಾಯಣ) ಕೃತಿಯಿಂದ ಆರಿಸಲಾಗಿದೆ.

### ಕಥಾಹಿನ್ನೆಲೆ

ಗೌಡ ದೇಶದ ರಾಜಧಾನಿ ಪಾಟಲೀಪುರ. ಸರ್ವಾರ್ಥ ಸಿದ್ಧಿಯೆಂಬ ರಾಜ. ಪತ್ನಿ ಸುನಂದೆ ರಾಜಪುತ್ರಿ. ಪ್ರಿಯ ಪತ್ನಿ ಮುರೆ ಶೂದ್ರ ಪುತ್ರಿ. ದಂಡನೀತಿ ಪ್ರವೀಣನೂ ದಕ್ಷನೂ ಆದ ರಾಕ್ಷಸನು ಮಂತ್ರಿ. 'ಮುರೆ'ಯ ಮಗ ಮೌರ್ಯ. ಸುನಂದಾ ದೇವಿಯಲ್ಲಿ ಒಂಭತ್ತು ಮಕ್ಕಳಾಗಲು ಅವರು ನಂದರೆಂದು ಪ್ರಸಿದ್ಧರಾದರು. ನಂದ, ಸುನಂದ, ಉಪನಂದ, ಪ್ರನಂದ, ಲೋಕನಂದ, ಕುರುನಂದ, ಪ್ರಿಯನಂದ, ಮಿತ್ರನಂದ, ವಿನಂದರೆಂಬುದಾಗಿ ನಾಮಕರಣಗಳಾದವು. ಮೌರ್ಯನಿಗೆ ಚಂದ್ರಗುಪ್ತ ಮೊದಲಾದ ನೂರು ಮಂದಿ ಮಕ್ಕಳು

ಇವರೇ ಮೌರ್ಯರು. ಮೌರ್ಯರು ಮುಂದೆ ತಮಗೆ ಕಂಟಕಪ್ರಾಯರಾದಾರೆಂಬ ಭಾವನೆಯಿಂದ ನವನಂದರು ಉಪಾಯಾಂತರದಿಂದ ಮೌರ್ಯ ಸಹಿತ ಆತನ ನೂರು ಮಕ್ಕಳನ್ನು ನೆಲಮಾಳಿಗೆಯಲ್ಲಿರಿಸಿ ಕೊಲ್ಲಲೆಳಸಿದರು. ತಂದೆ ಮಕ್ಕಳ ಒಪ್ಪಂದದಿಂದಾಗಿ ಚಂದ್ರಗುಪ್ತನೊಬ್ಬ ಮಾತ್ರ ಬದುಕುಳಿದ.

ಪರ್ವತರಾಜನ ಆಸ್ಥಾನ ಮಂತ್ರಿ ಶಬರ ವರ್ಮನು ಅಮಾತ್ಯರ ಬುದ್ಧಿ ಪರೀಕ್ಷೆಗಾಗಿ ಕಪಟಶಿಲ್ಪದ ವಿಚಾರವನ್ನು ಮಾಡಿದ್ದು ಚಂದ್ರಗುಪ್ತನ ಬಂಧ ವಿಮೋಚನೆಗೆ ಅನುಕೂಲವಾಯಿತು.

## ಪದಗಳ ಅರ್ಥ

ಭಟ – ಯೋಧ

ಸೂಜಿಕಲ್ಲು – ಅಯಸ್ಕಾಂತ

ಪಾಟಲೀಪುರ – ಮಗಧ ದೇಶದ ರಾಜಧಾನಿ

ಒರೆಯು – ಹೇಳು

ಕುಹಕಿ – ಮೋಸಗಾರ

ಜನ್ಮಾರಭ್ಯ – ಹುಟ್ಟಿನಿಂದಲೇ

ಜಾರಸ್ತ್ರೀ – ವ್ಯಭಿಚಾರಿಣಿ

ಉದ್ಭೂಷಣ – ಎದ್ದು ಕಾಣುವ ಅಲಂಕಾರ

ಇಳುಹಿಸಿ – ಇಳಿಸಿ

ಭೇದಿಸು – ತುಂಡರಿಸು

ಖಂಡಿಸು – ಕತ್ತರಿಸು

ಅವಸರ – ಸಮಯ

ಲಿಪ್ತ – ಹಚ್ಚಿದ

ರಿಕ್ತ ಹಸ್ತ – ಬರಿಗೈ

ಶಿರಸ್ಸು – ತಲೆ

ಅನೃತ – ಸುಳ್ಳು

ಪರ್ವತೇಯ – ಪರ್ವತ ರಾಜ್ಯದ

ಪುಚ್ಛಾಗ್ರ – ಬಾಲದ ತುದಿ (ಪುಚ್ಛ + ಅಗ್ರ – ಪುಚ್ಛಾಗ್ರ)

ಅಪಲಾಪ – ಸುಳ್ಳು. ಇದ್ದದ್ದನ್ನು ಇಲ್ಲ ಎಂದೂ, ಇಲ್ಲದ್ದನ್ನು ಇದೆ ಎಂದೂ ಹೇಳುವುದು

ನಂದರು – ಮಗಧದ ನಂದ ವಂಶದ ಮೊದಲ ಅರಸ

## ಚಟುವಟಿಕೆಗಳು

- ಕೆಂಪುನಾರಾಯಣನ 'ಮುದ್ರಾಮಂಜೂಷವು' ಕೃತಿಯ ಪರಿಚಯ ಮಾಡಿಕೊಡಿರಿ.
- ಈ ಗದ್ಯಭಾಗವನ್ನು ಹೊಸಗನ್ನಡದಲ್ಲಿ ನಾಟಕ ರೂಪಕ್ಕೆ ಪರಿವರ್ತಿಸಿರಿ.

- ಈ ಗದ್ಯಭಾಗದ ಆಧಾರದಲ್ಲಿ ಚಂದ್ರಗುಪ್ತ ಮೌರ್ಯನ ಪಾತ್ರ ಪರಿಚಯವನ್ನು ಮಾಡಿರಿ.
- ಚಂದ್ರಗುಪ್ತನ ಜಾಣ್ಮೆ, ಸಾಹಸಗಳನ್ನು ಪಾಠಭಾಗದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.
- ಆಬಾಲವೃದ್ಧರು, ಆಮರಣಾಂತ, ಆಪಾದಮಸ್ತಕ, ಆಜನ್ಮಪರಿಯಂತ ಇಂತಹ ಪ್ರಯೋಗಗಳ ಬಗ್ಗೆ ತಿಳಿಯಿರಿ.

## ಭಾಷಾಭ್ಯಾಸ

- ಬಡವ – ಬಡತನ, ಬಾಳು – ಬಾಳುವೆ, ಹಗೆ – ಹಗೆತನ ಇಂತಹ ಪದಗಳನ್ನು ಭಾವನಾಮಗಳೆಂದು ಹೇಳುವರು. ಪಾಠಭಾಗದಿಂದ ಇಂತಹ ಪದಗಳನ್ನು ಸಂಗ್ರಹಿಸಿರಿ.
- ತಲೆಬಾಗಿ, ಕೈಮುಗಿದು, ರಾಜಸನ್ನಿಧಿ, ಮಾಂಸಾಭಿಲಾಷೆ – ಈ ಪದಗಳ ವಿಗ್ರಹವಾಕ್ಯ ಬರೆದು ಸಮಾಸವನ್ನು ಹೆಸರಿಸಿರಿ. ಈ ರೀತಿಯ ಪ್ರಯೋಗಗಳನ್ನು ಸಂಗ್ರಹಿಸಿ ಬರೆಯಿರಿ.


## ಹೆಚ್ಚಿನ ಓದಿಗೆ

ಮುದ್ರೆಯುಂಗುರ – ತೀ.ನಂ.ಶ್ರೀಕಂಠಯ್ಯ

# ಹೇಮಕೂಟದಿಂದ ಬಂದ ಮೇಲೆ

ಶ್ರೀನಿವಾಸ

ಶಕುಂತಲೆಯು ಶಾಪಮುಕ್ತಳಾಗಿ ಮತ್ತೆ ದುಷ್ಯಂತನನ್ನು ಸೇರುವಲ್ಲಿಗೆ ಕಾಳಿದಾಸನ ಅಭಿಜ್ಞಾನ ಶಾಕುಂತಲ ನಾಟಕ ಕೊನೆಗೊಳ್ಳುತ್ತದೆ. ಅದೇ ಕಥೆಯನ್ನು ಆಧರಿಸಿ ಶಕುಂತಲೆ ಮತ್ತೆ ತವರಿಗೆ ಬಂದರೆ ಹೇಗೆ? ಎಂಬ ಹೊಸಕಲ್ಪನೆಯೊಂದಿಗೆ 'ಹೇಮಕೂಟದಿಂದ ಬಂದ ಮೇಲೆ' ಕಥೆಯು ಸೃಷ್ಟಿಯಾಗಿದೆ. ಹಿರಿಯ ರಾಣಿ ಹಾಗೂ ಸವತಿಯೊಂದಿಗೆ ಆಶ್ರಮಕ್ಕೆ ಬರುವ ಶಕುಂತಲೆಗೆ ಅಲ್ಲಿ ಸಿಗುವ ತವರಿನ ಪ್ರೀತಿ, ಆದರ, ಆಕೆಯ ಸಖಿಯರಾದ ಅನಸೂಯೆ, ಪ್ರಿಯಂವದೆಯರ ಜೀವನದಲ್ಲಾದ ಬದಲಾವಣೆ, ಚಕ್ರವರ್ತಿಯ ಮಗ ಭರತಕುಮಾರನು ಮೊದಲ ಬಾರಿಗೆ ಆಶ್ರಮಕ್ಕೆ ಬರುವ ಸ್ವಾರಸ್ಯಕರ ಅನುಭವಗಳು ಈ ಕಥೆಯಲ್ಲಿ ಚಿತ್ರಿತವಾಗಿವೆ. ಶಕುಂತಲೆಗೆ ತವರು ಮತ್ತು ಆಶ್ರಮದ ಬಗೆಗೆ ಇರುವ ಆರ್ದ್ರವಾದ ಅನುಭವವನ್ನು ಈ ಕಥೆ ನೀಡುತ್ತದೆ.



ಮಾಲಿನೀ ತೀರದ ಕಣ್ವ ಋಷಿಗಳ ಆಶ್ರಮದ ಸಮೀಪ, ಹಸ್ತಿನಾವತಿಯಿಂದ ಆಶ್ರಮಕ್ಕೆ ಬರುವ ದಾರಿಯಲ್ಲಿ ಇಬ್ಬರು ತರುಣಿಯರು ಮೆಲ್ಲಗೆ ಮಾತನಾಡಿಕೊಳ್ಳುತ್ತ ಮೆಲ್ಲನೆ ಆಶ್ರಮದಿಂದ ನಡೆದು ಹೋಗುತ್ತಿದ್ದಾರೆ. ಒಬ್ಬಳು, ಈ ಹೊತ್ತಾದರೂ ಬರುವರೋ ಇಲ್ಲವೋ, ಇಷ್ಟು ಹೊತ್ತಿಗೆ ಬರಬೇಕಾಗಿತ್ತಲ್ಲ ಎಂದಳು. ಇನ್ನೊಬ್ಬಳು, ಏನು ಕೆಲಸವೋ, ಒಂದು ರಾಷ್ಟ್ರದ ರಾಣಿಯೆಂದ ಮೇಲೆ ಎಲ್ಲವನ್ನೂ ಬಿಟ್ಟು ಬರುವುದು ಸುಮ್ಮನೆ ಆಗುತ್ತದೆಯೇ, ಇಂದಲ್ಲದಿದ್ದರೆ ನಾಳೆಯಾದರೂ ಬರುತ್ತಾರೆ, ಎಂದಳು. ಮೊದಲನೆಯವಳು, ನನಗೆ ಸುಮ್ಮನೆ ಆಸೆಯಾಗುತ್ತದೆ, ನಮ್ಮ ಶಕುಂತಲೆಯನ್ನು

ನೋಡಬೇಕೆಂದು, ನೋಡಿ ಏಳು ವರ್ಷದ ಮೇಲಾಯಿತಲ್ಲ. ಈಗ ಹೇಗಾಗಿದ್ದಾಳೋ, ಮಗುವನ್ನಂತೂ ನಾವು ನೋಡಿಯೇ ಇಲ್ಲ, ಎಂದಳು. ಅವಳ ಜೊತೆಯವಳು, ನನಗೂ ಬಹಳ ಆಸೆ, ಈ ಏಳು ವರ್ಷದಲ್ಲಿ ಅವಳನ್ನು ಎಷ್ಟು ಸಲ ಕನಸಿನಲ್ಲಿ ನೋಡಿದೆನೋ, ನಮ್ಮ ಶಕುಂತಲೆಯೂ ಖಂಡಿತ ನಮ್ಮನ್ನು ಬಹಳ ಸಲ ನೆನೆದುಕೊಂಡಿರಬಹುದು, ಎಂದಳು.

ಮೊದಲು ಮಾತನಾಡಿದವಳು ಅನಸೂಯೆ; ಎರಡನೆಯಳು ಪ್ರಿಯಂವದೆ. ಅವರು ರಾಣಿಯಾದ ಶಕುಂತಲೆಯ ಬರವನ್ನು ನಿರೀಕ್ಷಿಸುತ್ತಿದ್ದರು. ಅವಳು ಹಿಂದಿನ ದಿನವೇ ಬರಬೇಕಾಗಿತ್ತು: ಬರಲಿಲ್ಲ. ಇಂದು ಬರುವೆನೆಂದು ಹೇಳಿಕಳುಹಿಸಿದ್ದಳು. ಆಶ್ರಮದ ಬಾಗಿಲ ಬಳಿ ರಾಣಿಯನ್ನು ಬರಮಾಡಿಕೊಳ್ಳುವುದಕ್ಕೆ ಆಶ್ರಮದ ಪ್ರತಿನಿಧಿಗಳು ನಿಂತಿದ್ದರು. ಅವಳ ಈ ಸಖಿಯರಿಬ್ಬರೂ ಅವಳು ಬರುವವರೆಗೂ ಕಾದಿರಲು ಮನಸ್ಸು ತಡೆಯದೆ ಮೆಲ್ಲನೆ ದಾರಿಯಲ್ಲಿ ಮುಂದುವರಿದಿದ್ದರು. ರಾಣಿ ರಥದಲ್ಲಿ ಬರುತ್ತಿರಬೇಕಾದರೆ, ಐದು ನಿಮಿಷ ಮುಂದಾಗಿ ಅವಳನ್ನು ನೋಡಬೇಕೆಂದು ಇವರ ಅಪೇಕ್ಷೆ.

ಬರುವವರನ್ನು ಎದುರುನೋಡುತ್ತಾ ಹೊತ್ತನ್ನು ಕಳೆಯುವುದು ಬಹು ಬೇಸರದ ಕೆಲಸ. ಇವರೋ ಶಕುಂತಲೆಯೊಂದಿಗೆ ಹತ್ತಾರು ವರ್ಷ ಅಕ್ಕ ತಂಗಿಯರಂತೆ ಬೆಳೆದಿದ್ದ ಸಖಿಯರು; ಶಕುಂತಲೆಯ ಜೀವದ ಅರ್ಧ ಎಂಬಂತೆ ಇದ್ದವರು. ಅವಳನ್ನು ಏಳು ವರ್ಷದ ಹಿಂದೆ ದುಷ್ಯಂತನ ಬಳಿಗೆ ಕಳುಹಿಸುವ ಸಂದರ್ಭದಲ್ಲಿ ನೋಡಿದ್ದೇ ನೋಡಿದ್ದು. ಈಚೆಗೆ ಇವರಿಗೆ ಅವಳನ್ನು ನೋಡುವ ಅವಕಾಶವಿರಲಿಲ್ಲ. ಶಕುಂತಲೆ ಆಶ್ರಮದಿಂದ ಹೋದ ತಿಂಗಳ ಮೇಲೆ ಗೌತಮಿಯೂ ಶಾರ್ಙ್ಗರವ ಶಾರದ್ವತರೂ ಹಿಂದಕ್ಕೆ ಬಂದರು. ಅವರಿಂದ ಶಕುಂತಲೆಗೆ ಆದ ಅವಮಾನದ ಕತೆಯನ್ನು ಕೇಳಿ ಆಶ್ರಮವಾಸಿಗಳೆಲ್ಲ ನೊಂದರು. ಶಕುಂತಲೆಯನ್ನು ಮೇನಕೆ ಕರೆದು ಕೊಂಡುಹೋದದ್ದಾಗಲಿ, ಅವಳು ಮರೀಚಿ ಋಷಿಗಳ ಆಶ್ರಮದಲ್ಲಿ ಮಗನನ್ನು ಹೆತ್ತು ಸುಖವಾಗಿದ್ದಾಳೆಂಬುದಾಗಲಿ ಇವರಿಗೆ ತಿಳಿಯಲಿಲ್ಲ. ಕಣ್ವ ಋಷಿಗಳಿಗೆ ತಿಳಿಯಿತೇನೋ; ಅವರು ಆ ಮಾತನ್ನು ಎತ್ತಲಿಲ್ಲ. ಗೌತಮೀದೇವಿ ಒಂದು ಸಲ ಋಷಿಗಳನ್ನು ಕುರಿತು, 'ಮಗು ಸುರಕ್ಷಿತವಾಗಿದ್ದಾಳೆಯೇ? ಹೇಗೋ ವರ್ತಮಾನ ತರಿಸಿಕೊಂಡರೆ ನನಗೆ ಮನಸ್ಸು ಸ್ವಲ್ಪ ಸಮಾಧಾನವಾಗಿರುತ್ತದೆ' ಎಂದಳು. ಋಷಿಗಳು ಅದಕ್ಕೆ 'ಅವಳು ಸೌಖ್ಯವಾಗಿದ್ದಾಳೆ, ಆದರೆ ಈಗಣ ಅನಿಷ್ಟ ಕಳೆಯುವುದಕ್ಕೆ ಸ್ವಲ್ಪ ದಿನ ಬೇಕು, ಆಗ್ಯೆ ಅವಳ ಕ್ಷೇಮಸಮಾಚಾರ ನಮಗೆ ತಾನೇ ತಿಳಿಯುತ್ತದೆ ಎಂದರು. ಉಳಿದ ವಿವರ ಅವರನ್ನು ಇವರು ಯಾರೂ ಕೇಳುವಂತಿಲ್ಲ. ಅವರು ಅದನ್ನು ಇವರೊಂದಿಗೆ ಚರ್ಚೆ ಮಾಡುವವರೂ ಅಲ್ಲ. ಹೀಗೆ ಹತ್ತಿರ ಹತ್ತಿರ ಆರು ವರ್ಷ ಆದ ಮೇಲೆ ಒಂದು ದಿನ ರಾಜಪುರುಷನೊಬ್ಬನು ಚಕ್ರವರ್ತಿಯ ಕಡೆಯಿಂದ ಮರ್ಯಾದೆಗಳ ಸಮೇತ ಬಂದು

ರಾಜನು ಹೇಮಕೂಟದಲ್ಲಿ ಶಕುಂತಲೆಯನ್ನು ಕಂಡ ವಿಷಯವನ್ನೂ ಅಲ್ಲಿಂದ ಅವಳನ್ನೂ ಕುಮಾರ ಭರತನನ್ನೂ ಕರೆತಂದ ವಿಷಯವನ್ನೂ ಕಣ್ವ ಋಷಿಗಳ ಸನ್ನಿಧಿಯಲ್ಲಿ ನಿವೇದಿಸಿದನು. ಆ ದಿನ ಆಶ್ರಮವಾಸಿಗಳ ಆನಂದ ಎಷ್ಟೆಂದು ಹೇಳುವಂತಿಲ್ಲ. ಕುಲಪತಿಗಳು ಐದು ವರ್ಷ ನಕ್ಕಿರಲಿಲ್ಲ; ಅಂದು ನಕ್ಕರು. ಸಂಜೆಯಲ್ಲಿ ಪ್ರಿಯಂವದೆಯೂ ಅನಸೂಯೆಯೂ ಹೋಮಾಂತದಲ್ಲಿ ಹರಸುವುದಕ್ಕೆ ತಮ್ಮ ಮಕ್ಕಳನ್ನು ತಂದಾಗ ಇವರು ಅವನ್ನು ಕೈಯಲ್ಲಿ ಹಿಡಿದುಕೊಂಡು ಮುದ್ದಿಸಿದರು; ಸ್ವಲ್ಪ ನಗಿಸಿದರು. ಆ ಹೊತ್ತೆಲ್ಲಾ ಅವರ ನಡೆನುಡಿಯಲ್ಲಿ ಹೊಸದೊಂದು ಉತ್ಸಾಹ ಕಾಣುತ್ತಿತ್ತು. ಸಂಯಮಿಗಳಾದ ಅವರಿಗೇ ಹಾಗಿತ್ತೆಂದ ಮೇಲೆ ಉಳಿದವರ ಮಾತೇನು? ಎಲ್ಲರಿಗೂ ಮಿತಿಮೀರಿದ ಸಂತೋಷ. ಆಶ್ರಮದ ಮೃಗಪಕ್ಷಿಗಳು ಸುದ್ದಿಯನ್ನು ತಿಳಿದಂತೆಯೇ ಎಂದಿಗಿಂತ ಹೆಚ್ಚಾಗಿ ನಲಿದವು. ಅಂದು ಅವಕ್ಕೆ ಕಾವಲು ಕಡಮೆ; ಇದೇನೋ ಹಬ್ಬವೆಂದು ಅವುಗಳ ಜೀವಕ್ಕೆ ಕಂಡಿರಬೇಕು. ಅಲ್ಲದೆ ಸಾತ್ವಿಕರ ಬಳಿಯ ಮೃಗಗಳೂ ಇನ್ನೊಂದು ಜೀವದ ನೋವು ನಲಿವಿನ ಸುಳುವನ್ನು ಸಹಜವಾಗಿ ಅರಿಯುತ್ತವೆ. ಪೂರ್ವದಿಂದ ಆಶ್ರಮದಲ್ಲಿ ಬೆಳೆದು ಋಷಿಗಳೊಡನೆ ವೃದ್ಧವಾಗಿ ಅವರ ತಪಸ್ಸಿನ ಪ್ರಭಾವದಲ್ಲಿ ಭಾಗಿಗಳಾದುವೆಂಬಂಥ ವೃಕ್ಷಗಳೂ ಅಂದು ಸಂಪ್ರದಾಯದ ಗಾಂಭೀರ್ಯದೊಡನೆ ಹೊಸದೊಂದು ಉಲ್ಲಾಸವನ್ನು ಸೂಚಿಸುವ ಮೃದುವಾದ ಶಬ್ದವನ್ನು ಮಾಡಿದವು. 'ಕುಲಪತಿಗಳ ಸಾಕುಮಗಳು ಸುಖವಾಗಿದ್ದಾಳೆ, ಪತಿಯೊಂದಿಗೆ ಅರಮನೆಯಲ್ಲಿದ್ದಾಳೆ, ರಾಷ್ಟ್ರದ ರಾಣಿಯಾಗಿದ್ದಾಳೆ, ಭವಿಷ್ಯದ ಚಕ್ರವರ್ತಿಯನ್ನು ಸಾಕುತ್ತಿದ್ದಾಳೆ' ಎಂಬ ಭಾವ ಆಶ್ರಮವಾಸಿಗಳ ಹೃದಯದಲ್ಲಿ, ಅಲ್ಲಿಯ ಉಳಿದೆಲ್ಲ ಜೀವನದಲ್ಲಿ ಮಾಲಿನಿಯ ಪ್ರಸನ್ನ ಸಲಿಲಾಶಯಗಳಲ್ಲಿ, ತಪೋವನಕ್ಕೆ ಹರಿತಂದ ಗಾಳಿ ಬೆಳಕಿನಲ್ಲಿ, ಸರ್ವತ್ರ ಪ್ರಕಾಶಗೊಂಡಿತು. ಕುಲಪತಿಗಳು ರಾಜಪುರುಷನನ್ನು ಅಂದು ಅಲ್ಲಿ ನಿಲ್ಲಿಸಿಕೊಂಡಿದ್ದು ಮಾರನೆಯ ದಿನ ತಕ್ಕ ಮರ್ಯಾದೆಯಿಂದ ರಾಜನಿಗೆ ಮಗಳಿಗೆ ಆಶೀರ್ವಾದವನ್ನು ತಿಳಿಸತಕ್ಕದ್ದೆಂದು ಆಜ್ಞಾಪಿಸಿ ಕಳುಹಿಸಿಕೊಟ್ಟರು.

ಶಕುಂತಲೆ ಸುಖವಾಗಿದ್ದಾಳೆ, ಹತ್ತು ದಿನದ ಪ್ರಯಾಣದಲ್ಲಿ ಹಸ್ತಿನಾವತಿಯಲ್ಲಿ ಸುಖವಾಗಿದ್ದಾಳೆ, ಎಂದು ತಿಳಿದ ಒಡನೆಯೇ ಅನಸೂಯೆ ಪ್ರಿಯಂವದೆಯರಿಗೂ ಗೌತಮಿ ದೇವಿಗೂ ಅವಳನ್ನು ನೋಡಬೇಕೆಂದು ಆಸೆಯಾಯಿತು. ಕುಲಪತಿಗಳಾದ ಕಣ್ವರಿಗೂ ಆಸೆಯಾಗಿರಬೇಕು; ಅಂದು ಅವಳೊಡನೆ ಹೋಗಿ ನಿಷ್ಠುರದ ಮಾತನಾಡಿ ಅವಳನ್ನು ಅಲ್ಲಿ ಒಂಟಿಯಾಗಿ ಬಿಟ್ಟುಬಂದ ತರುಣ ಶಾರ್ಙ್ಗರವನಿಗೂ ಶಾರದ್ವತನಿಗೂ ಕುತೂಹಲವಿದ್ದಿರಬಹುದು, ಆದರೆ ಗಂಡಸು ಇಂಥ ಸಂದರ್ಭದಲ್ಲಿ ಆಸೆಯನ್ನು ಬಾಯಲ್ಲಿ ಹೇಳುವುದಿಲ್ಲ, ಹೆಂಗಸರು ಹೇಳದೆ ಇರುವುದಿಲ್ಲ. ಪ್ರಿಯಂವದೆ ಅನಸೂಯೆಗೆ

ಹೇಳಿಕೊಟ್ಟಳು. ಅನಸೂಯೆ ಅಜ್ಜಿಯನ್ನು ಎತ್ತಿ ಕಟ್ಟಿದಳು. ಆ ಮುದುಕಿ ಈ ಮಾತನ್ನೆತ್ತುವುದಕ್ಕೆ ನೆವ ಸಿಕ್ಕಿತಲ್ಲ ಎಂಬ ಸಂತೋಷದಿಂದ ಒಂದು ಸಂಜೆ, ಕುಲಪತಿಗಳನ್ನು ಕುರಿತು 'ನಮ್ಮ ಮಗು ಹೇಗಿದ್ದಾಳೋ ಹೋಗಿ ನೋಡಿಕೊಂಡು ಬರೋಣವೆಂದು ಆಸೆಯಾಗುತ್ತದೆ. ಆಗಬಹುದೆಂದರೆ ಹೋಗಿಬರುತ್ತೇನೆ' ಎಂದಳು. ಋಷಿಗಳು, 'ನೀನು ಹೋಗುವುದಕ್ಕೆ ಏನು ಅಡ್ಡಿ? ಆದರೆ ಮಕ್ಕಳೂ ಹೋಗಬೇಕೆಂದು ಆಶಿಸಬಹುದು. ಅವರನ್ನು ಬಿಟ್ಟು ಹೋಗುವುದು ಆಗುತ್ತದೆಯೇ' ಎಂದರು. ವೃದ್ಧೆ, "ಅವರನ್ನೂ ಕರೆದುಕೊಂಡು ಹೋಗುತ್ತೇನೆ" ಎಂದಳು. ಕುಲಪತಿಗಳು, 'ಮಕ್ಕಳು ಎಳೆಯವು; ಅವರು ತರುಣಿಯರು; ಅಲ್ಲದೆ ರಾಣಿ ರಾಜರ ಸಮಕ್ಷಮಕ್ಕೆ ಕರೆಸಿಕೊಳ್ಳದೆ ತಾವಾಗಿ ಹೋಗುವುದು ಆಶ್ರಮವಾಸಿಗಳಿಗೆ ತಕ್ಕದಲ್ಲ; ನೋಡೋಣ' ಎಂದರು. ಮುದುಕಿಗೂ ಸಖಿಯರಿಗೂ ಆಶಾಭಂಗವಾಯಿತ್ತು. ಆದರೆ ಇದಾದ ಎರಡು ವಾರದಲ್ಲಿ ಶಕುಂತಲೆ ಹಿರಿಯರಿಗೆ ಕಿರಿಯರಿಗೆ ಜಿಂಕೆಗೆ ಹಸುವಿಗೆ ಆಲದಮರಕ್ಕೆ ಮಲ್ಲಿಕಾಲತೆಗೆ ಒಂದು ಸತ್ವಕ್ಕೆ ಬಿಡದಂತೆ ಎಲ್ಲರಿಗೂ ಬಾಗಿನಗಳನ್ನು ಕಳುಹಿಸಿ ತಾನು ಮೂರು ದಿನ ಬಿಟ್ಟು ಆಶ್ರಮಕ್ಕೆ ಬರುವುದಾಗಿ ಹೇಳಿ ಕಳುಹಿಸಿದಳು. ಆ ಬರಬೇಕಾಗಿದ್ದರು ನಿನ್ನೆಯ ದಿನ. ಎಲ್ಲರೂ ಕಾದಿರಲಾಗಿ, ಬರುವುದು ಸ್ವಲ್ಪ ಸಾವಕಾಶವಾಗುವುದೆಂದೂ ಮಾರನೆಯ ದಿನ ಆಶ್ರಮವನ್ನು ಸೇರುವುದಾಗಿಯೂ ತಿಳಿಸುವಂತೆ ರಾಣಿ ಇನ್ನೊಂದು ಬೇಹನ್ನು ಅಟ್ಟಿದಳು. ಅದರಿಂದಲೇ ಇಂದು ಇವರೆಲ್ಲ ಅವಳ ಬರವನ್ನು ನಿರೀಕ್ಷಿಸುತ್ತ ಇಂದೂ ಬರುವಳೋ ಇಲ್ಲವೋ ಎಂದು ಚಿಂತೆ ಮಾಡುತ್ತಿದ್ದರು.



ಶಕುಂತಲೆಯನ್ನು ನೋಡಬೇಕೆಂದು ಸಖಿಯರಿಗೂ ಗೌತಮೀದೇವಿಗೂ ಆಸೆಯಾದಂತೆ ಶಕುಂತಲೆಗೆ ತಂದೆ ಅಜ್ಜಿ ಸಖಿಯರನ್ನೂ ಮಾಲಿನೀ ತೀರದ ಆ ಆಶ್ರಮವನ್ನೂ ನೋಡಬೇಕೆಂದು ತೀವ್ರವಾದ ಆಸೆ. ಒಲಿದ ಗಂಡನಿಂದ ನಿರಾಕೃತಳಾಗಿ ಹೋಗಿ ಹೇಮಕೂಟದಲ್ಲಿ ಆರು ವರ್ಷವನ್ನು ಕಳೆದು ಹದಿನೆಂಟು ವರ್ಷದ ತರುಣಿ ಮೂವತ್ತೈದು ವರ್ಷದ ಹೆಂಗಸಂತೆ ಜೀವನದ ಭಾರದಿಂದ ತಗ್ಗಿಹೋಗಿದ್ದಳು. ಪತಿ ಬಂದು ತಪ್ಪನ್ನೊಪ್ಪಿಕೊಂಡಾಗ ಅವಳ ಸ್ವಭಾವದಲ್ಲಿ ರೋಷಕ್ಕೆ ಸ್ಥಳವಿಲ್ಲವಾಗಿ ಹೋಗಿತ್ತು. ಆಮೇಲೆ ಮಗನನ್ನು ಕರೆದುಕೊಂಡು ಹಸ್ತಿನಾವತಿಯ ರಾಣಿಯೆಂದು ಬಂದಾಗಲಾಗಲಿ ಅವಳ ಮನಸ್ಸು ಉತ್ಸಾಹದಿಂದ ಉಬ್ಬಲಿಲ್ಲ. ಒಂದು ಸ್ಥಿತಿ ಮೀರಿದನಂತರ ಮನಸ್ಸು ಎಂಥ ಸಂತೋಷದಲ್ಲೂ ಉಬ್ಬುವುದನ್ನು ಮರೆಯುತ್ತದೆ. ಅವಳಿಗೆ ಜೀವನದಲ್ಲಿ ಕಲ್ಯಾಣ ಮರಳಿ ಮೂಡಿದ ಕ್ಷಣದಲ್ಲಿ ತನಗೆ ಸುಖ ಬಂದೀತೆಂಬ ಭಾವನೆಗಿಂತ, "ತನ್ನ ತಂದೆಗೆ ಇನ್ನು ಚಿಂತೆ ಇಲ್ಲ, ತನ್ನ ಸಖಿಯರಿಗೆ ಇನ್ನು ಖೇದವಿಲ್ಲ, ತನ್ನ ಅಜ್ಜಿ ಇನ್ನು ಯೋಚಿಸ ಬೇಕಾದುದಿಲ್ಲ, ತನ್ನ ಮಗನಿಗೆ ಹುಟ್ಟಿನಿಂದ

ಸಲ್ಲಬೇಕಾದ ಪದವಿ ದೊರೆಯುತ್ತದೆ, ತನ್ನ ನಡತೆಯಾವುದರಿಂದಲಾದರೂ ಅದು ಅವನಿಗೆ ತಪ್ಪಿ ಹೋಗಬೇಕಾದ ಪ್ರಮೇಯವಿಲ್ಲ" ಎನ್ನುವ ಭಾವವೇ ಮುಖ್ಯವಾಗಿತ್ತು. ಆದ್ದರಿಂದ ಅವಳು ಸಾಧ್ಯವಾದಷ್ಟು ಬೇಗ ತನ್ನವರನ್ನು ನೋಡಿ ಅವರ ಕಷ್ಟಸುಖಗಳನ್ನು ವಿಚಾರಿಸಿ ತನ್ನ ಸೌಖ್ಯದ ಮಾತನ್ನು ಅವರಿಗೆ ಪ್ರತ್ಯಕ್ಷವಾಗಿ ಹೇಳಬೇಕೆಂದು ಕುತೂಹಲಪಟ್ಟಳು. ಊರಿಗೆ ಬಂದೊಡನೆಯೇ ಆಶ್ರಮಕ್ಕೆ ಹೋಗುವ ಮಾತನ್ನೆತ್ತಬೇಕೆಂದೇ ಮನಸ್ಸಿನ ಪ್ರವೃತ್ತಿ. ಆದರೆ ಇನ್ನೂ ಹೊಸದು, ತನ್ನವರನ್ನು ನೋಡಬೇಕೆಂಬ ಮಾತನ್ನು ಅಷ್ಟು ಬೇಗ ತೆಗೆಯುವುದಕ್ಕೆ ಸಂಕೋಚವಾಯಿತು; ಸುಮ್ಮನಿದ್ದಳು. ತಾವು ಸುಖವಾಗಿ ಬಂದ ಮಾತನ್ನು ಹೇಳಿ ಕಳುಹಿಸಿದಾಗ ತಾನೂ ಸಖಿಯರಿಗೆ ಹಿರಿಯರಿಗೆ ಒಂದೊಂದು ಮಾತನ್ನು ಹೇಳಿ ಕಳುಹಿಸಿದ್ದಳು. ರಾಜಪುರುಷರು ಹಿಂದಕ್ಕೆ ಬಂದಾಗ ಅವರಿಂದ ಆಶ್ರಮದ ವೃತ್ತಾಂತವನ್ನು ತಿಳಿದುಕೊಂಡಳು. ಅನಸೂಯೆ ಶಾರದ್ವತನನ್ನೂ ಪ್ರಿಯಂವದೆ ಶಾರ್ಙ್ಗರವನನ್ನೂ ಮದುವೆಯಾಗಿದ್ದರೆಂದು ಅವರ ಮಾತಿನಿಂದ ಅವಳು ಊಹಿಸಿದಳು. ಇದಾದ ಬಹು ದಿನದ ಮೇಲೆ ಅವಳು ತನ್ನ ಅರಸರಲ್ಲಿ ಕಣ್ವರ ಆಶ್ರಮಕ್ಕೆ ಹೋಗುವ ಮಾತನ್ನೆತ್ತುವ ಧೈರ್ಯಮಾಡಿದಳು. ರಾಜನು "ಅಗತ್ಯ ಹೋಗಿಬರಬೇಕಾದದ್ದೇ, ಆದರೆ ಸದ್ಯದಲ್ಲಿ ನಾನು ಅಲ್ಲಿ ಬರುವುದು ಸರಿಯಲ್ಲ. ಹೋದಸಲ ಆ ಪುಣ್ಯಭೂಮಿಯಲ್ಲಿ ಕಾಲಿಟ್ಟಾಗ ನಾನು ಕುಲಪತಿಗಳಲ್ಲಿ ಅಪರಾಧ ಮಾಡಿದೆ. ಈಗಲೇ ಅವರನ್ನು ನೋಡುವುದಕ್ಕೆ ಮನಸ್ಸಿನಲ್ಲಿ ಧೈರ್ಯವಿಲ್ಲ. ನೀನು ಹೋಗಿ ಬರಬಹುದು" ಎಂದನು. ಶಕುಂತಲೆ ಸ್ವಲ್ಪ ನಗುತ್ತಾ, "ಆಗ ನೀನು ಮಾಡಿದ ಅಪರಾಧ ತಂದೆಗೆ ಈಗ ಪ್ರಿಯವಾಗಿ ಪರಿಣಮಿಸಿದೆ. ಅಲ್ಲದೆ ಅವರು ಅಂತಹ ಕ್ರೋಧವನ್ನು ಮನಸ್ಸಿನಲ್ಲಿಟ್ಟಾರೆ?" ಎಂದಳು. ದುಷ್ಯಂತನು, "ನಾನು ಸಂಕೋಚಪಡುವುದಕ್ಕೆ ಅವರು ಮನಸ್ಸಿನಲ್ಲಿ ಕ್ರೋಧವಿಡಬೇಕಾದದ್ದಿಲ್ಲ, ನನ್ನ ತಪ್ಪಿನ ಭಾವ ಇನ್ನೂ ಮನಸ್ಸಿನಿಂದ ಅಳಿಸಿಲ್ಲ. ನಾನು ನಿನ್ನನ್ನು ಕೆಲವು ಕಾಲ ಸರಿಯಾಗಿ ನೋಡಿಕೊಂಡ ಮೇಲೆ ಅವರಲ್ಲಿ ಹೋಗುವುದಕ್ಕೆ ಧೈರ್ಯ ಬರುತ್ತದೆ" ಎಂದನು. ಶಕುಂತಲೆ, "ನಾನೂ ಅದುವರೆಗೆ ಹೋಗುವುದಿಲ್ಲ, ತಂದೆ ಹೇಳಿದಂತೆಯೇ ಆಗಲಿ" ಎಂದಳು. ತಂದೆ ಹೇಳಿದ್ದೇನು ಎಂದು ರಾಜನಿಗೆ ತಿಳಿಯದು. ಏನು ಹೇಳಿದರು ಎಂದು ಅವನು ಕೇಳಿದನು. "ಏಳು ವರ್ಷಗಳ ಹಿಂದೆ ನಾನು ಇತ್ತ ಹೊರಟವೇಳೆ ಈ ಆಶ್ರಮಕ್ಕೆ ಪುನಃ ಬರುವುದು ಯಾವಾಗಲೋ ಎಂದುದಕ್ಕೆ, ನಿನ್ನ ಯಜಮಾನನೊಂದಿಗೆ ತಪಸ್ಸಿಗೆ ಹೊರಟಾಗ ಎಂದು ಅಪ್ಪಣೆ ಮಾಡಿದರು" ಎಂದು ಶಕುಂತಲೆ ಹೇಳಿದಳು. ಕಣ್ವರು ಆ ಸಂದರ್ಭದಲ್ಲಿ "ನಿನ್ನ ಮಗನಿಗೆ ಪಟ್ಟ ಕಟ್ಟಿ ನಿನ್ನ ಯಜಮಾನನೊಂದಿಗೆ" ಎಂದು ಹೇಳಿದ್ದರು. 'ಮಗನಿಗೆ ಪಟ್ಟಕಟ್ಟಿ' ಎಂದ ಮಾತನ್ನು ಶಕುಂತಲೆ ಈಗ ರಾಜನಿಗೆ ತಿಳಿಸಲಿಲ್ಲ. ಬಾಳುವೆ ಅವಳಿಗೆ ಎಚ್ಚರಿಕೆಯನ್ನು



ಕಲಿಸಿತ್ತು. ರಾಜನು ತನಗೆ ಒಲಿದಿದ್ದಾನೆ; ಮಗನಿಗೆ ಅನ್ಯಾಯ ಮಾಡಲಾರನು. ಆದರೆ ಯಾವ ವಿಷಯದಲ್ಲೂ ಅತಿ ನಿಶ್ಚಯ ಬೇಡ. ಕಣ್ವರಾಡಿದರೆಂಬ ಮಾತಿಗೆ ರಾಜನು "ಅದು ಆಶ್ರಯದಲ್ಲೇ ನಿಲ್ಲುವುದಕ್ಕೆ ಹೋಗುವುದು ಯಾವಾಗ ಎಂಬ ಅರ್ಥದಲ್ಲಿ ಹೇಳಿದ ಮಾತು. ಹೋಗಿ ನೋಡಿಕೊಂಡು ಬರುವುದಕ್ಕೆ ಆ ಮಾತು ಅನ್ವಯಿಸುವುದಿಲ್ಲ, ಹೋಗಿ ಅವರ ಮನಸ್ಸನ್ನು ಸಮಾಧಾನಿಸು" ಎಂದನು. ಶಕುಂತಲೆ, "ನಾನು ನಿನ್ನ ಪಕ್ಷದ ರಾಯಭಾರಿಯೇ" ಎಂದಳು. ರಾಜನು, ನೀನು ಹಾಸ್ಯದಲ್ಲಿ ಕೇಳುತ್ತಿದೀಯೆ. ಆದರೆ ಅದು ನಿಜವಾದ ಮಾತು" ಎಂದನು. ಇಷ್ಟೆಲ್ಲ ಆದ ಮೇಲೆ ರಾಣಿ ತಂದೆಯ ಆಶ್ರಮಕ್ಕೆ ತಾನು ಬರಲುಳ್ಳವಳೆಂದು ವರ್ತಮಾನ ಕಳುಹಿಸಿದಳು.

ಹೊರಡುವುದಕ್ಕೆ ಒಂದು ದಿನ ಗೊತ್ತಾಯಿತು. ಅಂದಿನ ಬೆಳಿಗ್ಗೆ ಶಕುಂತಲೆ ದೇವರ ಪೂಜೆ ಮುಗಿಸಿ ಸಪತ್ನಿಯಾದ ಹಂಸಪದಿಕೆಗೆ ತಾನು ಹೋಗಿಬರುವ ಮಾತನ್ನು ತಿಳಿಸಲು ಹೋದಳು. ಹಂಸಪದಿಕೆ ಶಕುಂತಲೆಗಿಂತ ಮೊದಲು ನಾಲ್ಕು ವರುಷದಿಂದ ರಾಜನ ಮನಸ್ಸನ್ನು ಒಲಿಸಿಕೊಂಡಿದ್ದ ರಾಣಿ, ಗಾಂಧಾರ ರಾಜನ ಪುತ್ರಿ, ಚೆಲುವೆ, ತೇಜಸ್ವಿನಿ. ಆ ಚೆಲುವೂ ತೇಜಸ್ಸು ನಾಲ್ಕು ವರ್ಷ ಅರಮನೆಯನ್ನು ಆಳಿದವು. ಆಮೇಲೆ ಒಂದು ದಿನ ಬೇಟೆಗೆ ಹೋಗಿ ಹಿಂದಕ್ಕೆ ಬಂದ ರಾಜನು ಅನ್ಯ ಮನಸ್ಕನಾಗಿ ಇನಿಯಳ ವಿಷಯದಲ್ಲಿ ಅಶ್ರದ್ಧೆಯಿಂದ ನಡೆದುಕೊಂಡನು. ಇದು ಆ ಕಾಲದಲ್ಲಿ ರಾಣಿಯರಿಗೆ ಸಾಮಾನ್ಯವಾದ ಅನುಭವ. ರಾಜನು ಯಾರನ್ನಾದರೂ ನೋಡಿದನೋ ಎಂದು ಅವಳು ಸಂದೇಹಪಟ್ಟಳು; ಅವಳ ಜೊತೆಗೆ ಹೋಗಿದ್ದ ಜನರನ್ನು ವಿಚಾರಿಸಿದಳು. ಅವಳ ಸಂದೇಹ ನಿಜವಾಗಿತ್ತು. ಅಶ್ರದ್ಧೆಯಿಂದ ರಾಜನು ಏನೋ ಒಂದು ರೀತಿಯಲ್ಲಿ ಮಾರ್ಪಟ್ಟನು; ರಾಣಿಯ ವಿಷಯದಲ್ಲಿ ಮರಳಿ ಪ್ರೇಮವನ್ನು ತೋರಲಿಲ್ಲ. ಕೆಲವು ಕಾಲದ ಮೇಲೆ ಗರ್ಭಿಣಿಯಾದ ಒಬ್ಬ ಹೆಣ್ಣು ಬಂದು ರಾಜನು ತನ್ನನ್ನು ಮದುವೆಯಾದನೆಂದು ಹೇಳಿದ್ದೂ ಆಮೇಲಣ ಚರಿತ್ರೆಯೂ ಹಂಸಪದಿಕೆಯ ಬಾಳನ್ನು ಇನ್ನಷ್ಟು ಬರಿದಾಗಿ ಮಾಡಿದವು ಹೊರತು ಮತ್ತೇನೂ ಆಗಲಿಲ್ಲ. ಹೀಗೆ ಕೆಲವು ವರ್ಷಗಳಾದ ಮೇಲೆ ಆ ನಿರಾಕೃತಳಾಗಿ ಹೋಗಿದ್ದ ಶಕುಂತಳೆ ರಾಣಿಯೆಂದು ಬಂದೇ ಬಂದಳು; ಅವಳ ಮಗನೂ ಜೊತೆಗೆ ಬಂದನು. ಹಂಸಪದಿಕೆ ಇನ್ನು ತಾನು ಜೀವನದಲ್ಲಿ ನಿರೀಕ್ಷಿಸಬೇಕಾದ ಸುಖವೇನೂ ಇಲ್ಲವೆಂದು ಮನಸ್ಸು ಮಾಡಿಕೊಂಡಳು. ಶಕುಂತಲೆ ತನ್ನನ್ನು ಬಹಳ ತಿರಸ್ಕಾರದಿಂದ ಕಾಣುವಳೆಂದೇ ಅವಳ ನಿರೀಕ್ಷೆ. ಆದರೆ ಶಕುಂತಲೆ ಬಂದ ಮಾರನೆಯ ದಿನವೇ ಅವಳಿಗೆ ಜೀವನದಲ್ಲಿ ಮರಳಿ ಒಂದು ಆನಂದ ತಲೆದೋರಿತು. ಶಕುಂತಲೆ ಮಗನನ್ನು ಹೆತ್ತ ಮುಖ್ಯ ರಾಣಿ ಎಂದು ಅರಮನೆಯಲ್ಲಿ ಎಲ್ಲರಿಗೂ ಆಜ್ಞೆಯಾಗಿತ್ತು. ನ್ಯಾಯವಾಗಿ ಉಳಿದ ರಾಣಿಯರು ಅವಳಿಗೆ ಮರ್ಯಾದೆ

ತೋರಬೇಕಾದದ್ದು ಸಂಪ್ರದಾಯ. ಆದರೂ ಶಕುಂತಲೆ ತಾನೇ ಇವರ ಬಳಿಗೆ ಬಂದಳು. ಬಂದು ಹಂಸಪದಿಕೆಗೆ ನಮಸ್ಕರಿಸಿ, "ನೀವು ನನಗೆ ಹಿರಿಯರು, ನಾನು ಅರಿಯದ ಹುಡುಗಿ, ನನ್ನನ್ನು ತಂಗಿಯಂತೆ ನೋಡಿಕೊಂಡು ತಿಳಿಯದ್ದನ್ನು ಹೇಳಿಕೊಡಬೇಕು." ಎಂದು ಕೇಳಿದಳು. ಇವಳ ವಿನಯವನ್ನು ನೋಡಿ ಹಂಸಪದಿಕೆಗೆ ಆಶ್ಚರ್ಯವಾಯಿತು. ಅವಳು ಶಕುಂತಲೆಯನ್ನು ಹತ್ತಿರಕ್ಕೆ ಕರೆದು ಅಪ್ಪಿಕೊಂಡು,"ಇದು ಏನು ತಂಗಿ, ನೀನು ಹೇಳುವ ಮಾತು? ರಾಜನು ನಿನ್ನ ಆಜ್ಞೆಯಂತೆ ನಡೆಯುತ್ತಾನೆ. ನಾವು ನಿನ್ನನ್ನು ಆಶ್ರಯಿಸಬೇಕು ಹೊರತು ನೀನು ನಮ್ಮನ್ನು ಕೇಳಬೇಕಾದದ್ದೇನಿದೆ?" ಎಂದಳು. ಶಕುಂತಲೆ, "ತನಗೆ ರಾಜನ ಒಲುಮೆ ಬಹಳ ಬೇಕು, ಆದರೆ ಹಾಗೆಯೇ ತನ್ನ ಅಕ್ಕಂದಿರ ವಿಶ್ವಾಸವೂ ಇರಬೇಕು" ಎಂದು ಹೇಳಿ, ಅವಳ ಮನಸ್ಸನ್ನು ಒಲಿಸಿಕೊಂಡಳು. ಅಂದಿನಿಂದ ಇವರ ಸ್ನೇಹ ಒಂದೇ ರೀತಿ ಬೆಳೆದಿತ್ತು. ತಂದೆಯ ಆಶ್ರಮಕ್ಕೆ ಹೊರಡುವ ದಿನ ಹೋಗಿಬರುವೆನೆಂದು ಹೇಳಲು ಶಕುಂತಲೆ ಹಂಸಪದಿಕೆಯ ಬಳಿ ಹೋದಾಗ ಹಂಸಪದಿಕೆ, "ಅಲ್ಲಿ ಎಷ್ಟು ದಿನ ಇರುತ್ತಿಯೇ? ಎಂದು ಬರುತ್ತಿಯೇ? ಅಲ್ಲಿ ಯಾರು ಯಾರು ಇದ್ದಾರೆ? ಆಶ್ರಮ ಹೇಗಿದೆ?" ಎಂದು ಮೊದಲಾಗಿ ಕೇಳಿದಳು. ಇವರ ಪ್ರಶ್ನೆಗಳಿಂದ ಶಕುಂತಲೆಗೆ ಅವಳಿಗೂ ಆಶ್ರಮಕ್ಕೆ ಬರುವ ಅಭಿಲಾಷೆಯಿದೆಯೆಂದು ಕಂಡಿತು. ಹಂಸಪದಿಕೆಯನ್ನು ಅವಳು, "ನೀವು ಬರುತ್ತೀರಾ ಅಕ್ಕಾ" ಎಂದು ಕೇಳಿದಳು. ಹಂಸಪದಿಕೆ, ನೀನು ನಿಮ್ಮ ಜನರಲ್ಲಿ ಹೋಗಿ ಬರಬೇಕಾದರೆ ನಾನೇಕೆ ಮಧ್ಯೆ ಬಂದು ತೊಂದರೆ ಕೊಡಬೇಕು, ಎಂದಳು. ಶಕುಂತಲೆ ಅವಳನ್ನು ಬರಬೇಕೆಂದು ಬಲವಂತಮಾಡಿ ಒಪ್ಪಿಸಿ ರಾಜನನ್ನೂ ರಾಜಮಾತೆಯನ್ನೂ ಕೇಳಿ ತಾವಿಬ್ಬರೂ ಹೋಗುವುದಕ್ಕೆ ಅನುಮತಿಯನ್ನು ತೆಗೆದುಕೊಂಡಳು. ಅಂದೇ ಹೊರಡುವುದಕ್ಕೆ ಹಂಸಪದಿಕೆ ಸಿದ್ಧಳಾಗಿರಲಿಲ್ಲವಾದ್ದರಿಂದ ಮಾರನೆಯ ದಿನ ಹೊರಡುವುದಾಗಿ ಗೊತ್ತು ಮಾಡಿದಳು. ಇದರಿಂದಲೇ ಪ್ರಯಾಣ ಒಂದು ದಿನ ಮುಂದೆ ಬಿದ್ದದ್ದು, ಶಕುಂತಲೆ ತಾನು ಬರುವುದು ಒಂದು ದಿನ ಸಾವಕಾಶವಾಗುತ್ತದೆಂದು ಆಶ್ರಮಕ್ಕೆ ಹೇಳಿಕಳುಹಿಸಿದ್ದದ್ದು.

ಹಸ್ತಿನಾವತಿಯಿಂದ ಕಣ್ವರ ಆಶ್ರಮಕ್ಕೆ ಸಾಮಾನ್ಯವಾಗಿ ಹತ್ತು ದಿನದ ನಡಿಗೆ. ಆತುರದಿಂದ ವೇಗವಾಗಿ ಹೋಗುವ ಜನರಿಗೆ ಒಂದು ವಾರದ ಪ್ರಯಾಣ. ವಾಹನಗಳ ಮೇಲೆ ಹೋಗುವ ಪುಣ್ಯವಂತರಿಗೆ ಮೂರು ಅಥವಾ ನಾಲ್ಕು ದಿನದ ಓಟ. ರಾಜನು ರಾಣಿಯರಿಬ್ಬರನ್ನೂ ಕಳುಹಿಸಬೇಕಾದರೆ ತಕ್ಕಷ್ಟು ಪರಿವಾರವನ್ನು ಹಿಂದೆ ಕಳುಹಿಸುವ ಏರ್ಪಾಡು ಮಾಡಿದನು ಮತ್ತು ಮಾಢವ್ಯನೂ ಅವರ ಜೊತೆಗೆ ಹೋಗುವುದೆಂದು ಮೋದಕಪ್ರಿಯನಾದ ಆ ವಯಸ್ಕನಿಗೆ ತಿಳಿಸಿದನು. ಶಕುಂತಲೆಯ ನಿರಾಕರಣವಾದಂದಿನಿಂದ ಮಾಢವ್ಯನಿಗೆ ಒಂದು ದಿನವಾದರೂ ಸರಿಯಾದ ಊಟ ದೊರೆತ

ಜ್ಞಾಪಕವಿಲ್ಲ. ಊಟ ಇದ್ದರೂ ಜ್ಞಾಪಕ ಕಷ್ಟ, ಇಲ್ಲಿ ಊಟವೂ ಇದ್ದಿರಲಿಲ್ಲ. ಅವಳು ಬಂದಮೇಲೆ ಅವನಿಗೆ ಬೇಸಗೆಯಲ್ಲಿ ಕಾದ ನೆಲಕ್ಕೆ ಮಳೆ ಬಂದಂತಾಗಿತ್ತು. ದ್ವಾದಶ ವರ್ಷಗಳ ಕ್ಷಾಮದ ಯೋಗವೆಂದು ಕಂಡಿದ್ದ ಸಂದರ್ಭ ಅವಳು ಬಂದ ದಿನ ಇದ್ದಕಿದ್ದ ಹಾಗೆ ಕೊನೆಗಂಡಿತು. ರಾಜನು ದಿನವೂ, ಮಾಢವ್ಯನಿಗೆ ಈ ತಿಂಡಿ ಮಾಡಿ ಕೊಡಬಾರದೆ, ಆ ತಿಂಡಿ ಮಾಡಿಕೊಡಬಾರದೆ ಎಂದು ಕೇಳುವುದಕ್ಕೆ ಆರಂಭಮಾಡಿದ್ದನು. ಇದರ ಮೇಲೆ ಶಕುಂತಲೆಯೂ ಹಿರಿಯ ರಾಣಿಯೂ ಆಶ್ರಮಕ್ಕೆ ಹೋಗಬೇಕೆಂದಾಗ ಇವನು ಅವರ ಜೊತೆಗೆ ಹೋಗತಕ್ಕದೆಂದು ಅಪ್ಪಣೆಯಾಗಲು ಮಾಢವ್ಯನ ಆನಂದಕ್ಕೆ ಮೊದಲು ಕೊನೆ ಇಲ್ಲವಾಯಿತು. ತಾನು ರಾಜನಿಗೆ ಪ್ರತಿನಿಧಿಯಾಗಿ ಹೋಗುವೆನೆನ್ನುವುದು ಇದಕ್ಕೆ ಒಂದು ಕಾರಣ. ಹಿಂದಿನ ಸಲ ಅಲ್ಲಿ ಹೋಗಿದ್ದಾಗ ಯಾವನೋ ಯಃಕಶ್ಚಿತನಂತೆ ಯಾರನ್ನೂ ಮಾತನಾಡಿಸದೆ ಕುಲಪತಿಗಳಿಗೆ ದರ್ಶನವನ್ನೂ ಕೊಡದೆ ಹೊರಟು ಬಂದದ್ದಾಯಿತು. ಈ ಸಲ ಹೋದರೆ ತಾನು ಎಂತಹ ಪ್ರಾಜ್ಞನೆಂದೂ ರಾಜಪರಿವಾರದಲ್ಲಿ ತನ್ನ ಸ್ಥಾನ ಎಷ್ಟು ಪ್ರಮುಖವಾದದ್ದೆಂದೂ ತೋರಿಸುವುದಕ್ಕೆ ಒಂದು ಅವಕಾಶವಾಯಿತೆನ್ನುವುದು ಇನ್ನೊಂದು ಕಾರಣ. ಇದರ ಮೇಲೆ ಭರತ ಕುಮಾರನೂ ಜೊತೆಗಿರುವುದರಿಂದ ಬೇಕಾದಷ್ಟು ಆಟಕ್ಕೆ ಅವಕಾಶ. ಮಾಢವ್ಯನು ಒಂದು ರಥದಲ್ಲಿ ಕುಳಿತನು. ರಾಣಿಯರು ಒಂದು ರಥದಲ್ಲಿ ಕುಳಿತರು. ಕೆಲವರು ಮಾತ್ರ ಮೈಗಾವಲ ಜನರೊಡನೆ ಇವರು ಹಸ್ತಿನಾವತಿಯಿಂದ ಪ್ರಯಾಣ ಬೆಳೆಸಿದರು.

ಹೊರಡುವಾಗ ಕುಮಾರನು ರಾಣಿಯರ ರಥದಲ್ಲಿ ಕುಳಿತನು. ಅವನು ಅಲ್ಲಿ ಕೂಡುವ ಮೊದಲು ಮಾಢವ್ಯನು ಹತ್ತಿರ ಬಂದು ಅವನ ಕಿವಿಯಲ್ಲಿ, ಸ್ವಲ್ಪ ದೂರ ಹೋದಮೇಲೆ ನನ್ನ ರಥಕ್ಕೆ ಬಾ ಆಡೋಣ, ಎಂದನು. ಭರತನು ಉಂ ಎಂದನು. ಪ್ರಯಾಣ ಎರಡು ಗಳಿಗೆ ಬೆಳೆದ ಮೇಲೆ ಅವನಿಗೆ ಹೆಂಗಸರ ತೇರಿನಲ್ಲಿ ಕುಳಿತು ಬೇಸರವಾಯಿತು. ನಾನು ಮಾಢವ್ಯನ ರಥಕ್ಕೆ ಹೋಗುತ್ತೇನೆಂದನು. ತೇರುಗಳನ್ನು ನಿಲ್ಲಿಸಿ ಇವನನ್ನು ಆ ರಥದಲ್ಲಿ ಕುಳ್ಳಿರಿಸಿದನು. ರಾಣಿಯರಿಗೂ ಇದರಿಂದ ಅನುಕೂಲವೇ. ಶಕುಂತಲೆಗೆ ಮಗನು ಹತ್ತಿರ ಇರಬೇಕೆಂದೇ ಆಸೆ. ಆದರೆ ಅವನಿದ್ದರೆ ತಾನು ಅಕ್ಕನನ್ನು ವಿಚಾರಿಸಿಕೊಳ್ಳುವುದು ಸಾಧ್ಯವಿಲ್ಲ. ಈಗ ತನ್ನ ತೇರಿನಿಂದ ಇನ್ನೊಂದರಲ್ಲಿ ಕುಳಿತಿರುವ ಮಗನನ್ನು ಮರಳಿ ಮರಳಿ ತಾಯ ಮಮತೆಯಿಂದ ನೋಡುತ್ತಾ, ಇತ್ತ ಹಿರಿಯ ರಾಣಿಯೊಂದಿಗೆ ಆ ಮಾತು ಈ ಮಾತು ಆಡುತ್ತಾ ಇದ್ದಳು. ಆ ತೇರಿನಲ್ಲಿ ಮಾಢವ್ಯನು ಎಲ್ಲಾ ಜಾತಿಯ ಮೃಗ ಪಕ್ಷಿಗಳ ಕೂಗನ್ನು ಅನುಕರಿಸಿ ತೋರಿಸುತ್ತಿದ್ದನು. ಅದರ ಹಿಂದೆ ಏಳು ದಿನ ಅವನಿಗೂ ಭರತನಿಗೂ ಅದೇ ಕೆಲಸ. ಮಾಢವ್ಯನು ಈ ಅನುಕರಣದಲ್ಲಿ ಬಹಳ ಚತುರನು. ಅವನು ಸಿಂಹದ ಹಾಗೆ ಶಬ್ದ

ಮಾಡಿದಾಗ ಕುದುರೆಗಳು ಹೆದರಿ ವೇಗವನ್ನು ಹೆಚ್ಚಿಸಿದವು. ಹೀಗೆಯೇ ಅವನು ಕಾಗೆ, ಕೋಗಿಲೆ, ಗೊರವಂಕ, ಹುಲಿ, ನರಿ, ತೋಳಗಳ ಕೂಗನ್ನು ಅನುಕರಿಸಿ ಭರತಕುಮಾರನನ್ನು ಮೆಚ್ಚಿಸಿದನು. ಭರತನು ಕತ್ತೆಯಹಾಗೆ ಕೂಗು ಎಂದನು. ದಿನವೂ ಅದೇ ಕೆಲಸವಾಗಿ ಕೇಳಿದರೆಯೇ ಮಾಢವ್ಯನು ಇದನ್ನು ಮಾಡಬೇಕಾದರೆ, ಪ್ರಯಾಣದಲ್ಲಿ ಮಧ್ಯೆ ಇವನು ತೇರಿನಲ್ಲಿ ಕತ್ತೆಯ ಹಾಗೆ ಕಿರುಚಲು ಆರಂಭಿಸಿದರೆ ಜನರು ಇವನನ್ನು ಏನೆನ್ನಬೇಕು? ಅವನು ಈಗ ಬೇಡ ರಾಣಿಯರು ಇದ್ದಾರೆ ಎಂದನು. ಭರತನು "ತೇರನ್ನು ಮುಂದೆ ಬಿಡಹೇಳು; ಆಮೇಲೆ ಕೂಗು. ನೀನು ಇನ್ನೆಲ್ಲಾ ಕೂಗುವುದಕ್ಕಿಂತ ಕತ್ತೆಯಹಾಗೆ ಕೂಗುವುದು ಚೆನ್ನಾಗಿರುತ್ತದೆ" ಎಂದನು. ಮಾಢವ್ಯನಿಗೆ ಆ ಕ್ಷಣ ಅಸಮಧಾನವಾಯಿತು. ಆದರೆ ಒಡನೆಯೇ ಇದು ಹಿರಿಯರು ಹೇಳಬಹುದಾದ ಕುಹಕದ ಮಾತಲ್ಲ. ಹಸುಳೆಯ ಅಚ್ಚಮನಸ್ಸಿನ ತಿಳಿಮಾತೆಂದು ತಿಳಿಯಿತು. ತೇರನ್ನು ಸ್ವಲ್ಪ ಮುಂದಕ್ಕೆ ಬಿಡಹೇಳಿ ಮೆಲ್ಲನೆ ಕತ್ತೆಯ ಹಾಗೆ ಕಿರಿಚಿ ಅವನು ಕುಮಾರನ ಆಸೆಯನ್ನು ಸಲ್ಲಿಸಿದನು. ಹೀಗೆ ಅವರು ದಾರಿಯ ಬೇಸರವನ್ನರಿಯದೆ ಮುಂದುವರಿದರು.

ಮಾರನೆಯ ದಿನ ಸಂಜೆ ಇವರು ಆಶ್ರಮದ ಹತ್ತಿರ ಹತ್ತಿರ ಬಂದರು. ಆಶ್ರಮ ಹತ್ತಿರವಾಯಿತೆಂದೊಡನೆ ಕುಮಾರನು ತೇರನ್ನು ಬೇಗನೆ ಬಿಡೆಂದು ಸೂತನಿಗೆ ಹೇಳಿದನು. ನಾವು ಮುಂದಾಗಿ ಹೋಗಿ ಅಮ್ಮಾಜಿ ಬರುತ್ತಿದ್ದಾರೆ ಎಂದು ತಿಳಿಸೋಣ ಎನ್ನುವುದು ಬಾಯಲ್ಲಿ ಹೇಳಿದ ಕಾರಣ. ನಿಜವಾದ ಕಾರಣ, ಮುಂದಾಗಿಯೇ ಆಶ್ರಮವನ್ನು ನೋಡಬೇಕು, ಅಲ್ಲಿ ಎಲ್ಲರನ್ನೂ ಮಾತನಾಡಿಸಿ ಗುರುತು ಮಾಡಿಕೊಳ್ಳಬೇಕು ಎನ್ನುವುದು. ಆ ತೇರಿನ ಸೂತನೂ ತರುಣನು. ಇನ್ನೊಂದು ತೇರಿಗಿಂತ ಮುಂದಾಗಿ ಹೋಗಬೇಕೆಂದು ಅವನಿಗೂ ಆಸೆ. ಅಂತೂ ಇವರ ತೇರು ಬರಬರುತ್ತಾ ಅರ್ಧ ಹರಿದಾರಿಯಷ್ಟು ಮುಂದಾಯಿತು. ಆದ್ದರಿಂದ ಅನಸೂಯೆ ಪ್ರಿಯಂವದೆಯರು ರಾಣಿಯನ್ನು ಎದುರುಗೊಳ್ಳುವುದಕ್ಕೆ ಮುಂದಾಗಿ ಬರುತ್ತಿರುವಲ್ಲಿ, ಇವರ ತೇರು ವೇಗವಾಗಿ ಅವರೆದುರಿಗೆ ಬಂದಿತು. ಸಖಿಯರು ದೂರದಿಂದ ತೇರನ್ನು ನೋಡಿದರು. ಅದರಲ್ಲಿ ಮಾಢವ್ಯನು ಮಾತ್ರ ಕಂಡುದರಿಂದ ಯಾರೋ ಗಂಡಸರ ತೇರು ಎಂದು ಅದಕ್ಕೆ ದಾರಿ ಬಿಟ್ಟು ಒಂದು ಪಕ್ಕಕ್ಕೆ ನಿಂತರು. ಕುಮಾರನು ಮಾಢವ್ಯನನ್ನು ಇವರು ಯಾರು ಕಕ್ಕ ಎಂದು ಕೇಳಿದನು. ಮಾಢವ್ಯನು, ರಾಣಿಯವರ ಸಖಿಯರಾಗಿದ್ದವರೆಂತ ಕಾಣುತ್ತದೆ, ಎಂದನು. ಕುಮಾರನು ಅವರನ್ನು ನೋಡಿ, ಹೌದು, ಹೌದು ಎನ್ನುತ್ತ, ತೇರನ್ನು ನಿಲ್ಲಿಸೆಂದನು. ತೇರು ಇವರಿದ್ದ ಕಡೆ ಸರಿಯಾಗಿ ನಿಂತಿತು. ಹುಡುಗನು ತೇರಿನಿಂದ ಧುಮುಕಿ ಇವರ ಹತ್ತಿರಕ್ಕೆ ಬಂದನು. ಮುಖದ ಹೋಲಿಕೆಯಿಂದ ಸಖಿಯರಿಗೆ ಇವನು ಶಕುಂತಲೆಯ ಮಗನೆಂದು ಒಡನೆಯೇ

ತಿಳಿಯಿತು. ಅಹುದೋ ಅಲ್ಲವೋ, ಮಗು ಮಾತ್ರ ಹೀಗೆ ಬರುವುದುಂಟೆ? ಎಂದು ಅವರ ಯೋಚನೆ ಮಾಡುವಷ್ಟರಲ್ಲಿಯೇ ಕುಮಾರನು ಅವರನ್ನು ಸಮೀಪಿಸಿ, ನೀವು ನಮ್ಮ ಅಮ್ಮಾಜಿಯ ಸಖಿಯರಲ್ಲಾ, ಎಂದನು. ಪ್ರಿಯಂವದೆ, "ಹೌದು, ಅಮ್ಮಾಜಿ ಎಲ್ಲಿ" ಎಂದಳು. ಕುಮಾರನ ಬಳಿಗೆ ಬಂದು, "ಹಿಂದೆ ಬರುತ್ತಾ ಇದ್ದಾರೆ" ಎಂದು ಹೇಳಿ, ನೀವು ಪ್ರಿಯಂವದೆ, ಅವರು ಅನಸೂಯೆ ಎಂದನು. ಅನಸೂಯೆ, ನಿಮಗೆ ಹೇಗೆ ತಿಳಿಯಿತು, ಎಂದು ಅವನನ್ನು ಎತ್ತಿಕೊಂಡಳು. ಅವನು ಅವಳ ಮೂಗಿನ ಮೇಲೆ ಬೆರಳನ್ನಿಟ್ಟು ದೊಡ್ಡಮ್ಮನ ಮುಖ ಅಗಲ, ನಿಮ್ಮ ಮುಖ ಉದ್ದುದ್ದ ಎಂದು ಹೇಳಿದ್ದರು. ಅದೇ ಗುರುತು, ಎಂದನು. ಪ್ರಿಯಂವದೆ, ಬರೀ ಅಷ್ಟರಿಂದ ತಿಳಿಯಿತೆ, ಎಂತಾ ಬುದ್ಧಿವಂತ ಎಂದಳು. ಅವನು ಇಲ್ಲ ನಿಮ್ಮ ಮೂಗು ಸ್ವಲ್ಪ ದೊಡ್ಡದು ಎಂತ ಹೇಳಿದ್ದರು, ಆದರಿಂದಲೂ ತಿಳಿದುಕೊಂಡೆ ಎಂದನು. ಸಖಿಯರಿಬ್ಬರೂ ನಕ್ಕರು; ಹುಡುಗನನ್ನು ಹಿಡಿದುಕೊಂಡು ಮುದ್ದಿಸಿದರು. ತಂದೆ ಇದ್ದ ಹಾಗೆಯೇ ಇದ್ದಾನೆ, ಚೆನ್ನಾಗಿ ಬೆಳೆದಿದ್ದಾನೆ ಎಂದುಕೊಂಡರು. ಮಾಢವ್ಯನು ಈ ವೇಳೆಗೆ ಹತ್ತಿರ ಬಂದನು; ಇವರನ್ನು ಮಾತನಾಡಿಸಿದನು. ಸಖಿಯರು ಇವನಿಗೆ ತಕ್ಕ ಉತ್ತರವನ್ನು ಕೊಟ್ಟು, ರಾಣಿ ಎಷ್ಟು ದೂರದಲ್ಲಿದ್ದಾರೆ? ಎಂದು ಕೇಳಿದರು. ಅಷ್ಟು ಹೊತ್ತಿಗೆ ದೂರದಲ್ಲಿ ಇನ್ನೊಂದು ತೇರೂ ಕಂಡಿತು. ಅಕೋ ತೇರು ಎಂದು ಅನಸೂಯೆ ಹುಡುಗನನ್ನು ಕೆಳಗಿಳಿಸಿ ಮುಂದೆ ನಡೆದಳು. ಪ್ರಿಯಂವದೆ ಹುಡುಗನನ್ನು ಎತ್ತಿಕೊಂಡು ಹಿಂದೆ ಹೋದಳು. ಶಕುಂತಲೆ ದೂರದಿಂದಲೇ ಇವರ ಗುಂಪನ್ನು ನೋಡಿ, ತೇರನ್ನು ನಿಲ್ಲಿಸುವಂತೆ ಸೂತನಿಗೆ ಆಜ್ಞೆ ಮಾಡಿ, ಅದು ನಿಂತೊಡನೆ ಇಳಿದು ಹಂಸಪದಿಕೆಯನ್ನೂ ಇಳಿಸಿ ಜೊತೆಗೆ ಕರೆದುಕೊಂಡು ಸಖಿಯರ ಬಳಿಗೆ ಬಂದಳು.

ಏಳು ವರ್ಷ ಅಗಲಿದ್ದು ಮರಳಿ ಸೇರಿದ ಈ ಸಖಿಯರ ಮನಸ್ಸಿನ ಭಾವಗಳನ್ನು ಯಾರು ಬಣ್ಣಿಸಬೇಕು? ಸ್ವಲ್ಪ ಹೊತ್ತಿಗೆ ಹಿಂದೆ ಪ್ರಿಯಂವದೆ ತನ್ನಲ್ಲಿ ತಾನೇ "ಇಂದು ಶಕುಂತಲೆ ಅಂದಿನ ಶಕುಂತಲೆಯಲ್ಲ; ರಾಣಿ. ಅವಳನ್ನು ಏನೆಂದು ಕರೆಯಬೇಕೋ, ಅವಳಿಗೆ ಏನು ಮರ್ಯಾದೆ ತೋರಬೇಕೋ" ಎಂದು ಸ್ವಲ್ಪ ಯೋಚಿಸಿದ್ದಳು. ತೇರಿನಿಂದಿಳಿದ ರಾಣಿಯನ್ನು ನೋಡಿ ಅವಳಿಗೆ ಈ ಯೋಚನೆಯೆಲ್ಲ ಎತ್ತಲೋ ಹೋಯಿತು. ಅವಳು ಶಕುಂತಲೆಯನ್ನು ರಾಣಿ ಎಂದು ಕೂಡ ಕರೆಯಲಿಲ್ಲ, ಶಕುಂತಲೆ ಚೆನ್ನಾಗಿದ್ದೀಯಾ? ಎಂದು ಕೂಗಿದಳು. ಕೊರಳು ಕಟ್ಟಿಕೊಂಡಿತು. ಕಣ್ಣಲ್ಲಿ ನೀರು ತಡೆಯಲಾರದೆ, ಹರಿಯಲಾಗದೆ ಹನಿಯಾಗಿ ನಿಂತಿತು. ಅನಸೂಯೆ ಮಗುವಿನಂತೆ ಓಡಿ ಶಕುಂತಲೆಯನ್ನು ಮಾತನಾಡದೆ ಅಪ್ಪಿಕೊಂಡಳು. ಅವಳ ಭುಜದ ಮೇಲೆ ತಲೆಯನ್ನಿಟ್ಟು ಬಿಕ್ಕಿ ಬಿಕ್ಕಿ ಅತ್ತಳು. ಶಕುಂತಲೆಗೂ ಕ್ಷಣಮಾತ್ರ ಧೃತಿ ತಪ್ಪಿತು. ಆದರೆ ಒಂದು ಕ್ಷಣದಲ್ಲಿ ಅವರು ಧೈರ್ಯ ತಂದುಕೊಂಡು,

ಬಾ ಅನಸೂಯೆ, ಇಕೋ ನೋಡು ಯಾರು ಬಂದಿದ್ದಾರೆ ಎಂದು ಬಿಡಿಸಿಕೊಂಡು, ಪ್ರಿಯಂವದೆಯನ್ನು ಹತ್ತಿರ ಸೆಳೆದುಕೊಂಡು ಹಂಸಪದಿಕೆಗೆ ಸಖಿಯರ ಪರಿಚಯವನ್ನು ಮಾಡಿಕೊಟ್ಟಳು. ಸಖಿಯರಿಗೆ, ಇವರು ನಮ್ಮ ಅಕ್ಕ, ನನ್ನನ್ನು ತಂಗಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಾರೆ ಎಂದಳು. ಪ್ರಿಯಂವದೆ, ನೀವು ನನ್ನ ಆಶ್ರಮಕ್ಕೆ ಬಂದದ್ದು ಸಂತೋಷ. ಎಂದಳು. ಮರ್ಯಾದೆಯ ಮಾತುಗಳಾದ ಮೇಲೆ ಶಕುಂತಲೆ ತಂದೆ ಗೌತಮೀದೇವಿ ಸುಖವಾಗಿದ್ದಾರೆಯೇ ಎಂದು ಕೇಳಿ, ಆ ಮೇಲೆ ಎಲ್ಲರ ಕ್ಷೇಮ ಸಮಾಚಾರಗಳನ್ನೂ ವಿಚಾರಿಸಿದಳು; ಮಾಢವ್ಯನು ಒಂದು ಕಡೆಗಿರಲು, ಸುಮ್ಮನೆ ಮಾತನಾಡುವುದಕ್ಕಾಗಿ, ನಮ್ಮಿಂದ ನಿಮ್ಮ ಪ್ರಯಾಣಕ್ಕೆ ಸಾವಕಾಶವಾಯಿತು ಎಂದು ಅವನಿಗೆ ಹೇಳಿ, ಮಗನನ್ನು ನಿರ್ದೇಶಿಸಿ, ಮಗು ಆಗಲೇ ನಿಮ್ಮ ಸ್ನೇಹ ಮಾಡಿಕೊಂಡನೆ ಎಂದಳು. ಪ್ರಿಯಂವದೆ ಹೌದು, ನೀನು ಮೊದಲೇ ನಮ್ಮನ್ನೆಲ್ಲಾ ಅವನಿಗೆ ವರ್ಣಿಸಿ ನನ್ನ ಮೂಗು ದೊಡ್ಡದು ಎಂತ ಹೇಳಿದ್ದೀಯಂತೆ ಎಂದಳು. ಶಕುಂತಲೆಯೂ ಹಂಸಪದಿಕೆಯೂ ನಕ್ಕರು. ಶಕುಂತಲೆ ಮಗನನ್ನು, ಏನೋ ಮಗು, ಮಾತಿಗೆ ಮುಂಚೆ ದೊಡ್ಡವರನ್ನು ಇಂಥ ಮಾತು ಹೇಳುವುದೇ, ಎಂದಳು. ಭರತ "ನಾನು ಮೊದಲು ಹೇಳಲಿಲ್ಲ ಅಮ್ಮ, ದೊಡ್ಡಮ್ಮಾಜಿ ಹ್ಯಾಗೆ ಗುರುತಿಸಿದೆ? ಎಂದರು. ನಿಮ್ಮ ಮುಖ ದೊಡ್ಡದು, ಚಿಕ್ಕಮ್ಮಾಜಿ ಅವರ ಮುಖ ಉದ್ದುದ್ದ ಎಂದೆ. ದೊಡ್ಡಮ್ಮಾಜಿ ಇಷ್ಟರಲ್ಲೇ ತಿಳಿಯಿತೇ ಎಂದರು. ಇಲ್ಲ ನಿಮ್ಮ ಮೂಗು ಸ್ವಲ್ಪವೇ ಸ್ವಲ್ಪ ದೊಡ್ಡದು ಎಂತ ಅಮ್ಮ ಹೇಳಿದ್ದರು ಎಂದೆ" ಎಂದು ದಾರಿಯ ಒಂದು ಕಲ್ಲನ್ನು ಒದ್ದನು. ಎಲ್ಲರೂ ಮರಳಿ ನಕ್ಕರು. ಮಕ್ಕಳ ಮಾತೇ ಹೀಗೆ, ಸ್ನೇಹದಿಂದಾಗಲಿ, ದುಃಖದಿಂದಾಗಲಿ ದೊಡ್ಡವರ ಕಂಠ ಕಟ್ಟಿದಾಗ ಮಕ್ಕಳ ಒಂದು ಮಾತು ಆ ಉದ್ವೇಗವನ್ನು ಇಳಿಸುತ್ತದೆ. ಹೆತ್ತವರು ಸಾಕಿದವರು ಚಿಂತೆಯಲ್ಲಿ ಮುಳುಗಿರುವಾಗ ಎಳೆಯರ ಒಂದು ನಗೆ ಅವರ ಹೃದಯದಲ್ಲಿ ಹರ್ಷವನ್ನು ಮೂಡಿಸುತ್ತದೆ. ದಿನಕಳೆದು ಹಿರಿಯರಾದವರು ಬಾಳೆಲ್ಲಾ ಬರಿದೆಂದು ಕುಗ್ಗಿದ ವೇಳೆಯಲ್ಲಿ, ಹಸಿವಿನಿಂದ ಅಳುವ ಕೂಸು ಬಾಳಿನಲ್ಲಿ ಆಗಬೇಕಾದದ್ದು ಬಹಳವಿದೆ ಎಂದು ಅವರನ್ನು ಎಚ್ಚರಿಸುತ್ತದೆ. ಪ್ರಿಯಂವದೆ ಅನಸೂಯೆಯರು ಮತ್ತೆ ಹುಡುಗನನ್ನು ಮುದ್ದಿಸಿ ಅವನನ್ನು ಹಿಡಿದುಕೊಂಡು ನಡೆದರು. ಜೊತೆಗೆ ಇತ್ತ ಶಕುಂತಲೆ ಇತ್ತ ಹಂಸಪದಿಕೆ, ಮಾಢವ್ಯನು ಹಿಂದೆ ಬಂದನು. ಹೀಗೆ ರಾಣಿಯರೂ ತಾಪಸ ತರುಣಿಯರೂ ಮಾತನಾಡುತ್ತಾ ಆಶ್ರಮದ ಕಡೆಗೆ ನಡೆದರು. ತೇರುಗಳು ಹಿಂದೆ ಬಂದವು.

ಹೆಜ್ಜೆಗಳನ್ನಿಡುತ್ತ ಮುಂದರಿದ ಹಾಗೆ ಶಕುಂತಲೆ ತನ್ನ ಪರಿಚಯದ ಸ್ಥಳಗಳ ಮುಖಮುದ್ರೆಯನ್ನು ಒಂದೊಂದಾಗಿ ಗುರುತಿಸಿದಳು. ಇಲ್ಲಿ ದಾರಿಯ ಪಕ್ಕದಲ್ಲಿ ದೊಡ್ಡದೊಂದು ಮರ. ಅದರಲ್ಲೊಂದು ಪೊಟರೆ. ಮರದ ಬಳಿ ಪೊಟರೆಯಿಂದ ಸುರಿದ

ಕಾಳು, ಅಲ್ಲಿ ಮಾಲಿನೀ ನದಿಯ ಸ್ನಾನಘಟ್ಟದಿಂದ ಬರುವ ದಾರಿ. ಇನ್ನಲ್ಲಿ ಆಶ್ರಮದ ಗಿಡಗಳಿಗೆ ಮೇಲ್ಗಡೆಯಿಂದ ತಂದಿರುವ ಕಾಲುವೆ. ಇಲ್ಲಿ ಮತ್ತೆ ಜಿಂಕೆಗಳ ಮಾಳ. ಯಾರು ಬಂದರೆಂಬಂತೆ ನಿಂತು ಇವರನ್ನು ನೋಡುತ್ತಿರುವವು ಕೆಲವು; ಯಾರು ಬಂದರೆ ನಮಗೇನು ಭಯ ಎಂಬಂತೆ ತಲೆಯನ್ನೆತ್ತದೆ ಮೇವಿನಲ್ಲಿ ತೊಡಗಿರುವವು ಕೆಲವು. ಪ್ರಪಂಚ ಇಂದು ಅಂದಿದ್ದಂತೆಯೇ ಇದೆ ಎಂದು ಶಕುಂತಲೆಗೆ ತೋರಿತು. ಆದರೆ ಅಂದಿನ ಉಲ್ಲಾಸ ತಿರುಗಿ ಇವಳ ಮನಸ್ಸಿನಲ್ಲಿ ಮೂಡಲಿಲ್ಲ. ತನ್ನನ್ನು ಸಾಕಿದ್ದ ಸ್ಥಳವನ್ನು ನೋಡಿ ಶಕುಂತಲೆಗೆ ಸಂತೋಷ; ಅದರ ಮುಖ ಹಾಗೆಯೇ ಇದ್ದರೂ ಅದರಿಂದ ತನಗೆ ಅಂದಿನ ಸುಖ ಕಾಣಲಿಲ್ಲವೆಂದು ಒಂದು ಕೊರತೆ. ಮನಸ್ಸಿನ ಈ ಸ್ಥಿತಿಯೇಕೆಂದು ಶಕುಂತಲೆ ಅರಿಯಲಾರದೆ ಹೋದಳು. ಆಶ್ರಮದ ಬಾಗಿಲಿಗೆ ಬರುವ ವೇಳೆಗೆ ಅಲ್ಲಿ ಶಾರ್ಙ್ಗರವ ಶಾರದ್ವತರೂ ಕೆಲವರು ತಾಪಸ ಕುಮಾರರೂ ಕನ್ಯೆಯರೂ ಇದ್ದರು. ಶಾರ್ಙ್ಗರವ ಒಂದು ತಟ್ಟೆಯಲ್ಲಿ ಫಲಮಂತ್ರಾಕ್ಷತೆಗಳನ್ನು ಇಟ್ಟುಕೊಂಡು ಎದುರು ಬಂದು ರಾಜಾಶೀರ್ವಾದವನ್ನು ಹೇಳಿ ಬಾಲಕನ ಮೇಲೂ ರಾಣಿಯರ ಮೇಲೂ ಅಕ್ಷತೆಯನ್ನು ಹಾಕಿದನು; ಆಮೇಲೆ ಶಕುಂತಲೆಯನ್ನು ಕುರಿತು "ರಾಣಿಯವರನ್ನು ಇಲ್ಲಿ ತಾವೇ ಇದ್ದು ಬರಮಾಡಿಕೊಳ್ಳಬೇಕೆಂದು ಕುಲಪತಿಗಳು ಉದ್ದೇಶಿಸಿದ್ದರು; ಆದರೆ ಸಂಜೆಯ ಹೋಮದ ಹೊತ್ತಾದ್ದರಿಂದ, ಯಜ್ಞವಾಟಿಯಲ್ಲಿರುತ್ತೇವೆ, ಅಲ್ಲಿಗೇ ಅವರನ್ನು ಬಿಜಯಮಾಡಿಸಿಕೊಂಡು ಬನ್ನಿ ಎಂದು ನಮಗೆ ಅಪ್ಪಣೆ ಮಾಡಿ ಹೋದರು" ಎಂದನು. ಶಕುಂತಲೆ ಇವನ ಮರ್ಯಾದೆಯಿಂದ ಬಹಳ ನೊಂದಳು. ಆದರೆ ಅವಳು ಒಡನೆಯೇ ಅವನನ್ನು ಧಾರಾಳವಾಗಿ ಮಾತನಾಡಿಸಿ ಇದೆಲ್ಲ ಬೇಡವೆಂದು ಹೇಳುವಂತಿರಲಿಲ್ಲ; ಆದ್ದರಿಂದ ಸುಮ್ಮನಿದ್ದಳು. ಶಾರದ್ವತನು ಹತ್ತಿರಕ್ಕೆ ಬಂದು ಚೆನ್ನಾಗಿದ್ದೀಯಾ ತಾಯಿ ಎಂದು ಮೆಲ್ಲನೆ ಕೇಳಿ, ಕುಮಾರನನ್ನು ಹತ್ತಿರಕ್ಕೆ ಕರೆದು ಶಾರ್ಙ್ಗರವನಿಗೆ, ಚಕ್ರವರ್ತಿ ಕುಮಾರರು ಒಳ್ಳೆ ಸೂಟಿಯಾಗಿದ್ದಾರೆ, ಎಂದನು. ಶಾರ್ಙ್ಗರವನು ಎಲ್ಲ ಕುಲಪತಿಗಳ ಅನುಗ್ರಹ ಎಂದನು. ಎಲ್ಲರೂ ಅಲ್ಲಿಂದ ಯಜ್ಞವಾಟಿಗೆ ಹೋದರು.

ಕುಲಪತಿಗಳು ಹೋಮಾಗ್ನಿಯ ಮುಂದೆ ಕುಳಿತಿದ್ದರು. ಇವರು ಬಂದದ್ದು ತಿಳಿಯಲಾಗಿ ಒಳಗಿಂದ ಒಬ್ಬ ವಟುವನ್ನು ಕಳುಹಿಸಿ ಒಳಗೆ ಬರಬೇಕೆಂದು ಅಪ್ಪಣೆ ಮಾಡಿದರು. ಶಕುಂತಲೆಗೆ ಹೋಗಿ ತಂದೆಯನ್ನು ಅಪ್ಪಿಕೊಳ್ಳಬೇಕೆಂಬ ಆಸೆ. ಆದರೆ ಬೆಳೆದ ಹೆಣ್ಣಿಗೆ, ಚಕ್ರವರ್ತಿಯ ಪತ್ನಿಗೆ, ಚಕ್ರವರ್ತಿಯಾಗುವವನ ತಾಯಿಗೆ, ಅದು ಸರಿಯಲ್ಲ, ಅವಳು ಮಗುವನ್ನು ಕುರಿತು, ಬಾರಪ್ಪ ತಾತನಿಗೆ ನಮಸ್ಕಾರ ಮಾಡು, ಎಂದು ಹೇಳಿ ನಮಸ್ಕರಿಸುತ್ತೇನೆ, ಎಂದು ತಂದೆಗೆ ಮಂಡಿಯೂರಿದಳು. ಆಶೀರ್ವಾದ ಪಡೆದು ಎದ್ದು ಹಂಸಪದಿಕೆಯನ್ನು ತೋರಿ, ನಮ್ಮ ಅಕ್ಕ, ಕೂಡ ಬರಲು ಒಪ್ಪಿದರು. ನಿಮಗೆಲ್ಲ ಅವರು

ಬರುವುದು ಬಹು ಸಂತೋಷವೆಂದು ಕರೆತಂದೆನು ಎಂದಳು. ಕುಲಪತಿಗಳು ಬರಿಯ ಸಂಜ್ಞೆಯಿಂದ ಎಲ್ಲ ಮಾತನ್ನು ಒಪ್ಪಿಕೊಂಡು ಇವರನ್ನೆಲ್ಲ ಆಶೀರ್ವಾದದ ಅಕ್ಷತೆಯಿಂದ ಹರಸಿ ಕುಳಿತುಕೊಳ್ಳ ಹೇಳಿದರು. ಹೋಮ ಮುಂದಕ್ಕೆ ಸಾಗಿತು. ಹದಿನೈದು ನಿಮಿಷದ ಮೇಲೆ ಹೋಮಾಗ್ನಿಯ ಪೂಜೆಯಿಂದ ಸಂಧ್ಯಾಕಾಲದ ಸೇವೆಯನ್ನು ಮುಗಿಸಿ ಅವರು ಇವರನ್ನು ಕುಶಲ ಪ್ರಶ್ನೆ ಕೇಳಿದರು. ಭರತಕುಮಾರನು ಇತರರ ಹತ್ತಿರ ಆಡಿದಂತೆ ಇವರಲ್ಲಿ ಸಲಿಗೆಯಿಂದ ಆಡಲಿಲ್ಲ. ಬಹಳ ಗಂಭೀರವಾಗಿ ನಡೆದುಕೊಂಡನು. ಕುಲಪತಿಗಳು ಹಂಸಪದಿಕೆಯನ್ನು ಬಹು ಗೌರವದಿಂದ ಮಾತನಾಡಿಸಿದರು. ಈ ವೇಳೆಗೆ ಹೊಳೆಗೆ ಹೋಗಿದ್ದ ಗೌತಮೀದೇವಿ ಬಂದರು. "ಸಂಜೆಯೆಲ್ಲಾ ಕಾದಿದ್ದೆ, ನೀನು ಬರುವ ಹೊತ್ತಿಗೆ ಸರಿಯಾಗಿ ಹೊಳೆಗೆ ಹೋದೆ ನೋಡು ನಾನು" ಎನ್ನುತ್ತ ಹತ್ತಿರ ಕುಳಿತರು. ಬಂದವರು ಆಕೆಗೂ ನಮಸ್ಕಾರ ಮಾಡಿ ಆಶೀರ್ವಾದ ಪಡೆದರು. ಕಣ್ವರು ಸ್ವಲ್ಪ ಹೊತ್ತು ರಾಜನ ಮಾತನ್ನೂ ರಾಜಕುಟುಂಬದ ಮಾತನ್ನೂ ಆಡಿ, ಗೌತಮಿಯನ್ನು ಕುರಿತು "ವತ್ಸೆಗೂ ರಾಣಿಯವರಿಗೂ ಪ್ರಯಾಣದಿಂದ ಆಯಾಸವಾಗಿದೆ. ಮಗುವಿಗೂ ಹಸಿವಿರಬಹುದು. ಕರೆದುಕೊಂಡು ಹೋಗಿ ಉಪಚಾರ ಮಾಡಿ' ಎಂದು ಹೇಳಿದರು. ಇವರೆಲ್ಲ ಎದ್ದರು. ಕಣ್ವರು ಪ್ರಿಯಂವದೆ ಅನಸೂಯೆಯರನ್ನು ಕುರಿತು ರಾಣಿಯರಿಗೆ ನಿಮ್ಮ ಮಕ್ಕಳನ್ನು ತೋರಿಸಿ ಎಂದು ನಕ್ಕರು. ಸ್ವಲ್ಪ ನಾಚಿಕೆಯಿಂದ ಅವರು ತೋರಿಸುತ್ತೇವೆ ಎಂದರು. ಇವರೆಲ್ಲಾ ಬಿಡಾರದ ಮಂಟಪಗಳಿಗೆ ಹೋದರು.

ಸಖಿಯರೂ ಶಕುಂತಲೆಯೂ ಆಡಬೇಕಾದ ಮಾತು ನೂರು. ರಾಣಿ ಹಂಸಪದಿಕೆ ಇದನ್ನು ತಿಳಿದುಕೊಂಡು ತಾನು ರಾಜಕುಮಾರನಿಗೆ ಭೋಜನ ಮಾಡಿಸುತ್ತೇನೆಂದು ಗೌತಮೀದೇವಿ ಜೊತೆಗೆ ಭೋಜನ ಶಾಲೆಗೆ ಹೋದಳು. ಆಮೇಲೆ ಆಶ್ರಮವನ್ನು ನೋಡಬೇಕೆಂಬ ನೆಪದಿಂದ ಅವನನ್ನು ಕರೆದುಕೊಂಡು ಅಲ್ಲಲ್ಲಿ ಸುತ್ತಿ ಹೊತ್ತು ಮಾಡಿ ಬಿಡಾರಕ್ಕೆ ಬಂದಳು. ಆ ವೇಳೆಗೆ ಇವರು ಶಕುಂತಲೆಗೆ ತಮ್ಮ ಮಕ್ಕಳನ್ನು ತೋರಿಸಿ ಮರಳಿ ಬಂದು, ಅವಳ ಜೊತೆಯಲ್ಲಿ ಸಖಿಯರಿಗೆ ಸಹಜವಾದ ಆಸೆಯಿಂದ ಎಲ್ಲಿಲ್ಲದ ಮಾತನ್ನು ಆಡಿದ್ದರು. ದೂರ್ವಾಸನ ಶಾಪದ ಮಾತು, ಇವರು ಭಯಪಟ್ಟಿದ್ದದ್ದು, ಅದರಂತೆಯೇ ಆದದ್ದರ ಮಾತು, ಕಣ್ವರು ವ್ಯಥೆಪಟ್ಟ ಮಾತು, ಶಾರ್ಙ್ಗರವ ಶಾರದ್ವತರು ರಾಜಧಾನಿಯಿಂದ ಹಿಂದಕ್ಕೆ ಬಂದ ಒಡನೆ ಗೌತಮೀದೇವಿ ಇವರಿಗೆ ಮದುವೆ ಮಾಡಿಬಿಡಬೇಕೆಂದು ಹಠ ಮಾಡಿದ ಮಾತು, ಶಕುಂತಲೆಯ ಜಿಂಕೆ ಮರಿ ಹಾಕಿದ ಮಾತು, ಮತ್ತೆ ಈಗ ಗರ್ಭಿಣಿಯಾಗಿರುವ ಮಾತು, ಶಾರ್ಙ್ಗರವನ ಹಠದ ಮಾತು, ಶಾರದ್ವತನ ಸರಳತೆಯ ಮಾತು, ಕಣ್ವ ಋಷಿಯ ದೊಡ್ಡ ಮನಸ್ಸಿನ ಮಾತು, ಊಟ ಮುಗಿದು ಕುಮಾರನು

ಬಂದಮೇಲೆ ಶಕುಂತಲೆ ಅವನನ್ನು ಅಪ್ಪಿ ಮಲಗಿಸಿ ಹಂಸಪದಿಕೆಯೊಂದಿಗೆ ಊಟಕ್ಕೆ ಹೋದಳು. ಇಲ್ಲಿನ ಜನರ ಸೌಲಭ್ಯವನ್ನು ನೋಡಿ ಹಂಸಪದಿಕೆ ಬಹಳ ಆಶ್ಚರ್ಯ. ಊಟವಾದ ಮೇಲೆ ಸ್ವಲ್ಪ ಹೊತ್ತು ಬೆಳದಿಂಗಳಲ್ಲಿ ಕುಳಿತಿದ್ದು, ಆಮೇಲೆ ಇವರೆಲ್ಲ ಮಲಗಿಕೊಳ್ಳಹೋದರು. ಆ ರಾತ್ರಿ ಶಾರದ್ವತ ಶಾರ್ಙ್ಗರವರು ತಮ್ಮ ಮಕ್ಕಳ ಕಷ್ಟ ಸುಖಗಳನ್ನು ತಾವೇ ನೋಡಿಕೊಳ್ಳಬೇಕಾಯಿತು. ಶಾರದ್ವತನು ಸಾಧು. ಅವನಿಗೆ ಇದೆಲ್ಲಾ ಲಕ್ಷ್ಯವಿಲ್ಲ. ಶಾರ್ಙ್ಗರವನದು ಸ್ವಲ್ಪ ಕಠಿಣ ಹೃದಯ. ಅವನಿಗೆ ಅಷ್ಟು ಬೇಗ ಮದುವೆಯಾಗುವ ಉದ್ದೇಶವಿರಲಿಲ್ಲ. ಪ್ರಿಯಂವದೆಗೂ ಇನ್ನು ಸ್ವಲ್ಪ ದಿನವಾಗಲೆಂದೇ ಮನಸ್ಸು. ಆದರೆ ಗೌತಮೀದೇವಿ ಹಠಮಾಡಿದ್ದಳು. "ಬೆಳೆದ ಹುಡುಗಿಯನ್ನು ಇರಿಸಿಕೊಂಡು ನಮ್ಮ ಹಾಗೆ ತಾನೇ ಎಂದು ನಾನು ಅಜಾಗರೂಕತೆಯಿಂದ ಇದ್ದೇ ಆಗ ಹಾಗಾಯಿತು. ಇನ್ನು ನಿಮ್ಮಿಂದ ಒಂದಷ್ಟು ಚಿಂತೆ ಬಂದೀತು ನನಗೆ. ನೀವು ಈ ಸಲವೇ ಮದುವೆಯಾಗಬೇಕು" ಎಂದಳು. ಅನಸೂಯೆ ಶಾರದ್ವತರು ಮದುವೆಯಾಗಲು ಒಪ್ಪಿದರು. ಪ್ರಿಯಂವದೆ ಈಗ ಬೇಡವೆನ್ನಲು, ಅನಸೂಯೆ "ನೀನು ಅಕ್ಕ, ನಾನು ತಂಗಿ; ನಿನಗೇ ಮದುವೆ ಬೇಡವೆಂದರೆ ನನಗೇನು ಅವಸರ. ಸ್ವಲ್ಪ ದಿನ ಹೋಗಲೇಳು ಜೊತೆಯಾಗಿ ಮದುವೆಯಾಗೋಣ" ಎಂದಳು. ಇದನ್ನೆಲ್ಲ ನೋಡಿ ಕುಲಪತಿಗಳು ಆ ವರ್ಷವೇ ಮದುವೆಗಳನ್ನು ನಡೆಯಿಸಿದರು. ಈಗ ಅನಸೂಯೆಗೆ ಒಂದು ಹೆಣ್ಣು ಮಗು, ಪ್ರಿಯಂವದೆಗೆ ಒಂದು ಗಂಡು, ಅವರು ಸಖಿಯ ಸಲುವಾಗಿ ಅಂದು ಅವಳ ಬಿಡಾರದಲ್ಲಿ ಮಲಗಿದರು. ಮೂವರೂ ಬಹು ಹೊತ್ತು ಮಾತನಾಡುತ್ತಾ ನಿದ್ದೆ ಹೋದರು. ಅರಮನೆಯಿಂದ ಬಂದ ಶಕುಂತಲೆ ಈ ಬಡತನದ ಬಿಡಾರದಲ್ಲಿ ಜ್ವರವಿಳಿದ ವೇಳೆ ತಾಯಮಡಿಲಲ್ಲಿ ನಿದ್ರಿಸುವ ಮಗುವಿನಂತೆ ಹಾಯಾಗಿ ನಿದ್ರಿಸಿದಳು. ಅವಳ ನಿದ್ದೆ ಬಹು ದಿನದಿಂದ ಕಾಣದಿದ್ದ ಕನಸುಗಳಿಂದ ಸುಖಮಯವಾಯಿತು. ಬೆಳಗಾಗ ಎದ್ದ ವೇಳೆ ಕುಲಪತಿಗಳು ಆ ಮೊದಲೇ ಬಂದು ವಿಚಾರಿಸಿಕೊಂಡು ಹೋಗಿದ್ದರೆಂದು ತಿಳಿಯಿತು. ರಾಣಿಯರು ಎದ್ದು ಸ್ನಾನಾಹ್ನಿಕಗಳನ್ನು ಮುಗಿಸಿಕೊಂಡು ಯಜ್ಞವಾಟಿಗೆ ಹೋಗಿ ಹಿರಿಯರಿಗೆ ನಮಸ್ಕರಿಸಿದರು. ಆಮೇಲೆ ಶಕುಂತಲೆ ಸಖಿಯರೊಡನೆ ತನ್ನ ಮಲ್ಲಿಕಾಲತೆಯನ್ನು ನೋಡಹೋದಳು. ಅದು ಹೊರವಾಗಿ ಬೆಳೆದಿತ್ತು. ಅದೇ ಸುಂದರವಾದ ಸಹಕಾರ ವೃಕ್ಷ. ಆಗ ಬಳಿಯಲ್ಲಿ ದೀರ್ಘಾಪಾಂಗವೂ ಬಂದಿತು. ಮೊದಲು ಅದಕ್ಕೆ ರಾಣಿಯ ಗುರುತು ಸಿಕ್ಕಲಿಲ್ಲ. ಇವಳು ಕರೆದರೆ ಅದು ದೂರ ಹೋಯಿತು. ಸಖಿಯರು ಅದನ್ನು ಕರೆತಂದು ಹತ್ತಿರ ನಿಲ್ಲಿಸಲು ಇವಳನ್ನು ನೋಡಿ ಮೈ ಕೈಯನ್ನು ನೆಕ್ಕಿ ಏನೋ ಸ್ವಲ್ಪ ನೆನಪು ಬಂದಂತೆ ಸಮಾಧಾನವಾಗಿ ನಿಂತಿತು. ಅದರ ಮರಿಯೂ ಅಲ್ಲೇ ಇತ್ತು. ಅದಕ್ಕೂ ತಾಯಿಗೂ ವ್ಯತ್ಯಾಸ ಹೇಳುವಂತಿರಲಿಲ್ಲ. ಶಕುಂತಲೆ

ಅಲ್ಲಿಂದ ಹೊರಟು ತನ್ನನ್ನು ರಾಜನು ಮೊದಲು ನೋಡಿದ ಸ್ಥಳವನ್ನೂ ತಾನೂ ಅವನೂ ಕುಳಿತಿದ್ದ ಸ್ಥಳವನ್ನೂ ತಾನು ಪತ್ರ ಬರೆದ ಸ್ಥಳವನ್ನೂ ತನ್ನನ್ನು ಅವನು ವರಿಸಿದ ಸ್ಥಳವನ್ನೂ ಮಾಲಿನೀತೀರದ ಸ್ನಾನಘಟ್ಟವನ್ನೂ ನೋಡಿದಳು. ಅವಳಿಗೆ ತನ್ನ ಬಾಲ್ಯದ ಕಥೆಯೆಲ್ಲ ಕಣ್ಣೆದುರಿಗೆ ಮರಳಿ ನಡೆದಂತೆ ಆಯಿತು. ಆ ಉಲ್ಲಾಸವೇನು, ಆ ಉತ್ಸಾಹವೇನು, ಆ ಸರಳ ಭಾವನೆಯೇನು. ಇಂದು ಆಗ ಇದ್ದದಕ್ಕಿಂತ ಹೆಚ್ಚಿನ ಸುಖಸಾಮಗ್ರಿ ಇತ್ತು. ಆದರೆ ಆಗಣ ಸುಖವಿರಲಿಲ್ಲ. ಶಕುಂತಲೆ ಬಹಳ ಖಿನ್ನಳಾದಳು. ಅವಳ ಅಂದಿನ ಬಾಳು ಯಾರದೋ ಬೇರೆಯೊಬ್ಬರ ಬಾಳೆಂಬಂತೆ ಕಂಡಿತು. ಆಸೆಯಲ್ಲಿ ಸುಖವಿಲ್ಲ. ಆಸೆ ತುಂಬುವುದರಲ್ಲಿ ಸುಖವಿಲ್ಲ. ಆಸೆಯರಿಯದೆ ಇರುವ ಸುಖವೇ ಸುಖ ಎಂದು ಅವಳ ಮನಸ್ಸಿಗೆ ತೋರಿತು. ಹಾಗೆಯೇ ಅಲ್ಲೆಲ್ಲಾ ಸಖಿಯರೊಡನೆ ಓಡಿಯಾಡಿ ಮರಳಿ ಅವಳು ಬಿಡಾರಕ್ಕೆ ಹೋದಳು.

ಮಧ್ಯಾಹ್ನ ಶಾರ್ಙ್ಗರವನು ಬಂದು "ಅಂದು ನಿಮ್ಮನ್ನು ಅರಮನೆಯಲ್ಲಿ ಬಿಡುವಂದು ನಾನು ಕಠಿಣವಾದ ಮಾತನ್ನಾಡಿದೆ, ಅದನ್ನು ನನ್ನ ವಿಷಯದಲ್ಲಿ ಜ್ಞಾಪಕವಿಟ್ಟುಕೊಳ್ಳಬಾರದು" ಎಂದನು.

ಶಕುಂತಲೆ "ನೀನು ನನ್ನನ್ನು ಬಹುವಚನದಿಂದ ಕರೆಯಬೇಡ ಅಣ್ಣ, ಎಂದಿದ್ದರೂ ಏನಾದರೂ ನಾನು ನಿನ್ನ ತಂಗಿ. ಇನ್ನು ಅಂದು ನೀನು ಹೇಳಿದ್ದು ಆಗಣ ಸಂದರ್ಭದಲ್ಲಿ ತಪ್ಪಲ್ಲ. ಇಂದು ಹೇಗೆ ತಪ್ಪಾದೀತು. ನೀನು ನನ್ನ ಅಣ್ಣನೆಂದು ಮಾತ್ರ ನನ್ನ ಅರಿವು. ಉಳಿದದ್ದು ನನಗೆ ಜ್ಞಾಪಕವೇ ಇಲ್ಲ" ಎಂದು ಅವನಿಗೆ ಧೈರ್ಯ ಹೇಳಿದಳು.

ಸಂಜೆಯಲ್ಲಿ ಕಣ್ವರು ಬಂದು ಹತ್ತಿರ ಕುಳಿತು ತಾವಾಗಿ "ನೀನು ಇನ್ನೊಂದು ಸಲ ಬರುವಾಗ ಚಕ್ರವರ್ತಿಗಳನ್ನು ನಾನು ಬರಹೇಳಿದನೆಂದು ಹೇಳಿ ಕರೆತರಬೇಕು. ನನ್ನ ಬಳಿಗೆ ಬರುವುದಕ್ಕೆ ಸಂಕೋಚ ಬೇಡಬೆಂದು ತಿಳಿಸು" ಎಂದರು. ಶಕುಂತಲೆ ಕರೆತರುತ್ತೇನೆ ಎಂದಳು.

ಶಕುಂತಲೆ ಮಾರನೆಯ ಬೆಳಿಗ್ಗೆ ಎದ್ದು ನಿತ್ಯವಿಧಿಗಳನ್ನು ಮುಗಿಸಿ ತಾನು ತಂದಿದ್ದ ಒಡವೆ ವಸ್ತುಗಳನ್ನು ಎಲ್ಲರಿಗೂ ಹಂಚಿ ಹಿರಿಯರಿಗೆ ವಂದಿಸಿ ಸಖಿಯರಿಗೆ ಹೋಗಿಬರುವೆನೆಂದು ಹೇಳಿ ಮರಳಿ ಹಸ್ತಿನಾವತಿಗೆ ಹೊರಟಳು. ಹಿಂದೆ ಅವಳು ಆ ಆಶ್ರಮದಿಂದ ಹೊರಟ ಸಂದರ್ಭ ಅವಳಿಗೂ ಉಳಿದೆಲ್ಲರಿಗೂ ಚೆನ್ನಾಗಿ ನೆನಪುಂಟು. ಅಂದು ಅವಳು ನಡೆಯುತ್ತಾ ಹೊರಟವಳು ಇಂದು ತೇರನ್ನೇರಿ ಹೊರಟಳು. ಅಂದು ಗರ್ಭದಲ್ಲಿದ್ದ ಮಗನು ಇಂದು ಬೆಳೆದು ಶುಕ್ಲಪಕ್ಷದ ಸಪ್ತಮೀ ಚಂದ್ರನಂತೆ ಅವಳ ಜೊತೆಯಲ್ಲಿ ಕುಳಿತಿದ್ದನು. ಅಂದಿನ ಸಂದೇಹ ಶಂಕೆಗಳೊಂದೂ ಇಂದಿಲ್ಲ. ಇದು ಉಳಿದೆಲ್ಲರಿಗೂ ಬಹಳ ಸಂತೋಷ. ಶಕುಂತಲೆಗೆ ಮಾತ್ರ ಮನಸ್ಸಿನ ಸ್ಥಿತಿ ಅಂದಿನ ಸ್ಥಿತಿಯಿಂದ ಬಹಳ ಬೇರೆಯಾಗಿರಲಿಲ್ಲ.

ಕಾರಣವರಿಯದೆ ಅವಳು ಅಂದಿನಂತೆಯೇ ಉತ್ಕಂಠಿತೆಯಾಗಿದ್ದಳು. ಅವಳಿಗೆ, ಮರಳಿ ಈ ಆಶ್ರಮಕ್ಕೆ ಬರಬೇಕಾದರೆ ಪತಿಯೊಡನೆ ಬರಬೇಕು. ಬಂದ ಮೇಲೆ ತಿರುಗಿ ಹಸ್ತಿನಾವತಿಗೆ ಹೋಗಬಾರದು ಎನ್ನಿಸಿತು. ನೋವನ್ನು ಕಾಣದೆ ನಕ್ಕ ನಗೆಯೇ ನಗೆ; ನೊಂದು ನೋವನ್ನು ನುಂಗಿ ಆ ಮೇಲೆ ನಗುವ ನಗೆ ನಗೆಯಲ್ಲ. ಕಣ್ವ ಮುನಿಯ ಸಾಕುಮಗಳಿಗೆ ಇದು ಅನುಭವಕ್ಕೆ ಬಂದಿತು. ನಿಜವಾದ ಸುಖವನ್ನು ಹಿಂದೆ ಬಿಟ್ಟಿದ್ದೇನೆಂಬ ತಿಳಿವಿನಲ್ಲೇ ಅವಳು ತೇರಲ್ಲಿ ಕುಳಿತು ಹಸ್ತಿನಾವತಿಗೆ ತೆರಳಿದಳು.

## ಶ್ರೀನಿವಾಸ



'ಸಣ್ಣ ಕಥೆಗಳ ಜನಕ' ಎಂದೇ ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಮಾಸ್ತಿಯಲ್ಲಿ ೧೮೯೧ ರಲ್ಲಿ ಜನಿಸಿದರು. 'ಶ್ರೀನಿವಾಸ' ಎಂಬುದು ಇವರ ಕಾವ್ಯನಾಮ. ಕೋಲಾರ ಜಿಲ್ಲೆಯ ಮಾಸ್ತಿ, ಶಿವಾರಪಟ್ಟಣ, ಮೈಸೂರುಗಳಲ್ಲಿ ವ್ಯಾಸಂಗ ಮಾಡಿದ ಇವರು ಹಲವು ಸಾಹಿತ್ಯ ಪ್ರಕಾರಗಳಲ್ಲಿ ಸೃಜನಶೀಲ ಕೃತಿಗಳನ್ನು ಬರೆದಿದ್ದಾರೆ. ಅರುಣ, ತಾವರೆ, ಚೆಲುವು ಮಲಾರ ಮುಂತಾದ ಕವನ ಸಂಕಲನಗಳು; ಗೌಡರಮಲ್ಲಿ, ನವರಾತ್ರಿ, ರಾಮನವಮಿ ಮುಂತಾದ ಕಥನಕವನಗಳು; ಶ್ರೀರಾಮ ಪಟ್ಟಾಭಿಷೇಕ ಎಂಬ ದೀರ್ಘಕಾವ್ಯ, ಚೆನ್ನಬಸವನಾಯಕ, ಚಿಕವೀರ ರಾಜೇಂದ್ರ ಮುಂತಾದ ಕಾದಂಬರಿಗಳು; ಕಾಕನಕೋಟೆ, ತಾಳಿಕೋಟೆ, ಅನಾರ್ಕಲಿ ಮುಂತಾದ ನಾಟಕಗಳನ್ನೂ ಪ್ರಬಂಧ, ವಿಚಾರ ವಿಮರ್ಶೆ, ವ್ಯಕ್ತಿಚಿತ್ರ ಹೀಗೆ ಹಲವು ಪ್ರಕಾರಗಳಲ್ಲಿ ಕನ್ನಡ ಹಾಗೂ ಇಂಗ್ಲೀಷ್‌ನಲ್ಲಿ ಸುಮಾರು ೧೨೩ ಕೃತಿಗಳನ್ನು ರಚಿಸಿದ್ದಾರೆ. ಪತ್ರಕರ್ತ ಹಾಗೂ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆಸಲ್ಲಿಸಿದ ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯ ಸರಕಾರದ ಪ್ರಶಸ್ತಿಗಳು ಸಂದಿವೆ. ಇವರ ಚಿಕವೀರ ರಾಜೇಂದ್ರ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ೧೯೨೯ರಲ್ಲಿ ಬೆಳಗಾವಿಯಲ್ಲಿ ನಡೆದ ೧೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಈ ಕತೆಯನ್ನು ಮಾಸ್ತಿ – ಮೂವತ್ತು ಕತೆಗಳು (ಸಂ. ಯಶವಂತ ಚಿತ್ತಾಲ) ಕೃತಿಯಿಂದ ಆರಿಸಲಾಗಿದೆ.

### ಪದಗಳ ಅರ್ಥ

ಸಾತ್ವಿಕ – ಸತ್ವಗುಣದವನು, ಸಲಿಲ – ನೀರು, ಬೇಹು – ಗುಪ್ತಚರಕಾರ್ಯ,

ಗೊರವಂಕ – ಮೈನಾ ಹಕ್ಕಿ, ಸ್ನಾನಾಹ್ನಿಕ – ಸ್ನಾನ ಹಾಗೂ ನಿತ್ಯ ಪೂಜೆ, ದ್ವಾದಶ – ಹನ್ನೆರಡು.

## ಚಟುವಟಿಕೆಗಳು

- ಹೇಮಕೂಟದಿಂದ ಬಂದ ಮೇಲೆ ಎಂಬ ಶೀರ್ಷಿಕೆಯು ಈ ಕಥೆಗೆ ಸೂಕ್ತವಾಗಿದೆಯೇ? ನಿಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿ ಬರೆಯಿರಿ.
- 'ಎಷ್ಟೇ ದೊಡ್ಡ ಸ್ಥಾನಮಾನ ಪದವಿಗಳು ಲಭಿಸಿದ್ದರೂ, ಶಕುಂತಲೆಯ ವರ್ತನೆ, ಸ್ವಭಾವಗಳಲ್ಲಿ ಬದಲಾವಣೆಯಾಗಿಲ್ಲ' ಎಂಬುದನ್ನು ಶಕುಂತಲೆಯ ಪಾತ್ರದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.
- ಶಕುಂತಲೆಗೆ ಆಕೆಯ ತವರಿನ ಬಗೆಗೆ ಆರ್ದ್ರ ಭಾವವಿದೆಯೇ? ನಿಮ್ಮ ಅಭಿಪ್ರಾಯವನ್ನು ಬರೆಯಿರಿ.
- "ಆತ್ಮೀಯತೆ, ಪ್ರೀತಿ, ಸ್ನೇಹ ಇವುಗಳು ಮನುಷ್ಯ ಮತ್ತು ಪ್ರಕೃತಿಯ ಸಂಬಂಧವನ್ನು ಮತ್ತಷ್ಟು ಬೆಸೆಯುತ್ತವೆ." ಈ ಮಾತನ್ನು 'ಹೇಮಕೂಟದಿಂದ ಬಂದ ಮೇಲೆ' ಕಥೆಯ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.
- ಶಕುಂತಲೆಯ ಮಗ ಭರತ ಕುಮಾರನು ಆಶ್ರಮಕ್ಕೆ ಹೋಗುವ ಯಾತ್ರೆಯ ಅನುಭವವನ್ನು ಸ್ವಾರಸ್ಯ ಪೂರ್ಣವಾಗಿ ಕಥೆಯಲ್ಲಿ ನೀಡಲಾಗಿದೆಯಷ್ಟೆ? ನೀವು ಕೈಗೊಂಡ ಪ್ರವಾಸದ ಸ್ವಾರಸ್ಯಕರ ಅನುಭವಗಳ ಕುರಿತು ಮಿತ್ರನಿಗೆ ಒಂದು ಪತ್ರ ಬರೆಯಿರಿ.
- ವಾಕ್ಯದಲ್ಲಿ ಪ್ರಯೋಗಿಸುವ ಪದಗಳ ನಡುವಿನ ಸಂಬಂಧವನ್ನು ತಿಳಿಸುವ ಪ್ರತ್ಯಯಗಳೇ ವಿಭಕ್ತಿ ಪ್ರತ್ಯಯಗಳು. ಹೊಸಗನ್ನಡದಲ್ಲಿ ಏಳು ವಿಭಕ್ತಿಗಳಿಗೆ ಕ್ರಮವಾಗಿ ಉ, ಅನ್ನು, ಇಂದ, ಕೆ (ಗೆ), ಅ, ಅಲ್ಲಿ – ಮುಂತಾದ ಪ್ರತ್ಯಯಗಳು ಬಳಕೆಯಲ್ಲಿವೆ.

| | | |
|---|---|---|
| ಉದಾ : | ಅರ್ಭಕನು – ಉ | ಶಕುಂತಲೆಯನ್ನು – ಅನ್ನು |
| | ತೊರೆಯಿಂದ – ಇಂದ | ಕಿಟ್ಟಿಗೆ – ಗೆ |
| | ಚಂದ್ರಗುಪ್ತ ಮೌರ್ಯನ – ನ | ಸಖಿಯರಲ್ಲಿ – ಅಲ್ಲಿ |

ಇದೇ ರೀತಿ ಪ್ರತ್ಯಯಗಳನ್ನು ಬಳಸಿ ಪದಗಳನ್ನು ಬರೆಯಿರಿ.


## ಹೆಚ್ಚಿನ ಓದಿಗೆ

ಶಕುಂತಲೆಯೊಂದಿಗೆ ಒಂದು ಅಪರಾಹ್ನ – ವೈದೇಹಿ

# ಬಾಶಿಂಗ ಬಲ

ಶ್ರೀನಿವಾಸ ವೈದ್ಯ

ಉತ್ತರ ಕರ್ನಾಟಕದ ಧಾರವಾಡದ ಆಡುಮಾತಿನಲ್ಲಿ ಬರೆಯಲಾದ ಒಂದು ಕಥೆ. 'ಬಾಶಿಂಗ ಬಲ' ಕಥಾರೂಪೀ ಹರಟೆ. ಧಾರವಾಡ ಕಡೆಯ ಗ್ರಾಮಾಂತರ ಜೀವನದ ಒಂದು ಸರಸ ಸುಂದರ ಪ್ರಸಂಗ ಇಲ್ಲಿದೆ. ಅಪರಿಚಿತರಾದ ಗಂಡು ಹೆಣ್ಣು ಅಕಸ್ಮಾತ್ ಭೇಟಿಯಾಗುತ್ತಾರೆ. ಮಕ್ಕಳಿಲ್ಲದ ಸಣ್ಣೀರಿ ತರುಣ ವಿಧವೆ. ಒಂಟಿಯಾದ ಮಲಕಾಜಿ ತರುಣ ವಿಧುರ. ಅಣ್ಣನ ಮಗನ ಮದುವೆಗೆ ಬಾಶಿಂಗಗಳನ್ನು ಬುಟ್ಟಿಯಲ್ಲಿಟ್ಟುಕೊಂಡು ಸಂಭ್ರಮದಿಂದ ಹೊರಟ ಸಣ್ಣೀರಿಗೆ ಯರಗಟ್ಟಿಗೆ ಹೋಗಲು ಬಸ್ ಸಕಾಲಕ್ಕೆ ಸಿಗದೆ ಕಳವಳಗೊಳ್ಳುತ್ತಾರೆ. ಕಿತ್ತೂರು ಬಸ್‌ಸ್ಟ್ಯಾಂಡಿನಲ್ಲಿ ಅಕಸ್ಮಿಕವಾಗಿ ಮಲಕಾಜಿಯ ಪರಿಚಯವಾಗಿ ಇಬ್ಬರೂ ಟ್ರಕ್ಕಿನಲ್ಲಿ ಯರಗಟ್ಟಿಗೆ ಪ್ರಯಾಣ ಮಾಡಿ ಮದುವೆಯ ಸ್ಥಳಕ್ಕೆ ತಲುಪುವುದು ತಡವಾಗುತ್ತದೆ. ಸೂಕ್ತ ವ್ಯವಸ್ಥೆಯೊಂದಿಗೆ ಮದುವೆ ಮುಗಿದು ಆ ಹೊತ್ತಿಗಾಗಲೇ ಮದುವೆಗೆ ಬಂದ ಜನರೆಲ್ಲ ಅವರವರ ಸ್ಥಳ ಸೇರಿರುತ್ತಾರೆ. ಅಲ್ಲಿದ್ದ ದನ ಕಾಯುವ ಹುಡುಗರಿಂದ ವಿಷಯ ತಿಳಿದಾಗ ಬಾಶಿಂಗ ವ್ಯರ್ಥವಾಗಬಾರದೆನ್ನುವ ಸಣ್ಣೀರಿಯ ಬಯಕೆಯಿಂದಾಗಿ ಅವಳಿಗೆ ಬಾಶಿಂಗ ಬಲ ಕೂಡಿಬಂದ ಪ್ರಸಂಗ ಇಲ್ಲಿ ಸ್ವಾರಸ್ಯವಾಗಿ ಚಿತ್ರಿತವಾಗಿದೆ.



ಉಗಾದಿ ಕಳೆದ ಹತ್ತ ಹನ್ನೆರಡ ದಿವ್ಸ ಆಗಿರಭೌದು. ಅವತ್ತ ಮುಂಜಾಲಿಸುಟ್ಟೊ ಕಿತ್ತೂರ ಬಷ್ಟಾಂಡದಾಗ ಯಿಪರೀತ ಗದ್ದಲ ಗೌಜಿ. ಹಂತರದರಾಗನ ಒಬ್ಬಾಕಿ ಹರೇದ ಹೆಣಮಗಳು ಹೊಸಾ ಇಳಕಲ್ ಸೀರಿ ಉಟಗೊಂಡ, ರಬಕವಿ ಕಣದ ಕುಬಸಾ ತೊಟ್ಟಾಕಿ, ಹೋಗೊ ಬರೋ ಕಂಡಕಟರಗೋಳೂ ಅಷ್ಟ ಅಲ್ಲದ ಬಸ್ಸಿನಿಂದ ಇಳದ ಬರೋ ಪಾಸಿಂದರಗೋಳನ್ನ ಸಹಿತನಡಬರಕs ತರಬಿ ತರಬಿ "ಯಪ್ಪಾ ಯರಗಟ್ಟಿಗೆ ಹೋಕ್ಕೈತೇನ್ರಿ ಈ ಮೋಟಾರೂ". "ಬಸ್ಸು ಯವಾಲ್ಲಿಗೆ ಹೋಕ್ಕೈತ್ರಿ" ಅಂತ ದೈನಾಸ ಬಟಗೊಂತ ಕೇಳಾಕ ಹತ್ತಿದ್ದಳು.

ಹತ್ತೀ ಕಟಾಪು ಮುಗಿದಿತ್ತಂತೋ, ಇಲ್ಲಾ ಯಲ್ಲಮ್ಮನ ಗುಡ್ಡದ ಜಾತ್ರಿ ಬಂದಿತ್ತಂತೋ, ಅತವಾ ಲಗ್ಗಣ ಮಾಸ ಇತ್ತಂತೋ ಏನೋ ಅಂತೂ ಕಿತ್ತೂರ ಬಷ್ಟ್ಯಾಂಡ ತುಂಬ ಜನಾ ಜಾತ್ರಿ ಗಿಜಿಗುಟ್ಟಿ ಹೋಗಿತ್ತು. ಲಗ್ಗಣ ಮಾಸಂತss ಇರಬೇಕು. ಹೊಸಾ ಹೊಸಾ ಸೀರಿ ಉಟಗೊಂಡ ನಾರೇರೂ, ಅವರ ಬಗಲಾಗ ಕೊಂಯ್ಯಾ ಕೊಂಯ್ಯಾ ಅಂತ ಅಳೋ ಕೂಸಗೋಳೂ ಡಬ್ಬಣ ಕಾಟೀ ಧೋತ್ರಾ ಉಟಗೊಂಡ ಶಮನ ಬಿಟ್ಟ ಪಟಗಾ ಸುತಿಗೊಂಡ ಬಾಯಿ ತುಂಬ ತಂಬಾಕು ತುಂಬಿಕೊಂಡು ಪಿಚಕ್ ಪಿಚಕ್ ಅಂತ ಉಗಳಿಕೊಂತ ಅಡ್ಯಾಡೋ ಗಂಡಸೂರು ಷ್ಟ್ಯಾಂಡ ತುಂಬ ಕೀಸರಾ ಬಾಸರಾ ಇಡಿಸಿ ಬಿಟ್ಟಿದ್ದರು.

ಹಾಂಗ ಬಷ್ಟ್ಯಾಂಡ ಅನ್ನಾಕ ಅದೇನ ಹುಬ್ಬಳ್ಳಿ ಇಲ್ಲಾ ಬೆಳಗಾವಿ ಗತೆ ದೊಡ್ಡ ಷ್ಟ್ಯಾಂಡss? ಡಾಂಬರ ರಸ್ತೇದಿಂದ ಒಂದೋ ಎರಡೋ ಬಸ್ಸುಗೋಳು ಇಕಡೇದಿಂದ ಒಳಗ ಬಂದು ಆಕಡೆ ಮತ್ತ ಹೊರಗೆ ಹೋಗಿ ಡಾಂಬರ ರಸ್ತೇಕ ಕೂಡೋ ಅಟss ಜಾಗಾ. ನಡಬರಕ ಒಂದ್ನಾಕ ಬಸ್ಸು ನಿಲ್ಲೋ ಆಟ ಫೈಸು. ಒಂದು ಕಡೆ ದೊಡ್ಡ ರಸ್ತೇಕ್ನ ಬೆನ್ನು ಮಾಡಿ ಕಟ್ಟಿದ್ದು ಎಷ್ಟೀ ಆಫೀಸ. ಅದರ ಬಾಜೂಕನ ಪಾಸಿಂದರಗೋಳು ಕುಂದ್ರಾಕ ಒಂದೀಟ ಜಾಗಾ ಮ್ಯಾಗ ತಗಡ ಹೊದಿಸಿದ್ದು. ಅದಕ್ಕ ಹತ್ತೇ ಇಕಡೆ 'ಪರಬೂ ವಿಲಾಸ ಎಷ್ಟೀ ಕ್ಯಾಂಟೀನು'. ಪರಬೂ ವಿಲಾಸ ಗಟ್ಟದ ಕಡೀ ಬಟ್ಟರದು. ಹಂಗಾಗಿ ಅದರಾಗ ಬರೇ ಇಡಲಿ, ದ್ವಾಶಿ, ಉಪ್ಪಿಟ್ಟು, ಹಿಂತಾ ಅಳಬುರಕ ಸಾಮಾನss ಚಾ ಸಯಿತ ತೆಳ್ಳಗ ಬಿಸಿನೀರ ಕಸಾಯ. ಅದ ಆಕಡೆ ಅಂದ್ರ ತೇಟ ಪರಬೂವಿಲಾಸದ ಯಿರುದ್ದ ದಿಕ್ಕಿಗೆ ಆಚಿಕಡೀ ದಂಡಿಗೆ ಹತ್ತಿ 'ಸಿದ್ದಲಿಂಗೇಸ್ವರ ಚಾ ಕಾಪಿ ಟೀ ಕ್ಲಬ್ಬ' ಅಯ್ತಿ. ಸಿದ್ಲಿಂಗೇಸ್ವರದ ಮಾಲಕ ಕಿತ್ತೂರನವ, ಜಂತ್ಲಿ ಓಣಿ ಪರಪ್ಪ. ಹಂಗಾಗಿ ಅಲ್ಲಿ ಚಲೋತ್ನಾಗಿ ಗೋಕಾಕ ಕರದಂಟಾs, ಮಂಡಕ್ಕಿಉಂಡಿs, ಕಾರದಾಣಿ, ಅತ್ತಿಕಾಯಿ ಪುಗ್ಗೆ, ಮಿರ್ಚಿ ಯಲ್ಲಾ ಶಿಗತಾವು. ಮ್ಯಾಗ ಕುದಿಸಿ ಬಟ್ಟಿ ಇಳಿಸಿದ ಚೊಲೋ  ಚಾ ಬೆಲ್ಲದ್ದು. ಹಿಂಗಾಗಿ ಈ ಬಾಗದ ಗೊತ್ತಿದ್ದ ಮಂದೆಲ್ಲ 'ಸಿದ್ದಲಿಂಗೇಸ್ವರಕ್ಕ' ಹೋಕ್ಕಾರು, ಅದರ ಸೈತ ಬಸ್ಸುಗೋಳ ಬರಾಣಾ 'ಪರಬೂ ವಿಲಾಸ' ಕ್ಕ ಗದ್ದಲ ಮುಕರತೈತಿ. ಅದಕ್ಕೊಂದ ಕಾರಣನೂ ಅಯ್ತಿ. 'ಪರಬೂ ವಿಲಾಸ'ಕ್ಕ ಹೊಂದೇ 'ರಾಜಕುಮಾರ ಪಾನ ಬಂಡಾರ' ಪೆಟಗಿ ಅಂಗಡಿ ಅಯ್ತಿ. ಅದರಾಗ ಪಾನ ಸಿಗರೇಟ ಆಟ ಅಲ್ಲದ, ಎಲ್ಲಾ ತರದ ಪೇಪರೂ  ಸಿಗ್ತಾವ. ಸಂಯುಕ್ತ ಕರ್ನಾಟಕ, ಸುಧಾ, ಮಯೂರ, ತರಂಗ, ಲಂಕೇಶ ಪತ್ರಿಕೆಯಲ್ಲಾ ಅಂದ್ರ ತೇಟಯಲ್ಲಾ.

ಬಷ್ಟ್ಯಾಂಡಮ್ಯಾಗ ಕಾಲೀ ಪಾಸಿಂದರಗೋಳ ಅಷ್ಟs ಅಲ್ಲದs ಉರಾಗಿನ ಕೆಲಸ ಬಗಸಿ ಇಲ್ಲದ ಮಂದಿನೂ ಹೊತ್ತ ಕಳ್ಯಾಕಂತ ಬಂದಿರತಾರ.

ಇದೆಲ್ಲಾ ಇದ್ದದ್ದs, ಆದ್ರ ಆವತ್ತ ಕಿತ್ತೂರ ಷ್ಟ್ಯಾಂಡ ಮ್ಯಾಗ ಗದ್ದಲದ ಜತೆಗೇನs ಏನೋ ಒಂದು ಮಜೇಶೀರ ಹವಾ ಬಿಟ್ಟಂಗಿತ್ತು. ಒಂದೇನೋ ವಿಷೇಶ ಹಕೀಕತ್ತs ಇದ್ದಂಗಿತ್ತು, ಮಜಕೂರ ಬ್ಯಾರೆ ಇದ್ದಂಗಿತ್ತು.

ಇಕಡೇ 'ಪರಬೂ ವಿಲಾಸ'ದ ಬಾಜೂಕ ಕೊಳ್ಳ ಹರದದ್ದ ಒಂದ ಚಕಡೀ ನೊಗಕ್ಕ ಆತು ನಿಂತಗೊಂಡಂತ ಒಬ್ಬ ಗಂಡುಮಗ, ಹತ್ತ ಸರೇ ಹೋಗೋ ಬರೋರನೆಲ್ಲ ಯಪ್ಪಾ ಯರಗಟ್ಟಿಗೆ ಹೋಕ್ಕೈತೇನ್ರಿ ಈ ಬಸ್ಸು ಅಂತ ಒದ್ದ್ಯಾಡಾಕ ಹತ್ತಿದ್ದಲ್ಲs ಆಕಿನ್ನ ಟಕ ಮಕ ಟಕ ಮಕ ನೋಡಿಕೊಂತ ನಿಂತಿದ್ದ. ಗಂಡಮಗ್ಗ ಸಾದಾರಣ ಮುವತ್ತು ಮುವತ್ತೈದರ ಹರೇ  ಇದ್ದೀತು. ಎತ್ತರ ಮೈಕಟ್ಟು, ಹೊಲದಾಗ ದುಡದು ಹುರಿಕಟ್ಟಿದ ದೇಹ, ಕೆದರಿದ ಕೂದಲ, ಚೂಪನ್ನ ಮೂಗು, ನಗೂ ಕಣ್ಣಗೋಳ, ದಟ್ಟ ಮೀಶೆ, ಯಲೀಅಡ್ಕಿ ಬಾಯಿ, ಒಟ್ಟಿನ ಮ್ಯಾಗ ಶೆಟ್ಟರ ಓಣಿ ಕಾಮಣ್ಣನ ಗತೆ ಇದ್ದ ಮನಿಶಾ. ಬಲಗಡೆ ಬಗಲಾಗ ರುಮಾಲ ಮುದ್ದಿ ಮಾಡಿ ಹಿಡಕೊಂಡು, ಎಡಗೈ ಮುಷ್ಟೀಲೇ ಒಂದು ಬರ್ಕಲಿ ಸಿಗರೇಟ ಸೇದಿಕೊಂತ ನಡುನಡಕ ಹಾವಿನ ಗತೆ ನಾಲಿಗೀ ಹೊರಗ ಚಾಚಿ ಸಾಕಷ್ಟು ಕೆಂಪು ಆಗೈತೋ ಇಲ್ಲೋ ಅಂತ ಮೆಳ್ಳಗಣ್ಣ ಮಾಡಿ ನೋಡಿಕೊಂತs ಸಿಗರೇಟಿನ ಕೈಲೇನ ಮೀಶಿ ತುದಿ ಹಗರಕ ತಿರುಚಿಗೊಂತ, ಒಂದಳತೀ ಕಣ್ಣಾಗನ ನಕ್ಕೋಂತ, ಯರಗಟ್ಟಿ ಹೆಣಮಗಳನ್ನು ಬಿಟ್ಟೂ ಬಿಡದ ನೋಡಿಕೊಂತ ನಿಂತಿದ್ದ.

ಯರಗಟ್ಟಿ ಹೆಣಮಗಳನ್ನ ನೋಡಾಕ ಹತ್ತಿದ್ದ ಅಂದ್ರ ಅದರಾಗ ಅಂವಂದೇನ ತೆಪ್ಪ ಇದ್ದಿದ್ದಿಲ್ಲ. ಆ ಪೋರಿ ಹಂಗs ತೆಳ್ಳಗ ಎತ್ತರ ಚಂದಾಗಿ ನೋಡತಕ್ಕವರಹಂಗ ದೆಖಾವೇನs ಇದ್ದಳು. ಇಡೀ ಕಿತ್ತೂರ ಬಷ್ಟ್ಯಾಂಡಿಗೆ ಬಷ್ಟ್ಯಾಂಡs ಆಕಿನ್ನ ನೋಡಾಕ ಹತ್ತಿತ್ತು. ಇರಲಿ ಅದೆಲ್ಲಾ ನಡಿಯೂದs.

ಅದs ಯೊಳೇಕ್ಕ ನಮ್ಮ ಖತಾ ನಾಯಕಿ ಯರಗಟ್ಟಿ ಹೆಣಮಗಳು ಆಕಡೇ ಇಕಡೇ ಅಡ್ಡಾಡಿ ಅಡ್ಡ್ಯಾಡಿ ಬ್ಯಾಸತ್ತು ಪರಬೂ ವಿಲಾಸದ ಬಾಜೂಕನs ಬಂದು, ಕೊಳ್ಳ ಹರದ ಚಕಡೀ ಹಂತೇಕ ಗ್ವಾಡೀ ನೆಳ್ಳಿಗೆ ಕುಕ್ಕರಗಾಲಲೇ ಕುಂತು, ಮೋತಿ ಮ್ಯಾಗಿನ ಬೆವರು ಸೆರಗಲೇ ಒರಸಿಕೊಳ್ಳಾಕ ಹತ್ತಿದ್ಲು. ಬಗಲಾಗಿನ ಬಿದಿರಿನ ಬುಟ್ಟಿ ಬಾಜೂಕ ಇಟಗೊಂಡು. ಅಂದ್ರ ನಮ್ಮ ಗಂಡಮಗ ಸಿಗರೇಟ ಸೇದಿಕೊಂತ ನಿಂತಿದ್ದನಲ್ಲ ತೇಟ ಅಲ್ಲೇ ಬಂದು ಕುಂತ್ಲು.

ಗಂಡಮಗ್ಗ ಗಡಿಗ್ಯಾಗಿನ ಗೋದಿಹುಗ್ಗಿ ಗಂಗಾಳದಾಗ ಬಿದ್ದಂಗಾತ್ತು. ಸೊರ್ಗ ನಾಕ ಬಟ್ಟು ಉಳಧಾಂಗಾತು. ಅಂವ ಕೈಯಾಗಿನ ಸಿಗರೇಟ ಚಲ್ಲಿ, ಕಾಲಾಗಿನ ಗಿರಕೀ ಮಛ್ಛೀಲೇ ಅದನ್ನು ಎಡಕೊಮ್ಮೇ ಬಲಕೊಮ್ಮೇ ತಿರುಚಿ ಹಿಸಕಿ ಹಾಕಿ ಹಗರಕ ಹೆಣಮಗಳ ಹಂತ್ಯಾತ

ಬಂದು 'ಯಾ ಊರಿಗೆ ....?' ಎಂದು ಪೀಟಿಕಾ ಹಾಕಿದ.

"ಯರಗಟ್ಟಿಗಿರಿss" ಎಂದಳು ಬಾಲೆ.

"ಹೌಂದೇನ? ಬೇಶಾತಲ್ಲ ... ನಾನೂ ಯರಗಟ್ಟಿಯವನ ... ಯರಗಟ್ಟ್ಯಾಗ ಯಾರ ಮನೇವ್ರು ... ಏನಾಂತರೂ ತಿಳೀಲಿಲ್ಲ" ಅಂತ ಕೆದಕಾಕ ಹತ್ತಿದ.

"ನಾವು ಖುದ್ದ ಯರಗಟ್ಟ್ಯಾವರಲ್ಲರೀ... ಅದರ ಹಂತ್ಯಾಕ ಹತ್ತ ಮೈಲ ಬಿಟ್ಟು ದ್ಯಾಮಾಪುರದವ್ರು, ಯರಗಟ್ಟ್ಯಾಗ ನಮ್ಮಣ್ಣನ ಮಗನ ಲಗ್ಗಣ ಕಾರೆ ಇಟಗೊಂಡಾರ. ಅದಕಂತ ಮನ್ನಿ ಬೈಲಹೊಂಗಲಕ ಹೋಗಿ ಬಣಗಾರ ಕಡಿಂದ ಬಾಶಿಂಗ ಮಾಡಿಸಿಕೊಂಡ, ಚಿತ್ತರಿಗಿ ಸ್ವಾಮಿಗೋಳಿಗೆ ಪಾದಕ್ಕೆ ಮುಟ್ಟಿಸಿ... ಹತಗಡ್ಯಾವರಿಗೆ ನಿರೂಪ ಮುಟ್ಟಿಸಿ, ಮುಂಜಾಲಿ ಕಿತ್ತೂರಿಗೆ ಬಂದ, ಹೂವ ಹಾರಾ ತಗೊಂಡು ಹೊಂಟೇನಿ" ಎಂದು ಬಿದಿರಿನ ಬುಟ್ಟಿಯಲ್ಲಿದ್ದ ಎರಡು ಬಾಶಿಂಗಗಳನ್ನೂ ಕಾಗದದ ಪಟ್ಟಣದಾಗ ಸುತ್ತಿದ ಹೂವಿನ ಹಾರಾನೂ ತೋರಿಸಿದಳು. "ಯಷ್ಟೊತ್ತಿಗೆ ಕಾರೇ ಯರಗಟ್ಟ್ಯಾಗ....?"ಕೇಳಿದ ಗಂಡುಮಗ.

"ಮುಂಜಾಲೇ ಇತ್ತರೀ... ಹಾಂಗ ನೋಡಿದ್ರೆ ಯಾಳೇ ಆಗೇತಿ" ಅಂದಳ ಅಕಿ ಹೊಸಾ ಶೀರಿಯಾಕಿ.

ಅದನ್ನು ಕೇಳಿ ಅಂವ ಕೇದದಿಂದ... "ಚೇ... ಚೇ... ಚೇ... ಹಂಗಾರ ಬಾಶಿಂಗ ಯರ್ತ ಆದಾಂಗಾತಲ್ಲ" ಅಂದ.

"ಅದೆಂಗ ಯರ್ತ ಆಕ್ಕೈತ್ರಿ? ಬಾಶಿಂಗನ ಇಲ್ಲದ ಕಾರೇ ಹೆಂಗ ಮಾಡತಾರು, ನಿಮದೊಂದss" ಅಂದ್ಲು.

"ಅದೂ ಕರೇವ ಅನ್ನು ಅಂಥಂಗ ಒಬ್ಬಾಕೀನss ಹೊಂಟಂಗ ಕಾಣತೈತಲ್ಲ? ಗಂಡ ಮಕ್ಕಳೂ ಹೆಸರೂ – ದೆಶಿ" ಅಂತ ಮತ್ತ ಗೆಬರ್ಯಾಡಾಕ ಹತ್ತಿದ ಮನಿಶಾ. "ನನಗ ಸಣ್ಣೀರವ್ವ ಅಂತಾ ಹೆಸರಿಟ್ಟಾರs. ನಮ್ಮ ಅವ್ವನ ಹೆಸರು ಈರವ್ವ ಅಂತ ಇತ್ತಂತs ನಾ ಹುಟ್ಟೂತಲೆ ನಮ್ಮ ಅವ್ವ ಸತ್ತ ಹೋದಳಂತ, ಅದಕ್ಕ ಎಲ್ಲಾರೂ ನನಗ ಸಣ್ಣೀರಿ... ಸಣ್ಣೀರಿ ಅಂತಾರ" ಅಂದು ಮಕಾ ಮ್ಯಾಲ ಮಾಡಿ ಅವನ ಮೋತಿ ನೋಡಾಕ ಹತ್ತಿದಳು. "ನನಗ? ನನ್ನ ಹೆಸರು ಮಲ್ಲಿಕಾರ್ಜುನಪ್ಪ, ಎಲ್ಲಾರು ಮಲಕಾಜೀ, ಮಲಕಾಜಪ್ಪ ಅಂತಾರು...." ಅನಕೋತ ಮಲಕಾಜಿ ಇನ್ನೂ ಏನೇನೋ ಹೇಳಾಂವಿದ್ದ. ಅಷ್ಟರಾಗ ಇಚ್ಚೇಕಡಿಂದ ಒಂದ ಬಸ್ಸು ಬಂದದ್ದು ನೋಡಿ ಸಣ್ಣೀರವ್ವ ಬಗಾನs ಬಾಶಿಂಗದ ಬುಟ್ಟಿ ಬಗಲಾಗ ಇಟಗೊಂಡ ಓಡೋಡಿ ಬಂದ, ಕಂಡಕಟರನ ತರುಬಿ, "ಯಪ್ಪ ಯರಗಟ್ಟಿಗೆ ಹೋಕೈತೇನ್ರಿ ಇದು?" ಎಂದು ಕೇಳಿದಳು. ಹಿಂತಾ ಪ್ರಶ್ನೆಗೋಳಿಗೆ ಉತ್ತರಾ ಹೇಳಿ ಹೇಳಿ ಬ್ಯಾಸತ್ತ ಕಂಡಕಟರ ಕ್ವಾಪದಿಂದ "ನಿನಗೇನು

ತೆಲಿಗಿಲಿ ಅಯಿತೋ ಇಲ್ಲೊ? ಬಸ್ಸಿನ ಮೋತಿ ಎಲ್ಲೈತಿ... ಇನ್ನೊಂದೆಲ್ಲೈತಿ ಅದನ್ನದರ ನೋಡಲ್ಲ ಒಂದೀಟ. ಹುಬ್ಬಳಿಯಿಂದ ದಣೇ ಅಂತ ಬೆಳಗಾವಿಗೆ ಹೊಂಟೈತಿ, ಹಂತಾದರಾಗ ಯರಗಟ್ಟಿ ತರತಾಳ... ಯರಗಟ್ಟಿ" ಅಂತ ಬೈಕೊಂತ ಅನಕೊಂತ 'ಪರಬೂಯಿಲಾಸ'ಕ್ಕ ಹೊಂಟ, ಬಿಟ್ಟೀ ಚಾ ಕುಡಿಯಾಕ.

ಪಾಪ! ಸಣ್ಣೀರಿ ಮತ್ತ ಮೋತಿ ಸಣ್ಣದ ಮಾಡಿಕೊಂಡು ಮಲಕಾಜಪ್ಪ ಕುಂತಲ್ಲೆ ಬಂದಳು. ಮಲಕಾಜಿ ಅಕಿನ್ನ ಸಮಾದಾನ ಮಾಡಿಕೊಂತ "ಯಾಕ ಒದ್ದ್ಯಾಡತೀ ಬಾ, ಬಂದಾಗ ಬರ್ಲಿ, ಸರಕಾರೀ ಬಸ್ಸುಗೋಳ ಅವು, ಅವಕ್ಕೇನ ಹೊತ್ತ$_{ss}$ ಗೊತ್ತ$_{ss}$" ಅಂದ, ಥ್ವಾಡೇ ಹೊತ್ತ ಬಿಟ್ಟ "ಚಾ ಕುಡದ ಬರೋಣ ಬಾ" ಅಂದ, ಹೆದರಿಕೊಂತ ಸಣ್ಣೀರಿ ಮದಲ ಒಂದೀಟ ಮುರಕಾ ಮಾಡಿದರೂ ಅಮ್ಯಾಲೆ ಅವನ ಹಿಂಬಾಲೆ ಹೋದಳು. ಇಬ್ಬರೂ ಸಿದ್ಧಲಿಂಗೇಸ್ವರಕ್ಕ ಹೋಗಿ ಚಾ ಕುಡದು ಮತ್ತು ಹೊಳ್ಳಿ ಬಂದ ಗ್ವಾಡಿ ನೆಳ್ಳಿಗೇ ಕುಂತರು.

"ಇನ್ನ ಯಲೇಡಕೀ$_{ss}$..." ಅನಕೊಂತ ಮಲಕಾಜಿ ತನ್ನ ಕಿಶೆದಾಗ ಹುಡಕ್ಯಾಡಾಕ ಹತ್ತಿದ. ಅದನ್ನ ನೋಡಿ ಸಣ್ಣೀರಿ "ನನ್ನ ಹಂತ್ಯಾ ಅದಾವು" ಅನಕೋಂತ ಎಡಗೈಲೇ ಸೀರಿ ಸೆರಗ ನೆಟ್ಟಗ ಮಾಡಿಕೊಂತ, ಮೋತಿ ಆಚಿ ಕಡಿ ಹೊಳ್ಳಿಸಿ ಒಂದೀಟ$_{s}$ ಮೈ ಮಗ್ಗಲಾ ಮಾಡಿ ಮಲಕಟ್ಟಿನ್ಯಾಗಿಂದ ಚಂಚಿ ತಗದ ಮಲಕಾಜಿಗೆ ಯಲೇಡಕಿ ಕೊಟ್ಟ ತಾ ಆಟ ತಗೊಂಡು, ಮತ್ತ ಚಂಚಿ ಒಳಗೆ ಹಣಕಿ ಹಾಕಿ "ಅಯ್‌ನನ ಶಿವನ" ಅಂದಳು. "ಯಾಕ ಎನಾತು?" ಅಂತ ಮಲಕಾಜಿ ಕೇಳಾಣಾ, "ಸುಣ್ಣದ ಕಾಯೀನ$_{s}$ ಇಲ್ಲ" ಅನಕೊಂತ ನಗಾಕ ಹತ್ತಿದಳು. ಅವಾಗ ಮಲಕಾಜಿ "ನನ್ನ ಹಂತ್ಯಾಕ ಆಯ್ತಿ" ಅಂದ. ರುಮಾಲ ಬಿಚ್ಚಿ ಅದರ ಒಂದು ಸೈಡಿನ್ಯಾಗ ಗಂಟ ಕಟ್ಟಿದ್ದ ಸುಣ್ಣದ ಡಬ್ಬಿ ಬಿಚ್ಚಿ, ಬಲಗೈಯಾಗ ಡಬ್ಬಿ ಹಿಡಿದು ಎಡಗೈ ಹೆಬ್ಬೆಟ್ಟಲೇ ತನಗೇಟ ಬೇಕೋ ಆಟ ಗೆಬರಿಕೊಂಡ ಉಳದದ್ದನ್ನು ಗೀರಿ ಗೀರಿ ತಗದು ಎಡಗೈ ಹೆಬ್ಬಟ್ಟ ಸಣ್ಣೀರಿ ಮುಂದ ಸೆಟಸಿ ಹಿಡಿದ.



ಸಣ್ಣೀರಿ ತನ್ನ ಬಲಗೈ ಅಂಗಟೀಬಳ್ಳ ಹಗರಕ ಮುಂದ ಚಾಚಿ ಮಲಕಾಜೀ ಹೆಬ್ಬಟ್ಟಿನಿಂದ ಸುಣ್ಣ ಗೀರಿ ತೆಗಿಯಾಕ ಹೋದಳು. ತೆಗಿಯಾಕ ಹೋದದ್ದು ಏಟೋ ಆಟ$_{s}$.

ಬಟ್ಟಿಗೆ ಬಟ್ಟು ತಾಕಿತೋ ಇಲ್ಲೋ... ಚೀ... ಇಬ್ಬರಿಗೂ ಮೈಯಾಗ ಒಂತರಾ ಕರಂಟ ಹೊಡಧಂಗಾಗಿ ದೊಡ್ಡ ಗಾತನ ಆತು! ಮೈಯಾಗ ಕರಂಟ ಹೊಡ್ಯಾಣಾ ಸಣ್ಣೀರಿ ಲಜ್ಜೆಯಿಂದ ನಾಚಿ ನೀರಾಗಿ ಒಮಿಗಿತಲೇ ಗಬಕ್ಕಂತ ಎದ್ದು ಎಡ್ಡೊಕೈಲಿ ಪಟ ಪಟ ಹಿಂದಿನ ದೂಳಾ ಜಾಡಿಸಿಕೊಂತ ಆಕಡಿಂದ ಬರೋ ಯಾವದೋ ಬಸ್ಸಿನ್ಹಾಂತ್ಯಾಕ ಓಡಿದಳು.

ಆ ಕಡಿಂದ ಒಂದು ಉದ್ದಾನುದ್ದದ್ದು ಝುಗ ಝುಗ ಲಕ ಲಕ ಹೊಳಿಯೋ ನೀಲಿ ಬಣ್ಣದ್ದ ಲಕ್ಷುರೀ ಬಸ್ಸು ಬಂದು ನಿಲ್ಲೂತಲೆ ಅದರಾಗಿಂದ ಒಬ್ಬಾಂವ ಕಂಡಕಟರ ಡಾಯಿಬಿಟಿ ಬ್ಯಾನಿದ ನಿತ್ರಾಣ ಮೋತಿ ಮಾಡಿಕೊಂಡ ಗಡಿಬಿಡಿಯಿಂದ ಇಳದ ಗ್ವಾಡಿ ಹುಡಿಕ್ಕೊಂತ ಓಡಾಕ ಹತ್ತಿದ್ದ. ಸಣ್ಣೀರಿ ಹಂತಾ ಡಾಯಿಬಿಟಿ ಮನಿಶಾನ್ನ ಅಡ್ಡಗಟ್ಟಿ "ಯರಟ್ಟಿಗೆ ಹೋಕ್ಕೈತೇನ್ರಿ ಬಸ್ಸೂ?" ಎಂದು ಕೇಳಿದಳು. ತೊಗೋ ಕಂಡಕಟರ ಸಿಟ್ಟು ಬೆಂಕಿ ಆಗಿ "ಏನಮ್ಮಾ... ನಿಮಗೆ ಗ್ಯಾನ ಇದ್ದೈ? ಹತ್ತ ಲಕ್ಷದ ಸುಪ್ಪರ್ ಡೀಲಕ್ಸ ಬಸನ್ನ ನಿನ್ನ ಯರಗಟ್ಟಿಗೆ ಓಡಿಸಿದರ ಸರಕಾರ ಚೀಟಿ ಎತ್ತಬೇಕೆ?" ಅನಕೊಂತ ಹಲ್ಲಕಚ್ಚಿ ಓಡಾಕಹತ್ತಿದ. ಪಾಪ, ಡಯಾಬಿಟಿ ಒತ್ತರಾಗಿರಬೇಕು. ಸಣ್ಣೀರಿಗೂ ಶಿಟ್ಟ ಬಂತ, "ಹೋಕ್ಕಿದ್ರ ಹೋಕ್ಕೈತ್ಯಂತ ಹೇಳು, ಇರದಿಕ್ಕ ಇಲ್ಲಂತ ಹೇಳು, ಅದೆಲ್ಲ ಬಿಟ್ಟು ತೆಲುಗು ತಮಿಳು ಬಾಸೆದಾಗ ಬೆಯ್ಯತೈತಲ್ಲ ಇದು ಮೂಳ" ಅನಕೊಂತ ನೆಟಿಗಿ ಮುರಕೊಂತ ಮತ್ತ ಮಲಕಾಜಿ ಕುಂತಿದ್ದನಲ್ಲ ಅಲ್ಲೇ ಬಂದ್ಲು.

ಇಕಡೇ ಸುಣ್ಣದ ಕರಂಟಿ ಹೊಡದಾಗಿನ ತೊಟ್ಟೊ ಮಲಕಾಜಿಗೆ ಸೊರ್ಗ ಎರಡ್ಸ ಬಳ್ಳ ಉಳಧಾಂಗಾಗಿತ್ತು. ಅಂವ ಸುಣ್ಣದ ಡಬ್ಬೀ ಮ್ಯಾಗಿನ ಕನಡೀ ಹಳ್ಳಾಗ ತನ್ನ ಮೋತಿ ನೋಡಿಕೊಂತs ಏನೇನೋ ಧೇನಿಸಿಕೊಂತs ಮೀಶಾಗs ನಕ್ಕೊಂತ ಕುಂತಿದ್ದ.

ಸಣ್ಣೀರಿ ಬರಾಣಾ ಇಬ್ಬರಿಗೂ ಯಾಡ್ಡ ಮಿನೀಟು ಒಂತರಾ ನಾಚಿಗೆ ಬಂದಂಗಾಗಿ ಸುಮ್ಮಗ ಕುಂತರು. ಆಮ್ಯಾಗ ಏನಾರ ಮಾತಡಬೇಕಂತ ಮಲಕಾಜೀನ,

"ಲಕ್ಷನ ನೋಡಿದರ ಯರಗಟ್ಟಿ ಕಾರೇದ ಯಾಳೆ ಮುಗದ ನಿನ್ನವು ಯಾಡ್ಡೂ ಬಾಶಿಂಗ ಯರ್ತ ಅಗೂಗತೆ ಕಾಣತೈತಲ್ಲ? " ಎಂದ.

"ಅಯ್ಯs ಸುಬಾ ನುಡೀರಿs ನಾ ಹೋಗೋ ಮಟ ಕಾರ್‍ಯೆ ಮುಗಸಾಂಗಿಲ್ಲವರು" ಅಂದ್ಲು ಸಣ್ಣೀರಿ.

ಬಾಶಿಂಗದ ಮಾತು ಬಂತಂತೋ ಅಥವಾ ಸುಣ್ಣದ ಬಟ್ಟಲೊಳಗೆ ಕರಂಟ ಹೊಡೆದಿತ್ತಂತೋ ಏನೋ, ಮಲಕಾಜಿ ಒಂದೀಟ ಮೈ ಛಳಿಬಿಟ್ಟು ಗನ ಧೈರ್‍ಯದಿಂದ ಸಣ್ಣೀರೀಗೆ.

"ಅಲ್ಲ ಸಣ್ಣೀರವ್ವ ನಿನ್ನ ಗಂಡ ಮಕ್ಕಳೂ ಏನ ಮಾಡತಾರ? ದ್ಯಾಮಾಪೂರದಾಗ ಹೊಲಮನಿ ಅದಾವೋ ಹೆಂಗ?" ಅಂತ ಕೇಳೇಬಿಟ್ಟ. ಸಣ್ಣೀರಿ ಕೇದದಿಂದ ಮೋತಿ ಸಣ್ಣದು ಮಾಡಿ "ಮೂರವರಸದ ಹಿಂದಲ ಉಗಾದಿಗೆ ಮದಿವ್ಯಾಗಿತ್ತು. ಮದಿವ್ಯಾಗಿ ಆರು ತಿಂಗಳಕ ಜ್ವಾಳದ ಕಟಾವ ಯಾಳೇದಾಗ ಹಾವು ಕಡದು ಹಿರ್ಯಾ ಗೊಟಕ್ ಅಂದ. ಮಕ್ಕಳಿಲ್ಲ...

ಮರೀ ಇಲ್ಲ. ಅಣ್ಣನ ಮನ್ಯಾಗ ಒಪ್ಪೊತ್ತ ನೀಡಿದರೆ ಒಪ್ಪೊತ್ತ ಇರದಿರಕ ಅದೂ ಇಲ್ಲ... ಹಿಂಗ ಅದೇನೀ... ಆತು" ಅನಕೋತ ನಿಟ್ಟಿಸಿರುಬಿಟ್ಟಳು. ಮಲಕಾಜೀ "ಚೀ... ಚೀ.... ಚಿ ಗ್ಯೆರ ಆತ ಸರಿ, ಇದೇನ ಬರಾಬ್ಬರಿ ಅಲ್ಲ.. ತಗೀ ಅನ್ನೇ... ಇದ ದೇವರ ಅನ್ನೇ..." ಅನಕೋತ ಇನ್ನೂ ಏನೇನೋ ಹೇಳಾಕ ಕೇಳಾಕ ಉತಾವಳಿ ಆಗಿದ್ದ. ಅಟರಾಗ ಒಬ್ಬಾಂವ ಲಂಡಚಣ್ಣ ಬನೀನ ಹಾಕಿದ ಕಿಲನರ ಗತೆ ಕಾಣೋ ಹುಡುಗ ಓಡೋಡಿಕೊಂತ ಇವರ ಕುಂತಲ್ಲೆ ಬಂದು "ಯಲ್ಲಿ ಹೋಗಾವರ್ರಿ!" ಅಂದ.

"ಯರಗಟ್ಟಿಗೆ" ಅಂದ ಮಲಕಾಜಿ.

"ಹೂಂ ಬರ್ರಿ" ಅನಕೋತ ಕಿಲನರ ಓಡಕೊಂತ ಹೊಂಟ.

ಸೂಕ್ಷ್ಮ ತಿಳಕೊಂಡಾವನ ಮಲಕಾಜಿ, ಸಣ್ಣೀರಿಗೆ "ಮಾಲಗಾಡಿ ಕಾಲೀ ಹೊಂಟಿರಬೇಕ ಬಾ" ಅನಕೊಂತ ಓಡಾಕ ಹತ್ತಿದ. ಅವನ ಹಿಂಬಾಲೆ ಸಣ್ಣೀರಿ ಬಾಶಿಂಗದ ಬುಟ್ಟಿ ಬಗಲಾಗ ಇಟಗೊಂಡ ಓಡಾಕ ಹತ್ತಿದಳು. ಈ ರೀತಿ ಕಿಲನರ, ಅವನ ಹಿಂಬಾಲೆ ಮಲಕಾಜಿ ಅವನ ಹಿಂಬಾಲೆ ಸಣ್ಣೀರಿ ಓಡಾಕ ಹತ್ತಿದ್ದ ನೋಡಿ, ಆಜೂ ಬಾಜೂದ ಪಾಸಿಂದರಗೋಳ ಸೈತ "ಯಾವಲ್ಲಿಗೆ, ಯಾವಲ್ಲಿಗಿರೀ ಮಾಲಗಾಡಿ ಏನ್ರಿ" ಅಂತ ಕೇಳಿಕೊಂತ ಇವರ ಹಿಂಬಾಲೆ ಓಡಾಕ ಹತ್ತಿದರು.

ಷ್ಟ್ಯಾಂಡಿನ ಹೊರಗ ಲೇನ ಮ್ಯಾಲ ಒಂದ ಟ್ರಕ್ಕ ನಿಂತಿತ್ತು. ಆಗಲೇ ಅದರ ಸುತ್ತ ಮಂದಿ ಮುಕರಾಕ ಹತ್ತಿದ್ದರು. ಕೆಲಕೆಲವರು ಟಾಯರ ಗಾಲೀ ಮ್ಯಾಗ ಕಾಲಕೊಟ್ಟ ಹಿಂದ ಮಾಲ ತುಂಬೋ ಅಲ್ಲೇ ಹತ್ತಾಕ ಹತ್ತಿದ್ದರು. ಹಂತಾ ಗದ್ದಲದಾಗನ್ನ ಮಲಕಾಜೀ ಡ್ರಾಯಿವರ ಸಾಹೇಬಗ ಹತ್ತು ರೂಪಾಯಿ, ಮ್ಯಾಗ ಒಂದು ಸಿಗರೇಟ ಕೊಟ್ಟು, ತನಗ ಸಣ್ಣೀರಿಗೆ ಮುಂದ ಕೇಬಿನದಾಗ ಡ್ರಾಯಿವರ ಬಾಜೂಕ ಜಾಗಾ ದೊರಕಿಸಿಕೊಂಡ. ಡ್ರಾಯಿವರ ಅವನ ಮಗ್ಗಲದಾಗ ಕಿಲನರ, ಕಿಲನರ ಮಗ್ಗಲದಾಗ ಮಲಕಾಜಿ, ಇಕಡೇ ಮಲಕಾಜಿ ಮತ್ತ ಬಾಗಲದ ನಡುವ ಸಣ್ಣೀರಿ. ಹಿಂಗ ಹತ್ತಂಡಿಯಾಗಿ ಕುಂತರು.

ಅದೊಂದು ಹಳೇ ಕಟರಾ ಟ್ರಕ್ಕು, ಗಡ, ಗಡ, ಗಡ, ಗಡ ಸಪ್ಪಳಾ ಮಾಡಿಕೊಂತ ಹೊಯ್ದಾಡಿಕೊಂತ ಹೊಂಟಿತು. ರಸ್ತೇದ ಮ್ಯಾಗಿನ ಹೊಂಡಾ, ತೆಗ್ಗಿನ್ಯಾಗ ಧಡಕ್, ಧಡಕ್ ಅಂತ ಬಿದಗೊಂತ ಎದಕೊಂತ ಹೊಳ್ಳಿಕೆ ಬರೋ ಅಲ್ಲೇ ಒಪ್ಪಾರೆ ಆಗಿ 'ಒಲ್ಯೋ ಬಗವಂತ' ಅನಕೊಂತ ಲಿಕಿ ಲಿಕಿ , ಕಿರಿ ಕಿರಿ ಮಾಡಿಕೊಂತ, ಅತಗೊಂತ ಹೊಂಟಿತು.

ಮ್ಯಾಗ ಸುಡೂ ಬಿಸಿಲು, ಶಕಿ, ದೂಳು, ಟ್ರಕ್ಕದ ಯಣ್ಣೀ ಉಗ್ರನಾತ, ಅದರಾಗ ಬ್ಯಾರೆ ಹೊಸಾಸೀರಿ ಕಣ ಮೈಗೆ ಒಂದಳತಿ ಚುಚ್ಚಾಕಹತ್ತಿದ್ದವು. ಹಂತಾದರಾಗ ಪಾಪ ಸಣ್ಣೀರಿ

‘ದೇವ್ರ ಏನಾರ ಆಗಲಿ ಬಾಶಿಂಗ ಯರ್ತ ಆಗಬಾರದು.. ದೌಡ ಮುಟ್ಟಿಸು… ಬಾಶಿಂಗ ಯರ್ತ ಮಾಡಬ್ಯಾಡಾ….’ ಅಂತ ಮನಸ್ಸಿನ್ಯಾಗ ಮಾದೇವಗ ಬೇಡಿಕೊಂತ ಕುಂತಿದ್ದಳು.

ಅಂತೂ ಯಿಂತೂ ಸಂಜೀ ನಾಕರ ಯಾಳೇಕ್ಕ ಬಿಸಿಲು ಇಳ್ಯೂ ಹೊತ್ತಿನ್ಯಾಗ ಮಲಕಾಜಿ ಸಣ್ಣೀರಿ ಯರಗಟ್ಟಿ ಮುಟ್ಟಿದರು.

ಟ್ರಕ್ಕ ಮ್ಯಾಗಿಂದ ಜಿಗಿದವರ್‍ಸ ಇಬ್ಬರೂ ಓಡಿಕೊಂತ ಓಡಿಕೊಂತ ಗೌಡರ ಓಣ್ಯಾಗ ಹಾದು, ದೇಸಾಯರ ವಾಡೇ ದಾಟಿ, ತಿಪ್ಪಯ್ಯನ ಮಠದ ಬಗಲಾಗಿಂದ, ಊರ ಹೊರಗ ಹಳ್ಳದ ದಂಡೀ ಮ್ಯಾಗ, ಯೀರಬದ್ರ ದೇವರ ಗುಡಿಗೆ ಬಂದ ಮುಟ್ಟಿದರು. ಸಣ್ಣೀರಿ ಅಣ್ಣನ ಮಗನ ಕಾರೇ ಅಲ್ಲೇ ನಡ್ಯೂದಿತ್ತು ಮತ್ತು ಅದಕ್ಕಂತ ಪಾಪ ಸಣ್ಣೀರಿ ಬಾಶಿಂಗ ತಗೊಂಡು ಓಡ್ಯೋಡಿ ಓಡ್ಯೋಡಿ ಬಂದ್ಲು.

ಬಂದ್ಲೇನೋ ಕರೆ! ಆದರ ಆದದ್ದೇ ಬ್ಯಾರೆ!!!

ದ್ಯಾಮಾಪುರದವರು, ಅಂದ್ರ ಸಣ್ಣೀರಿ ಅಣ್ಣ, ಅಣ್ಣನ ಹೆಣ್ತಿ ಕೂಡಿದ ಮಂದೆಲ್ಲ ಮಧ್ಯಾಣ ಎರಡರ ಮಟ ಸಣ್ಣೀರಿದೂ ಬಾಶಿಂಗದ್ದೂ ಹಾದಿ ನೋಡಿ ನೋಡಿ ಬ್ಯಾಸತ್ತು, ಕಡೀಕ ಉರಾಗಿನ ಹುಡುಗನೊಬ್ಬನ್ನ ಘಟಘಟ ಮ್ಯಾಗ ಗೋಕಾಕಕ್ಕ ಕಳಿಸಿ ಬ್ಯಾರೇನ ಎಡ್ಡ ಬಾಶಿಂಗ ತರಿಸಿಕೊಂಡ ಲಗ್ಗಣ ಕಾರೇ ಮುಗಿಸಿಕೊಂಡ, ಹುಗ್ಗೀ ರೊಟ್ಟಿ ತಿಂದ, ಅಡ್ಡ ಮಳಿ ದಿವ್ಸ ಅಂದು ತಮ್ಮ ತಮ್ಮ ಚಕಡಿ, ಟ್ಯಾಕ್ಟರ ಹೊಡಕೊಂತ ಹೊಳ್ಳಿ ದ್ಯಾಮಾಪುರಕ್ಕೆ ಹೋಗಿ ಬಿಟ್ಟಿದ್ದರಂತ. ಸಣ್ಣೀರಿ ಬಂದಾಗ ಬರ್‍ಲಿ ಅನಕೊಂಡ.

ಕಾರೇದ ಉಳದದ್ದ ಹುಗ್ಗೀ ರೊಟ್ಟಿ ತಿನಕೊಂತ ಕೂತಂತ ಒಂದಿಬ್ಬರು ದನ ಕಾಯೋ ಹುಡುಗರು ಇಷ್ಟೆಲ್ಲ ನಡೆದದ್ದ ಹಕೀಕತ್ತು ಹೇಳಿದರು.

ನಡದಂತಾ ಗಟನಾವಳಿ ಕೇಳಿ ಸಣ್ಣೀರಿ ಪಾಪ ದುಕ್ಕ ತಡೀಲಾರದ ಬಡಬಡಕೊಂಡ ಅಳಾಕ ಚಾಲೂ ಮಾಡಿದಳು. “ಅಯ್ಯೋ ನನ ಕತೀನ… ನನ್ನ ಹಣೇಬರನ ಖೊಟ್ಟಿ ಆಯ್ತಿ… ನನ್ನ ನಶೀಬನ ಹರಕೈತಿ… ನನ್ನ ದೈವನ ಕುರಡೈತಿ…ಬಾಶಿಂಗಗೋಳು ಯರ್ತ ಆಗಬಾರದಂತ ಓಡೋಡಿ ಬಂದೆನಲ್ಲೋ ಯಣ್ಣಾ…” ಅನಕೊಂತ ಒಂದಳತೀ ದುಕ್ಕ ಬಡಾಕ ಹತ್ತಿದಳು.

ಪಾಪ ಮಲಕಾಜಪ್ಪ ಸಹಿತ ಮನಸ್ಸಿಗೆ ಖಜೀಲ ಅನಿಸಿಗೊಂಡ. ಯಷ್ಟ ಒದ್ದ್ಯಾಡಿದರೂ ಬಾಶಿಂಗ ಯರ್ತ ಅದೂವಲ್ಲ ಅಂತ ಮೋತಿ ಒಂಥರಾ ಮಾಡಿಕೊಂಡ ಕೇದದಿಂದ ನಿಂತಿದ್ದ. ಬಾಜೂಕನ್‍ಸ ಬಡಬಡಕೊಂತ ಅಳೋ ಹೆಣ್ಣ ಹೆಂಗಸು… ಹೆಣ್ಣು ಬಾಲಿ, ಆಕಿನ್ನ ಹೆಂಗ ಸಮಾದಾನ ಮಾಡೋದು… ಹೇಂಗ ಸಮಜಾಯಿಸಿ ಹೇಳೂದ

ತಿಳೀದ ಮರ ಮರ ಮರುಗಿದ. ಕಡೀಕ ತಾನ್ನ ಅಕಿ ಹಂತೆಕ್ಕ ಕುಂತ.

"ಹೋಗ್ಲಿ ಬಿಡ ಕಾರೆ ಅಗೇತೆಂತಲ್ಲ... ಅದೂ ಅಲ್ಲದ ನೀ ಏನ ಬೇಕಂತ ಮಾಡಿದ್ಯಾ... ಯಾಳೆಸೀರ ಬಸ್ಸು ಸಿಗದಿರಕ ನಿಂದರ ಏನತೆಪ್ಪ... ಸಾಕಮಾಡ ಇನ್ನ...ಎಷ್ಟದ ಅಳೋದಾ?" ಅನಕೊಂತ ತನಗ ತಿಳದಂಗ ಆಕಿನ್ನ ಸಮಾಧಾನ ಮಾಡಾಕ ಹತ್ತಿದ.

ಆದರೂ ಸಣ್ಣೀರಿ ದುಕ್ಕದಿಂದ ಬಿಕ್ಕಿಗೊಂತ "ನಿಮಗ ಗೊತ್ತಿಲ್ಲರೀ... ನಮ್ಮಣ್ಣ ಎಡ್ಡದಿನ ಶಿಟ್ಟವಾಡಿ ಸುಮ್ಮಗಾದಾನು... ಆದ್ರ ಆದ್ರ ನಮ್ಮಣ್ಣನ ಹೇಣ್ತಿ... ನಮ್ಮತ್ತಿಗಿ...ನಿಮಗೊತ್ತಿಲ್ಲರೀ...." ಅನಕೊಂತ ಮತ್ತ ಮತ್ತ ದುಕ್ಕಸಾಕ ಹತ್ತಿದಳು.

ಮಲಕಾಜಪ್ಪ ಎರಡ ಮಿನಿಟ ಯೋಚಣೆ ಮಾಡಿದ. ಮಧ್ಯಾಹ್ನ ಕಿತ್ತೂರ ಬಷ್ಟ್ಯಾಂಡನ್ಯಾಗ ಸಣ್ಣೀರವ್ವನ್ನ ನೋಡಿದಾಗಿನ ತೊಟ್ಟು ಅವನ ತಲ್ಯಾಗ ಒಂದ ಯಿಚಾರ ಸುಳಿಯಾಕ ಹತ್ತಿತ್ತು. ಆ ಮ್ಯಾಗ ಈಗ ನಡದಂತ ಪರಸಂಗ ಎಲ್ಲಾ ನೋಡಿ ಆ ಯಿಚಾರ ಗಟ್ಟಿ ಆದಂಗಾತು. ಅಂವ ನಡಗೂ ಕೈಲೇ ಸಣ್ಣೀರಿ ತಲೀಮ್ಯಾಗ ಹಗರಕ ಕೈ ಆಡಿಸಿಕೊಂತ ಹೇಳಾಕ ಹತ್ತಿದ "ಚಿಂತಿ ಮಾಡಬ್ಯಾಡ... ನಿನಗೊಂದ ಮಾತ ಹೇಳೋದೈತಿ. ನೋಡು ನೀ ಹ್ಯಾಂಗ ಗಂಡನ್ನ ಕಳಕೊಂಡ ಮಕ್ಕಳೂ ಮರಿ ಇಲ್ಲದ ಉಡಕೀ ಹೆಂಗಸ ಆದಿಯೋ ಹಂಗs ನಾನೂ ಹೆಣ್ತೀನ ಕಳಕೊಂಡ ಇಮನೀ ಗಂಡ ಅದೇನು. ಹ್ವಾದ ವರಸ ಮದಿವ್ಯಾಗಿತ್ತು. ಒಮ್ಮಗಿಲೆ ಕಟ್ಟಿನ ಜ್ವರ ಬಂದು ಮನಿಯಾಕಿ ಹೋಗಿಬಿಟ್ಟಳು. ಮನ್ಯಾಗ ಅವ್ವ ಮುದಿಕಿ ಒಬ್ಬಾಕೇನ ಅದಾಳು. ಒಂದಳತೀ ಇನ್ನೊಂದ ಮಾಡಿಕೋ, ಇನ್ನೊಂದ ಮಾಡಿಕೋ ಅಂತ ತಗಾದೆ ಹಚ್ಚಿರತಾಳು. ಊರಾಗಿನ ಹಿರಿಯರ ಕಡಿಂದ ಸಹಿತ ಹೇಳಿಸ್ಯಾಳ. ನಾವು ಇದ ಯರಗಟ್ಟ್ಯಾವರು. ನಾಕು ಕೂರಿಗೆ ಹೊಲಾ ಅದಾವು. ಊರಾಗ ಮನೀ ಆಯ್ತಿ. ನಾಲಕೆತ್ತಿನ ಕಮತ ಅಯ್ತಿ... ಹೊಟ್ಟೀ ಬಟ್ಟೀ ಚಿಂತಿಲ್ಲ.... ನಿ ಅರ ಎಷ್ಟ ದಿವ್ಸಂತ ನಿಮ್ಮಣ್ಣನ ಹೇಣ್ತಿ ಕೈಯಾಗ ಸೋಸತಿ... ಅದಕ್ಕ ಮತ್ತ ನಿ ಹೂಂ ಅಂದರ ಹ್ಯಾಗೂ ನೀ ತಂದಿದ್ದ ಎಡ್ಡ ಬಾಶಿಂಗ ಅದಾವು..." ಅಂತ ಅರ್ಧ ಧೈರ್ಯ ಅರ್ಧ ಹೆದರಿಕೆಯಿಂದ ಕಮ ಕಮ ಅಂತ ಹೇಳಿಬಿಟ್ಟ.



ಮಲಕಾಜಿ ಹೇಳೋದನ್ನೆಲ್ಲ ಕೇಳೋ ಮುಂದ ಸಣ್ಣೀರಿ ಮನಸ್ಸಿನ್ಯಾಗ ಏನ ದುರಗಮುರಗಿ ಆಟ ನಡೆದಿತ್ತೋ ಆಕಿಗೆ ಗೊತ್ತು. ಆಕಿ ತುಂಬಿದ ಎರಡೂ ಕಣ್ಣುಗೋಳನ್ನ ಮ್ಯಾಲೆತ್ತಿ ಮಲಕಾಜಿ ಕಡೆ ಒಮ್ಮೆ ನೋಡಿ ಮತ್ತ ತಲಿ ತಗ್ಗಿಸಿ "ಅಯ್ಯ ಶಿವನ ಏನ ಮಾತಾಡಕ ಹತ್ತೀರೀ" ಅನಕೊಂತ ಕೆಂಪಗ ಚಪ್ಪರಬದನೀಕಾಯಿಗತೆ ಆದಳು.

ಮಲಕಾಜಿ "ಕೇಳss ದೇವರ ನನ ಬಾಯಾಗ ಕುಂತ ಈ ಮಾತು ಆಡಿಸ್ಯಾನಂತ

ತಿಳಿ. ನೋಡೆರ ನೋಡ ನಿನ್ನ ಹೆಂಗ ಅಂಗೈಯಾಗಿನ ಅರಗಿಣಿ ಹಂಗ ಸಾಕತೇನ. ನನಗೂ ಯಾರಿಲ್ಲ, ನಿನಗೂ ಯಾರಿಲ್ಲ, ಅಷ್ಟಲ್ಲದ ಬಾಶಿಂಗ ಯರ್ತ ಆಗಬಾರದಲ್ಲ. ನೀ ಹೂಂ ಅರs ಅನ್ನು " ಅಂತ ದೈನಾಸ ಬಟಗೊಳ್ಳಾಕ ಹತ್ತಿದ.

ಸಣ್ಣೀರಿ 'ಹೂಂ'ನು ಅನಲಿಲ್ಲ. 'ಹಾಂ'ನೂ ಅನಲಿಲ್ಲ. ಮೋತಿ ಕೆಳಗ್ಹಾಕಿ ಹಲ್ಲಾಗ ಸೆರಗ ಜಗ್ಗಿಕೋತ, ಎಡಗಾಲ ಹೆಬ್ಬೆಟ್ಟಲೇ 'ರ‍್ಯೊಂ' ಅಂತ ಒಂದ ಅರ್ಧ ರೌಂಡ, ಗಿರಮಿಟ ಎಳೆದಳು. ಅರ್ಧ ಚಂದ್ರಾಮನಗತೆ.

ಹರೇದ ಹೆಣಮಗಳು, ಚಪ್ಪರಬದನೆಕಾಯಿಗತೆ ಕೆಂಪ ಮೂತಿ ಮಾಡಿಕೊಂಡು ಹಲ್ಲಾಗ ಸೆರಗ ಸಿಗಿಸಿಕೊಂಡ ಎಡಗಾಲ ಹೆಬ್ಬೆಟ್ಟಲೇ ನೆಲದಮ್ಯಾಗ ರ‍್ಯೊಂ ಅಂತ ಅರ್ಧ ಚಂದ್ರಾಮನ್ನ ಗೀರಿದರ ಅದರ ಅರ್ಥ ಏನಾಕ್ಕೈತಿ ಅಂತ ತಿಳೀದಟ ದಡ್ಡೇನಲ್ಲ ಮಲಕಾಜಿ. ಆದರೂ ಆಕಿ ಬಾಯಿಂದನ ಕೇಳಬೇಕಂತ "ಹಂಗಾರ ಏನ ಅಂಥಂಗಾತು" ಅಂದ.

ಸಣ್ಣೀರಿ ಮೋತಿ ಮ್ಯಾಲ ಎತ್ತದನs "ನಂದೇನ ಹೆಂಗೂ ಅಕ್ಕೈತಿ, ಆದ್ರ ಪಾಪ ಬಾಶಿಂಗ ಯರ್ತ ಆಗಬಾರದಲ್ಲಾ " ಅಂದ್ಲು, ಆಕಿನೂ ಬೆರಕಿ.

ಮಲಕಾಜಪ್ಪಗ ಸೊರ್ಗ ಒಂದs ಬಳ್ಳ ಉಳಧಾಂಗಾತು. ಬಡಾಬಡಾನ ಆ ದನಾ ಕಾಯೋ ಹುಡುಗರೂನ ಊರಾಗ ಹಚಕೊಟ್ಟ ಹಿಂಗಿಂಗ ಅಗೇತಿ, ಹಿಂಗಿಂದ ಹಿಂಗ ಹೀಂಗಾಗಿ ಹಿಂಗ ಅಂತ ತನ್ನ ಮುದುಕಿ ಅವ್ವಗ, ಗೆಳ್ಯಾರಿಗೆ ಹತಗಡೆಯವರಿಗೆ ಯಲ್ಲಾರಿಗೂ ಹೇಳಿ ಕಳಿಸಿದ. ಅಯ್ಯನೋರನ, ಬ್ಯಾಂಡ ಬಾಜೇದವರನ, ಸುಬದ ಆರತಿಗೆ ಗರತೇರನ, ಯಲ್ಲಾರನೂ ಕರೆಸಿದ. ದ್ಯಾಮಾಪೂರಕ್ಕ ಟ್ರಾಕ್ಟರ ಹಚಗೊಟ್ಟ ಸಣ್ಣೀರಿ ಅಣ್ಣನ್ನ ಮತ್ತ ಬಾಕೀ ಪಾವಣೇಗೋಳನ್ನ ಕರ‍್ಯಾಕ ಕಳಿಸಿದ.

ಹಾಂ ಹಾಂ ಅನ್ನೋದರಾಗ ಉರಾಗಿನ ಮಂದೆಲ್ಲ ಎದ್ದ ಬಂತು. ಮಲಕಾಜಿ ಯಲ್ಲರಿಗೂ ಬೇಕಾದವಾಗಿದ್ದ. ಹಿಂಗಾಗಿ ಛಕಡ್ಯಾಗ, ಟ್ರಾಕ್ಟರದಾಗ ಘಟಘಟಿ ಮ್ಯಾಗ ಸಾಯಕಲ್ ಮ್ಯಾಗ ಜನ ಓಡೋಡಿ ಬಂದರು. ಅಯ್ನೋರು ಬಂದರು. ಗರತೇರು ಬಂದರು. ನಡುಪಟ್ಟಿ, ಒಡ್ಯಾಣ, ಗುಳದಾಳಿ, ಮುಗಬಟ್ಟು, ಬೇತಲಮಣಿ, ಯಚ್ಚಾವತ್ ದಾಗೀಣ ತೊಗೊಂಡು ಮಲಕಾಜಿ ಅವ್ವ ಬಂದಳು. ಸಂಗಮೇಶ್ವರ ಬ್ಯಾಂಡ ಕಂಪೆನಿಯವರು ಚಂದಾಗಿ ಕೆಂಪು ಹಸಿರು ಅಂಗಿ ಚೊಣ್ಣ ಹಾಕ್ಕೊಂಡ ಬಂದ 'ಯೆಮ್ಮೆ ನಿನಗೆ ಸಾಟಿಯಿಲ್ಲ ' ಬಾರಸಾಕ ಹತ್ತಿದರು. ಅದು ಆದ ಮ್ಯಾಗ 'ದೂರದಿಂದ ಬಂದಂಥಾ ಸುಂದರಾಂಗ ಜಾಣ' ಬಾರಿಸಿದರು.

ಇಷ್ಟೆಲ್ಲಾ ಆಗೂಮಟ, ಮಂದೆಲ್ಲಾ ಕೂಡುಮಟ ಅಂದ್ರ ಹಗರ ಹಗರಕ ಸಂಜಿ ಪಸರಾಕ ಹತ್ತಿತ್ತು. ಕಡೀ ದನಕರದ ಹಿಂಡು ಅಂಬಾ ಅಂಬಾ ಅನಕೋತ ಓಡಿಕೋತ

ಚಿಮ್ಮಿಕೊಂತ ಹೊಳ್ಳಿ ಮನೀಗೆ ಹೊಂಟಿದ್ದೂ, ಆಕಾಶದಾಗ ಬೆಳ್ಳಕ್ಕಿ ಸಾಲು ಬುರ್ರಂತ ತರತರದ ಚಿತ್ತಾರ ಬರಕೋತ ಹಾರಿ ಹೊಂಟಿದ್ದೂ ಎಡ್ಡ ಮೂರು ಹಂಚಿನ ಮನೀ ಮ್ಯಾಗಿಂದ ಆಗಳೇ ರೊಟ್ಟಿ ಸುಡೋ ಹೊಗೀ ಮ್ಯಾಗಯದ್ದು ಹವಾದಾಗ ಕೂಡಾಕಹತ್ತಿತ್ತು. ಊರಾಗಿನ ಯಂಕಟೇಸ ದೇವರ ಗುಡಿ ಕಟ್ಟಿ ಮ್ಯಾಗ ಕುಂತ ಮಮದೂ  ಚೌಘಡಾ ಬಾರಸಾಕ ಹತ್ತಿದ್ದ. ಆಕಡಿ ಡಬಗಳ್ಳಿ ಕಂಟೀ ಸಾಲ ಮ್ಯಾಗ ಪರಾತದಂತಾ ಹಳದೀ ಚಂದಪ್ಪ ಮೂಡಿ ಬರಾಕ ಹತ್ತಿದ್ದ.

ಇಂತಾ ಚಂದನ್ನ ಗೋದುಳಿ ಮುಹೂರ್ತದಾಗ ಮ್ಯಾಗ ಆಕಾಶ ಮಾರ್ಗದಾಗ ನಂದೀ ಮ್ಯಾಗ ಕುಂತಗೊಂಡ, ಶಿವಾ ಪಾರ್ವತಿ ಆಕಡೆ ವಿಜಾಪುರದಿಂದ ಜಮಖಂಡಿ, ಮುದೋಳ, ಗೋಕಾಕ ಮಾರ್ಗದಿಂದ ಯರಗಟ್ಟಿ, ಸವದತ್ತಿ, ಹುಬ್ಬಳ್ಳಿ ಮ್ಯಾಗ ಹಾದು ಶ್ರೀಶೈಲಕ್ಕ ಹೊಂಟಿದ್ದರು. ಹುಬ್ಬಳ್ಯಾಗ ವಸ್ತಿ ಮಾಡೊಯಿಚಾರ ಇಟಗೊಂಡಿದ್ರು. ಕರೆಕ್ಟ ಯರಗಟ್ಟಿ ಆಕಾಶದಾಗ ಹಾಯೂಮುಂದ ಪಾರೋತಿ ತೆಳಗ ಯಿರಬದ್ರ ದೇವರ ಗುಡ್ಯಾಗ ನಡದಂತ ಸಣ್ಣೀರಿ ಲಗ್ಗಣ ಕಾರೇ ನೋಡಿ ಗಂಡಗ, "ತರಬರೀ... ಒಂದೀಟ ತರಬರಿ" ಅಂದಳು.

"ಚೆ ಮುಂಚೇಕ ಲೇಟ ಆಗೇತಿ, ದೌಡ ಹುಬ್ಬಳ್ಳಿ ಮುಟ್ಟದಿದ್ದರೆ ಪ್ಯಾಟೆಲ್ಲ ಬಂದ ಅಕ್ಕಾವು ಆ ಮ್ಯಾಗ ನಂದಿಗೆ ಮೇವು ಹಿಂಡಿ ಸಹಿತ ಸಿಗಾಕಿಲ್ಲ" ಅಂದ ಪರಶಿವ. "ಅಯ್ಯ ಒಂದೀಟ ತರಬರೀ ಕೆಳಗ ಕಾರೇ ನಡದೈತಿ ನೋಡಣು" ಅಂದಳು ಪಾರೋತೆಕ್ಕ.

"ಯಾಕ ಲಗ್ಗಣ ಯಂದೂ ನೋಡದವರ್ಹಂಗ ಮಾಡಾಕ ಹತ್ತಿಯಲ್ಲ. ದಿವ್ಸಾ ನೂರಾರು ಕಾರೇ ಆಗತಿರತಾವು..." ಅಂದ ಪರಮೇಶ್ವರ. 'ನೂರಾಗಲೀ ಸಾವೇರಾಗಲಿ ಇದ ನಮ್ಮ ಕಣ್ಣ ಮುಂದ ನಡದೈತಿ ಅಂತ ಮ್ಯಾಗ ನಿಂತ ಆರ್ಶೀವಾದ ಮಾಡಾಕ ಬೇಕಲ್ಲ ಒಂದೀಟಽ ಈಟ ತರಬರಿ' ಎಂದು ದಂಬಾಲು ಬಿದ್ದಳು ಮಾದೇವಿ.


ಶಿವಾ ಇರಲಿ, ಅವರಪ್ಪ ಇರಲಿ ಹೇಣ್ತಿ ಮಾತ ಅಂದಮ್ಯಾಗ ಕೇಳಾಕ ಬೇಕಲ್ಲ. ಅಂತ ಶಿವಾ ನಂದೀ ಹಗ್ಗ ಜಗ್ಗಿ "ಹೋಪ... ಹೋಪ... ಹಪ್... ಹಗರ... ಹಗರ..." ಅನಕೊಂತ ಕರೆಕ್ಟ ಲಗ್ಗಣ ಕಾರೇ ನಡೆದಲ್ಲೇ ಮ್ಯಾಗ ಆಕಾಶದಾಗ ನಿಂದರಿಸಿದ. ಶಿವ ಪಾರ್ವತಿ ಇಬ್ಬರೂ ಮ್ಯಾಗಿಂದ ಕಾರೆ ಎಲ್ಲಾ ನೋಡಿ ಸಂತೋಷಪಟ್ಟು ಸಣ್ಣೀರಿಗೆ ಮಲಕಾಜಿಗೆ ಆಶೀರ್ವಾದ ಮಾಡಿ ಮುಂದ ಹೊಂಟಾಗ ಇದ್ದಕ್ಕಿದ್ದಂಗ ಪಾರೋತಕ್ಕ ಕಿಸಕ್ಕಂತ ನಕ್ಕಳು.

"ಮತ್ತೇನ ಕಿತಬಿ ನಿಂದ, ನಗೂ ಹಂತೆದೇನಾತೀಗ" ಅಂತ ಕೇಳಿದ ಪರಮೇಶಿ. "ಏನಿಲ್ಲ, ಮತ್ತ ಸಾವಿರಾರ ವರ್ಸದ ಹಿಂದನಽ ನಾ ತಪಸ್ಸಿಗೆ ಕುಂತಾಗ ಆ ಕಿಡಿಗೇಡಿ

ಕಾಮಣ್ಣನ್ನ ಸುಟ್ಟು ಭಸ್ಮ ಮಾಡಿದ್ರೆಲ್ಲ? ಈಗ ನೋಡಿದ್ರ ಇನ್ನೂ ಅವನ ಬಾನಗಡಿ ನಿಂತಂಗ ಕಾಣುದುಲ್ಲಲ್ಲ... ಆ ಮಲಕಾಜಿನ್ನ ನೋಡರಿ ಆ ಹುಡಗಿಸಣ್ಣೀರಿ ಹಿಂಬಾಲೆ ಹ್ಯಾಂಗ ಪೆದ್ದ ಆಗ್ಯಾನ" ಅಂದಳು ಶಿವಕ್ಕ. ಶಿವ ಸಹಿತ ನಕ್ಕೊಂತ "ಹೌಂದ ಮತ್ತ ನಾನs ಪಾಪಂತ ಮತ್ತ ಕಾಮಣ್ಣನ ತಿರುಗಿ ಹುಟ್ಟಿಸಿದೆ. ಇರದಿಕ್ಕರ ಜಗತ್ತಿನ್ಯಾಗಿನ ಬಾಶಿಂಗಗೋಳೆಲ್ಲ ಯರ್ತ ಆಗಿ ಹೋಕ್ಕಿದ್ದವಲ್ಲ...." ಅಂದಾವನ ನಂದೀ ಹಗ್ಗ ಸಡಿಲ ಬಿಟ್ಟ ಯೆಡ್ಡೂ ಕೈಲೇ ಲಗಾಮು ಜಗ್ಗಿಕೊಂತ "ಹುರ‍್ಯಾ ಹಲ್ಯಾ.... ಹೋಳಾಗರೀ "ಅನಕೋತ ಹುಬ್ಬಳ್ಳಿಗೆ ದೌಡಾಯಿಸಿದ.

ಈ ರೀತಿ ಅವತ್ತ ಚಿಟಗೀ ಹೊಡೆಯೂದರಾಗs ಯರಗಟ್ಟಿ ಊರ ಹೊರಗ ಹಳ್ಳದ ದಂಡೀಮ್ಯಾಗ ಯೀರಬದ್ರ ದೇವರ ಗುಡ್ಯಾಗ, ದ್ಯಾಮಾಪುರ ಉಡ್ಕೀ ಹೆಂಗಸು ಸಣ್ಣೀರವ್ವನಿಗೂ ಮತ್ತೂ ಯರಗಟ್ಟಿಯವನ ಇಮನೀ ವರ ಮಲ್ಲಿಕಾರ್ಜುನಪ್ಪನಿಗೂ, ಬೈಲಹೊಂಗಲದ ಸ್ವಾಮಗೋಳ ಆಶೀರ್ವಾದ ಮಾಡಿ ಕೊಟ್ಟಂಥಾ ಬಾಶಿಂಗ ಕಟ್ಟಿ ಅಯ್ನೋರು , ಊರವರು ಸೇರಿ ಲಗ್ಗಣ ಕಾರೇ ಹೊಡೆಸಿಬಿಟ್ಟರು.

## ಶ್ರೀನಿವಾಸ ವೈದ್ಯ



ಶ್ರೀನಿವಾಸ ವೈದ್ಯರು ೧೯೩೬ ರಲ್ಲಿ ಧಾರವಾಡದಲ್ಲಿ ಜನಿಸಿದರು. ಬ್ಯಾಂಕಿನ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದವರು. ತಲೆಗೊಂದು ತರತರ, ಮನಸುಖರಾಯನ ಮನಸ್ಸು, ರುಚಿಗೆ ಹುಳಿಯೊಗರು ಇವರ ಕೃತಿಗಳು. 'ಹಳ್ಳ ಬಂತು ಹಳ್ಳ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಶೀನೂ' ಇವರ ಕಾವ್ಯನಾಮ. ಜೀವನದ ದಾರಿಯಲ್ಲಿ ತಾವು ಕಂಡಿರುವ ಅನೇಕ ವಿಚಿತ್ರಗಳನ್ನು ಕಂಡಂತೆಯೇ ಪರಿಭಾವಿಸುತ್ತ ಅವುಗಳನ್ನು ನಗೆಬರಹಗಳಾಗಿ ಬರೆಯುವುದು ಇವರ ವೈಶಿಷ್ಟ್ಯ.

## ಚಟುವಟಿಕೆಗಳು

- ಈ ಕಥೆಯಲ್ಲಿ ಬರುವ ಸಣ್ಣೀರಿ ಮತ್ತು ಮಲಕಾಜಿಯರ ಪಾತ್ರಚಿತ್ರಣ ಮಾಡಿರಿ.
- ‘ಆಡುಮಾತಿನ ಬಳಕೆಯು ಈ ಕತೆಯ ಸೊಗಸನ್ನು ಹೆಚ್ಚಿಸಿದೆ.’ ಈ ಹೇಳಿಕೆಯನ್ನು ಸಮರ್ಥಿಸಿ ಬರೆಯಿರಿ.
- ಹಳ್ಳಿಯ ಜನರ ಮುಗ್ಧತೆಯು ಈ ಕಥೆಯಲ್ಲಿ ಸಮರ್ಪಕವಾಗಿ ಬಂದಿದೆ ಎಂಬ ಅಭಿಪ್ರಾಯವನ್ನು ನೀವು ಒಪ್ಪುವಿರಾ? ಒಂದು ವಿಮರ್ಶಾತ್ಮಕ ಲೇಖನವನ್ನು ಬರೆಯಿರಿ.
- ‘ಬಾಶಿಂಗ ಬಲ’ ಶೀರ್ಷಿಕೆಯು ಈ ಕಥೆಗೆ ಎಷ್ಟರ ಮಟ್ಟಿಗೆ ಹೊಂದುತ್ತದೆ ಎಂಬುದರ ಬಗ್ಗೆ ಟಿಪ್ಪಣಿ ಬರೆಯಿರಿ.
- ಈ ಕಥೆಯು ನಮಗೆ ನೀಡುವ ಸಂದೇಶವೇನೆಂಬುದನ್ನು ತಿಳಿಸಿರಿ.
- ‘ಬಾಶಿಂಗ ಬಲ’ದ ಕಥೆಯನ್ನು ನಾಟಕಕ್ಕೆ ರೂಪಾಂತರಗೊಳಿಸಿ ಸಾಹಿತ್ಯ ಸಭೆಯಲ್ಲಿ ಅಭಿನಯಿಸಿರಿ.

## ಭಾಷಾಭ್ಯಾಸ

- ಈ ಕಥೆಯಲ್ಲಿ ಬಂದಿರುವ ನುಡಿಗಟ್ಟುಗಳನ್ನು ಸಂಗ್ರಹಿಸಿರಿ, ವಿವರಿಸಿರಿ.
- ಇದರಲ್ಲಿ ಬಂದಿರುವ ಅನುಕರಣವಾಚಿ ಪದಗಳನ್ನು ಪಟ್ಟಿ ಮಾಡಿರಿ. ಈ ಪದಗಳನ್ನು ಬಳಸಿ ವಾಕ್ಯ ರಚಿಸಿರಿ.
- ಇಲ್ಲಿ ಬಳಸಿರುವ ಅನ್ಯದೇಶೀಯ ಪದಗಳನ್ನು ಸಂಗ್ರಹಿಸಿರಿ.
- ಈ ಕಥೆಯು ಧಾರವಾಡ ಭಾಗದ ಆಡುಮಾತಿನಲ್ಲಿದೆ. ಇದನ್ನು ಶಿಷ್ಟ ಕನ್ನಡಕ್ಕೆ ರೂಪಾಂತರಿಸಿರಿ.
- ಇದರಲ್ಲಿ ಬಂದಿರುವ ಗ್ರಾಮ್ಯ ಕನ್ನಡ ಶಬ್ದಗಳಿಗೆ ಶಿಷ್ಟಕನ್ನಡದ ರೂಪಕೊಡಿರಿ.

  ಉದಾ : ಬೇತಮಣಿ – ಬೈತಲೆಮಣಿ

# ಚಂದ್ರಗಿರಿಯ ತೀರದಲ್ಲಿ

*ಡಾ. ಸಾರಾ ಅಬೂಬಕ್ಕರ್*

ಬದುಕಿನ ವಿಶಾಲವಾದ ಮತ್ತು ವೈವಿಧ್ಯಮಯವಾದ ದರ್ಶನ ಕಾದಂಬರಿಯಲ್ಲಿ ಸಿಗುತ್ತದೆ. ಪ್ರಸ್ತುತ ಕಾದಂಬರಿಯು ಕನ್ನಡ ಕಾದಂಬರಿಗಳಲ್ಲಿ ಹೊಸ ಸಂಚಲನವನ್ನು ಸೃಷ್ಟಿಸಿತು. ಕೌಟುಂಬಿಕ ಜೀವನದಲ್ಲಿ ಕೆಲವು ಅನಿರೀಕ್ಷಿತ ಸಂದರ್ಭಗಳು ಬದುಕಿನ ದಿಕ್ಕನ್ನೇ ಹೇಗೆ ಬದಲಾಯಿಸಬಹುದು ಎನ್ನುವುದರ ಸ್ಥೂಲಚಿತ್ರವು ಇಲ್ಲಿ ಪ್ರತಿಬಿಂಬಿತವಾಗಿದೆ. ಕಾದಂಬರಿ ಪ್ರಕಾರದ ಒಂದು ಕಿರುಪರಿಚಯವನ್ನು ಮಾಡಿಕೊಳ್ಳಲು ಈ ಭಾಗವು ಸಹಕಾರಿಯಾಗಲಿದೆ.

ರಶೀದ್ ಮತ್ತು ನಾದಿರಾ ಅವರದು ಅನುರೂಪದ ದಾಂಪತ್ಯ. ಬೆಳಿಗ್ಗೆ ಬೇಗ ಎದ್ದು ಗಂಡ ಹೆಂಡತಿ ಸ್ನಾನ ಮಾಡಿ ನಮಾಜ್ ಮಾಡುವರು. ಅತ್ತೆಯೂ ನಮಾಜ್ ಮಾಡುವಳು. ಬಳಿಕ ನಿತ್ಯದ ಕೆಲಸಗಳು. ಮನೆಗೆಲಸಗಳನ್ನು ಅತ್ತೆ ಸೊಸೆ ಹಂಚಿಕೊಂಡು ಮಾಡುವರು. ಆಡುಗಳನ್ನು ಕರೆಯುವುದು, ಕೋಳಿ ಸಾಕುವುದು ಇವೆಲ್ಲಾ ಈಗ ನಾದಿರಾಳ ಪಾಲಿನ ಕೆಲಸ. ರಶೀದ್ ಬೆಳಿಗ್ಗೆ ಚಹ ತಿಂಡಿ ಮುಗಿಸಿ ಮಣಿಪುರಕ್ಕೆ ಹೋದರೆ ಬರುವುದು ರಾತ್ರಿ ಎಂಟು ಗಂಟೆಯ ಬಸ್ಸಿಗೆ. ಈ ಬಸ್ಸು ತಪ್ಪಿದ ದಿನ ನಡೆದೇ ಮನೆ ಸೇರಬೇಕಾಗುತ್ತದೆ. ಎಷ್ಟು ಹೊತ್ತಾದರೂ ಗಂಡ ಮನೆಗೆ ಬರದೆ ನಾದಿರಾ ಎಂದೂ ಊಟ ಮಾಡುವವಳಲ್ಲ. ಒಮ್ಮೊಮ್ಮೆ ಪಟ್ಟಣದಲ್ಲಿ ಒಳ್ಳೆಯ ಮೀನು ಬಂದರೆ ರಶೀದ್ ಮೀನು ಖರೀದಿಸಿಕೊಂಡು ಸ್ವಲ್ಪ ಬೇಗನೆ ಮನೆಗೆ ಬಂದು ಬಿಡುವನು. ಅದನ್ನು



ಕೊಯ್ದು ತುಂಡು ಮಾಡಿ ತೊಳೆದು ಶುದ್ಧಿ ಮಾಡಿ ಸಾರು ಮಾಡುವುದು, ಹುರಿಯುವುದು ಮುಂತಾದ ಕೆಲಸಗಳನ್ನು ನಾದಿರಾ ಸಂತೋಷದಿಂದ ಮಾಡುವಳು. ರಾತ್ರಿಯ ಕೊನೆಯ ನಮಾಜ್ ಆದ ಬಳಿಕ ಎಲ್ಲರೂ ಊಟ ಮಾಡಿ ಮಲಗುವರು. ಇದು ಇವರ ನಿತ್ಯದ ದಿನಚರಿ.

ಶುಕ್ರವಾರ ರಶೀದ್ ಅಂಗಡಿಗೆ ಹೋಗುವುದಿಲ್ಲ. ಮನೆಯಲ್ಲೇ ಇದ್ದು ತೋಟದಲ್ಲೇನಾದರೂ ಕೆಲಸ ಮಾಡುವನು. ಏತದ ಬಾವಿಯಿಂದ ನೀರೆತ್ತಿ ತೆಂಗು ಮತ್ತು ಅಡಿಕೆ ಮರಗಳ ಬುಡಕ್ಕೆ ಹರಿಸುವನು. ಅಡಿಕೆ ಗಿಡಗಳ ಬುಡ ಸರಿ ಮಾಡುವುದು, ತೆಂಗಿನ ಮಡಲುಗಳನ್ನು ಒಟ್ಟು ಗೂಡಿಸಿ, ಹೆಣೆಯ ಬೇಕಾದ ಭಾಗವನ್ನು ಬೇರ್ಪಡಿಸಿ, ಉಳಿದ ಭಾಗಗಳನ್ನು ಸೌದೆಯಂತೆ ತುಂಡು ಮಾಡುವುದು ಮುಂತಾದ ಕೆಲಸಗಳನ್ನೆಲ್ಲ ಮಾಡುವನು. ಈ ಕೆಲಸಗಳಿಗೆ ನಾದಿರಾ ಕೂಡಾ ಗಂಡನಿಗೆ ಸಹಾಯ ಮಾಡುವಳು. ತೆಂಗಿನ ಮಡಲುಗಳನ್ನು ಹೆಣೆಯುವ ಕೆಲಸ ಮಾತ್ರ ಅತ್ತೆ ಸೊಸೆಯರದು. ಹೆಣೆದ ಮಡಲುಗಳನ್ನು ಮಾರಾಟ ಮಾಡುವ ಕೆಲಸ ಅತ್ತೆಯದೆ. ಮಧ್ಯಾಹ್ನವಾಗುವಾಗ ರಶೀದ್ ಮಸೀದಿಗೆ ಹೋಗಿ ನಮಾಜ್ ಮಾಡಿ ಬರುವನು. ಶುಕ್ರವಾರ ಸಾಯಂಕಾಲ ಮಾತ್ರ ಮಣಿಪುರಕ್ಕೆ ಹೋಗಿ ಒಂದು ಸಿನೆಮಾ ನೋಡಿ ಬರುವನು.

ಒಮ್ಮೆ ನಾದಿರಾ ಕೇಳಿದ್ದಳು, " ಸಿನಿಮಾ ಅಂದರೆ ಹೇಗಿರುತ್ತದೇರೀ? ಒಮ್ಮೆ ನನ್ನನ್ನೂ ಕರೆದುಕೊಂಡು ಹೋಗಿ!"

ಯಾಕೊ, ಈ ಮಾತು ಆ ಮೇಲೆ ರಶೀದ್‌ನನ್ನು ಯಾವಾಗಲೂ ಚುಚ್ಚತೊಡಗಿತ್ತು. ನಾದಿರಾ ಕೂಡಾ ತನ್ನೊಂದಿಗೆ ಸಿನಿಮಾ ನೋಡಲು ಬರುವಂತಿದ್ದರೆ ಎಷ್ಟು ಚೆನ್ನಾಗಿತ್ತು! ಈ ಪ್ರೇಮ ದೃಶ್ಯಗಳನ್ನೆಲ್ಲ ಕಂಡು ಆಕೆ ಎಷ್ಟು ನಾಚಿಕೊಂಡು ಮುದುಡುತ್ತಿದ್ದಳೋ ಏನೊ. ಆದರೆ ಉತ್ತಮ ಚಿತ್ರ ನೋಡಿದರೆ ಅವಳೂ ತನ್ನಂತೆಯೇ ಸಂತೋಷಪಡುತ್ತಾಳೆ. ಆದರೆ ಅವಳನ್ನು ಕರೆತರುವುದಾದರೂ ಹೇಗೆ? ಮಸೀದಿಯಲ್ಲಿ ಮೌಲವಿಗಳು ಯಾವಾಗಲೂ ಬೋಧಿಸುತ್ತಲೇ ಇರುವರಲ್ಲ? "ನಿಮ್ಮ ಹೆಂಗಸರನ್ನು ಮನೆಯಿಂದ ಹೊರಗೆ ಕಳುಹಿಸಬೇಡಿ. ಹೆಂಗಸರಿಗೆ ಹೆಚ್ಚು ಸ್ವಾತಂತ್ರ್ಯ ಕೊಡಬೇಡಿ" ಎಂದು. ಗಂಡಸರು ಏನೆಲ್ಲಾ ಅನಾಚಾರ ಮಾಡಿದರೂ ಬಾಯಿ ಮುಚ್ಚಿಕೊಂಡಿರುವ ಸಮಾಜ, ಹೆಂಗಸೊಬ್ಬಳು ಸಿನೆಮಾ ನೋಡಲು ಹೊರಟೊಡನೆ ಕಲ್ಲು ಬೀರಲು ಪ್ರಾರಂಭಿಸುತ್ತದಲ್ಲ? ಒಮ್ಮೆ ನಾದಿರಳನ್ನೂ ಸಿನಿಮಾಗೆ ಕರೆದೊಯ್ಯಬೇಕು! ಏನಾದೀತು? ಪ್ರಳಯವೇನೂ ಆಗಲಾರದು!

ರಶೀದ್ ತನ್ನ ನಿರ್ಧಾರವನ್ನು ನಾದಿರಾಗೆ ತಿಳಿಸಿದನು. "ನೀನು ಸಿನಿಮಾ ನೋಡಬೇಕೆನ್ನುತ್ತಿಯಲ್ಲಾ! ಮುಂದಿನ ಶುಕ್ರವಾರ ನಾವಿಬ್ಬರೂ ಸಿನೆಮಾಗೆ ಹೋಗೋಣ"

ಗಂಡನ ಮಾತು ಕೇಳಿ ನಾದಿರಾ ಅವಾಕ್ಕಾದಳು. ಅವಳು ಸಿನೆಮಾದಲ್ಲಿ ತನ್ನ ಕುತೂಹಲ ವ್ಯಕ್ತ ಪಡಿಸಿದ್ದು ಹೌದು. ಆದರೆ ಗಂಡನು ತನ್ನನ್ನು ಕರೆದೊಯ್ಯಲು ಸಿದ್ಧವಾದಾನೆಂದು ಆಕೆ ಕನಸಿನಲ್ಲೂ ಊಹಿಸಿರಲಿಲ್ಲ. ನಿಯಮಗಳಲ್ಲಿ ಬಂಧಿಯಾದ ನಾದಿರಾ, ಅಷ್ಟು ಸುಲಭದಲ್ಲಿ ಆ ಬಂಧನವನ್ನು ಕಿತ್ತೊಗೆಯುತ್ತಾಳೆಯೇ?

"ಅಯ್ಯೋ, ಬೇಡಾರೀ, ನಾನು ಸುಮ್ಮನೆ ತಮಾಷೆಗಂದೆ, ಸಿನಿಮಾ ನೋಡಬೇಕೆಂದು ನಾನೇನಾದರೂ ಸಿನೆಮಾಕ್ಕೆ ಬಂದರೆ ನಾಳೆ ಊರಿಡೀ ಸುದ್ದಿಯಾಗಿ ಜನರು ನಮ್ಮ ಮನೆಯ ಮಾಡಿಗೆ ಕಲ್ಲೆಸೆಯುತ್ತಾರೆ. ಬೇಡಪ್ಪಾ ಅದೆಲ್ಲಾ. ನೀವು ಹೋಗಿ ಬನ್ನಿ" ಕೊನೆಯ ಮಾತನ್ನು ಸಪ್ಪೆ ದನಿಯಲ್ಲೇ ಅಂದಿದ್ದಳು ಆಕೆ.

ಆ ದಿನ ಆತನೇನೋ ಒಬ್ಬನೇ ಚಿತ್ರ ನೋಡಲು ಹೋದರೂ ಅವನಿಂದ ಮನಸ್ಸಿಟ್ಟು ಚಿತ್ರ ನೋಡಲಾಗಲಿಲ್ಲ. ಅವಳಿಗಿಲ್ಲದ ಈ ಸಂತೋಷ, ಮನರಂಜನೆ ತನಗಾದರೂ ಯಾಕೆ ಬೇಕು? ಚಿತ್ರ ಮಂದಿರದ ಅರ್ಧದಲ್ಲಿಯೇ ಎದ್ದು ಬಂದನು. "ಏನು, ಇಷ್ಟು ಬೇಗ ಸಿನಿಮಾ ಮುಗಿಯಿತೇ?" ಎಂದು ಕೇಳಿದ ನಾದಿರಾಳೊಡನೆ.

"ಎಂದೂ ಮುಗಿಯದ ಉತ್ತಮ ಸಿನೆಮಾ ಇಲ್ಲೇ, ನನ್ನ ಕೋಣೆಯಲ್ಲೇ ಇದೆಯಲ್ಲಾ?" ಎಂದು ಅವಳ ಬಳಿ ಬಂದಾಗ ಆಕೆ ಅವನ ಕೈಗೆ ಸಿಗದೆ ಕೋಣೆಯಿಂದ ಹೊರ ಹಾರಿದ್ದಳು.

ಈಗ ಶುಕ್ರವಾರದ ಸಂಜೆಗಳಲ್ಲಿ ರಶೀದ್ ಹಿತ್ತಲು , ತೋಟದಲ್ಲೇ ಏನಾದರೂ ಕೆಲಸ ಮಾಡುವುದು ಇಲ್ಲವೇ ನಾದಿರಾಳ ಜೊತೆಯಲ್ಲಿ ಕುಳಿತುಕೊಂಡು ಹರಟೆ ಹೊಡೆಯುವುದು; ಇದೇ ಅವನಿಗೆ ಚಿತ್ರಕ್ಕಿಂತಲೂ ಹೆಚ್ಚು ಸಂತೋಷ ನೀಡುತ್ತಿತ್ತು. ಓದು, ಬರಹ ಬಲ್ಲವನಾಗಿದ್ದುದರಿಂದ ಇತ್ತೀಚೆಗೆ ಪತ್ರಿಕೆಗಳನ್ನು ಓದಲು ಪ್ರಾರಂಭಿಸಿದ್ದನು ಮತ್ತು ನಾದಿರಾಗೂ ಓದು ಬರಹ ಕಲಿಸಲು ಪ್ರಯತ್ನಿಸುತ್ತಿದ್ದನು.

ಈ ವಾತಾವರಣದಲ್ಲಿ ನಾದಿರಾಗೆ ತಾಯಿಯ ಮನೆಯ ನೆನಪಾಗುತ್ತಿದ್ದುದೇ ಕಡಿಮೆ. ಅವಳೀಗ ಪರಮಸುಖಿ. ಗಂಡನನ್ನು ಯಾವುದಕ್ಕೂ ಪೀಡಿಸುತ್ತಿರಲಿಲ್ಲ. ಹಬ್ಬಕ್ಕೆ ತನಗೆ ಸೀರೆ ಬೇಡವೆಂದರೂ ಕೇಳದೆ ರಶೀದ್ ಸೀರೆ ತರುವವನು ಮುಖ ಸ್ವಲ್ಪ ಬಾಡಿದಂತಿದ್ದರೂ ಅತ್ತೆ ಕೇಳುವವರು. "ಯಾಕಮ್ಮಾ ನಾದಿರಾ, ಮೈ ಹುಷಾರಿಲ್ಲವೇ?"

ಈ ಅತ್ತೆ ಮತ್ತು ಗಂಡನನ್ನು ಬಿಟ್ಟು ತವರಿಗೆ ಹೋದರೆ ಆಕೆ ಒಂದೇ ದಿನದಲ್ಲಿ ತಂದೆಯನ್ನು ಜೊತೆ ಮಾಡಿಕೊಂಡು ವಾಪಸ್ಸು ಬಂದು ಬಿಡುವಳು. ಇಲ್ಲವೇ ರಶೀದ್ ಹೋಗಿ ಕರೆದುಕೊಂಡು ಬರುವನು. ಅವಳೊಬ್ಬಳೇ ಎಂದೂ ಚಂದ್ರಗಿರಿ ನದಿಯನ್ನು

ದಾಟಿರಲಿಲ್ಲ. ಸ್ವಂತದ ಗಂಡಸೊಬ್ಬರಿಲ್ಲದೆ ದೋಣಿಯಲ್ಲಿ ಕುಳಿತು ನದಿ ದಾಟುವುದು ಆಕೆಯಿಂದ ಸಾಧ್ಯವೇ ಇರಲಿಲ್ಲ.

ಈಗ ನಾದಿರಾ ಒಂದು ಗಂಡು ಮಗುವಿನ ತಾಯಿ. ಮಗುವಿಗೆ ಆರು ತಿಂಗಳಾಗಿದೆ. ಮಗುವಿಗೆ ಮೂರು ತಿಂಗಳಾಗುತ್ತಲೂ ನಾದಿರಾಗೆ ತಾಯಿಯ ಮನೆ ಬೇಸರ ಬರಿಸಿತ್ತು. ರಶೀದ್ ವಾರಕ್ಕೆರಡು ಬಾರಿ ಬರುತ್ತಿದ್ದರೂ, ಅವಳಿಗೆ ಮತ್ತು ಮಗುವಿಗೆ ಬೇಕಾದುದನ್ನೆಲ್ಲ ತರುತ್ತಿದ್ದರೂ, ಬಂದ ಅರ್ಧ ಗಂಟೆಗೆಲ್ಲಾ ಅವನು ಹೊರಟು ಹೋಗುತ್ತಿದ್ದನು. ಆದುದರಿಂದ ಅವನ ಸಾಮೀಪ್ಯಕ್ಕಾಗಿ ಅವಳು ಹಾತೊರೆಯತೊಡಗಿದಳು. ದೈಹಿಕ ಸುಖಕ್ಕಾಗಿಯಲ್ಲ. ಆತನ ಬಾಹುಗಳಲ್ಲಿ ಬಂಧಿಯಾಗಿ, ಆತನೆದೆಯಲ್ಲಿ ತಲೆಯಿಟ್ಟು, ತಮ್ಮ ಕೋಣೆಯ ಕಿಟಕಿಯಿಂದ ಕಾಣುವ ನೀಲಿ ಬಾನಿನಲ್ಲಿ ತೇಲುವ ಚಂದ್ರನನ್ನು ನೋಡುತ್ತಾ ಮೈ ಮರೆಯಲಷ್ಟೆ ಆಕೆ ಆಶಿಸಿದ್ದಳು. ಅಲ್ಲದೆ ಇತ್ತೀಚೆಗೆ ತಾಯಿಯ ಮನೆಯ ಸ್ಥಿತಿಯೂ ಅಷ್ಟೇನೂ ಸುಗಮವಾಗಿರಲಿಲ್ಲ.

ಮಹಮ್ಮದ್ ಖಾನ್ ತಮ್ಮ ಕಿರಿಯ ಮಗಳು ಜಮೀಲೆಗೆ ವರ ಹುಡುಕುವ ಪ್ರಯತ್ನದಲ್ಲಿದ್ದರು. ಹಾಗೂ ಹೀಗೂ ನಾದಿರಾಗೆ ಕೊಟ್ಟಷ್ಟೆ ಚಿನ್ನದ ಆಭರಣ ಮಾಡಿಸಿದ್ದರು. ಆದರೆ ವರದಕ್ಷಿಣೆಯ ಹಣ ಒಟ್ಟು ಮಾಡುವುದೇ ಕಷ್ಟವಾಗಿತ್ತು. ಮನೆಗೆ ಮೀನನ್ನು ಎಂದಾದರೊಮ್ಮೆಯಷ್ಟೆ ತರುವರು. ತಾಯಿ ಕಷ್ಟಪಟ್ಟು ಹೊಟ್ಟೆ ಬಟ್ಟೆ ಕಟ್ಟಿ ಹಣ ಉಳಿತಾಯ ಮಾಡುವುದನ್ನು ನೋಡುವಾಗ ನಾದಿರಾಗೆ ದುಃಖವಾಗುವುದು. ಆದರೆ ಅದಕ್ಕಾಗಿ ಅವಳೇನೂ ಮಾಡುವಂತಿರಲಿಲ್ಲ. ತಾನು ಗಂಡನ ಮನೆಗೆ ಹೊರಟು ಹೋದರೆ ತನ್ನ ತಾಯಿಗೆ ತನ್ನೊಬ್ಬಳ ಭಾರವಾದರೂ ಕಮ್ಮಿಯಾದೀತೆಂದು ಆಕೆ ತಾಯಿಯೊಡನೆ ಹಾಗೆಯೇ ಅಂದಳು.

"ಉಮ್ಮಾ, ನಾನು ಕಾವಳ್ಳಿಗೆ ಹೋಗುತ್ತೇನೆ."

"ಏನು ಮಾತು ನಾದಿರಾ? ನಿನ್ನನ್ನು ಇಷ್ಟು ಬೇಗ ಕಳಿಸಿ ಬಿಟ್ಟರೆ ನಿನ್ನ ಗಂಡನ ಮನೆಯವರೇನೆಂದುಕೊಳ್ಳುವರು? ಮಗುವಿಗೆ ಆರು ತಿಂಗಳಾಗಲಿ, ಆಮೇಲೆ ಹೋಗೋಣ." ಮನೆಯಲ್ಲಿ ಮೊತ್ತ ಮೊದಲು ಹುಟ್ಟಿದ ಗಂಡು ಮಗು, ಮನೆಯವರೆಲ್ಲರ ಕಣ್ಮಣಿ! ಅದನ್ನು ಅಷ್ಟು ಬೇಗ ಕಳಿಸಿ ಕೊಡಲು ಆಕೆಗೆ ಮನಸ್ಸಾದೀತೇ?

ಆದರೆ ಕಾವಳ್ಳಿಯ ಸೆಳೆತ ತಪ್ಪಿಸಿಕೊಳ್ಳಲು ನಾದಿರಾಳಿಂದ ಸಾಧ್ಯವೇ ಇಲ್ಲ. "ಇನ್ನೂ ಮೂರು ತಿಂಗಳು!" ಉದ್ಗಾರವೆತ್ತಿದಳು ಆಕೆ, ಅಬ್ಬ ತನ್ನಿಂದ ಸಾಧ್ಯವೇ ಇಲ್ಲ.

ಅದೇ ದಿನ ಸಂಜೆಗೆ ರಶೀದ್ ಬಂದಾಗ ಅವಳು ಅವನೊಡನೆ ಗುಟ್ಟಾಗಿ, "ನೋಡಿ,

ನನಗಿಲ್ಲಿ ತುಂಬಾ ಬೇಜಾರು. ಅಲ್ಲಿ ಮನೆಯಲ್ಲಿ ಕೂಡಾ ಅತ್ತೆ ಒಬ್ಬರೇ ಇದ್ದಾರೆ. ಅವರೇ ಬಂದು ನನ್ನ ತಾಯಿಯೊಡನೆ ನನ್ನನ್ನು ಕಳಿಸಿಕೊಡಿ ಎಂದರೆ ನನ್ನ ತಾಯಿ ಅಡ್ಡಿ ಮಾಡಲಾರರು. ನಾನು ಮನೆಗೆ ಬರುತ್ತೇನೆ." ಎಂದು ಬಿನ್ನಾಣದಿಂದ ನುಡಿದಳು. ಮೈ ತುಂಬಾ ಆಸೆ ಹೊತ್ತು, ತನ್ನ ಮಗುವನ್ನು ಮಡಿಲಲ್ಲಿ ಮಲಗಿಸಿ ಎದೆ ಹಾಲು ಕೊಡುತ್ತಾ ತನ್ನಿನಿಯಳು ತನ್ನ ಮನೆಗೆ ಬರುವೆನೆಂದು ಕೇಳಿ ಕೊಳ್ಳುತ್ತಿರುವಾಗ ಹೃದಯವಿರುವ ಯಾವ ಗಂಡಿಗೆ ತಾನೇ ನಿರಾಕರಿಸಲು ಸಾಧ್ಯ? ಕಣ್ಣಿಗೆ ಕಾಡಿಗೆ ಹಚ್ಚಿ, ಎಲೆಯಡಿಕೆಯಿಂದ ತುಟಿ ಕೆಂಪಾಗಿಸಿ, ತಲೆ ತುಂಬಾ ಎಣ್ಣೆಯಿಟ್ಟುಕೊಂಡು, ಮೈ ತುಂಬಿಕೊಂಡು ಆರೋಗ್ಯದ ಕಾಂತಿಯಿಂದ  ಮಿನುಗುತ್ತಿದ್ದ ಬಾಣಂತಿ ನಾದಿರಾಳ ರೂಪವನ್ನು ಮನದಲ್ಲಿ ತುಂಬಿಕೊಂಡೇ ಹೊಳೆ ದಾಟಿದನು ರಶೀದ್. ಬಾಣಂತಿಯಾದ ಹೆಣ್ಣಿನಲ್ಲಿ ಕೂಡಾ ಇಷ್ಟೊಂದು ಆಕರ್ಷಣೆ ಇದೆಯೇ?

ಮರುದಿನ ಆಮಿನಾ ಬಂದಾಗ ಫಾತಿಮ್ಮಾಗೆ ಅಚ್ಚರಿಯಾಯಿತು.

"ಮಗುವಿಗಿನ್ನೂ ಆರು ತಿಂಗಳೂ ತುಂಬಿಲ್ಲವಲ್ಲ? ಈಗಲೇ ಕರೆದುಕೊಂಡು ಹೋಗುವಿರಾ?" ನಿರಾಶೆಯಿಂದ ಕೇಳಿದಳು ಆಕೆ. ಬಳ್ಳಿಗೆ ಕಾಯಿ ಎಂದೂ ಭಾರವಲ್ಲವಲ್ಲ?

"ನಾನು ಒಬ್ಬಳೇ ಇದ್ದು ಬೇಜಾರಾಗಿ ಬಿಟ್ಟಿದೆ. ರಶೀದ್ ಬೆಳಿಗ್ಗೆ ಹೋದರೆ ಮನೆಗೆ ಬರುವುದು ರಾತ್ರಿಯೇ. ಮನೆಯಲ್ಲಿ ಮಾತನಾಡಿಸುವುದಕ್ಕೆ ಒಂದು ನರಪಿಳ್ಳೆಯಾದರೂ ಇಲ್ಲವಲ್ಲ? ನಿಮ್ಮ ಮಗಳು ನನಗೂ ಮಗಳೇ ಅಲ್ಲವೇ?" ಅತ್ತೆ ಸೊಸೆಯನ್ನು ಬಿಟ್ಟುಕೊಡಲಿಲ್ಲ.

ಈ ಮಾತಿಗೆ ಫಾತಿಮ್ಮ ಮೆತ್ತಗಾದಳು. ಅತ್ತೆಯ ಮುಖ ಕಂಡಾಗಲೇ ಹೊರಡಲು ಸಿದ್ಧಳಾದ ಮಗಳನ್ನು ಕಂಡು ಆಕೆ ಮತ್ತೆ ಬಲವಂತ ಮಾಡಲಿಲ್ಲ. ನಾದಿರಾ ಗಂಡನ ಮನೆಗೆ ಹೊರಟು ಹೋದಳು.

ಜಮೀಲೆಯ ಮದುವೆಗೆ ವರದಕ್ಷಿಣೆ ಹಣಕ್ಕೆ ಎಷ್ಟು ಪ್ರಯತ್ನ ಪಟ್ಟರೂ ಮೂರು ಸಾವಿರ ರೂಪಾಯಿಗಳನ್ನು ಒಟ್ಟು ಗೂಡಿಸಲು ಮಹಮ್ಮದ್ ಖಾನರಿಂದ ಸಾಧ್ಯವಾಗಲಿಲ್ಲ. ಹುಡುಗನ ಮನೆಯವರು ಅವಸರಿಸಲು ಪ್ರಾರಂಭಿಸಿದರು. 'ನಾವು ಬೇರೆ ಹುಡುಗಿ ನೋಡುತ್ತೇವೆ' ಎಂದು ಬೆದರಿಸಲಾರಂಭಿಸಿದರು. ಹೆಣ್ಣಿಗೇನೂ ಬರಗಾಲವಿಲ್ಲವಲ್ಲ? ಒಳ್ಳೆ ಸ್ವಭಾವದ ಹುಡುಗ. ಒಳ್ಳೆಯ ಸಂಬಂಧ. ಒಂದು ಚಿಕ್ಕ ಅಂಗಡಿ ವ್ಯಾಪಾರವೂ ಇದೆ. ಆ ಅಂಗಡಿಯಲ್ಲಿ ಕುಳಿತು ಬೀಡಿಗಳನ್ನು ಕಟ್ಟುತ್ತಾನೆ. ಹೇಗೂ ತಾಪತ್ರಯವಿಲ್ಲದೆ ಸಂಸಾರ ಸಾಗಿಸಬಹುದು. ಈ ಮಗಳದ್ದೂ ಒಂದು ಮದುವೆ ಮುಗಿಸಿ ಬಿಟ್ಟರೆ ತಾನು ಹಾಯಾಗಿರಬಹುದು ಎಂಬುದು ಖಾನರ ಲೆಕ್ಕಾಚಾರ. ಖಾನರ ದೃಷ್ಟಿಯಲ್ಲಿ ಆತನಿಗಿರುವ

ಇನ್ನೊಂದು ದೊಡ್ಡ ಅರ್ಹತೆ ಅಂದರೆ ಆತನು ಕಿಳಿಯೂರಿನವನೇ ಆಗಿದ್ದುದು. ದೂರದ ಯಾವುದಾದರೊಂದು ಊರಿಗೆ ಕೊಟ್ಟರೆ ತಮಗೆ ವಯಸ್ಸಾದ ಬಳಿಕ ಮಗಳ ಮನೆಗೆ ಹೋಗಿ ಬಂದು ಮಾಡಲಾದೀತೇ? ತಮಗೆ ಗಂಡು ಮಕ್ಕಳೂ ಇಲ್ಲ, ಆಗಾಗ ಹೆಣ್ಣು ಮಕ್ಕಳ ಬಳಿಗೆ ಓಡಿಸಲು. ಆದುದರಿಂದ ಹೇಗಾದರೂ ಈ ಸಂಬಂಧ ಕುದುರಿಸಲೇಬೇಕೆಂದು ಖಾನರ ಹಟವಾಗಿತ್ತು. ಅವರ ಮನದಲ್ಲಿ ಯೋಜನೆಯೊಂದು ರೂಪುಗೊಳ್ಳತೊಡಗಿತ್ತು.

ಮರುದಿನ ಬೆಳಿಗ್ಗೆ ಮಹಮ್ಮದ್ ಖಾನ್ ಎದ್ದು ಚಹ, ತಿಂಡಿ ಮುಗಿಸಿ ಫಾತಿಮ್ಮಳೊಡನೆ, “ನಾನು ಮಣಿಪುರಕ್ಕೆ ಹೋಗಿ ಬರುತ್ತೇನೆ, ರಶೀದ್‌ನ ಬಳಿ ಸ್ವಲ್ಪ ಕೆಲಸ ಇದೆ. ಬರುವುದು ಸಾಯಂಕಾಲವಾಗಬಹುದು” ಎನ್ನುತ್ತಾ ಕೋಟು ಹಾಕಿಕೊಂಡು ತಲೆಗೆ ಮುಂಡಾಸು ಸುತ್ತತೊಡಗಿದರು.

“ಹಾಗೆ ಕಾವಳ್ಳಿಗೆ ಹೋಗಿ ನಾದಿರಾಳನ್ನೂ ಮಗುವನ್ನೂ ನೋಡಿ ಬನ್ನಿ. ಅವಳು ಬರುವುದಾದರೆ ಕರೆದುಕೊಂಡು ಬನ್ನಿ. ಒಂದೆರಡು ದಿನ ಕಳೆದ ಬಳಿಕ ಕರೆದುಕೊಂಡು ಹೋಗಿ ಬಿಟ್ಟರಾಯಿತು. ಮಗು ಕವುಚಿ ಬಿದ್ದಿದ್ದಾನೊ, ಮುಂದಕ್ಕೆ ಹೋಗುತ್ತಿದಾನೊ ಒಂದೂ ತಿಳಿಯಲೇ ಇಲ್ಲ. ಅವನನ್ನು ಒಂದೆರಡು ಸಲ ಕನಸು ಕೂಡಾ ಕಂಡೆ” ಮೆತ್ತಗೆ ನುಡಿದಳು ಫಾತಿಮ್ಮ.

“ಹೂಂ ಅವಳನ್ನು ಕರೆದುಕೊಂಡು ಬಸ್ಸಿನಲ್ಲಿ ಬರಲಿಕ್ಕಾಗುತ್ತದಾ? ಟ್ಯಾಕ್ಸಿ ಮಾಡಿಕೊಂಡು ಬರಬೇಕು. ಸುಮ್ಮನೆ ಕಾರಿಗೆ ದುಡ್ಡು ದಂಡ. ಹೇಗೂ ಮದುವೆಗೆ ಅವಳು ಬರುತ್ತಾಳಲ್ಲ? ಅಲ್ಲಿಯವರೆಗೂ ಸುಮ್ಮನಿರು!” ಗದರಿದರು ಖಾನ್.

ಗಂಡನಿಗೆ ಎದುರಾಡಿಯೇ ಗೊತ್ತಿಲ್ಲದ ಫಾತಿಮ್ಮ ಸುಮ್ಮನಾದಳು.

ಕಡವಿಗೆ ಮಹಮ್ಮದ್ ಖಾನ್ ಬಂದಾಗ ದೋಣಿ ಹೊರಡಲು ಸಿದ್ಧವಾಗಿತ್ತು. “ಓ ಮಹಮ್ಮದ್ ಕಾಕಾನಾ? ಬೇಗ ಬನ್ನಿ” ಎಂದು ಅಂಬಿಗನು ಅವಸರಿಸುತ್ತಿದ್ದಂತೆ ಖಾನ್ ದೋಣಿ ಹತ್ತಿ ಒಂದೆಡೆ ಸ್ಥಳ ಮಾಡಿಕೊಂಡು ಕುಳಿತರು. ದೋಣಿಯಲ್ಲಿದ್ದವರೆಲ್ಲಾ ಮಹಮ್ಮದ್ ಖಾನರ ಪರಿಚಿತರು. ಚಿಕ್ಕ ಊರಾದ ಕಾರಣ ಒಬ್ಬರಿಗೊಬ್ಬರು ಸಂಬಂಧಿಗಳೊ ಪರಿಚಿತರೋ ಆಗಿಯೇ ಇರುತ್ತಾರೆ. ಹಳೆ ಮನೆ ಮೊಯಿದು, ಸಿಲೋನ್ ಉಮ್ಮರ್ ಮುಂತಾದವರೆಲ್ಲಾ ದೋಣಿಯಲ್ಲಿದ್ದರು. ದೋಣಿ ಮುಂದುವರಿದಂತೆ ಲೋಕಾಭಿರಾಮವಾಗಿ ಮಾತನಾಡತೊಡಗಿದರು. ತಮ್ಮ ತಮ್ಮ ಕಷ್ಟ ಸುಖ, ಮಕ್ಕಳ ಮದುವೆ, ಹಣದ ತಾಪತ್ರಯ, ಬೆಳೆಗಳ ವಿಷಯ, ಜಮೀಲಳ ಮದುವೆ ವಿಷಯವನ್ನೂ ಯಾರೋ ಒಬ್ಬರು ಕೇಳಿದರು, “ಮಗಳ ಮದುವೆಯ ವಿಷಯವೇನಾಯಿತು?” ಎಂದು.

“ಚಿನ್ನವೆಲ್ಲಾ ಸಿದ್ಧವಾಗಿದೆ. ವರದಕ್ಷಿಣೆ ಏರ್ಪಾಡೊಂದು ಆಗಿಬಿಟ್ಟರೆ ಮುಂದಿನ ತಿಂಗಳಲ್ಲೇ ನೆರವೇರಿಸಿ ಬಿಡುತ್ತಿದ್ದೆ” ಖಾನರೆಂದರು.

“ನಿಮ್ಮಳಿಯನೊಡನೆ ಒಮ್ಮೆ ಕೇಳಿ ನೋಡಬಾರದೇ? ಅವನ ವ್ಯಾಪಾರ ಚೆನ್ನಾಗಿದೆಯಂತೆ. ಅದೂ ಅಲ್ಲದೆ ಒಳ್ಳೆಯ ಹುಡುಗ. ನೀವು ಕೇಳಿದರೆ ಇಲ್ಲವೆನ್ನಲಾರ” ಹಳೆ ಮನೆ ಮೊಯಿದು ಸಲಹೆ ನೀಡಿದನು.

“ಹೌದು ಅವನ ಬಳಿಗೆ ಹೊರಟಿದ್ದೇನೆ” ಮುಚ್ಚು ಮರೆ ಇಲ್ಲದೆ ಖಾನರೆಂದರು. ಗೆಳೆಯನ ಸಲಹೆಯಿಂದ ಅವರಲ್ಲೂ ಭರವಸೆ ಮೂಡಿತ್ತು.

“ಹಾಗಾದರೆ ಮುಂದಿನ ತಿಂಗಳು ನಮಗೆಲ್ಲ ಒಂದು ಮಾಂಸದೂಟ ಇದೆ ಎಂದ ಹಾಗಾಯಿತು. ಅಲ್ಲವಾ ಕಾಕಾ?” ಹುಟ್ಟು ಹಾಕುತ್ತಾ ಅಂಬಿಗನು ಕೇಳಿದನು. ತಂದೆ ತಾಯಿಗಳ ಪಾಡು ಏನೇ ಇರಲಿ; ಊರವರಿಗೆ ಮಾಂಸದೂಟವಂತೂ ಆಗಲೇ ಬೇಕು!

“ಮಾಂಸದೂಟದ ಯೋಚನೆಯಲ್ಲಿ ನಮ್ಮನ್ನೆಲ್ಲ ನೀರಿಗೆ ಹಾಕಿ ಬಿಡಬೇಡ!” ಎಂದು ಯಾರೊ ಒಬ್ಬರೆಂದಾಗ ಎಲ್ಲರೂ ನಕ್ಕರು. ಈ ಮಾತುಕತೆಯಲ್ಲಿ ದೋಣಿ ಬಾಗೋಡು ತಲಪಿದ್ದೇ ತಿಳಿಯಲಿಲ್ಲ. ದೋಣಿಯಿಂದಿಳಿದು ಎಲ್ಲರೂ ತಮ್ಮ ತಮ್ಮ ಗುರಿಗಳತ್ತ ಹೊರಟರು. ಮಹಮ್ಮದ್ ಖಾನ್ ಉರಿ ಬಿಸಿಲಿಗಡ್ಡವಾಗಿ ಕೊಡೆ ಹಿಡಿದು ಮಣಿಪುರದ ಹಾದಿ ಹಿಡಿದರು.

ಅಳಿಯ ರಶೀದ್‌ನ ಅಂಗಡಿ ತಲುಪಿದಾಗ ಹನ್ನೆರಡು ಗಂಟೆ ಸಮೀಪಿಸಿತ್ತು. ಬಿಸಲಲ್ಲಿ ನಡೆದು ಬಂದ ಅವರಿಗೆ ತುಂಬಾ ಆಯಾಸವಾಗಿತ್ತು. ಆಗ ತಾನೇ ಸ್ನಾನ ಮಾಡಿ ಬಂದಾಗ ಮೈಯಿಂದ ನೀರು ಸುರಿಯುವಂತೆ ಬೆವರು ಸುರಿಯುತ್ತಿತ್ತು. ಅಂಗಡಿಯ ಅಂಗಳಕ್ಕೆ ಬಂದವರೇ ಆಯಾಸದಿಂದ ಅಲ್ಲೇ ಇದ್ದ ಒಂದು ಬೆಂಚಿನ ಮೇಲೆ ಕುಳಿತರು. ತಲೆಯಿಂದ ಮುಂಡಾಸನ್ನು ತೆಗೆದು ಬೆವರೊರೆಸಿಕೊಳ್ಳತೊಡಗಿದರು.

ಅಳಿಯ ಎದ್ದು ನಿಂತು, “ಅಸ್ಸಲಾಂ ವ ಅಲೈಕುಂ” ಎನ್ನುತ್ತಾ ಮಾವನಿಗೆ ಗೌರವ ಸೂಚಿಸಿದನು. ಮಾವ ಮಾರ್ನುಡಿಯುವ ಮುನ್ನವೇ ಪಕ್ಕದ ಅಂಗಡಿಯಿಂದ ತಾನೇ ಒಂದು ಎಳನೀರನ್ನು ತಂದು ಕೊಟ್ಟನು. “ಅತ್ತೆಯವರು ಸೌಖ್ಯವೇ?” ಎಂದು ಕೇಳಿದನು.

ಸ್ವಲ್ಪ ಸುಧಾರಿಸಿಕೊಂಡ ಮೇಲೆ ಮಹಮ್ಮದ್ ಖಾನ್ ಮೊಮ್ಮಗುವಿನ ಕ್ಷೇಮ ಸಮಾಚಾರವನ್ನು ವಿಚಾರಿಸಿದರು. ಆ ಮೇಲೆ ಅಂಗಡಿಯಲೊಮ್ಮೆ ಕಣ್ಣಾಡಿಸಿದರು. ಹೌದು, ಅಳಿಯನ ವ್ಯಾಪಾರ ಪ್ರಗತಿ ಹೊಂದುತ್ತಿದೆ. ಅಂಗಡಿಯಲ್ಲಿ ಯಾರೂ ಇಲ್ಲವೆಂದು ಖಚಿತಪಡಿಸಿಕೊಂಡು ತಾವು ಬಂದ ಕಾರಣವನ್ನರುಹಿದರು.

"ನೋಡಪ್ಪ ರಶೀದ್, ನನ್ನ ಜಮೀಲೆಗೆ ಮದುವೆ ನಿಶ್ಚಯವಾದದ್ದು ನಿನಗೆ ಗೊತ್ತಲ್ಲ? ಈಗ ತುಂಬಾ, ಕಷ್ಟಕ್ಕಿಟ್ಟುಕೊಂಡಿದೆ. ನನಗೆ ಗಂಡು ಮಕ್ಕಳಿಲ್ಲ. ನಿನ್ನೊಡನೆ ಹೇಳದೆ ಇನ್ಯಾರೊಡನೆ ಹೇಳಲಿ?" ಎಂದು ಮಾತು ನಿಲ್ಲಿಸಿದರು.

ರಶೀದ್‌ಗೆ ಈ ಮಾತಿನ ತಲೆಬುಡವೊಂದೂ ಅರ್ಥವಾಗಲಿಲ್ಲ.

"ಏನು ಮಾವ ಬಿಡಿಸಿ ಹೇಳಿ" ಮದುವೆ ಮುರಿಯಿತೇನೋ ಎಂಬ ಆತಂಕದಿಂದ ಕೇಳಿದನು ಆತ.

ಹೇಗೆ ಹೇಳಬೇಕೋ ತಿಳಿಯದೆ ಅವರು ಕೊಂಚ ಹೊತ್ತು ಮೌನ ತಾಳಿದರು. ಬಳಿಕ "ನೋಡು ಮಗೂ, ಈಗ ಒಂದೆರಡು ಸಾವಿರ ರೂಪಾಯಿ ಬೇಕಾಗಿದೆ. ಎಲ್ಲಾ ಕಡೆ ಪ್ರಯತ್ನ ಪಟ್ಟೆ ಹಾಗೂ ಹೀಗೂ ಒಂದು ಸಾವಿರ ರೂಪಾಯಿ ಕೂಡಿಸಿದೆ. ಉಳಿದದ್ದು ಎಲ್ಲೂ ಸಿಗಲಿಲ್ಲ. ಈಗ ಮದುವೆ ನಿಂತು ಹೋಗುವ ಹಾಗಾಗಿದೆ. ನೀನೀಗ ಹಣ ಕೊಟ್ಟರೆ ಒಂದೆರಡು ವರ್ಷಗಳಲ್ಲಿ ಹೇಗಾದರೂ ತೀರಿಸಲು ಪ್ರಯತ್ನಿಸುತ್ತೇನೆ " ನಮ್ರರಾಗಿಯೇ ನುಡಿದರು ಖಾನ್.

ಈಗ ರಶೀದ್ ಎಲ್ಲವೂ ಅರ್ಥವಾಯಿತು. ಒಂದು ನಿಮಿಷ ಏನು ಹೇಳಬೇಕೆಂದರಿಯದೆ ಪೆಚ್ಚಾಗಿ ನಿಂತನು. ಬಳಿಕ

"ಈಗ ನನ್ನ ಬಳಿ ಅಷ್ಟು ಹಣ ಎಲ್ಲಿದೆ ಮಾವಾ?" ಎಂದು ನಿಧಾನವಾಗಿ ನುಡಿದನು.

"ನೀನೂ ಹೀಗೆಂದರೆ ಹೇಗೆ ರಶೀದ್? ಈಗ ನೀನು ಹೇಗಾದರೂ ಮಾಡಿ ಹಣ ಒದಗಿಸಲೇ ಬೇಕು" ಕೊಂಚ ಗಟ್ಟಿಯಾಗಿಯೇ ನುಡಿದರು ಖಾನ್.

ಮಾವನ ಒತ್ತಾಯದಿಂದ ಅಳಿಯನ ಸಹನೆಯೂ ಸಡಿಲಗೊಳ್ಳತೊಡಗಿತ್ತು. ಆದರೂ ಸಂಯಮದಿಂದಲೇ, "ಏನೋ, ನೂರೋ ಇನ್ನೂರೋ ಆಗಿದ್ದರೆ ಹೇಗಾದರೂ ಮಾಡಬಹುದಿತ್ತು. ಸಾವಿರ ಗಟ್ಲೆ ಕೇಳಿದರೆ ನಾನೆಲ್ಲಿಂದ ಕೊಡಲಿ? ನಾನೇನು ದೊಡ್ಡ ಸಾಹುಕಾರನೇ?" ಎಂದು ಕೇಳಿದನು.

ಮಹಮ್ಮದ್ ಖಾನರಿಗೆ ದೋಣಿಯಲ್ಲಿ ಗೆಳೆಯರೆಂದ ಮಾತುಗಳು ನೆನಪಾದವು. 'ವ್ಯಾಪಾರ ಚೆನ್ನಾಗಿದೆ. ನೀವು ಕೇಳಿದರೆ ಇಲ್ಲವೆನ್ನಲಾರ.'

"ನಿನ್ನ ವ್ಯಾಪಾರ ಚೆನ್ನಾಗಿದೆ, ನಿನ್ನಲ್ಲಿ ಹಣವಿಲ್ಲವೆಂದರೆ ಯಾರೂ ನಂಬಲಾರರು! ನೀನೀಗ ಹಣ ಕೊಡುತ್ತೀಯೋ ಇಲ್ಲವೋ?" ಫಾತಿಮ್ಮಳೊಡನೆ ಗರ್ಜಿಸಿಯೇ ಅಭ್ಯಾಸವಾದ ಖಾನರ ಬಾಯಿಯಿಂದ ಮಾತುಗಳು ಗರ್ಜನೆಯಂತೆಯೇ ಹೊರಬಿತ್ತು.

ಅಳಿಯನ ಸಂಯಮದ ಕಟ್ಟೆಯೂ ಪೂರ್ತಿ ಒಡೆಯಿತು. "ನನ್ನ ಬಳಿ ಇರುವ

ಹಣವನ್ನೆಲ್ಲಾ ವ್ಯಾಪಾರಕ್ಕೆ ಹಾಕಿದೆ ಮಾವಾ. ಅಂಗಡಿ ನೋಡಿದರೆ ತಿಳಿಯುವುದಿಲ್ಲವೇ? ನೀವೀಗ ಏನು ಮಾಡಿದರೂ ನನ್ನಿಂದ ಒಂದು ಪೈಸೆಯೂ ದೊರೆಯಲಾರದು. ಅಷ್ಟೊಂದು ಹಣ ಒಂದೇ ಬಾರಿಗೆ ನೀಡಲು ನಾನೇನು ಹಣದ ಬ್ಯಾಂಕ್ ಇಟ್ಟಿದ್ದೇನೆಯೇ?" ಕೊನೆಯ ಮಾತನ್ನು ರಶೀದ್ ಕೂಡಾ ಧ್ವನಿಯೇರಿಸಿಯೇ ನುಡಿದನು.

ಈ ಕೊನೆಯ ಮಾತನ್ನು ಆತನು ಯೋಚಿಸಿಕೊಂಡು ಆಡಿದ್ದೇನೂ ಅಲ್ಲ. ಈ ಮಾತು ಹೇಳದಿದ್ದರೂ ಆಗಿತ್ತು ಎಂದು ಆತನಿಗೆ ತೋಚಿದ್ದು ಆಮೇಲೆ. ಆದರೆ ಕೋಪದ ಭರದಲ್ಲಿ ಮಾತು ನಾಲಗೆಯಿಂದ ಜಾರಿತ್ತು. ಇನ್ನು ಅದನ್ನು ಪುನಃ ಬಾಯೊಳಗೆ ಹಾಕುವಂತಿಲ್ಲವಲ್ಲ? ಆದರೆ ಆಗುವ ಅನಾಹುತ ಆಗಿ ಹೋಯಿತು.

ತಮ್ಮ ಅಳಿಯ ಕೂಡಾ ತಮ್ಮನ್ನು ಈ ರೀತಿ ತಿರಸ್ಕರಿಸಿ ಬಿಟ್ಟಾನೆಂದು ಮಹಮ್ಮದ್ ಖಾನ್ ನಿರೀಕ್ಷಿಸಿರಲಿಲ್ಲ, ನಿರಾಸೆಯ ನೋವಿನ ಜೊತೆಗೆ ಅವರ ಮುಂಗೋಪದ ಸರ್ಪವು ಹೆಡೆ ಎತ್ತಿ ಬುಸುಗುಟ್ಟಿತು. ಅವರ ಕಣ್ಣುಗಳು ಕೆಂಪಡರಿದುವು. ಉದ್ವೇಗದಿಂದ ಮಾತುಗಳು ತಡವರಿಸಿದವು.

"ಹುಂ" ಅವರು ಜೋರಾಗಿ ಒಮ್ಮೆ ಹೂಂಕರಿಸಿದರು. "ಅಳಿಯ ಮಗನಿಗೆ ಸಮಾನ. ಕಷ್ಟ ಕಾಲದಲ್ಲಿ ಸಹಾಯ ಮಾಡ್ತಾನೇಂತ ನಂಬಿ ಇಷ್ಟು ದೂರ ಬಂದೆ. ಮಗಳು ದೊರಕಿದ ಮೇಲೆ ಮಾವ ಯಾಕೆ ಬೇಕು? ನಿನ್ನಂತಹವನಿಗೆ ಹೆಣ್ಣು ಕೊಟ್ಟು ನಾನು ಮೋಸ ಹೋದೆ! ನಿನಗೆ ಕೊಡುವ ಬದಲು ನನ್ನ ಮಗಳನ್ನು ಚಂದ್ರಗಿರಿಗೆ ತಳ್ಳಿಬಿಡಬಹುದಾಗಿತ್ತು..." ಎಂದು ಇನ್ನೂ ಏನೇನೋ ಬಾಯಿಗೆ ಬಂದಂತೆ ಅಳಿಯನನ್ನು ಬೈದರು.

ಇಷ್ಟು ಹೊತ್ತಿಗೆ ಗಲಾಟೆ ಕೇಳಿದ ರಶೀದ್‌ನ ಕೆಲವು ಗೆಳೆಯರು ಅಕ್ಕಪಕ್ಕದ ಅಂಗಡಿಗಳಿಂದ ಅಲ್ಲಿಗೆ ಬಂದರು. ರಶೀದ್ ಸಂಕೋಚದಿಂದ ಕುಗ್ಗಿ ಹೋದನು. ತಾನು ಒಂದು ಮಾತಂದಿದ್ದಕ್ಕೇ ಮಾವ ಇಷ್ಟೊಂದು ಸಿಟ್ಟು ಮಾಡುವರೆಂದು ಆತ ಊಹಿಸಿರಲಿಲ್ಲ. ಎಂತಹ ಮನುಷ್ಯ ತನ್ನ ಮಾವ? ತನ್ನ ಬಳಿ ಹಣವಿಲ್ಲವೆಂದು ಒಮ್ಮೆ ಹೇಳಿದರೆ ಅರ್ಥವಾಗುವುದಿಲ್ಲವೇ? ಗೆಳೆಯರು, ಅಕ್ಕಪಕ್ಕದ ಅಂಗಡಿಯುಗಳವರು ಏನೆಂದುಕೊಳ್ಳುವರು? ರಶೀದ್ ತಲೆ ತಗ್ಗಿಸಿ ಕುಳಿತು ಬಿಟ್ಟನು. ಕೋಪದಿಂದ ಕುದಿಯುತ್ತಾ ಮುಂಡಾಸನ್ನೊಮ್ಮೆ ಜೋರಾಗಿ ಒದರಿ ತಲೆಯ ಮೇಲೆ ಸುತ್ತಿಕೊಳ್ಳುತ್ತಾ ಮಾವ ಅಲ್ಲಿಂದ ಹೊರಟಾಗ ರಶೀದ್ ಏನು ಮಾಡಬೇಕೆಂದು ತಿಳಿಯದೆ ಎತ್ತಲೊ ನೋಡುತ್ತಾ ಕುಳಿತಲ್ಲೇ ಕುಳಿತು ಬಿಟ್ಟನು. ಕಾಲು ಗಂಟೆಯ ಅವಧಿಯಲ್ಲಿ ಏನೇನೋ ಆಗಿ ಹೋಯಿತು.

ಮಹಮ್ಮದ್ ಖಾನ್ ಅಲ್ಲಿಂದ ನೇರವಾಗಿ ಹೋದದ್ದು ಮಗಳ ಮನೆಗೆ ತಂದೆಯನ್ನು ನೋಡುತ್ತಲೂ ಮಗಳ ಮುಖ ಊರಗಲವಾಯಿತು.

"ಉಮ್ಮ ಹೇಗಿದ್ದಾರೆ? ಜಮೀಲ ಹೇಗಿದ್ದಾಳೆ? ಮದುವೆ ಯಾವಾಗ?" ಎಲ್ಲವನ್ನೂ ಒಂದೇ ಉಸಿರಿಗೆ ಕೇಳಿದಳು ನಾದಿರಾ. ಮೊಮ್ಮಗುವನ್ನು ಅಜ್ಜನ ಕೈಯಲ್ಲಿಟ್ಟಳು; ನಗುನಗುತ್ತಾ ಓಡಾಡಿ ತಂದೆಗೆ ಅವಲಕ್ಕಿ, ಚಹ ತಂದಿತ್ತಳು ಅವಳ ಅತ್ತೆಯೂ ಬಾಗಿಲಿನ ಪರದೆಯ ಹಿಂದೆ ನಿಂತು ಸೊಸೆಯ ತಾಯಿ ತಂಗಿಯರ ಕ್ಷೇಮ ಸಮಾಚಾರವನ್ನು ಕೇಳಿದರು. ಕೊನೆಗೆ ಖಾನ್ ಆಮಿನಾಳೊಡನೆ.

"ನೋಡಿ, ನಾನು ಬಂದಿರೋದು ನಾದಿರಾಳನ್ನು ಕರೆದುಕೊಂಡು ಹೋಗುವಾ ಎಂದು. ಅವಳ ತಾಯಿ ಮಗುವನ್ನು ತುಂಬಾ ನೆನಪಿಸಿಕೊಳ್ಳಿತ್ತಿದ್ದಾಳೆ. ನಾಲ್ಕು ದಿನ ತಾಯಿ ಮಗನನ್ನು ಮನೆಯಲ್ಲಿಟ್ಟುಕೊಂಡು ಹಿಂದಕ್ಕೆ ಕಳಿಸಿಕೊಡುತ್ತೇನೆ" ಎಂದು ತುಂಬಾ ನಮ್ರರಾಗಿ ಹೇಳಿದರು. ಅಂಗಡಿಗೆ ಹೋದುದನ್ನಾಗಲಿ, ಅಳಿಯನೊಡನಾದ ಮಾತುಕತೆಯನ್ನಾಗಲಿ ಯಾವುದನ್ನೂ ಅವರು ತಿಳಿಸಲಿಲ್ಲ.

"ರಶೀದ್‌ನೊಡನೆ ಹೇಳದೆ ಹೇಗೆ ಕಳಿಸಲಿ?" ಆಕೆಯೂ ನಯವಾಗಿಯೇ ಉತ್ತರಿಸಿದರು.

"ನೀವು ಹೇಳಿದರೆ ನಿಮ್ಮ ಮಗ 'ಬೇಡ' ಅನ್ನುತ್ತಾನೆಯೇ?" ನಗುತ್ತಾ ಕೇಳಿದರು ಖಾನ್. ಈಗ ಆಮಿನಾ ಮೆತ್ತಗಾದರು. ತಾನು ಹೇಳಿದಂತೆ ತನ್ನ ಮಗ ಕೇಳಲಾರ ಎಂದು ಅವನ ಮಾವ ತಿಳಿಯಬಾರದಲ್ಲ? ಅಲ್ಲದೆ ಸೊಸೆಯೂ ಮೂರು ತಿಂಗಳ ಮಗುವನ್ನೆತ್ತಿಕೊಂಡು ಬಂದವಳು ಮತ್ತೆ ತವರಿಗೆ ಹೋಗಿಯೇ ಇಲ್ಲ. ಫಾತಿಮ್ಮ ಕೂಡಾ ತನ್ನಂತೆಯೇ ಓರ್ವ ಅಜ್ಜಿಯಲ್ಲವೇ? ಅದೂ ಗಂಡು ಮಕ್ಕಳಿಲ್ಲದಾಕೆ. ಮೊಮ್ಮಗುವನ್ನು ನೋಡುವ ಹಂಬಲವಿಲ್ಲದಿದ್ದೀತೇ? ಎಷ್ಟಾದರೂ ತಾಯಿ ಮಕ್ಕಳು, ತಾನೇಕೆ ತಡೆಯಲಿ? ಹೋಗಿ ತಾಯಿಯನ್ನು ನೋಡಿಕೊಂಡು ಬರಲಿ.

"ಹೋಗುತ್ತೀಯಮ್ಮಾ ನಾದಿರಾ?" ಸೊಸೆಯನ್ನು ಕೇಳಿದರು ಅತ್ತೆ. ಈಗ ಪೇಚಿಗಿಟ್ಟುಕೊಂಡದ್ದು ನಾದಿರಾಗೆ. ತವರಿಗೆ ಹೋಗಲು ಅವಳಿಗೆ ಅಷ್ಟೇನೂ ಇಷ್ಟವಿಲ್ಲ. ಇಲ್ಲೇ ಅವಳು ಸುಖವಾಗಿದ್ದಾಳೆ. ಗಂಡ ಮನೆಯಲ್ಲಿಲ್ಲದ ವೇಳೆಯಲ್ಲಿ ಹೊರಡಲು ಅವಳ ಮನವೊಪ್ಪದು. ಅವಳು ತಂದೆಯೊಡನೆ.

"ಹೇಗೂ ಜಮೀಲಾಳ ಮದುವೆಗೆ ಬರುವುದೂ ಇದ್ದೇ ಇದೆಯಲ್ಲ ಅಬ್ಬ? ಮದುವೆಗೆ ಒಂದೆರಡು ವಾರಗಳ ಮೊದಲೇ ಬಂದಿರುತ್ತೇನೆ. ಆಗದೇ?" ಎಂದು ಮೆತ್ತಗೆ ನುಡಿದು ತಂದೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದಳು.

"ನಿನ್ನ ಉಮ್ಮಾ ಬಹಳ ನೆನಪು ಮಾಡಿಕೊಳ್ಳುತ್ತಿದ್ದಾಳಮ್ಮಾ. ಈಗ ನನ್ನೊಡನೆ ಹೊರಡು. ಮದುವೆ ವಿಷಯ ಆಮೇಲೆ ಯೋಚಿಸೋಣ" ಎಂದರು ಖಾನ್.

ನಾದಿರಾಗೆ ಅಚ್ಚರಿಯಾಯಿತು. ತನ್ನ ತಂದೆ ತನ್ನ ತಾಯಿಯ ಮಾತಿಗೆ ಇಷ್ಟು ಬೆಲೆ ಕೊಡಲು ಪ್ರಾರಂಭಿಸಿದ್ದು ಯಾವಾಗ? ತಂದೆ ಈ ರೀತಿ ಬದಲಾದುದಾದರೂ ಹೇಗೆ?

"ಏನಮ್ಮಾ? ಏನು ಮಾಡುತ್ತೀ?" ಆಮಿನ ಇನ್ನೊಮ್ಮೆ ಜ್ಞಾಪಿಸಿದರು. ತಂದೆ ಎಷ್ಟು ಒತ್ತಾಯ ಮಾಡಿದಾಗಲೂ ತಾನು ಹೋಗದಿದ್ದರೆ ತಂದೆ ತಾಯಿಗಳು ನೊಂದುಕೊಳ್ಳುತ್ತಾರೆ. ಸರಿ, ತಂದೆಯ ಬಲವಂತಕ್ಕಾಗಿ ಒಂದೆರಡು ದಿನಗಳಿಗೆ ಹೋಗಿ ಬಂದರಾಯಿತು.

"ಹೂಂ, ಉಮ್ಮಾ, ಹೋಗಿ ಒಂದೆರಡು ದಿನಗಳಲ್ಲಿ ಬಂದು ಬಿಡುತ್ತೇನೆ. ಆದರೆ.... ನಿಮ್ಮ ಮಗ ಏನೆಂದುಕೊಳ್ಳುತ್ತಾರೊ" ಮತ್ತೂ ಆಕೆಗೆ ಸಂದೇಹವೇ. ರಶೀದ್‌ಗೆ ಒಂದು ಮಾತೂ ತಿಳಿಸದೆ ತಾನು ಹೋಗುವುದು ಸರಿಯೇ?

"ನೀನು ಹೋಗಿ ಬಾ, ಅವನೊಡನೆ ನಾನು ಹೇಳುತ್ತೇನೆ." ಅತ್ತೆ ಭರವಸೆಯಿತ್ತರು.

"ನಿನ್ನ ತಂದೆ ಇಲ್ಲಿ ಉಂಡದ್ದೇ ಕಡಿಮೆ. ನಮ್ಮ ಬಿಳಿ ಕೋಳಿ ಮರಿ ಕೈಗೆ ಸಿಗುತ್ತದೋ ನೋಡು. ಆ ನೆರೆಮನೆ ಹುಡುಗನ ಕೈಯಲ್ಲಿ ಮಸೀದಿಗೆ ಕಳಿಸೋಣ....." ಎನ್ನುತ್ತಿದ್ದಂತೆ ಮಹಮ್ಮದ್ ಖಾನು ನಡುವೆಯೇ ತಡೆದರು.

"ಅದೆಲ್ಲಾ ಬೇಡಮ್ಮಾ, ನಾವೀಗಲೇ ಹೊರಡಬೇಕು. ಮಾಡಿದ ಅಡಿಗೆಯನ್ನೇ ಬಡಿಸಿ ಬಿಡಿ" ಎಂದು ಅವಸರಿಸಿದರು.

ಊಟವಾದ ಬಳಿಕ ನಾದಿರಾ ತಂದೆಯೊಡನೆ ಹೊರಟಳು. ತಂದೆ ಒಂದು ಕೈಯಲ್ಲಿ ಕೊಡೆಯನ್ನು, ಒಂದು ಕೈಯಲ್ಲಿ ಮಗಳ ಬಟ್ಟೆಯ ಚೀಲವನ್ನು ಎತ್ತಿಕೊಂಡರು. ನಾದಿರಾ ಸೀರೆಯ ಸೆರಗನ್ನು ತಲೆಯ ಮೇಲೆಳೆದುಕೊಂಡು ಒಂದು ಕೈಯಲ್ಲಿ ಮಗುವನ್ನೆತ್ತಿಕೊಂಡು ಇನ್ನೊಂದು ಕೈಯಲ್ಲಿ ಕೊಡೆಯನ್ನೂ ಹಿಡಿದು ಹೊರಟಳು. ಅವಳು ಬುರುಕಾ ಹಾಕುವುದು ರಶೀದ್‌ಗೆ ಇಷ್ಟವಿರಲಿಲ್ಲವಾದ ಕಾರಣ ಬುರುಕಾ ಹಾಕುತ್ತಿರಲಿಲ್ಲ.

"ನಾದಿರಾ, ಮಣಿಪುರದ ವರೆಗೆ ನಾವು ಬಸ್ಸಿನಲ್ಲೇ ಹೋಗೋಣ. ಆಗದೇ?" ಖಾನ್ ಮಗಳೊಡನೆ ಕೇಳಿದರು.

"ಹೂಂ... ಆದರೆ ನಿಮ್ಮಳಿಯ ಏನನ್ನುವರೋ, "ಸಂದೇಹ ವ್ಯಕ್ತಪಡಿಸಿದಳು ನಾದಿರಾ. ಆತನು ಈ ವರೆಗೂ ಆಕೆಯನ್ನು ಓಡಾಡಿಸಿದ್ದು ಟ್ಯಾಕ್ಸಿಯಲ್ಲೆ ಆಕೆ ಬಸ್ಸಿನಲ್ಲಿ ಸಂಚರಿಸುವುದು ಆತನಿಗೆ ಇಷ್ಟವಿಲ್ಲ.

"ಆತನೇನೆನ್ನುತ್ತಾನೆ? ನನ್ನಲ್ಲಿ ಹಣವಿಲ್ಲವೆಂದು ಆತನಿಗೆ ಗೊತ್ತು" ಕೊಂಚ

ಒರಟಾಗಿಯೇ ನುಡಿದ ಖಾನ್ ಮುಂದಡಿಯಿಟ್ಟನು. ನಾದಿರಾ ತಂದೆಯನ್ನು ಹಿಂಬಾಲಿಸಿದಳು.

ಅವರಿಬ್ಬರೂ ಬಸ್ಸಿನಲ್ಲಿ ಮಣಿಪುರಕ್ಕೆ ಬಂದು ಅಲ್ಲಿಂದ ಒಂದು ಟ್ಯಾಕ್ಸಿ ಮಾಡಿಕೊಂಡು ಬಾಗೋಡು ಕಡವಿಗೆ ಬಂದರು. ತಾಯಿಯ ಮಡಿಲಲ್ಲಿ ನಿದ್ರಿಸುತ್ತಿದ್ದ ಮಗುವನ್ನು ಖಾನ್ ಎತ್ತಿಕೊಂಡರು.

ನಾದಿರಾಗೆ ತನ್ನ ಪ್ರೀತಿಯ ಚಂದ್ರಗಿರಿಯನ್ನು ಕಂಡಾಗ ಮನಸ್ಸಿಗೆ ಹಾಯೆನಿಸಿತು. ಅಷ್ಟು ದೂರ ಬಂದ ಆಯಾಸ ಒಂದು ಕ್ಷಣ ಮರೆಯಾಯಿತು. ದೋಣಿಯಲ್ಲಿ ಕುಳಿತುಕೊಂಡು ಕಿಳಿಯೂರಿನ ಕಡವಿನಲ್ಲಿಳಿದು ತಮ್ಮ ಮನೆಯನ್ನು ಸೇರಿದಾಗ ಸಂಜೆಯ ನಮಾಜಿನ ಸಮಯವೂ ಕಳೆದಿತ್ತು. ಫಾತಿಮ್ಮ ದನಗಳಿಗೆ ಹುಲ್ಲು ಹಾಕುತ್ತಿದ್ದಳು. ಜಮೀಲ ಜಗಲಿಯಲ್ಲಿ ಕುಳಿತು ಬೀಡಿ ಕಟ್ಟುತ್ತಿದ್ದಳು.

ಮಗಳನ್ನು ಈಗ ಕರೆದುಕೊಂಡು ಬರುವುದಿಲ್ಲವೆಂದು ಹೇಳಿ ಕೊನೆಗೂ ಕರೆದುಕೊಂಡೇ ಬಂದಿದ್ದನ್ನು ನೋಡಿ ಫಾತಿಮ್ಮಾಗೆ ಕೊಂಚ ಅಚ್ಚರಿಯಾದರೂ ಮಗುವನ್ನು ಕಂಡೊಡನೆ ಅವಳ ಮುಖ ಅರಳಿತು. ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಬಂದು ಗಂಡನ ಕೈಯಿಂದ ಮಗುವನ್ನೆತ್ತಿಕೊಂಡಳು. ಅಕ್ಕ ಬಂದು ತಂಗಿಯ ಬಳಿ ಕುಳಿತಳು; ತಾಯಿ ತಂಗಿಯರ ಪುನರ್ಮಿಲನದಿಂದ ಆನಂದಿತಳಾದ ನಾದಿರಾ ಆ ಕ್ಷಣದಲ್ಲಿ ಗಂಡನ ಮನೆಯನ್ನು ಮರೆತಳೆಂದೇ ಹೇಳಬಹುದು.

ನಾದಿರಾಳನ್ನು ಕರೆದುಕೊಂಡು ಬರುವುದಿಲ್ಲವೆಂದು ಗಂಡ ಹೇಳಿದ್ದರಿಂದ ಫಾತಿಮ್ಮ ಹೆಚ್ಚಿನ ಅಡಿಗೆಯನ್ನೇನೂ ಮಾಡಿರಲಿಲ್ಲ. ಗಂಡ ಮಣಿಪುರದಿಂದ ಬರುವಾಗ ಮೀನನ್ನೇನಾದರೂ ತಂದರೆ ಅದನ್ನೇ ಸಾರು ಮಾಡೋಣವೆಂದು ಕೊಂಡಿದ್ದಳು. ಆದರೆ ನಾದಿರಾ ಜೊತೆಯಲ್ಲಿದ್ದುದರಿಂದ ಖಾನ್ ಮಾರುಕಟ್ಟೆಗೆ ಹೋಗದೆ ನೇರವಾಗಿ ಬಂದಿದ್ದರಲ್ಲ? ಆದುದರಿಂದ ಫಾತಿಮ್ಮ ಮನೆಯಲ್ಲಿದ್ದುದರಲ್ಲಿ ಒಳ್ಳೆಯ ಒಂದು ಕೋಳಿಯನ್ನು ಗೂಡಿನಿಂದ ಹಿಡಿದು ತಂದು ಗಂಡನಿಂದ ಕೊಯ್ಯಿಸಿದಳು. ರಾತ್ರಿಗೆ ಕೋಳಿ ಸಾರು ಮಾಡಿ ಬೆಳಿಗ್ಗೆ ಅಕ್ಕಿ ರೊಟ್ಟಿ ಮಾಡೋಣವೆಂದುಕೊಂಡಳು.

ಅಡಿಗೆಯಾಯಿತು. ಮಹಮ್ಮದ್ ಖಾನ್ ಮಸೀದಿಗೆ ಹೋಗಿ ಬಂದು ಊಟ ಮಾಡಿದರು. ತಾಯಿ ಮಕ್ಕಳೆಲ್ಲರೂ ಊಟ ಮುಗಿಸಿದರು. ಅಕ್ಕ ತಂಗಿಯರಿಬ್ಬರೂ ಹರಟೆ ಹೊಡೆಯುತ್ತಲೇ ಇದ್ದರು. ಒಂದು ಕೋಳಿಯನ್ನು ಒಮ್ಮೆ ಒಂದು ನರಿ ಎತ್ತಿಕೊಂಡು ಹೋದಾಗ ತಾಯಿ ಅದರ ಹಿಂದೆಯೇ ಓಡಿ ಅದನ್ನು ಓಡಿಸಿ ಕೋಳಿಯನ್ನು ತಿರುಗಿ

ತಂದುದನ್ನು ಜಮೀಲ ಅಕ್ಕನೊಡನೆ ಹೇಳಿ ಇಬ್ಬರೂ ನಕ್ಕರು. ನಾದಿರಾಗೆ ತನ್ನ ಗಂಡನ ಮನೆಯ ವಿಷಯ ಎಷ್ಟು ಹೇಳಿದರೂ ಸಾಕಾಗುತ್ತಿರಲಿಲ್ಲ. ಮಗು ತೊಟ್ಟಿಲಲ್ಲಿ ನಿದ್ರಿಸುತ್ತಿತ್ತು.

"ಅಂದ ಹಾಗೆ ನಿನ್ನ ಅತ್ತೆ ಏನು ಹೇಳಿದ್ದಾರೆ? ನೀನು ಪುನಃ ಯಾವಾಗ ಹೋಗಬೇಕಂತೆ?" ಎಲೆ ಅಡಿಕೆ ಹಾಕಿಕೊಳ್ಳುತ್ತಾ ಫಾತಿಮ್ಮ ಮಗಳೊಡನೆ ಕೇಳಿದರು.

"ಅವರೇನೂ ಹೇಳಿಲ್ಲ. ಒಂದೆರಡು ದಿನಗಳಲ್ಲಿ ನಾನೇ ಬಂದು ಬಿಡುತ್ತೇನೆಂದು ಹೇಳಿ ಬಂದಿದ್ದೇನೆ. ನಾನಿಲ್ಲವಾದರೆ ಅತ್ತೆಗೆ ತುಂಬಾ ತೊಂದರೆಯಾದೀತು" ಸಹಜವಾಗಿಯೇ ನುಡಿದಳು ನಾದಿರಾ.

ಅಲ್ಲೇ ಮಂಚದ ಮೇಲೆ ಕುಳಿತಿದ್ದ ತಂದೆಯ ಕಿವಿಗೆ ಈ ಮಾತು ಬಿತ್ತು. ಅವರು ಕುಳಿತಲ್ಲಿಂದಲೇ ತಮ್ಮ ಪತ್ನಿಯೊಡನೆ,

"ಅವಳನ್ನು ಸದ್ಯಕ್ಕೆ ನಾನು ಆ ಸೈತಾನನ ಮನೆಗೆ ಕಳುಹಿಸುವುದಿಲ್ಲ! " ಎಂದು ಗರ್ಜಿಸಿದರು.

ಎಲ್ಲರಿಗೂ ಸಿಡಿಲು ಬಡಿದಂತಾಯಿತು. ಯಾರ ಬಾಯಿಯಿಂದಲೂ ಮಾತು ಹೊರಡಲಿಲ್ಲ. ನಾದಿರಾಗೆ ನಾಲಗೆಯ ದ್ರವವಾರಿತು. ಕೈಕಾಲುಗಳು ಕಂಪಿಸತೊಡಗಿದವು. ಏನು ಮಾಡಬೇಕೆಂದರಿಯದೆ ಅಲ್ಲೇ ಒಂದು ಮಣೆಯಲ್ಲಿ ಕುಸಿದಳು.

ಕೊಂಚ ಹೊತ್ತಿನ ಬಳಿಕ ಚೇತರಿಸಿಕೊಂಡ ಫಾತಿಮ್ಮ, "ಯಾಕೆ ಹೀಗೆನ್ನುತ್ತೀರಾ? ಏನಾಯಿತು?" ಎಂದು ಕೇಳಿದಳು.

"ಏನಾಯಿತೂಂತ ಕೇಳುತ್ತೀಯಾ? ಲಕ್ಷಣವಾಗಿ ಅಳಿಯನ ಬಳಿಗೆ ಹೋಗಿ "ಮಗಳ ಮದುವೆಗೆ ಒಂದಷ್ಟು ಸಹಾಯ ಮಾಡು"ಎಂದು ಕೇಳಿದರೆ, "ನಾನೇನು ಬ್ಯಾಂಕ್ ಇಟ್ಟಿದ್ದೇನೆಯೇ?" ಎಂದು ನನ್ನ ಮುಖದ ಮೇಲೆ ಹೊಡೆದಂತೆ ಹೇಳಿ ಬಿಟ್ಟನಲ್ಲ ನಿನ್ನ ಅಳಿಯ? ನಾನು ಇವನಿಗೆ ಮಗಳನಲ್ಲದೆ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟಿಲ್ಲವೆ? ನನ್ನ ಕಷ್ಟಕ್ಕಾಗದ ಮೇಲೆ ಅಂತಹ ಅಳಿಯ ಇದ್ದರೇನು? ಇನ್ನು ಮುಂದೆ ಅವಳೇನಾದರೂ ಇಲ್ಲಿಂದ ಹೋಗುವ ಮಾತನ್ನು ನೀನಾಗಲೀ ಅವಳಾಗಲೀ ಅಂದರೆ ನಿಮ್ಮಿಬ್ಬರನ್ನು ಒಟ್ಟಿಗೆ ಇಲ್ಲವಾಗಿಸುತ್ತೇನೆ. ಚೆನ್ನಾಗಿ ನೆನಪಿಟ್ಟುಕೊಳ್ಳಿ" ಎಂದು ಗರ್ಜಿಸುತ್ತಾ ಹೊರಗಡೆಗೆ ಹೋದರು.

ಈಗ ನಾದಿರಾಗೆ ಎಲ್ಲವೂ ಅರ್ಥವಾಯಿತು. ತನ್ನ ಗಂಡನೊಡನೆ ತಂದೆ ಜಗಳವಾಡಿ ಸಿಟ್ಟಿನಿಂದ ತನ್ನ ಮನೆಗೆ ಬಂದು ತನ್ನನ್ನು ಕರೆದುಕೊಂಡು ಬಂದಿದ್ದಾರೆ! ತಾನೆಂತಹ ಹುಚ್ಚಿ! ತಂದೆ ಕರೆದದ್ದೇ ತಡ, ಹಿಂದೆ ಮುಂದೆ ಯೋಚಿಸದೆ ಅವರ ಜೊತೆಗೆ ಬಂದೇ ಬಿಟ್ಟೆನಲ್ಲ? ತನ್ನ ಗಂಡ ಮನೆಗೆ ಬಂದು ಅವರ ಅಪ್ಪಣೆ ಪಡೆದ ಮೇಲೆಯೇ ತಾನು ಬರುವೆನೆಂದಿದ್ದರೆ

ತನ್ನ ತಂದೆಗೆ ಏನೂ ಮಾಡಲಾಗುತ್ತಿರಲಿಲ್ಲ. ತನಗೆ ಇಷ್ಟೂ ಬುದ್ಧಿ ಇಲ್ಲದೆ ಹೋಯಿತೆ?

"ಹೋಗಮ್ಮಾ ಮಲಗು, ಬೆಳಿಗ್ಗೆ ಯೋಚಿಸಿ ಏನಾದರೂ ತೀರ್ಮಾನ ಮಾಡೋಣ. ನಿನ್ನ ತಂದೆಯ ಮುಂಗೋಪ ನಿನಗೆ ಗೊತ್ತಲ್ಲ? ಸಿಟ್ಟು ಇಳಿದ ಮೇಲೆ ಅವರನ್ನು ಹೇಗಾದರೂ ಸಮಾಧಾನ ಮಾಡೋಣ."

ಫಾತಿಮ್ಮ ಅನುನಯದಿಂದ ಮಗಳೊಡನೆಂದಾಗ ನಾದಿರಾಳ ದುಃಖದ ಕಟ್ಟೆಯೊಡೆಯಿತು. ಕುಳಿತಲ್ಲೇ ಬಿಕ್ಕಿ ಬಿಕ್ಕಿ ಅಳತೊಡಗಿದಳು.

"ಶ್, ಅಳಬೇಡ ಮಗೂ, ನಿನ್ನ ತಂದೆ ಕೇಳಿಸಿಕೊಂಡು ಇನ್ನೊಮ್ಮೆ ರಂಪ ಮಾಡಿಯಾರು. ಬೇಗ ಹೋಗಿ ಮಲಗು" ತಾಯಿ ಗಾಬರಿಯಿಂದ, ತಂದೆಗೆ ಕೇಳಿಸದಂತೆ ಮಗಳನ್ನು ಸಂತೈಸಿದಳು.

ತಂದೆಯ ಮುಂಗೋಪ ತಾಯಿ, ಮಕ್ಕಳಿಗೆಲ್ಲಾ ಚಿರಪರಿಚಿತ. ಮಕ್ಕಳಾದ ಮೇಲೆ ಮಕ್ಕಳನ್ನೂ ಮಹಮ್ಮದ್ ಖಾನ್ ಹೊಡೆದು ಶಿಕ್ಷಿಸುತ್ತಿದ್ದರು. ಮಕ್ಕಳ ಎದುರಿನಲ್ಲಿ ಕೂಡಾ ಫಾತಿಮ್ಮಳಿಗೆ ಹೊಡೆತ ಬೀಳುವುದಿತ್ತು. ಒಮ್ಮೆ ಫಾತಿಮ್ಮ ಗಂಡನ ಮಾತಿಗೆ ಏನೋ ಗೊಣಗಿದಾಗ ಕೂಡಲೇ ಆತನ ಬಲಗೈ ಆಕೆಯ ಕೆನ್ನೆಯನ್ನಪ್ಪಳಿಸಿತ್ತು. ಕಿವಿಯಲ್ಲಿ ಚಿನ್ನದ ಅಲಿಕತ್ತುಗಳು ನಜ್ಜುಗುಜ್ಜಾಗಿದ್ದವು. ಫಾತಿಮ್ಮ ತಲೆ ತಿರುಗಿ ಜ್ಞಾನ ತಪ್ಪಿ ಬಿದ್ದಳು. ಮಕ್ಕಳಿಬ್ಬರೂ ಆಗ ಚಿಕ್ಕವರು. ಅವರು ದೂರ ನಿಂತು ಈ ದೃಶ್ಯವನ್ನು ನೋಡಿ ಭಯದಿಂದ ನಡುಗಿದರು. ಮುಂದೆ ತಂದೆಗೆ ಕೋಪ ಬಂದಿದೆಯೆಂದು ತಿಳಿದಾಗಲೆಲ್ಲಾ ಈ ಮಕ್ಕಳು ತಂದೆಯ ಕಣ್ಣೆದುರಿನಿಂದ ಮಾಯವಾಗಿ ನದೀ ತೀರದಲ್ಲೆಲ್ಲಾದರೂ ಅವಿತುಕೊಳ್ಳುತ್ತಿದ್ದರು, ತಂದೆಗೆ ಎದುರಾಡುವ ಪ್ರತಿಭಟಿಸುವ ಯೋಚನೆಯನ್ನು ಇವರು ಕನಸಿನಲ್ಲೂ ಮಾಡಲಾರದವರಾಗಿದ್ದರು.

ನಾದಿರಾ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತಾ ತನ್ನ ಕೋಣೆಗೆ ನಡೆದು ಹಾಸಿಗೆಯ ಮೇಲೆ ಬಿದ್ದುಕೊಂಡಳು. ಮಗು ಶಾಂತವಾಗಿ ನಿದ್ರಿಸುತ್ತಿತ್ತು. ಮಗುವನ್ನು ನೋಡುತ್ತಲೂ ಆಕೆಗೆ ಪುನಃ ಕಣ್ಣೀರುಕ್ಕಿತು. ಯೋಚನೆಗಳು ಕಾವಳ್ಳಿಯ ಮನೆಯ ಸುತ್ತ ತಿರುಗಿದವು.

**ಸಾರಾ ಅಬೂಬಕ್ಕರ್**



ಇವರು ೩೦.೬.೧೯೩೬ ರಲ್ಲಿ ಕಾಸರಗೋಡಿನಲ್ಲಿ ಜನಿಸಿದರು. ಕನ್ನಡ ಸಾಹಿತ್ಯ ಲೋಕದ ಕಾದಂಬರಿ ಪ್ರಕಾರಕ್ಕೆ ಮಹಿಳಾ ಲೇಖಕಿಯಾಗಿ ಮುಸ್ಲಿಂ ಸಂವೇದನೆಯ ಧ್ವನಿಗಳನ್ನು ಮೊತ್ತಮೊದಲಾಗಿ ನೀಡಿದರು.

ಕಾದಂಬರಿ ಪ್ರಕಾರದಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿದರು. ಓರ್ವ ದಿಟ್ಟ ಮತ್ತು ಸಾಮಾಜಿಕ ಕಾಳಜಿಯ ಲೇಖಕಿಯಾಗಿ ಪರಿಚಿತರಾದರು. ೧೯೮೧ರಲ್ಲಿ ಇವರ ಚೊಚ್ಚಲ ಕಾದಂಬರಿ 'ಚಂದ್ರಗಿರಿಯ ತೀರದಲ್ಲಿ' ಪ್ರಕಟವಾಯಿತು. ಇದು ಕನ್ನಡ ಕಾದಂಬರಿಯಲ್ಲಿ ಹೊಸ ಸಂಚಲನವನ್ನು ಸೃಷ್ಟಿಸಿತು. ಈ ಕೃತಿಗೆ ಕರ್ನಾಟಕ ಸಾಹಿತ್ಯ ಎಕಾಡೆಮಿಯ ಪ್ರಶಸ್ತಿ ಲಭಿಸಿದೆ. ಇವರು ಮೂರು ಕಾದಂಬರಿಗಳನ್ನು ಮತ್ತು ಐದು ಕಥಾಸಂಕಲನಗಳನ್ನು ಪ್ರಕಟಿಸಿರುವರು. ಪ್ರವಾಸ ಕಥನಗಳು ಹಾಗೂ ನಾಟಕ ಕೃತಿಗಳನ್ನು ರಚಿಸಿರುವುದಲ್ಲದೆ ಮಲೆಯಾಳದಿಂದ ಐದು ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಇವರಿಗೆ ೨೦೦೮ ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಕನ್ನಡ ವಿ.ವಿ. ನೀಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಇವರು ಪಾತ್ರರಾಗಿದ್ದಾರೆ. ಚಂದ್ರಗಿರಿಯ ತೀರದಲ್ಲಿ ತಮಿಳು ಭಾಷೆಯಲ್ಲಿ ಚಲನಚಿತ್ರವಾಗಿ ಮೂರು ಪ್ರಶಸ್ತಿಗಳನ್ನು ಪಡೆದಿವೆ. ಈ ಕೃತಿ ಮಲೆಯಾಳ, ತೆಲುಗು, ತಮಿಳು, ಒರಿಯ, ಮರಾಠಿ, ಇಂಗ್ಲಿಷ್ ಮುಂತಾದ ಭಾಷೆಗಳಿಗೆ ಅನುವಾದಗೊಂಡಿದೆ.

## ಚಟುವಟಿಕೆಗಳು

- ಪುರುಷ ಪ್ರಧಾನವಾದ ಸಮಾಜದಲ್ಲಿ ಸ್ತ್ರೀಯರ ಅಸಹಾಯಕತೆ ಈ ಕಾದಂಬರಿಯ ಭಾಗದಲ್ಲಿ ಹೇಗೆ ಮೂಡಿ ಬಂದಿದೆ? ಒಂದು ವಿಮರ್ಶಾತ್ಮಕ ಟಿಪ್ಪಣಿ ಬರೆಯಿರಿ.
- 'ಸಾಮಾಜಿಕ ಪಿಡುಗು'ಗಳು ಎಂಬ ವಿಷಯದ ಕುರಿತಾದ ವಿಚಾರಗೋಷ್ಠಿಯೊಂದರಲ್ಲಿ ಮಂಡಿಸುವುದಕ್ಕಾಗಿ 'ವರದಕ್ಷಿಣೆಯು ಸಮಾಜಕ್ಕೆ ಅಂಟಿದ ಶಾಪ' ಎಂಬ ವಿಷಯದ ಕುರಿತು ಪ್ರಬಂಧವನ್ನು ಸಿದ್ಧಪಡಿಸಿರಿ.
- ಕೌಟುಂಬಿಕ ಸಂಬಂಧಗಳನ್ನು ಸೌಹಾರ್ದಯುತವಾಗಿ ಮುಂದುವರಿಸುವುದಕ್ಕೆ ಅಗತ್ಯವಾದ ಮಾರ್ಗೋಪಾಯಗಳ ಬಗ್ಗೆ ಒಂದು ಲೇಖನವನ್ನು ಬರೆದು ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಿರಿ.
- ಚಂದ್ರಗಿರಿಯ ತೀರದಲ್ಲಿ ಎಂಬ ಕಾದಂಬರಿಯನ್ನು ಗ್ರಂಥಾಲಯದಿಂದ ಸಂಗ್ರಹಿಸಿ ಓದಿ ಕೃತಿ ವಿಮರ್ಶೆಯನ್ನು ಬರೆಯಿರಿ.
- ಕಾದಂಬರಿಯು ಸಣ್ಣ ಕತೆಗಿಂತ ಹೇಗೆ ಭಿನ್ನವಾಗಿದೆ ಎನ್ನುವುದನ್ನು ಚರ್ಚಿಸಿ, ಕಿರುಟಿಪ್ಪಣಿ ಬರೆಯಿರಿ.
- 'ಮಾತು ಮನೆಕೆಡಿಸಿತು' ಎಂಬ ಹೇಳಿಕೆಯು ಪ್ರಸ್ತುತ ಕಾದಂಬರಿಯ ಭಾಗಕ್ಕೆ ಅನ್ವಯವಾಗುವುದೇ? – ಚರ್ಚೆಯನ್ನು ನಡೆಸಿ ಪ್ರಬಂಧ ತಯಾರಿಸಿರಿ.

## ಹೆಚ್ಚಿನ ಓದಿಗೆ

ವಜ್ರಗಳು – ಸಾರಾ ಅಬೂಬಕ್ಕರ್

# ಹಸು ಪುಣ್ಯಕೋಟಿ ಮತ್ತು ಹುಲಿ ಅರ್ಭುತ

**ಪು.ತಿ.ನ.**

ನವೋದಯ ಕಾಲದ ವಿಮರ್ಶೆಯ ಒಂದು ಮಾದರಿಯನ್ನು ಪು.ತಿ.ನ. ಅವರ ಈ ಬರಹದಿಂದ ಪರಿಚಯಿಸಿಕೊಳ್ಳಬಹುದು. ಪ್ರಸಿದ್ಧವಾದ ಗೋವಿನ ಹಾಡಿನ ಕುರಿತಾಗಿ ಅವರು ವಿಶ್ಲೇಷಿಸಿದ್ದಾರೆ. ನಮ್ಮಲ್ಲಿ ಪ್ರಾಮಾಣಿಕತೆ ಇದ್ದಲ್ಲಿ ಲೋಕದ ಎಂತಹ ಕಠಿಣ ಮನಸ್ಸಿನವರೂ ಮನಃಪರಿವರ್ತನೆಗೊಂಡು ಮೃದುಮನಸ್ಸಿನವರಾಗುವರು. ಪ್ರಸ್ತುತ ಗದ್ಯಭಾಗದಲ್ಲಿ ಕ್ರೂರವಾದ ಹುಲಿಯು ಪ್ರಾಮಾಣಿಕತೆಗೆ ತಲೆಬಾಗಿ ತನ್ನನ್ನು ತಿದ್ದಿಕೊಳ್ಳುವ ಪ್ರಸಂಗದ ವಿಹಂಗಮ ನೋಟವನ್ನು ಕಾಣಬಹುದು.



'ಅರುಣಗಿರಿ ಬೆಟ್ಟದಲ್ಲಿ ಮನೆಮಾಡಿಕೊಂಡು ಅದರ ಸುತ್ತಣ ಕಾಡಿನಲ್ಲಿ ದನಗಳನ್ನು ಮೇಯಿಸಿಕೊಂಡಿದ್ದ ದಾನಿಯೂ ಶ್ರೀಮಂತನೂ ಆದ ಕಾಳಿಂಗ ಎಂಬ ಗೊಲ್ಲನೊಬ್ಬನಿದ್ದ. ಅಲ್ಲಿನ ಒಂದು ಗುಹೆಯಲ್ಲಿ ಅರ್ಭುತ ಎಂಬ ಒಂದು ಹಸಿದ ಹುಲಿ ಆಹಾರಕ್ಕಾಗಿ ಕಾಯುತ್ತಿತ್ತು.' ಹೀಗೆ ಪ್ರಾರಂಭವಾಗುತ್ತದೆ, ಕನ್ನಡದ ಒಂದು ಜಾನಪದ ಕಥನ ಗೀತೆ. ಕನ್ನಡ ನಾಡಿನಲ್ಲಿ ಮಗುವಿನಿಂದ ಮುದುಕರವರೆಗೆ ಎಲ್ಲರಿಗೂ ಈ ಕಥೆ ಗೊತ್ತು. ಸಂಕ್ರಾಂತಿ ಹಬ್ಬಕ್ಕೆ ಸಂಬಂಧಪಟ್ಟ ಒಂದು ಹಳೆಯ ಜಾನಪದ ಗೀತೆ ಅದು. ಆ ಸಮಯದಲ್ಲಿ ನಾವು ನಮ್ಮ ಗೋವುಗಳಿಗೆ ಅಲಂಕಾರಮಾಡಿ, ಹೊಟ್ಟೆ ತುಂಬ ಮೇವು ಹಾಕಿ ಅವಕ್ಕೆ ನಿಜವಾಗಿ ವಿಶ್ರಾಂತಿ ಕೊಡುತ್ತೇವೆ. ಆ ಕವನವನ್ನು ಬರೆದವರು ಯಾರೋ ಅದು ನಮಗೆ ಗೊತ್ತಿಲ್ಲ. ಅದರ ಒಂದು ಪಾಠದಲ್ಲಿ ಅದು ಮದ್ದೂರಿನ ನರಸಿಂಹ ದೇವರಿಗೆ ಅಂಕಿತವಾಗಿದೆ. ಆ ಹಳೆಯ ಕಥೆಯನ್ನು ಕವನವಾಗಿ ಕಟ್ಟಿದವನು ಆ ಊರಿನ ಸುತ್ತಮುತ್ತ ಇದ್ದಿರಬಹುದು. ಕವನದ ಭಾಷೆ ಅಷ್ಟೂ ಸುಲಭ; ಒಂದು ಮಗುವಿಗಾಗಲಿ ರೈತನಿಗಾಗಲಿ ಅರ್ಥವಾಗದ ಒಂದೂ ಪದ ಅದರಲ್ಲಿಲ್ಲ. ನಮ್ಮ ಕನ್ನಡ ಬಾಲಬೋಧೆಯಲ್ಲಿ ಈ ಕವನ ಸೇರಿದೆ. ಅದಕ್ಕೆ ಕಾರಣ ಕೀರ್ತಿಶೇಷರಾದ ಎಂ.ಎಸ್. ಪುಟ್ಟಣ್ಣನವರ ಜಾಣ್ಮೆ ಮತ್ತು ಶ್ರೇಷ್ಠವಾದ ಅಭಿರುಚಿ. ಕವನ ತೀರ ಸರಳವಾಗಿದೆ. ಆದರೆ ಅದರ ನೈತಿಕಮೌಲ್ಯ ಎಷ್ಟು ಗಾಢವಾಗಿದೆ ಎಂದರೆ ನಾವು ಅದನ್ನು ಎಚ್ಚರಿಕೆಯಿಂದ ನೋಡಬೇಕು.

## ಕವನದ ಕತೆಯನ್ನು ಸಂಗ್ರಹವಾಗಿ ಹೀಗೆ ಹೇಳಬಹುದು

ಗೋಧೂಳಿಯ ಸಮಯ ಹಸುಗಳೆಲ್ಲ ಹಟ್ಟಿಗೆ ಹಿಂದಿರುಗುತ್ತಿದ್ದುವು. ಅರ್ಭುತನಿಗೆ ಒಂದು ವಾರದಿಂದ ಏನೂ ಆಹಾರ ಸಿಕ್ಕಿರಲಿಲ್ಲ. ಅದು ದನದ ಗುಂಪಿನ ಮೇಲೆ ಹಾರಿ, ಕರುವನ್ನೇ ನೆನೆಯುತ್ತಾ ಹಿಂದೆ ಬಿದ್ದು ಅವಸರವಸರವಾಗಿ ಎಚ್ಚರ ಸಾಲದೆ ನಡೆಯುತ್ತಿದ್ದ ಪುಣ್ಯಕೋಟಿಯನ್ನು ಹಿಡಿಯಿತು. ಹಸು ಹುಲಿಯನ್ನು ಕುರಿತು "ಸ್ವಲ್ಪ ಸಮಯ ಕೊಡು, ಮನೆಗೆ ಹೋಗಿ ಕರುವಿಗೆ ಹಾಲು ಕುಡಿಸಿ ಬರುತ್ತೇನೆ" ಎಂದು ಹೇಳುತ್ತದೆ. ಹುಲಿ ಬರಿಯ ಬಾಯಿಮಾತನ್ನು ನಂಬಿ ತನ್ನ ಆಹಾರವನ್ನು ಬಿಟ್ಟು ಕೊಡಲು ಒಪ್ಪಲಿಲ್ಲ. ಅದು ನ್ಯಾಯವೇ. ಆದರೆ ಹಸು ಹುಲಿಗೆ ಭರವಸೆ ಕೊಡುತ್ತದೆ: "ನೋಡು ಹುಲಿರಾಯ, ನಾನು ಸತ್ಯ ಹೇಳುವ ಪ್ರಾಣಿ. ನಾನು ಹಿಂದಕ್ಕೆ ಬರುವುದಿಲ್ಲ ಎಂಬ ಭಯ ಬೇಡ. ನನ್ನ ಮಾತಿನಲ್ಲಿ ನಿನಗೆ ಸಂದೇಹವೇ ಬೇಡ. ಬಾಯಲ್ಲಿರುವುದು ಒಂದು ನಾಲಗೆ, ಎರಡಲ್ಲ. ಭಗವಂತನ ಮೇಲೆ, ನನ್ನ ಹಿರಿಯರ ಮೇಲೆ ಆಣೆಯಿಟ್ಟು ಹೇಳುತ್ತೇನೆ, ನಾನು ಖಂಡಿತ ಹಿಂದಕ್ಕೆ ಬರುತ್ತೇನೆ." ಹುಲಿಗೆ ಹಸುವಿನ ಪ್ರಾಮಾಣಿಕತೆ ಬಗ್ಗೆ ನಂಬಿಕೆ ಹುಟ್ಟಿ, ಆದರ ಮಾತನ್ನು ಪರೀಕ್ಷಿಸೋಣ ಎಂದು ಧೈರ್ಯ ಮಾಡಿ ಹಸುವನ್ನು ಬಿಟ್ಟುಕೊಡುತ್ತದೆ. ತಮ್ಮ  ಜತೆಯ ಹಸು ಹಿಂದಕ್ಕೆ ಬಂದದ್ದನ್ನು ನೋಡಿ ಪುಣ್ಯಕೋಟಿಯ ಅಕ್ಕ ತಂಗಿಯರಿಗೆ ಸಂತೋಷವಾಗುತ್ತದೆ. ಆದರೆ ಪುಣ್ಯಕೋಟಿಗೆ ಹೆಚ್ಚು ಸಮಯ ಇಲ್ಲ. ಅದು ನೇರವಾಗಿ ಕರುವಿನ ಬಳಿಗೆ ಹೋಗಿ ಹೇಳುತ್ತದೆ, ಇದೇ ಕಡೆಯ ಸಲ, ಎಷ್ಟು ಬೇಕೋ ಅಷ್ಟು ಹಾಲು ಕುಡಿ! ಕರುವಿಗೆ ಅದು ಲೋಕ ವ್ಯವಹಾರ, ಹಟ್ಟಿಯಲ್ಲಿ, ಕಾಡಿನಲ್ಲಿ ಅದು ಇರಬೇಕಾದ ಕ್ರಮ, ಇತರ ಹಸುಗಳೊಡನೆ ನಡೆದುಕೊಳ್ಳಬೇಕಾದ ರೀತಿ ಇದೆಲ್ಲವನ್ನೂ ಬೋಧಿಸಿ ಉಳಿದ ಹಸುಗಳನ್ನು ಕುರಿತು ಈ ಕರುವನ್ನು ತಮ್ಮದೇ ಕಂದ ಎಂದು ಭಾವಿಸಿ ನೋಡಿಕೊಳ್ಳುವಂತೆ ಕೇಳಿಕೊಳ್ಳುತ್ತದೆ. "ನೋಡು ಮಗೂ, ಆ ಬೆಟ್ಟದ ಹತ್ತಿರ ಮಾತ್ರ ಹೋಗಬೇಡ. ಅಲ್ಲಿ ದುಷ್ಟವ್ಯಾಘ್ರ ಇದ್ದಾನೆ" ಎನ್ನುತ್ತದೆ. ಅನಂತರ ಉಳಿದ ಹಸುಗಳು ಎಷ್ಟು ವಾದಿಸಿದರೂ ಕೇಳದೆ ಕಾಡಿಗೆ ಹಿಂದಿರುಗಿ ಗುಹೆಯ ಮುಂದೆ ನಿಂತು  ಹುಲಿಯನ್ನು ಕೂಗಿ ಕರೆದು ತನ್ನನ್ನು ಹಬ್ಬದೂಟ ಉಂಡು ಹಸಿವನ್ನು ನೀಗಿಕೊಳ್ಳುವಂತೆ ಹೇಳುತ್ತದೆ. ಹುಲಿಗಾದರೋ ಹಸುವಿನ  ಈ ನಡತೆಯಿಂದ ಆಶ್ಚರ್ಯವಾಗುತ್ತದೆ. ತನ್ನ ತಂಗಿಯಂತಿರುವ ಈ ಹಸುವನ್ನು ಕೊಲ್ಲುವುದಕ್ಕಿಂತ ನಾನು ಸಾಯುವುದೇ ಲೇಸು ಎಂದುಕೊಂಡು ಹಾರಿ ಬಿದ್ದು ಸಾಯುತ್ತದೆ. ಮೇಲೆ ದೇವತೆಗಳು ಹುಲಿಯನ್ನು ಸ್ವಾಗತಿಸುತ್ತಾರೆ. ಹಸು ಮನೆಗೆ ಹಿಂದಿರುಗುತ್ತದೆ. ಗೊಲ್ಲ ಕಾಳಿಂಗ ಹಸುವಿನ ಈ ಬಿಡುಗಡೆಯನ್ನು ಆಚರಿಸಲು ಸಂಕ್ರಾಂತಿಯ ದಿನ ಹಬ್ಬ ಏರ್ಪಡಿಸುತ್ತಾನೆ.

ನಮ್ಮ ಕನ್ನಡ ಕವನದ ಕಥೆಯ ಸ್ಥೂಲಚಿತ್ರ ಇದು. ಅಸಂಭಾವ್ಯ ಎಂದು ತೋರುವ ಈ ಕಥೆಯನ್ನು ಆಸ್ತಿಕರಾದ ನಮ್ಮ ರೈತರೂ ಗೊಲ್ಲರೂ ನಂಬುತ್ತಾರೆ ಈ ದಂತಕಥೆ ಪುರಾಣಕಥೆಯಾಗಿ ನಮ್ಮ ಜನರ ಧಾರ್ಮಿಕ ನಂಬಿಕೆಯಲ್ಲಿ ಹೆಣೆದುಕೊಂಡದ್ದು ಹೇಗೆ? ಈ ಸುಂದರವಾದ ಕಲಾಕೃತಿಗೆ ಆಧಾರವಾಗಿ, ಎಷ್ಟೇ ಒರಟಾದದ್ದಾದರೂ ಸರಿ, ಒಂದು ಮಾನವ ಅನುಭವ ಉಂಟೆ? ಅಥವಾ ಇದರ ಉಗಮ ಯಾವುದಾದರೂ ನೀತಿಪಾಠದ ಉಪಾಧ್ಯಾಯನ ಕಲ್ಪನೆಯಲ್ಲೆ? ನನ್ನ ಮಿತ್ರರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಈ ಕತೆಗೆ ಸಂಬಂಧಿಸಿದಂತೆ ಸಂಶೋಧನೆ ಮಾಡಿದ್ದಾರೆ. ಅವರ ಅಭಿಪ್ರಾಯದಂತೆ ಇದರ ಕಥೆ ಹಳೆಯದು, ಆದರೆ ಅದು ಕ್ರಿ.ಶ. 1800ಕ್ಕಿಂತ ಹಿಂದೆ ಪ್ರಸ್ತುತ ಕವನ ರೂಪವನ್ನು ತಳೆದಿರಲಾರದು. 'ಇತಿಹಾಸ ಸಮುಚ್ಚಯ' ಎಂಬ ಸಂಸ್ಕೃತ ಗ್ರಂಥದ 30ನೇ ಅಧ್ಯಾಯವಾದ ಬಹುಳೋಪಾಖ್ಯಾನ ಎಂಬುದು ಈ ಕತೆಗೆ ಆಧಾರವಾಗಿರಬಹುದು ಎಂದೂ ಅವರು ಅಭಿಪ್ರಾಯ ಪಡುತ್ತಾರೆ. ಅಲ್ಲಿ ಗೋವಿನ ಹೆಸರು ಬಹುಳಾ. ಹುಲಿ 'ಕಾಮರೂಪೀ'. ಅವರು ಅಲ್ಲಿ ಸೇರುವುದು ಯಮುನಾ ನದೀ ದಡದ ರೋಹಣ ಬೆಟ್ಟದಲ್ಲಿ ಅಲ್ಲಾದರೋ ಕಾಮರೂಪೀ ಹುಲಿ ತನ್ನ ಕಾರ್ಯಕ್ಕೆ ಪಶ್ಚಾತ್ತಾಪಪಟ್ಟು ತಪಸ್ಸಿಗೆ ತೊಡಗುತ್ತದೆ, ಅನಂತರ ಸಾಯುತ್ತದೆ.ನಮ್ಮ ಕನ್ನಡದ ಕವನದಂತೆ ಅದು ಸಂಕ್ರಾಂತಿಗೆ ಸಂಬಂಧಪಟ್ಟ ಕವನ ಅಲ್ಲ. ಕನ್ನಡದ ಕವನದಲ್ಲಿ ಹುಲಿ ಶೀಘ್ರವಾಗಿ ಸಾವನ್ನಪ್ಪುವ ಸನ್ನಿವೇಶ ಸಂಸ್ಕೃತ ಕೃತಿಗಿಂತ ಹೆಚ್ಚು ಕಲಾತ್ಮಕವೂ ರಸಪೂರ್ಣವೂ ಆಗಿದೆ ಎನಿಸುತ್ತದೆ. ವಾಸ್ತವವಾಗಿ ಕನ್ನಡದ ಈ ಕವನ ಒಂದು ಕಲಾದಿಗ್ವಿಜಯ. ಕಲೆಯನ್ನು ಸತ್ಯದ ಸತ್ವವನ್ನು ಪಡೆದ ಕಲ್ಪನೆ ಎಂದು ವಿವರಿಸುವುದಾದರೆ ನಮ್ಮ ಈ ಕವನ ಆ ಪರೀಕ್ಷೆಯಲ್ಲಿ ಜಯ ಪಡೆಯುತ್ತದೆ. ಕತೆ ಅಷ್ಟು ಹೃದಯಸ್ಪರ್ಶಿಯಾಗಿದೆ, ಘಟನೆಗಳು ಅಷ್ಟು ವಾಸ್ತವವಾಗಿ ನಿರೂಪಿತವಾಗಿವೆ, ಮಾತೃಪ್ರೇಮ ವಾತ್ಸಲ್ಯ ಮುಂತಾದ ಮೂಲಭಾವಗಳು ಅಷ್ಟು ಸೊಗಸಾಗಿ ಚಿತ್ರಿಸಲ್ಪಟ್ಟಿವೆ. ಯಾವ ಓದುಗನಾದರೂ ಗ್ರಾಮದವನಂತೆಯೇ ಅದನ್ನು ಸಂಪೂರ್ಣವಾಗಿ ಸತ್ಯ ಎಂದು ನಂಬುತ್ತಾನೆ. ಆದರೆ ನಮಗಿಲ್ಲಿ ಈ ಕವನದ ಇತಿಹಾಸ, ಅದು ಎಷ್ಟೇ ಮೋಹಕವಾಗಿದ್ದರೂ ಪ್ರಕೃತವಲ್ಲ. ಅದರ ರಸಮೌಲ್ಯವೂ ಅಷ್ಟೇ. ನಮಗೆ ಮುಖ್ಯವಾದದ್ದು ಒಂದು ಕ್ಷಣ ಹಸುವಾಗಿ ಮರುಕ್ಷಣ ಹುಲಿಯಾಗಿ ಈ ಕವನವನ್ನು ಕಲ್ಪಿಸಿಕೊಂಡ ಆ ಉದಾತ್ತವಾದ ಮನಸ್ಸು. ಅದು ಜೀವನದ ಮತ್ತು ಅದರ ಮೂಲಕವಾಗಿ ಹೋರಾಡಿ ತನ್ನದೇ ಆಧಿಪತ್ಯದ ಕಡೆಗೆ ನುಗ್ಗುತ್ತಿರುವ ಆತ್ಮದ ರಹಸ್ಯದ ಬಗೆಗೆ ಒಂದು ಹೊಸ ಬೆಳಕನ್ನು ಚೆಲ್ಲಿರುವುದು.

ಪುಣ್ಯಕೋಟಿಯ ವರ್ತನೆಯನ್ನೂ, ಅದರ ಸ್ವಭಾವವನ್ನೂ ಸಮೀಪದಿಂದ ಪರೀಕ್ಷಿಸೋಣ. ಅದೊಂದು ಸರಳ ಪ್ರಾಣಿ, ಗೋವಿನ ಗುಂಪಿನಲ್ಲಿ ಒಂದು. ಅದು

ಕಾಮಧೇನುವೂ ಅಲ್ಲ, ವಸಿಷ್ಠನ ಸುರಭಿಯೂ ಅಲ್ಲ. ತನ್ನ ಜತೆಯ ಹಸುಗಳೊಡನೆ ಕಾಡಿನಲ್ಲಿ ಓಡಾಡುತ್ತಿರುವುದೇ ಅದಕ್ಕೆ ಇಷ್ಟ. ಬೆಟ್ಟದ ಮೇಲಿನ ಸಿಹಿಯಾದ ಹುಲ್ಲಿನ ಬಗೆಗೆ ಮೋಹ (ಅದೇ ಕಾರಣಕ್ಕಿರಬಹುದು, ಅದು ಹಿಂದೆ ಉಳಿದು ಅರ್ಭುತನ ಕೈಗೆ ಸಿಕ್ಕಿಕೊಂಡದ್ದು). ಅದು ಸಮಾಜಜೀವಿ, ಗುಹಾವಾಸಿಯಲ್ಲ. ನೆರೆಹೊರೆಯವರಿಗೆ ಅದನ್ನು ಕಂಡರೆ ಪ್ರೀತಿ. ಅದು ವಾತ್ಸಲ್ಯಪೂರ್ಣವಾದ ತಾಯಿ. ಅದಕ್ಕೆ ಜೀವನದಲ್ಲಿ ಆಸಕ್ತಿಯಿದೆ. ಬದುಕು ಪಾಪವೆಂದಾಗಲೀ ಹೊರೆಯೆಂದಾಗಲೀ ಅದು ಭಾವಿಸಿಲ್ಲ. ಹುಲಿಯನ್ನು ಕಂಡರೆ ಉಳಿದ ಹಸುಗಳಂತೆಯೇ ಅದಕ್ಕೂ ಭಯವಿದೆ. ಅದು ಹುಲಿಯನ್ನು ಸಂಧಿಸಿದ್ದು ತೀರ ಆಕಸ್ಮಿಕ. ಯಾವ ಉದ್ದೇಶದಿಂದಲೂ ಪುಣ್ಯಕೋಟಿ ಹುಲಿಯನ್ನು ಹುಡುಕಿಕೊಂಡು ಹೋಗಲಿಲ್ಲ. ಹುಲಿಯನ್ನು ಕಂಡ ಮೇಲೆ ಅದು ತನ್ನ ದುರದೃಷ್ಟಕ್ಕೆ ಶರಣಾಗುತ್ತದೆ. ಮರುಮಾತಿಲ್ಲದೆ ಸಾವಿನ ಅಗತ್ಯವನ್ನು ಒಪ್ಪಿಕೊಳ್ಳುತ್ತದೆ. ಅದರೆ ಪಾಪ, ಅದು ಬಡತಾಯಿ. ಮನೆಯಲ್ಲಿ ಕರು ಇದೆ. ಆ ಕರುವೋ ಹಸಿದು ತಾಯಿ ಹಿಂದಿರುಗುವುನ್ನೇ ಕಾಯುತ್ತಿದೆ. (ತನ್ನ ತಾಯಿಯ ಮಾಂಸವನ್ನು ಆಹಾರಕ್ಕಾಗಿ ಅವಲಂಬಿಸಬೇಕೆಂದು ದೇವರು ನಿಯಾಮಕ ಮಾಡಿರುವ ಹುಲಿಯಷ್ಟೇ ಅದಕ್ಕೂ ಹಸಿವಾಗಿದೆ) ಅದು ಹೋಗಲೇಬೇಕು. ಮಗುವನ್ನು ಸಮಾಧಾನಗೊಳಿಸಲೇಬೇಕು. ಈ ಅದಮ್ಯವಾದ ಬಯಕೆಗೆ ನಿಜವಾದ ತಾಯಿಯಂತೆ ಅದು ಸೋಲುತ್ತದೆ. ಕೆಲವು ನಿಮಿಷಕ್ಕಾದರೂ ತನ್ನನ್ನು ಬಿಟ್ಟುಕೊಡುವಂತೆ ಹುಲಿಯನ್ನು ಪ್ರಾರ್ಥಿಸುವ ಧೈರ್ಯ ಮಾಡುತ್ತದೆ. ಈ ಭಾಗವನ್ನು ಚಿತ್ರಿಸುವ ಪದ್ಯಗಳನ್ನು ಓದುತ್ತಿರುವಾಗ ಶ್ರೀಮಂತನಿಂದ ಸದ್ಯದ ಅಗತ್ಯವನ್ನು ಪೂರೈಸುವುದಕ್ಕಾಗಿ ಸ್ವಲ್ಪ ಹಣವನ್ನು ಸಾಲ ಪಡೆಯಲು ಪ್ರಯತ್ನಿಸುತ್ತಿರುವ ಬಡವನಂತೆ ತನ್ನದೇ ಜೀವವನ್ನು ಹುಲಿಯಿಂದ ಸಾಲವಾಗಿ ಪಡೆಯಲು ಪ್ರಯತ್ನಿಸುತ್ತದೆ ಎನ್ನಿಸುತ್ತದೆ. ಹಸುವಿನ ಪ್ರಾಮಾಣಿಕತೆ, ಉದಾತ್ತ ಸ್ವಭಾವದ ಅರ್ಭುತನ ಮೇಲೆ ಪರಿಣಾಮ ಬೀರಿರಬೇಕು. ತನಗೇ ಹಸಿವಿನ ಯಾತನೆಗೊತ್ತಿರುವುದರಿಂದ ಮನೆಯಲ್ಲಿರುವ ಹಸಿದ ಕರುವಿನ ಮಾತು ಅದರ ಹೃದಯವನ್ನು ಮೃದುವಾಗಿಸಿರಬೇಕು. ಅದು ಸಾಲ ಕೊಟ್ಟಿತು. ಹಸುವೋ, ಅದನ್ನು ಕೃತಜ್ಞತೆಯ ಬಡ್ಡಿಯ ಜೊತೆಯಲ್ಲಿ ಹಿಂದಿರುಗಿಸುವುದಕ್ಕೆ ಬಂದಿತು.

ಜಗತ್ತಿನ ಸಕಲ ಆತ್ಮಾರ್ಪಣೆಗಳ ಚರಿತ್ರೆಯಲ್ಲಿ ಪುಣ್ಯಕೋಟಿ ಹುಲಿಗೆ ತನ್ನನ್ನು ಅರ್ಪಿಸಿಕೊಂಡ ರೀತಿ ಅದ್ವಿತೀಯವಾಗಿದೆ.

ಅಣ್ಣ ಬಾರೋ ಹುಲಿಯರಾಯನೆ
ಹಸಿದೆಯಲ್ಲೊ ದೋಷ ಬಂದಿತು

ಎನ್ನ ಆಹಾರವನು ಬೇಗನೆ
ಕೊಳ್ಳಿಲೋ ಹುಲಿರಾಯನೆ
ಖಂಡವಿದೆಕೋ ಮಾಂಸವಿದೆಕೋ
ಗುಂಡಿಗೆಯ ಬಿಸಿರಕ್ತವಿದೆಕೋ
ಉಂಡು ಸಂತಸಗೊಂಡು ನೀ ಭೂ
ಮಂಡಲದೊಳು ಬಾಳಯ್ಯನೇ
ಸಿಟ್ಟುಬ್ಯಾಡವೊ ಎನ್ನ ಮ್ಯಾಲೆ
ಕಷ್ಟದೆಸೆಯನೆಲ್ಲ ಮರೆತು
ಹೊಟ್ಟೆ ತುಂಬಾ ಉಂಡು ಸುಖದಲಿ
ನಟ್ಟನಡವಿಲಿ ಬಾಳಯ್ಯನೇ

ಸರಳ, ಆದರೆ ಮನಕರಗಿಸುವಂಥ ಮೃದುಲ. ತಮ್ಮನ್ನು ಹಿಂಸಿಸುವವರ ಬಗೆಗೆ ಇಂತಹ ಸೌಮ್ಯಸುಂದರ ನಡತೆ ಹುತಾತ್ಮರಿಗಿರುವುದು ಬಹಳ ಅಪೂರ್ವ. ದ್ವೇಷ, ಅಹಂಕಾರ, ಹಿರಿತನದ ಪ್ರಜ್ಞೆ, ಮನಸ್ಸಿನ ಕುಗ್ಗು, ದಿಕ್ಕುತೋಚದ ಸ್ಥಿತಿ, ಏನೋ ಸಿದ್ಧಿಯ ಭಾವ ಅಥವಾ ವಿಜಯ – ಈ ಯಾವುದರ ಸೋಂಕೂ ಇಲ್ಲ ಪುಣ್ಯಕೋಟಿಯ ಮನಸ್ಸಿನಲ್ಲಿ. ತನ್ನ ತ್ಯಾಗದಿಂದ  ಹುಲಿಯನ್ನು ತೃಪ್ತಿಗೊಳಿಸುವುದೊಂದರ ಹೊರತು ಬೇರಾದ ಗುರಿಯಾಗಲಿ, ಪುಣ್ಯವಾಗಲಿ ಅದಕ್ಕೆ ಕಾಣುತ್ತಿಲ್ಲ. ಋಷಿ ಎಪಿಕ್ಟೆಟಿಸ್ ಹೇಳಿದಂತೆ "ಎಂದೂ ಅವಿಧೇಯನಾಗದಿರುವುದು, ದೋಷಾರೋಪಣೆ ಮಾಡದಿರುವುದು, ದೇವರು ಕೊಟ್ಟಿದನ್ನು ಕುರಿತು ಗೊಣಗದಿರುವುದು, ಬಂದದ್ದನ್ನು ಇಚ್ಛೆಯಿಲ್ಲದೆ ಮಾಡದಿರುವುದು" ಈ ಭಾಷೆಯನ್ನು ಅದು ದೇವರಿಗೆ ಕೊಟ್ಟರೀತಿ ಕಾಣುತ್ತದೆ  ಅದರ ಜೀವನದಲ್ಲಿ. ಎಲ್ಲ ಬಯಕೆಗಳಿಂತಲೂ ದೊಡ್ಡ ಬಯಕೆಯನ್ನು – ಬದುಕಬೇಕು ಎಂಬ ಬಯಕೆಯನ್ನು – ಗೆದ್ದು ಈ ಭಾಷೆಯನ್ನು ಅದು ಉಳಿಸಿಕೊಳ್ಳುತ್ತದೆ. ಅದಕ್ಕೆ ತನ್ನ ಜೀವನದ ಅರ್ಪಣೆಯಲ್ಲಿ ಅಂತಹ ಸುಂದರ ಗಂಭೀರತೆಯನ್ನು ಕೊಟ್ಟದ್ದು ಈ ಅದಮ್ಯವಾದ ಬಯಕೆಯ ಮೇಲೆ ಅದಕ್ಕಿದ್ದ ಪ್ರಭುತ್ವವೇ. ಅದನ್ನು ಕುರಿತ ಧ್ಯಾನದಲ್ಲಿ, ಚಿಂತನೆಯಲ್ಲಿ ನಾವು ಆಶ್ಚರ್ಯದಿಂದ ಮೈಮರೆಯುತ್ತೇವೆ. ಅದರ ಪವಾಡ ಕ್ರಿಯೆಯಿಂದ ಪಾಪ ಪುಣ್ಯವಾಗಿದೆ. ಭೀರುವಾದದ್ದು ಧೀರನಾಗಿದೆ, ಭಯಂಕರವಾದದ್ದು ಪ್ರೇಮಪಾತ್ರವಾಗಿದೆ, ಅನುಕಂಪಾರ್ಹವಾಗಿದೆ, ಆತ್ಮ

ವಿಜಯವನ್ನು ಪಡೆದು ಪ್ರಕೃತಿ ನಿಯಮವನ್ನು ಅದಲು ಬದಲು ಮಾಡಿದೆ. ಆಕೆಯ ಅನುಲ್ಲಂಘನೀಯ ನಿಯಮದ ಪಲ್ಲಟ ನಡೆದಿದೆ. ಹಸುವಿಗೆ ಹುಲಿ ಬಗ್ಗೆ ಇನ್ನು ಭಯವಿಲ್ಲ. ತಾನು ಬಲಿಯಾಗುವುದಕ್ಕೆ ಬಂದಿದ್ದೇನೆ ಎಂಬ ಭಾವವಿಲ್ಲ. ಬದಲು, ನರಳುತ್ತಿರುವ, ತಮ್ಮನ ಮುಂದೆ ಪ್ರೇಮ ತುಂಬಿ ಸೇವೆಗೆ ಸಿದ್ಧವಾಗಿ ನಿಂತಿರುವ ಅಕ್ಕನಂತೆ ಅದು ಹುಲಿಯ ಮುಂದೆ ನಿಂತಿದೆ. ಆದ್ದರಿಂದಲೇ ಹುಲಿ ಅರ್ಭುತನ ಪ್ರಕೃತಿಯಲ್ಲಿ ಅದ್ಭುತವಾದ ಒಂದು ಪರಿವರ್ತನೆಯನ್ನು ಪ್ರಚೋದಿಸಲು ಅದು ಸಮರ್ಥವಾದದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಒಬ್ಬೊಬ್ಬರಿಗೂ ಅವರವರ ಬಯಕೆಗಳನ್ನು, ಅದು ಸಲ್ಲಿಸುತ್ತದೆ – ದೇವರಿಗೆ ತನ್ನ ಆತ್ಮ, ಹುಲಿರಾಯನಿಗೆ ತನ್ನ ರಕ್ತ ಮಾಂಸಗಳು, ತನ್ನ ಜೀವಕ್ಕೆ ಅವರಿಬ್ಬರನ್ನೂ ತೃಪ್ತಿಗೊಳಿಸಲು ಸಾಧ್ಯವಾದ ಸಂತೋಷ.

ಈ ಅದ್ಭುತ ವ್ಯಕ್ತಿಯನ್ನು ನೋಡಿ ಅರ್ಭುತನಿಗೆ ಮೊತ್ತಮೊದಲ ಸಲ ಕೇವಲ ರಕ್ತ ಮಾಂಸಗಳೇ ತನ್ನ ಆಸೆಯ ಒಳತಿರುಳೆ ಎಂಬ ಸಂಶಯ ಮೂಡಿರಬೇಕು. ಈ ಸಾಧುವಾದ ಹಸು ತನ್ನ ವಿಷಯವಾದ ಭಯವನ್ನು ತುಳಿದು ತನ್ನ ಜೀವಕ್ಕೆ ಆಸರೆ ಕೊಟ್ಟು ದೇಹವನ್ನು ಇಟ್ಟುಕೊಳ್ಳುವುದಕ್ಕಿಂತಲೂ ಒಗೆಯುವುದೆ ಲೇಸು ಎನಿಸುವಂತೆ ಮಾಡಿದುದು ಯಾವುದು ಎಂದು ಅದಕ್ಕೆ ಆಶ್ಚರ್ಯವೂ ಆಗಿರಬೇಕು. ತನ್ನನ್ನು ನೋಡಿ ಹೆದರದ, ಹುಚ್ಚುವೇಗದಲ್ಲಿ ಹೃದಯ ಬಡಿಯದ ಹಸುವನ್ನು ಅದು ಮುಟ್ಟಲಾರದು. ಭಯದ ಕಂಪಿರುವ ಹಸು ಅದಕ್ಕೆ ಒಗ್ಗಿ ಹೋಗಿದೆ. ಹಿಂದೆಂದೂ ಕೇಳದ ಒಂದು ಕ್ರಿಯೆಯಿಂದ ತನ್ನ ಮಾಂಸದ ರುಚಿಯನ್ನು ಅದು ಕಳೆದು ಬಿಟ್ಟಿದೆ. ಒಂದು ಹಸು ತನ್ನನ್ನು ಹುಡುಕಿಕೊಂಡು ಬಂದು ಬಯ್ಯದೇ, ದೇವರಿಗೆ ಶಾಪಹಾಕದೆ, ತನ್ನನ್ನೇ ಹಳಿದುಕೊಳ್ಳದೆ ತನ್ನನ್ನು ತಿಂದುಬಿಡು ಎಂದು ಕೇಳಿಕೊಳ್ಳಬೇಕಾದರೆ ಇಡೀ ಜಗತ್ತೇ ಬದಲಾಯಿಸಿಹೋಗಿರಬೇಕು. ಸಂಪೂರ್ಣ ವಿಸ್ಮಯದಿಂದ ಅರ್ಭುತ ಪುಣ್ಯಕೋಟಿಯನ್ನು, ಗಾಢವಾದ ಆತ್ಮಾನುಕಂಪೆಯಿಂದ ತನ್ನ ಹಲ್ಲು ಉಗುರುಗಳನ್ನು ದೃಷ್ಟಿಸಿ ನೋಡಿರಬೇಕು. ಹಲ್ಲು ಉಗುರುಗಳಂತೂ ಉಪಯೋಗವಿಲ್ಲದ ಪರಿಶಿಷ್ಟಗಳು – ತನ್ನ ಗೌರವ ಮತ್ತು ತನ್ನ ಜೀವ ಅವುಗಳ ಮೇಲೆ ನಿಂತಿರುವುದಾದರೆ ಹಸುವಿನಂತಹ ಪ್ರಾಣಿಗಳ ಮೇಲೆ ತಾನು ಜೀವಿಸಿರುವುದು ಅದರ ಮನಸ್ಸಿನಲ್ಲಿ ಅಲ್ಪತೆಯ ಭಾವವನ್ನು ಉಕ್ಕಿಸಿರಬೇಕು. ರಕ್ತ ಮಾಂಸಗಳನ್ನು ತಿಂದು ಹಾಳು ಹೊಟ್ಟೆಯನ್ನು ಹೊರೆಯಬೇಕಾದ ಸ್ಥಿತಿ, ದಿನದಿನವೂ ಅದೇ ಬೇಸರದ ಏಕನಾದ ಅದಕ್ಕೆ ಅಸಹ್ಯವನ್ನು ಹುಟ್ಟಿಸಿರಬೇಕು. ಇಂತಹ ಉಗ್ರವಾದ ಬಯಕೆಗಳಿಲ್ಲದ, ಈ ಹಸು ಅರಿತು ಅಪೇಕ್ಷಿಸುತ್ತಿರುವ ಬೇರಾವುದೋ ಹೆಚ್ಚು ಸ್ವತಂತ್ರವೂ ಸಂತೋಷಪೂರ್ಣವೂ ಆದ ಬದುಕು ಇದ್ದಿರಬೇಕು. ಈ ಹಸುವಿನ ಕ್ಷುದ್ರವಾದ ದೇಹದ ಆಸೆಯಿಂದ ಮನಸ್ಸನ್ನು ದಿಢೀರನೆ

ಸಾಗಿಸಿ ಅದೇ ಉನ್ನತವಾದ ಬದುಕಿಗಾಗಿ ಏಕೆ ಹಾರೈಸಬಾರದು? ಇಂತಹ ವೇಗವಾದ ಆಲೋಚನೆಗಳು ಅದರ ಮನಸ್ಸಿನಲ್ಲಿ ಹಾದು ಅಹಂಕಾರದ ಮಂಜನ್ನು ಚದುರಿಸಿ ಅದರ ಆಧ್ಯಾತ್ಮೀಕರಣಕ್ಕೆ ತೊಡಗಿರಬೇಕು. ಪುಣ್ಯಕೋಟಿಯ ದೈವಶ್ರದ್ಧೆ ಮತ್ತು ಸತ್ಯಜೀವನ ಇವುಗಳ ದೈವೀಭಾವ ಅರ್ಭುತದ ಸ್ವಭಾವವನ್ನು ಭೋಗದಿಂದ ವೈರಾಗ್ಯಕ್ಕೆ ಪರಿವರ್ತಿಸಿರಬೇತು.

ಎನ್ನ ಒಡಹುಟ್ಟಕ್ಕ ನೀನು
ನಿನ್ನ ತಿಂದು ನಾನೇನ ಪಡೆವೆನು
ನಿನ್ನ ಪಾದದ ಮೇಲೆ ಬಿದ್ದು
ಎನ್ನ ಪ್ರಾಣವ ಬಿಡುವೆನು

ಹೀಗೆ ಹೇಳಿ

ಮೂರು ಮೂರ್ತಿಗೆ ಕೈಯ ಮುಗಿದು
ಸೇರಿ ಎಂಟುದಿಕ್ಕ ನೋಡಿ
ಹಾರಿಯಾಕಾಶಕ್ಕೆ ನೆಗೆದು
ತನ್ನ ಪ್ರಾಣವ ಬಿಟ್ಟಿತು

ಹುಲಿಯದು ಆತ್ಮಹತ್ಯೆಯಲ್ಲ; ದೇವತೆಗಳೂ ಮೆಚ್ಚುವಂತಹ ಪುಣ್ಯಕಾರ್ಯ. ನಮ್ಮ ಪೂಜ್ಯಕವಿ ಹೇಳುತ್ತಾನೆ –"ಅದರ ಆತ್ಮವನ್ನು ಬ್ರಹ್ಮ, ಅದರ ಚರ್ಮವನ್ನು ಶಿವ ಸ್ವೀಕರಿಸಿದರು." ಹುಲಿ ಸತ್ತದ್ದು, ಹಸು ಬದುಕಿದ್ದು ಹೀಗೆ ಈ ವಿಚಿತ್ರ ನಾಟಕ ನಡೆಯುವಾಗ ಇಬ್ಬರೂ ಸ್ವಲ್ಪವೂ ಆಲೋಚಿಸದಂತಹ ಪವಾಡದ ಮುಕ್ತಾಯ ಎರಡಕ್ಕೂ.

ಹೀಗೆ ಮುಗಿಯುತ್ತದೆ ಹಸು ಪುಣ್ಯಕೋಟಿ ಮತ್ತು ಹುಲಿಯಾದ ಅರ್ಭುತರ ಕಥೆ. ಈ ಪ್ರಾಣಿಗಳು ಅಪೂರ್ವವೂ ಭವ್ಯವೂ ಆದ ಒಂದು ಮನಸ್ಸಿನ ಸೃಷ್ಟಿ. ನಮ್ಮ ಸ್ವಭಾವಕ್ಕೆ ಸತ್ಯವಾಗಿ ನಡೆದುಕೊಂಡು ಸದಾ ಅದಕ್ಕೆ ತಕ್ಕಂತೆ ನಡೆಯಬೇಕು. ನಮಗೆ ಸಿಕ್ಕಿರುವ ದೇಹದ ತೆರೆಯನ್ನು ರಕ್ಷಣೆಯ ಕವಚವಾಗಿ – ನಮ್ಮನ್ನು ಸರ್ವವ್ಯಾಪಿಯಾದ ಆತ್ಮನಿಂದ ಬೇರ್ಪಡಿಸುವಂತೆ ತೋರುವ ಆ ಕವಚವನ್ನು ಎಷ್ಟು ಸಾಧ್ಯವೋ ಅಷ್ಟು ಹಗುರವಾದ ತೆಳುವಾದ ಕವಚವಾಗಿ – ಧರಿಸಬೇಕು. ನಮ್ಮಲ್ಲಿನ ದಿವ್ಯತ್ವದ ಕರೆ ಬಂದಾಗ ಅದನ್ನು ಹೆಚ್ಚು ಗಲಭೆಯಿಲ್ಲದೆ ಕಿತ್ತೆಸೆಯಲು ಸಿದ್ಧರಾಗಿರಬೇಕು. ವಿಧಿ ತನ್ನ ಕೆಲಸವನ್ನು ತಾನು ಸಾಧಿಸಿಕೊಳ್ಳಲು ಬಿಡಬೇಕು. ಸಿದ್ಧಿ, ಫಲ ಇವುಗಳ ಕಡೆಗೆ ನೋಡಕೂಡದು. ನಮ್ಮ ಆಧುನಿಕ

ಕನ್ನಡದ ಪ್ರಥಮ ಹಿರಿಯ ಕವಿಯ ಈ ಸುಂದರವಾದ ಕವನದ ನೀತಿ ಇದೇ. ಅವನ ಸರಳವಾದ ಈ ಕಥನಕವನ ನಮಗೆ ತೋರಿಸತಕ್ಕ ಅಮೂಲ್ಯವಾದ ಸತ್ಯ ಇದು.

## ಪು.ತಿ. ನರಸಿಂಹಾಚಾರ್



ಪುರೋಹಿತ ತಿರುನಾರಾಯಣಾಚಾರ್ಯ ನರಸಿಂಹಾಚಾರ್ಯ ಎಂಬುದು ಪು.ತಿ.ನ. ಅವರ ಪೂರ್ಣ ಹೆಸರಾಗಿದೆ. ಇವರು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ೧೯೦೫ ರಲ್ಲಿ ಜನಿಸಿದರು. ಪು.ತಿ.ನ. ಎಂಬುದು ಇವರ ಕಾವ್ಯನಾಮವಾಗಿದೆ. ಉತ್ತಮ ಶಿಕ್ಷಣ ಪಡೆದು ಮೈಸೂರು ಸರಕಾರದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಕನ್ನಡ ವಿಶ್ವಕೋಶ, ಇಂಗ್ಲೀಷ್ ಕನ್ನಡ ನಿಘಂಟು ರಚನೆಯಲ್ಲಿ ಸಂಪಾದಕರಾಗಿದ್ದರು. ಅಹಲ್ಯೆ, ಶಬರಿ, ಸತ್ಯಾಯನ ಹರಿಶ್ಚಂದ್ರ ಮುಂತಾದ ಗೀತನಾಟಕಗಳನ್ನು, ಹಣತೆ, ಶಾರದಯಾಮಿನಿ, ಮಲೆದೇಗುಲ, ರಸ ಸರಸ್ವತಿ, ಮಾಂದಳಿರು ಮುಂತಾದ ಕವನ ಸಂಕಲನಗಳನ್ನು ಹಂಸ ದಮಯಂತಿ, ಗೋಕುಲ ನಿರ್ಗಮನ ಮುಂತಾದ ರಮ್ಯ ರೂಪಕಗಳನ್ನು ರಚಿಸಿದರು. ಕಾವ್ಯ ಕುತೂಹಲ ರಸಪ್ರಜ್ಞೆ, ದೀಪರೇಖೆ ಮೊದಲಾದುವು ವಿಮರ್ಶಾ ಕೃತಿಗಳಾಗಿವೆ. ಇವ ಹಂಸ ದಮಯಂತಿ ಕೃತಿಗೆ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', ಶ್ರೀಹರಿ ಚರಿತೆಗೆ 'ಪಂಪ ಪ್ರಶಸ್ತಿ' ಲಭಿಸಿವೆ. ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿಯೂ ಇವರಿಗೆ ಪ್ರಾಪ್ತವಾಗಿದೆ. ಶ್ರೀಯುತರು ೧೯೮೧ ರ ಚಿಕ್ಕಮಗಳೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಭಾಗವನ್ನು ವಿಮರ್ಶೆಯ ಮಾರ್ಗ (ಮೈಸೂರು ವಿಶ್ವ ವಿದ್ಯಾಲಯ) ದಿಂದ ಆರಿಸಲಾಗಿದೆ.

### ಪದಗಳ ಅರ್ಥ

ವಸಿಷ್ಠನ ಸುರಭಿ – ಕಾಮಧೇನು     ಗೊಲ್ಲ – ಗೋಪಾಲಕ

ಗೋಧೂಳಿ ಸಮಯ – ಗೋವುಗಳು ತಿರುಗಿ ಹಟ್ಟಿಗೆ ಬರುವ ವೇಳೆ.

## ಚಟುವಟಿಕೆಗಳು

- ಪುಣ್ಯಕೋಟಿ ಹಸುವಿನ ಕುರಿತಾಗಿರುವ ಹಾಡಿನ ಧ್ವನಿ ಸುರುಳಿಯಲ್ಲಿ ಆಲಿಸಿದ ಅಂಶಗಳು 'ಹಸು ಪುಣ್ಯಕೋಟಿ ಮತ್ತು ಹುಲಿ ಅರ್ಭುತ' ಎಂಬ ವಿಮರ್ಶಾ ಲೇಖನದಲ್ಲಿ ಸ್ಪಷ್ಟವಾಗಿ ಮೂಡಿ ಬಂದಿವೆಯೇ ಎಂಬುದರ ಕುರಿತು ಚರ್ಚಾಕೂಟವನ್ನು ನಡೆಸಿರಿ.
- ಪ್ರಾಮಾಣಿಕತೆಯ ಮನೋಭಾವವನ್ನು ಬೆಳೆಸುವಲ್ಲಿ ಪುಣ್ಯಕೋಟಿಯ ಹಾಡು ಎಷ್ಟರಮಟ್ಟಿಗೆ ಪ್ರಭಾವಶಾಲಿಯಾಗಿದೆ ಎಂಬುದರ ಕುರಿತು ಕಿರುಲೇಖನವನ್ನು ಬರೆಯಿರಿ.
- ಒಂದು ಸಾಹಿತ್ಯ ಕೃತಿಯ ಕುರಿತು ವಿಮರ್ಶಾತ್ಮಕ ಲೇಖನವನ್ನು ಬರೆಯಿರಿ.
- ಪುಣ್ಯಕೋಟಿಯ ವರ್ತನೆಯ ವಿಶೇಷತೆಯನ್ನು ಪು.ತಿ.ನ. ಅವರು ವಿಶ್ಲೇಷಿಸಿದ ಬಗೆಯನ್ನು ವಿವರಿಸಿರಿ.
- ಪುಣ್ಯಕೋಟಿಯ ಕತೆಯಲ್ಲಿ ಹುಲಿ ಅರ್ಭುತನ ಸ್ವಭಾವದಲ್ಲಿ ಅದ್ಭುತ ಪರಿವರ್ತನೆಯನ್ನು ತರಲು ಸಾಧ್ಯವಾದ ಅಂಶದ ಬಗೆಗೆ ಚರ್ಚಿಸಿರಿ.

## ಭಾಷಾಭ್ಯಾಸ

- ದ್ವಿರುಕ್ತಿ – ಅವಸರವಸರ

  ಕರುವನ್ನು ಕಾಣುವ ತವಕದಿಂದ ಪುಣ್ಯಕೋಟಿಯು ಅವಸರವಸರವಾಗಿ ಮನೆಯ ಕಡೆಗೆ ನಡೆಯಿತು.

  ಈ ರೀತಿಯ ದ್ವಿರುಕ್ತಿ ಪದಗಳನ್ನು ಪಾಠಭಾಗದಿಂದ ಆಯ್ದುಕೊಂಡು ಪಟ್ಟಿ ಮಾಡಿರಿ.

# ತಾಳಮದ್ದಲೆ

ಡಾ. ಎಂ. ಪ್ರಭಾಕರ ಜೋಶಿ

ಜಾನಪದ ಸಂಗೀತ – ಸಾಹಿತ್ಯ, ಕಲೆಯಾಗಿ ಜನಪ್ರಿಯವಾದುದು ಯಕ್ಷಗಾನ. ಇದರ ಇನ್ನೊಂದು ಪ್ರಯೋಗ ರೂಪವೇ ತಾಳಮದ್ದಲೆ. ಬಯಲಾಟದಂತೆ 'ತಾಳಮದ್ದಲೆ'ಯು ಆಧುನಿಕ ಜಗತ್ತಿನಲ್ಲೂ ಜನರನ್ನು ತನ್ನತ್ತ ಸೆಳೆಯುತ್ತ ತನ್ನ ಮಹತ್ವವನ್ನು ಉಳಿಸಿಕೊಂಡಿದೆ ಎಂಬುದನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ತುಂಬಿದ ಸಭಾಗೃಹ ಯಾ ಬಯಲು. ಜನ ಇಡಿಯ ರಾತ್ರಿ ಕುಳಿತು ಕೇಳುತ್ತಾರೆ, ನೋಡುತ್ತಾರೆ – ನೃತ್ಯ, ವೇಷ, ಅಭಿನಯದ, ದೃಶ್ಯದ ಬೆಡಗಿಲ್ಲದ, ಬರಿಯ ಮಾತು ಮತ್ತು ಕೆಲವು ಹಾಡುಗಳನ್ನು. ಇದು ನಮ್ಮ ಕಲಾಲೋಕದ ವಿಚಿತ್ರಗಳಲ್ಲೊಂದಾದ ತಾಳಮದ್ದಲೆಯ ವಿಶೇಷತೆ. ನಮಗಿದು ಮಾಮೂಲು. ಹೊರಗಿನವರಿಗೆ ಇದೊಂದು ಅದ್ಭುತ ಅಲ್ಲವೇ? ತಾಳಮದ್ದಲೆಯಲ್ಲಿ 'ಮಾತು ಮಾಣಿಕ್ಯ' ಇದು ನಿಜಕ್ಕೂ ಮಾತಿನ ಮಂಟಪ. ಏನು ರಸಾವಿಷ್ಕಾರ, ಏನು ಮಾತಿನ ಮಲ್ಲಯುದ್ಧ, ಭಾಷೆಯ ಕಸರತ್ತು!



ಗೀತ, ನೃತ್ಯ, ಮಾತು, ಚಿತ್ರ ಸೇರಿದ ಬಯಲಾಟ ಯಕ್ಷಗಾನದ ಸಮಗ್ರ ರೂಪವಾದರೆ, ಇವುಗಳಲ್ಲಿ ಒಂದೊಂದನ್ನು ವಿಸ್ತರಿಸಿದರೂ, ಸ್ವತಂತ್ರ ಕಲೆಯಾಗಿ ಇವು ಮೆರೆಯಬಲ್ಲುವು. ಮಾತನ್ನು ವರ್ಜಿಸಿದ ಯಕ್ಷಗಾನ ನೃತ್ಯನಾಟಕ, ವೇಷ, ನೃತ್ಯಗಳಿಲ್ಲದ ತಾಳಮದ್ದಲೆ – ಇವು ಇದಕ್ಕೆ ಉದಾಹರಣೆಗಳು. ಪ್ರಸಂಗ ಸಾಹಿತ್ಯ, ಭಾಗವತರ ಹಾಡು– ಎರಡಕ್ಕೂ ಸಾಮಾನ್ಯ. ಭಾಗವತನ ಹಾಡುಗಳಿಗೆ ಪಾತ್ರಧಾರಿಗಳು, ತಮ್ಮ ಮಾಮೂಲು ಉಡುಪಿನಲ್ಲೆ, ವೇದಿಕೆಯಲ್ಲಿ ಕುಳಿತು, ಭಾವಪೂರ್ಣವಾಗಿ ಅರ್ಥ ಮಾತಾಡಿ ಪಾತ್ರನಿರ್ವಹಣೆ ಮಾಡುತ್ತಾರೆ. ಈ ಮಾತುಗಳು ಆಶುಭಾಷಣ, ಬಾಯಿಪಾಠವಲ್ಲ! ಇದಿರಾಳಿಯ ಮಾತು ಅವನಿಗೆ ಹೊಸತು. ಅದಕ್ಕೆ ಅಲ್ಲೇ ಉತ್ತರ ಹೇಳಬೇಕು. ಹಲವು ಪಾತ್ರಧಾರಿಗಳು ಸೇರಿ ತಯಾರಿಸುವ ಪೌರಾಣಿಕ ಆಶುನಾಟಕ. ತಾಳಮದ್ದಳೆ ಪ್ರಸಂಗ ಅದರ ಸ್ಥೂಲ ಚೌಕಟ್ಟು. ಆದರೆ ಪ್ರಸಂಗಕ್ಕೆ ಸಂಬಂಧಿಸಿದ ಎಷ್ಟೋ ವಿಷಯಗಳು, ಸಮಸ್ಯೆಗಳು, ಪುರಾಣ, ಶಾಸ್ತ್ರಾದಿ ವಿಚಾರಗಳು ಅರ್ಥ ಮಾತಾಡುವವರ ಮೂಲಕ ಬರುತ್ತವೆ. ಅವಕ್ಕೆಲ್ಲ ಪದ್ಯದ ಚೌಕಟ್ಟಿನ ಪ್ರಸಂಗದ ಸನ್ನಿವೇಶದ ಸೀಮೆ ಇದೆ.

ಈ ಕಲಾಪ್ರಕಾರದ ಉಗಮದ ಬಗ್ಗೆ ವಿವಿಧ ಊಹೆಗಳಿಗೆ ಅವಕಾಶ ಇದೆ. ಮುಂದಿನ ಬಯಲಾಟಗಳ ತರಬೇತಿಗೆಂದು, ಮಳೆಗಾಲದಲ್ಲಿ ಇದನ್ನು ತೊಡಗಿರಬೇಕೆಂಬುದು ಒಂದು ಅಭಿಪ್ರಾಯ. ತಾಳಮದ್ದಲೆಯೇ ಪ್ರಾಚೀನ ಆಟ, ಆಮೇಲೆ ಆರಂಭವಾಯಿತೆಂಬುದು ಇನ್ನೊಂದು. ಒಬ್ಬನೇ ಅರ್ಥವಿವರಿಸುವ ಪುರಾಣ ಪ್ರವಚನ ಮತ್ತು ಹರಿಕಥೆಗಳನ್ನೇ ವಿಸ್ತರಿಸಿ, ಹಲವರು ಅರ್ಥ ಹೇಳುವ ರೂಢಿ ಬೆಳೆದು,ತಾಳಮದ್ದಲೆ ಉಂಟಾಯಿತು ಎಂಬುದೂ ಹೇಳಲು ಸಾಧ್ಯ.

"ಯಕ್ಷಗಾನ" ವೆಂಬುದು ಒಂದು ಗಾನಶೈಲಿಯ ಹೆಸರೆಂದು ಈಗ ಸಿದ್ಧವಾಗಿದೆ. "ತಾಳಮದ್ದಲೆ" ಎಂಬ ಪದವನ್ನು ನೋಡಿದರೆ, ಹಾಡುಗಾರ ಮತ್ತು ಮದ್ದಲೆಗಾರರಿಬ್ಬರೆ ನಡೆಸುತ್ತಿದ್ದ ಕಾರ್ಯಕ್ರಮ ಇದಾಗಿರಬಹುದೇ? ಎಂದೂ ಊಹಿಸಲಾಗಿದೆ. "ಗಾಥಾ" ರೂಪದಲ್ಲಿ ಬರಿಯ ಹಾಡುಗಳಿಂದಲೆ ಕತೆಯನ್ನು ಹೇಳಿ, ಅಲ್ಲಲ್ಲಿ ಸ್ವಲ್ಪ ಗದ್ಯದ ವಿವರಣೆ ಇದ್ದು, ಕ್ರಮೇಣ ವಿಸ್ತಾರವಾಗಿ ಅರ್ಥ ಹೇಳುವ ಕ್ರಮ ಬಂತೆಂಬುದು ಅಶಕ್ಯವೇನೂ ಅಲ್ಲ.

ತಾಳಮದ್ದಲೆಗಳು ವರುಷವಿಡೀ ಜರಗುತ್ತವಾದರೂ ಮಳೆಗಾಲದ ಉತ್ತರಾರ್ಧದಲ್ಲೆ ಹೆಚ್ಚು. ಮಳೆ ಕಡಿಮೆ, ಆಟಗಳಿಲ್ಲ ಎಂಬ ಕಾರಣವೂ ಇರಬೇಕು. ದೇವಸ್ಥಾನಗಳಲ್ಲಿ, ಶಾಲೆಗಳಲ್ಲಿ, ಮಾಡಿಸುವವರ ಮನೆಗಳಲ್ಲಿ, ಭಜನಾಮಂದಿರಗಳಲ್ಲಿ, ಬಯಲುಗಳಲ್ಲಿ; ಈಗ ಸಭಾಭವನ, ಕಾಲೇಜು, ಕಲ್ಯಾಣಮಂದಿರಗಳಲ್ಲಿ, ಬಯಲುಗಳಲ್ಲಿ ಇವು ಜರಗುವುವು. ಹೆಚ್ಚಾಗಿ ರಾತ್ರೆಯಿಡೀ ಪ್ರದರ್ಶನ. ಈಗ ಹಗಲು – ತಾಳಮದ್ದಲೆಗಳೂ ಇವೆ. ನಾಲ್ಕರಿಂದ

ಅರ್ಧಗಂಟೆ ಅವಧಿಯ ತಾಳಮದ್ದಲೆಗಳ ವಿವಿಧ ಪ್ರಯೋಗಗಳಾಗಿವೆ. ಪೂಜಾ ಸಮಾರಂಭ, ಜಾತ್ರೆ, ಹಬ್ಬಹರಿದಿನಗಳು, ಮದುವೆ ಮುಂಜಿ, ಉದ್ಘಾಟನೆ, ಸಭೆ, ಸಾಮಾಜಿಕ ಸಮಾರಂಭಗಳಂದು ಇವನ್ನು ಏರ್ಪಡಿಸುತ್ತಾರೆ. ತಾಳಮದ್ದಲೆಗಾಗಿಯೇ ತಾಳಮದ್ದಲೆ ಏರ್ಪಡಿಸುವುದೂ ಇದೆ. ಸಂಘ, ಸಂಸ್ಥೆಗಳ ಸಹಾಯಾರ್ಥ ಟಿಕೇಟಿನ ಪ್ರದರ್ಶನಗಳೂ ಸಾಕಷ್ಟು ಆಗುತ್ತಿವೆ.

ಕೆಲವು ದಶಕಗಳ ಹಿಂದೆ ತಾಳಮದ್ದಲೆಗಳು ಬಯಲಾಟವನ್ನು ಬಹಳಷ್ಟು ಅನುಕರಿಸಿ ಸಾಗುತ್ತಿದ್ದವು. ರಾಕ್ಷಸಪಾತ್ರದ ಪ್ರವೇಶದ ಆರ್ಭಟ, ಅಟ್ಟಹಾಸ, ಕುಂಭಕರ್ಣ, ಬಕಾಸುರ, ರುದ್ರಭೀಮರ ಪಾರಣೆ, ವಾಲಿಸುಗ್ರೀವರ ಮಾವಿನ ಸೊಪ್ಪಿನ ಯುದ್ಧ – ಇವೆಲ್ಲ ತಾಳಮದ್ದಲೆಯಲ್ಲಿದ್ದುವು.

ತಾಳಮದ್ದಲೆಯ ಇತಿಹಾಸದಲ್ಲಿ ಕಾಣುವ ಇನ್ನೊಂದು ಭೀಕರ ಪ್ರಸಂಗ ಅಂದರೆ "ಜೋಡುತಾಳಮದ್ದಲೆ"– ಜೋಡಾಟದ ಹಾಗೆ. ಒಂದೇ ಕಡೆ, ಜತೆ ಹಿಮ್ಮೇಳ, ಸಮಾನಾಂತರ ಪಾತ್ರವರ್ಗ. ಒಟ್ಟಿನಲ್ಲಿ ಗೌಜಿ, ಬೊಬ್ಬೆ, ಗಲಭೆ. ಯಾರ ಬೊಬ್ಬೆ ಬಲವಾಯಿತೋ ಅವನೇ ಶ್ರೇಷ್ಠ ಅರ್ಥದಾರಿ. ನಮ್ಮ ಜಿಲ್ಲೆಯ ತೆಂಕಣ ಭಾಗದಲ್ಲಿದ್ದ ಈ ರೂಢಿ ಈಗ ಮಾಯವಾಗಿದೆ. ಅಂದಿನ ಅಭಿರುಚಿ ಅದೇ ಮಟ್ಟದಲ್ಲಿ ಇತ್ತೇನೋ.



ಯಶಸ್ವೀ ಅರ್ಥಧಾರಿ ಅನಿಸುವುದು ಸುಲಭದ ಕೆಲಸವೇನೂ ಅಲ್ಲ. ಸಾಕಷ್ಟು ಪುರಾಣಜ್ಞಾನ, ಶ್ರುತಿಗೆ ಕೂಡುವ ಪರಿಣಾಮಕಾರಿ ಕಂಠ, ಭಾಷೆಯ ಮೇಲೆ ಹಿಡಿತ, ಪ್ರತಿಭೆ, ಸಂವಾದಚಾತುರ್ಯ, ಸನ್ನಿವೇಶಗಳನ್ನು ಚಿತ್ರಿಸುವ ಶಕ್ತಿ, ರಚನಾಕೌಶಲ, ವ್ಯಂಗ್ಯ ದೃಷ್ಟಿ, ಭಾವಪರವಶನಾಗುವ ಭಾವಜೀವಿತ್ವ, ಒಳ್ಳೆಯ ಕಲ್ಪನಾಶಕ್ತಿ, ವಾದ ಸಾಮರ್ಥ್ಯ– ಇವೆಲ್ಲ ಸಪ್ರಮಾಣ ಎರಕವಾಗಿ ಇದ್ದರೆ ಅವನು ಒಳ್ಳೆಯ ಅರ್ಥಗಾರ. ಅವನು ಏಕಕಾಲದಲ್ಲಿ ಕವಿ, ಮಾತುಗಾರ, ನಾಟಕಕಾರ, ವಿದ್ವಾಂಸ, ನಟ– ಎಲ್ಲವೂ ಆಗಬೇಕು. ಅವನಿಗೆ ಸಂಸ್ಕೃತ ಭಾಷೆಯ ಸಾಮಾನ್ಯ ಜ್ಞಾನವಾದರೂ ಇದ್ದರೆ ಒಳ್ಳೆಯದು ಪದ್ಯಗಳ ಲಯವನ್ನು, ಹಿಮ್ಮೇಳದ ಸೊಗಸನ್ನು ಸವಿಯಬಲ್ಲ, ಅದರಲ್ಲಿ ಮುಳುಗಬಲ್ಲ ಸಾಮರ್ಥ್ಯ ಬೇಕು. ಮುಖ್ಯ ಪ್ರಸಂಗಗಳು ಬಾಯಿಪಾಠ ಬರಬೇಕು. ಪ್ರಸಂಗ ಅವನ ಹಸ್ತಪ್ರತಿ (Script) ತಾನೇ? ಕಡಿಮೆ ಪಕ್ಷ ಮುಖ್ಯಪ್ರಸಂಗಗಳ ಕತೆಯ ನಡೆ, ಪದ್ಯಗಳ ಅನುಕ್ರಮ – ಇವಾದರೂ ತಿಳಿದಿರಬೇಕು.

ಅತಿಯಾದ ವಿದ್ವತ್ತು ಉತ್ತಮ ಅರ್ಥಗಾರಿಕೆಗೆ ತೊಡಕೆಂಬ ಅಂಶಕ್ಕೆ ಪುರಾವೆಗಳಿವೆ. ವಿದ್ವತ್ಪ್ರದರ್ಶನ, ಅತಿವ್ಯಾಖ್ಯಾನ, ಕೂದಲೆಳೆ ವಾದಗಳು, ಶ್ಲೋಕ ಚಟ – ಇವು ಅರ್ಥವನ್ನು ಕೆಡಿಸುತ್ತವೆ. ಅರ್ಥಧಾರಿ, ಮೊದಲು ಕಲಾವಿದ, ಆ ಬಳಿಕ ವಿದ್ವಾಂಸ ಎಂಬುದನ್ನು ಅವನು

ತಿಳಿದಿರಬೇಕು. ಕಲಾಕ್ಷೇತ್ರದ ಚೌಕಟ್ಟಿನ ಒಳಗೆ, ಇಲ್ಲಿ ವಿದ್ವತ್ತು ದುಡಿಯಬೇಕು. ಇಲ್ಲಿ ವಿದ್ವತ್ತು ಕಲೆಗೆ ಅಡಿಯಾಳು, ಅರಸಲ್ಲ. ಅಂತಹ ವಿದ್ವಾಂಸರಲ್ಲದವರು, ಶ್ರೇಷ್ಠ ಅರ್ಥಗಾರರಾಗಿ ಯಶಸ್ಸು ಕಂಡಿದ್ದಾರೆ. ತಾಳಮದ್ದಲೆಯಲ್ಲಿ ಅರ್ಥಧಾರಿಯ ವಿದ್ವತ್ತು, ಪ್ರಸಂಗದ ಸೀಮೆಯಲ್ಲಿ, ಔಚಿತ್ಯ ಮತ್ತು ಕಲಾಧರ್ಮದ ಆವರಣದಲ್ಲಿ ಇತರ ಅರ್ಥಧಾರಿಗಳೊಂದಿಗೆ ಹೊಂದಿಕೊಂಡು ಕೆಲಸ ಮಾಡಬೇಕಾಗುತ್ತದೆ.

ತಾಳಮದ್ದಲೆಯ ಅರ್ಥಗಾರಿಕೆ, ಬಯಲಾಟದ ಅರ್ಥಗಾರಿಕೆಗಿಂತ ಭಿನ್ನ. ಇಲ್ಲಿ ಮಾತೊಂದೇ ಮಾಧ್ಯಮ. ಸನ್ನಿವೇಶ ನಿರ್ಮಾಣ, ತನ್ನ ಮತ್ತು ಇತರ ಪಾತ್ರಗಳ ಭಾವ, ಭಂಗಿ, ಆಗಮನ ಇತ್ಯಾದಿಗಳೂ ಮಾತಿನಲ್ಲೆ ಮೂಡಬೇಕು. ಕೃಷ್ಣಸಂಧಾನದ ಕೌರವ ತಾಳಮದ್ದಲೆಯಲ್ಲಿ "ಇದೋ, ಕೈಯಲ್ಲಿರುವ ಹೊನ್ನಹರಿವಾಣದ ರಣವೀಳ್ಯವನ್ನು ನೋಡು" ಅಂದರೆ, ಆಟದ ಕೌರವ ಅನ್ನಬೇಕಿಲ್ಲ. ತಾಳಮದ್ದಲೆಯ ವಾಲಿ ಕೊನೆಯ ಘಟ್ಟದಲ್ಲಿ, ಸುಗ್ರೀವನೊಂದಿಗೆ "ಇದೋ, ನನ್ನ ಕಾಲಮೇಲೆ ಬಿದ್ದು ಕಣ್ಣೀರಿಳಿಸುವ ತಾರೆಯನ್ನು ನೋಡು" ಅಂದರೆ ಆಟದ ವಾಲಿ "ಈ ತಾರೆಯ ಸ್ಥಿತಿಯನ್ನು ನೋಡು" ಅಂದರೆ ಸಾಕು. ಇಲ್ಲಿ ಅಭಿನಯಕ್ಕೂ ಮಾತೇ ಮಾಧ್ಯಮ. ತಾಳಮದ್ದಲೆಯ ಅರ್ಥಗಾರಿಕೆಯಲ್ಲಿ– "ಇದೋ ಕಾಲಿಗೆರಗಿ ಹೇಳುತ್ತೇನೆ", "ಇದೇನು ಅತ್ತಿತ್ತ ಶತಪಥ?", ಇದೇಕೆ ಗಲ್ಲಕ್ಕೆ ಕೈಕೊಟ್ಟು ಕುಳಿತಿರುವೇ? "ಇದೋ, ಎತ್ತಿದ ಬಿಲ್ಲಿನ ಝೇಂಕಾರ" "ಒರೆಯಿಂದ ಸೆಳೆದ ಕತ್ತಿ, ಝಳಪಿಸಿ ನಿನ್ನ ಕತ್ತನ್ನು ಕತ್ತರಿಸಲು ಸಿದ್ಧವಾಗಿದೆ"– ಮುಂತಾದ ವಾಕ್ಯಗಳು ಅತ್ಯವಶ್ಯಕ; ಚಿತ್ರನಿರ್ಮಾಣ, ಅರ್ಥಗಾರಿಕೆಯ ಅನಿವಾರ್ಯ ಅಂಶ.

ಅರ್ಥಗಾರಿಕೆಯ ಔಚಿತ್ಯದ ಸೀಮೆ,, ತುಸು ಭಿನ್ನ ಮತ್ತು ವಿಸ್ತಾರವಾದುದು. ಇದು ವಾಸ್ತವವಾದಿ ರಂಗಭೂಮಿಯಲ್ಲ. ಅವಾಸ್ತವ, ರಮ್ಯಾದ್ಭುತ ಮತ್ತು ವಿಚಿತ್ರ ಲೋಕದ ಚಿತ್ರಣ ಅದು. ಉದಾ: "ಯುದ್ಧರಂಗದಲ್ಲಿ ಅಷ್ಟು ಹೊತ್ತು ವಾಗ್ವಾದ ನಡೆದೀತೆ?, "ಕರ್ಣ–ಶಲ್ಯರು ಸರ್ಪಾಸ್ತ್ರದ ಬಗ್ಗೆ ಅಷ್ಟು ಹೊತ್ತು ಚರ್ಚೆಮಾಡುವ ಸ್ಥಿತಿ ಇದ್ದಿತೆ? ಆಗ ಅರ್ಜುನ ಸುಮ್ಮನಿದ್ದಾನೆ?''– ಎಂಬಂತಹ ಪ್ರಶ್ನೆಗಳು, ತಾಳಮದ್ದಲೆಯ ನಾಟಕದಲ್ಲಿ ಅಸಂಗತವಾಗುತ್ತವೆ. ಈ ಮಾಧ್ಯಮದ ಕ್ರಮ ಹಾಗೇ ಇದೆ ಎಂದು ಒಪ್ಪಬೇಕು. ಇಲ್ಲಿ ಪ್ರಸಂಗದ ಸ್ಥೂಲ ಚೌಕಟ್ಟಿನಲ್ಲಿ, ಪೌರಾಣಿಕ ಕತೆಯೊಂದು ಮಾತಿನ ಮೂಲಕ ಪುನರ್ನಿರ್ಮಾಣವಾಗುತ್ತದೆ ಎಂಬುದು ಮುಖ್ಯ. ಆದರೂ ಮಾತಿನ ಶಕ್ತಿ ಮತ್ತು ಮಿತಿ ಎರಡರ ಅರಿವೂ ಅರ್ಥಗಾರನಿಗಿರಬೇಕು. ಹಲವು ಬಾರಿ ಒಂದು ಹುಂಕಾರ, ಒಂದು ತಿರಸ್ಕಾರ, ಒಂದು ಸ್ವರಭೇದ, ಛೆ!, ಅರರೆ– ಇವು. ನೂರು ಮಾತು ಹೇಳದ್ದನ್ನು ಹೇಳಬಲ್ಲವು."ಮಾತು ಬೆಳ್ಳಿ, ಮೌನ ಬಂಗಾರ" ಎಂಬುದೂ ಮಾತಿನ ಈ ರಂಗದಲ್ಲಿ ಕೆಲವು

ಬಾರಿ ಜೀವಂತ ಸತ್ಯ. ಮಾತಿನ ರೀತಿ, ಭಾಷೆ, ವಿಷಯಗಳಲ್ಲಿ ನಾವೀನ್ಯ ತರುವಾಗಲೂ ಪುರಾಣದ ಆವರಣ ಕೆಡದಂತೆ ಇರಬೇಕು. ಹೇಳಿದ ವಿಷಯ ಆ ಪಾತ್ರದ ಮಾತಾಗಿ, ಒಪ್ಪುವಂತೆ, ಹೊಸ ವಿಷಯಗಳನ್ನು ಹೊಂದಿಸಬಹುದು. ಅತ್ಯಾಧುನಿಕ ವಿಚಾರ, ಸಾಹಿತ್ಯ, ಸಂಗತಿಗಳನ್ನು, ಕಲಾಶಿಲ್ಪ ಕೆಡದಂತೆ ಎರಕಗೊಳಿಸಲು ಅಸಾಮಾನ್ಯ ಅಂತರ್‌ದೃಷ್ಟಿ, ಪ್ರತಿಭೆಗಳು ಬೇಕಾಗುತ್ತವೆ.

ತಾಳಮದ್ದಲೆಯ ಭಾಷೆಯ ಪ್ರಶ್ನೆ ವಿಲಕ್ಷಣವಾದುದು. ಇಲ್ಲಿ ಭಾಷೆ ಗ್ರಾಂಥಿಕವಾಗಿಯೂ ಪ್ರಚಲಿತ ತುಸು ಹಿಂದಿನ ಕ್ರಮದ್ದೂ ಆಗಿರುತ್ತದೆ. ಸಮಕಾಲೀನ ಸಾಹಿತ್ಯ ದೃಷ್ಟಿಯಿಂದ 'ಕೃತಕ' ಅನ್ನಬಹುದಾದ ಭಾಷೆ ಮತ್ತು ಸಂವಾದತಂತ್ರ ತಾಳಮದ್ದಲೆಯಲ್ಲಿ ಅವಶ್ಯ. ಸಂಸ್ಕೃತ ಭೂಯಿಷ್ಠತೆ ಇಲ್ಲಿನ ಭಾಷೆಯ ಒಂದು ಮುಖ್ಯ ಲಕ್ಷಣ. ಆದರೆ ಆಶುಭಾಷಣವಾದುದರಿಂದ ದೇಸಿಯ ಬಳಕೆಯೂ ಇರುತ್ತದೆ. ಕ್ರಿಯಾಪದಗಳು ಆಡುಮಾತಿನಂತೆ ಇರುತ್ತವೆ.


ಉದಾ: 'ಹೋಗ್ತೇನೆ, ಬರ್ತೇನೆ' ಇತ್ಯಾದಿ. ದಕ್ಷಿಣ ಕನ್ನಡದ ಆಡುಮಾತೂ ಗ್ರಾಂಥಿಕ ರೀತಿಯದೆ ತಾನೆ? ಇದು ಅರ್ಥಗಾರಿಕೆಗೆ ನೆರವು ನೀಡಿರುವುದು ಒಂದು ಯೋಗ.

ತಾಳಮದ್ದಲೆ ಅಂದರೆ ವಾದಭೂಮಿ ಎಂಬ ಒಂದು ಕಲ್ಪನೆ ನಮ್ಮ ಪ್ರೌಢರೆನಿಸಿದ ಪ್ರೇಕ್ಷಕರಲ್ಲೂ ಇದೆ. ಅರ್ಥದಾರಿಗಳೊಳಗಿನ 'ಕಾಳಗ' ನೋಡಲೆಂದೇ ಬರುವ ಮಂದಿ ಕಡಿಮೆ ಇಲ್ಲ. ಇದು ಹಲವು ಅರ್ಥಧಾರಿಗಳನ್ನು ದಾರಿತಪ್ಪಿಸುತ್ತದೆ. ತಾಳಮದ್ದಲೆ ಮುಖ್ಯವಾಗಿ ರಸದ, ಭಾವದ ಲೋಕ, ಪೌರಾಣಿಕ ನಾಟಕ. ತರ್ಕ ಅದಕ್ಕೆ ಅನುವರ್ತಿ. ತಾಳಮದ್ದಲೆಯ ಹಲವು ಅವಶ್ಯಗಳಲ್ಲಿ ಅದೂ ಒಂದು, ಅಷ್ಟೆ. ವಾದಕ್ಕೂ ಒಂದು ಮಿತಿ ಇದೆ. ರಸ, ಕಥಾಸನ್ನಿವೇಶ, ಪಾತ್ರಸ್ವಭಾವ, ಇದಿರಾಳಿಯ ಪಾತ್ರಧೋರಣೆ– ಇವುಗಳ ಮಿತಿಯಲ್ಲೆ ಅದು ಸಾಗಬೇಕು. ತೀರ 'ಖಳ' ಪಾತ್ರಕ್ಕೆ ತರ್ಕಯುಕ್ತ ಸಮರ್ಥನೆ ಕೊಟ್ಟರೆ ಅದು ಚಿತ್ರಣಕ್ಕೆ ದೋಷಕರ. ಖಳಪಾತ್ರಗಳು ಕೆಲವೆಡೆ, ಅಸಮರ್ಪಕವಾದ ಹಾರಿಕೆಯ ವಾದ ಹೂಡಿದರೇನೇ ಸೊಗಸು. ರಾಮ– ಭರತ, ಕೃಷ್ಣ – ಸತ್ಯಭಾಮ ಇತ್ಯಾದಿ 'ಜೊತೆ' ಪಾತ್ರಗಳ ವಾದಸಂವಾದ ಪ್ರೀತಿಮೂಲ, ಹೊರತು ವಿರೋಧದ್ದಲ್ಲ ತಾನೆ? ಔಚಿತ್ಯದ ಮೇರೆಮೀರಿದ ತರ್ಕ, ಎಷ್ಟೇ ಸುಂದರವಾದರೂ ವರ್ಜ್ಯ. ಒಂದು ಪಾತ್ರದ ಮಾತು ತನ್ನ, ಇದಿರಿನ ಮತ್ತು ಕತೆಗೆ ಸಂಬಂಧಿಸಿದ ಇತರ ಪಾತ್ರಗಳನ್ನು ರೂಪಿಸುವಲ್ಲಿ ಕೆಲಸ ಮಾಡಬೇಕು. ಅತಿವಾದ, ಪಾಂಡಿತ್ಯ ಪ್ರದರ್ಶನ, ವ್ಯಾಕರಣ ಚರ್ಚೆ, ಹರಿಕತೆಯಂತಹ ಬೋಧನೆ ಇವು ತಾಳಮದ್ದಲೆಗೆ ಬಾಧಕಗಳು. ಅರ್ಥಗಾರರೂ ಪ್ರೇಕ್ಷಕರೂ ಈ ಬಗ್ಗೆ ಹೆಚ್ಚು ಸೂಕ್ಷ್ಮಜ್ಞರೂ ಸ್ವಚ್ಛ ಕಲಾಪ್ರಜ್ಞೆಯುಳ್ಳವರೂ ಆಗಬೇಕು.

ಅರ್ಥಗಾರರು ಆಯಾ ದಿನದ ಪ್ರಸಂಗದ ಬಗ್ಗೆ ಸಮಾಲೋಚಿಸಿ, ಅಂದಿನ ತಾಳ ಮದ್ದಲೆ ಸಾಗಬೇಕಾದ ಒಂದು ಸ್ಥೂಲ ಚೌಕಟ್ಟನ್ನು ನಿರ್ಧರಿಸಿದರೆ ತಪ್ಪೇನೂ ಇಲ್ಲ. ಸಮಾಲೋಚನೆಯಿಂದ ಹಲವು ಅಸಂಬದ್ಧತೆಗಳನ್ನು ನಿವಾರಿಸಬಹುದು, ನಾಟಕೀಯತೆ ತುಂಬಿಸಬಹುದು. ತಾಳಮದ್ದಲೆ ಮುಗಿದ ಬಳಿಕ ಪುನಃ ಒಬ್ಬರಿಗೊಬ್ಬರು ಅಭಿಪ್ರಾಯ, ಸೂಚನೆ ಕೊಟ್ಟು ಸಹಕರಿಸಿ ತಿದ್ದಿಕೊಳ್ಳಬೇಕು. ನಾವು ಕೆಲವರು ಇಂತಹ ವಿಚಾರ ವಿನಿಮಯ ಮಾಡುವ ಕ್ರಮ ಇರಿಸಿ, ಅದು ತುಂಬ ಲಾಭಕರವೆಂಬುದನ್ನು ಕಂಡಿದ್ದೇವೆ.

ಇತರ ಭಾರತೀಯ ಭಾಷೆಗಳಿಗೆ, ಈ ಕಲಾಪ್ರಕಾರವನ್ನು ವಿಸ್ತರಿಸಲು ಯತ್ನಗಳು ನಡೆಯಬೇಕು. ತಾಳಮದ್ದಲೆಯ ಬಗ್ಗೆ ಪ್ರಾಯೋಗಿಕ ವಿಮರ್ಶೆ ಬಂದಿರುವುದು ತೀರ ಕಡಿಮೆ, ಇಲ್ಲ ಅಂದರೂ ಸರಿ. ತಾಳಮದ್ದಲೆಯಂತಹ ಒಂದು ಅದ್ಭುತ ಕಲಾಪ್ರಕಾರಕ್ಕೆ, ನಾಡಿನ ಪತ್ರಿಕೆಗಳು ಕೊಟ್ಟ ಪ್ರಚಾರ ಕಡಿಮೆ. (ಅಥವಾ ನಾವದನ್ನು ಪಡೆಯಲು ಯತ್ನಿಸಿಲ್ಲವೊ ಏನೋ) ನ್ಯಾಯವಾಗಿ ಸಿಗಬೇಕಾದ ಪ್ರಚಾರ – ಬಯಸಿದರೆ ತಪ್ಪಿಲ್ಲವಷ್ಟೆ?

## ಎಂ. ಪ್ರಭಾಕರ ಜೋಶಿ



ಡಾ। ಎಂ. ಪ್ರಭಾಕರ ಜೋಷಿಯವರು ಕಾರ್ಕಳ ತಾಲೂಕಿನ ಮಾಳ ಎಂಬಲ್ಲಿ ಜನಿಸಿದರು. ಮಂಗಳೂರಿನ ಬೆಸೆಂಟ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿಯೂ, ಪ್ರಾಂಶುಪಾಲರಾಗಿಯೂ ದುಡಿದವರು. ಯಕ್ಷಗಾನ ಕಲಾವಿದರೂ ಪ್ರಮುಖ ವಿಮರ್ಶಕರೂ, ಸಂಶೋಧಕರೂ ಆಗಿರುವ ಇವರು ಅನೇಕ ಕೃತಿಗಳನ್ನು ರಚಿಸಿರುವರು. ಜಾಗರ, ಕೇದಗೆ, ಮಾರುಮಾಲೆ, ಯಕ್ಷಗಾನ ಪದಕೋಶ, ಪ್ರಸ್ತುತ, ಮಂದಾರ ಕೇಶವ ಭಟ್ರ್ (ತುಳು), ಭಾರತೀಯ ತತ್ವಶಾಸ್ತ್ರ, ತಾಳಮದ್ದಳೆ, ವಾಗರ್ಥ, ಪಂಡಿತ ಪೆರ್ಲ ಕೃಷ್ಣ ಭಟ್ಟ ಮೊದಲಾದುವು ಇವರ ಪ್ರಮುಖ ಕೃತಿಗಳು. ಇವರ 'ಕೃಷ್ಣ ಸಂಧಾನ ಪ್ರಸಂಗ ಮತ್ತು ಪ್ರಯೋಗ' ಎಂಬ ಸಂಶೋಧನ ಮಹಾಪ್ರಬಂಧಕ್ಕೆ ಮಂಗಳೂರು ವಿ.ವಿ. ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಈ ಭಾಗವನ್ನು 'ಸಮಗ್ರ ಯಕ್ಷಗಾನ – ಪರಂಪರೆ ಮತ್ತು ಪ್ರಯೋಗ'(ಸಂ. ಕು.ಶಿ. ಹರಿದಾಸ ಭಟ್ಟ) ದಿಂದ ಆರಿಸಲಾಗಿದೆ.

## ಪದಗಳ ಅರ್ಥ

ವರ್ಜಿಸು – ಬಿಡು

ರಣವೀಳ್ಯ – ಯುದ್ಧಕ್ಕೆ ಆಹ್ವಾನ

ಅಂತರ್‌ದೃಷ್ಟಿ – ಒಳನೋಟ

ಕೃತಕ – ನೈಜವಲ್ಲದ

ವಿಲಕ್ಷಣ – ಹೊಸ ತೆರದ

ಅಸಂಗತ – ಹೊಂದದ; ಅನುಚಿತ

ವಿದ್ವತ್ತು – ಪಾಂಡಿತ್ಯ

ಭೂಯಿಷ್ಠತೆ – ಪ್ರೌಢಿಮೆ

## ಚಟುವಟಿಕೆಗಳು

- ತಾಳಮದ್ದಲೆಯ ಸ್ವರೂಪವನ್ನು ವಿವರಿಸಿರಿ.
- ಯಕ್ಷಗಾನ ಬಯಲಾಟ ಹಾಗೂ ತಾಳಮದ್ದಲೆಗಿರುವ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ಚರ್ಚಿಸಿ, ಟಿಪ್ಪಣಿ ಬರೆಯಿರಿ.
- 'ದೃಶ್ಯ– ಶ್ರವ್ಯ ಮಾಧ್ಯಮಗಳು ತಾಳ ಮದ್ದಲೆಯ ಬೆಳವಣಿಗೆಗೆ ಅಡಚಣೆಯಾಗಿದೆಯೇ' ಈ ವಿಷಯದ ಬಗ್ಗೆ ತರಗತಿಯಲ್ಲಿ ಚರ್ಚಾಕೂಟವನ್ನು ಏರ್ಪಡಿಸಿರಿ.
- 'ಮಾತು ಬೆಳ್ಳಿ, ಮೌನ ಬಂಗಾರ' ಈ ಮಾತಿನ ಅರ್ಥವನ್ನು ವಿಸ್ತರಿಸಿ ಬರೆಯಿರಿ.
- ನೀವು ನೋಡಿರುವ ತಾಳಮದ್ದಲೆಯ ಬಗೆಗೆ ಅನುಭವವನ್ನು ಬರೆಯಿರಿ.
- ನಿಮ್ಮ ಶಾಲೆಯ ಸಾಹಿತ್ಯ ಸಂಘದ ಆಶ್ರಯದಲ್ಲಿ ತಾಳಮದ್ದಲೆ ಕಾರ್ಯಕ್ರಮ ವೊಂದನ್ನು ನಡೆಸಿರಿ.

## ಭಾಷಾಭ್ಯಾಸ

- ಕ್ರಿಯೆ ಅಥವಾ ಕೆಲಸ ನಡೆಯಲಿಲ್ಲ ಎನ್ನುವುದನ್ನು ಸೂಚಿಸುವ ರೂಪಕ್ಕೆ ನಿಷೇಧಾರ್ಥ ಎಂದು ಹೆಸರು (ಪುಲ್ಲಿಂಗ, ಸ್ತ್ರೀಲಿಂಗ ನಪುಂಸಕ ಲಿಂಗಗಳಲ್ಲಿ)

ಉದಾ: ಕುಡಿ – ಕುಡಿಯನು / ಕುಡಿಯಳು / ಕುಡಿಯದು.

ಬಾಳು – ಬಾಳನು / ಬಾಳಳು / ಬಾಳದು.

ಇಂತಹ ಇತರ ಪದಗಳನ್ನು ಸಂಗ್ರಹಿಸಿ ನಿಷೇಧಾರ್ಥ ರೂಪದಲ್ಲಿ ಬರೆಯಿರಿ.

- ಇಗ, ವಂತ, ಗಾರ, ವಾಳ, ಇತಿ, ಇತ್ತಿ ಮುಂತಾದ ಪ್ರತ್ಯಯಗಳು ನಾಮ ಪ್ರಕೃತಿಗಳೊಂದಿಗೆ ಸೇರಿ ತದ್ಧಿತಾಂತ ನಾಮಗಳಾಗುತ್ತವೆ.

  ಉದಾ: ಇಗ–ಲೆಕ್ಕಣಿಗ, ವಂತ–ಸಿರಿವಂತ, ಗಾರ–ಹಾಡುಗಾರ ಇತ್ಯಾದಿ

  ಮೇಲೆ ಸೂಚಿಸಿದ ಪದಗಳನ್ನು ಹಿಂದಿನ ಪಾಠಗಳಿಂದ ಸಂಗ್ರಹಿಸಿ ಬರೆಯಿರಿ.


- ಈ ಕೆಳಗಿನ ಗದ್ಯಭಾಗದಲ್ಲಿನ ಸಮಸ್ತ ಪದಗಳ ವಿಗ್ರಹವಾಕ್ಯ ಬರೆದು ಸಮಾಸವನ್ನು ಹೆಸರಿಸಿರಿ.

  ಹಬ್ಬದೂಟ, ಹತ್ತಾರು, ಮುಮ್ಮಡಿ, ಕಷ್ಟಸುಖಗಳು, ಅರಮನೆ, ಹುಡಿಮಣ್ಣು

# ಏಳಯ್ಯ ಬೆಳಗಾಯಿತು

**ಅ.ರಾ. ಮಿತ್ರ**

ಇದೊಂದು ಲಘುಶೈಲಿಯ ಹರಟೆ. ಪ್ರಬಂಧಗಳು ವಸ್ತುನಿಷ್ಠವಾಗಿದ್ದು ವಿಷಯಗಳ ನಿಖರತೆಯಿಂದ ಕೂಡಿದ್ದು ಓದುಗನ ಜ್ಞಾನವನ್ನು ಹೆಚ್ಚಿಸುವುದು. ಆದರೆ ಹರಟೆಗಳು ಲಘು ಪ್ರಬಂಧಗಳಾಗಿದ್ದು ಲೇಖಕರು ತಾವು ಕಂಡದ್ದನ್ನು ಅಥವಾ ಕೇಳಿದ್ದನ್ನು ತಮ್ಮದೇ ಹಾಸ್ಯ ಧಾಟಿಯಲ್ಲಿ ಹೇಳುತ್ತಾ ಓದುಗನಿಗೆ ಮನರಂಜನೆಯನ್ನು ನೀಡುತ್ತಾರೆ. ಈ ಹರಟೆಗಳು ವೈವಿಧ್ಯಮಯವಾಗಿದ್ದು ಓದುಗರಿಗೆ ವಿಶಿಷ್ಟ ಅನುಭವವನ್ನುಂಟುಮಾಡುತ್ತವೆ. ಪ್ರಸ್ತುತ ಅ.ರಾ. ಮಿತ್ರ ಅವರ 'ಏಳಯ್ಯ ಬೆಳಗಾಯಿತು' ಎನ್ನುವ ಹರಟೆ ವಿದ್ಯಾರ್ಥಿಗಳ ಸೋಮಾರಿತನದ ಜೀವನವನ್ನು ಸೋದಾಹರಣವಾಗಿ ನಿರೂಪಿಸಿದೆ. ಹರಟೆಯ ವಿಷಯಗಳಾದ ಬೆಳಗಿನ ಜಾವದ ಮಹತ್ವ. ಸೋಮಾರಿ ವಿದ್ಯಾರ್ಥಿಗಳು ಬೆಳಗಿನ ಜಾವ ಏಳದಿರುವಂತಹ ಮನಸ್ಥಿತಿ, ಹಿರಿಯರು ಅವರನ್ನು ಶಪಿಸಿ ಏಳಿಸುವ ಪ್ರಯತ್ನದ ಹಿನ್ನೆಲೆ, ದೇವರನ್ನು ಎಬ್ಬಿಸಲು ಪಡಬೇಕಾದ ಕಷ್ಟ ಅಲ್ಲದೆ ಬೆಳಗ್ಗಿನ ಜಾವದ ಬಗ್ಗೆ ಕವಿ, ವಿಮರ್ಶಕರ ಅಭಿಪ್ರಾಯಗಳನ್ನು ಸರಳವಾಗಿ ಎಳೆ ಎಳೆಯಾಗಿ ಬಿಡಿಸುವ ಪ್ರಯತ್ನ ಮಾಡಿದ್ದಾರೆ. ನೀರಸವಾದ ಈ ವಿಷಯವನ್ನು ಸಂಯಮದಿಂದ ಹೇಳುವ ಈ ನಿರೂಪಣೆಯ ಶೈಲಿ ಸೊಗಸಾಗಿದೆ. ಓದಿದಷ್ಟು ಓದಬೇಕೆಂಬ ಆಸೆಯನ್ನು ಈ ಹರಟೆ ಉಂಟುಮಾಡುತ್ತದೆ.



ಮೂಡಣ ದಿಕ್ಕು ಕೆಂಪೇರಿ, ಕತ್ತಲ ತೆರೆ ಸರಿದು, ಹಕ್ಕಿಗಳು ಚಿಲಿಪಿಲಿಗುಟ್ಟಿ, ತಂಗಾಳಿ ಬೀಸಿ ಬರುವ ಸಮಯ. ಬೆಳಗಲಿ ಬೆಳಕು ಹರಿಯಿತೆಂದೊಡನೆ ಜೀವ ಜಗತ್ತು ನಿದ್ರೆಯ ತೆಕ್ಕೆಯಿಂದ ಬಿಡಿಸಿಕೊಂಡು ಕ್ರಿಯಾಶೀಲವಾಗುತ್ತದಲ್ಲವೆ? ಇಂಥ ಸುಂದರ ಬೆಳಗಿನಲ್ಲಿ ನೀವಾದರೆ ಏನು ಮಾಡುತ್ತೀರಿ? ಎಚ್ಚರವಿದ್ದು ಕೊಂಡೇ ಕಣ್ಣುಮುಚ್ಚಿ, ಇನ್ನೂ ಸ್ವಲ್ಪ ಸಮಯ ಹೊರಳಾಡುತ್ತೀರಾ? ಅಥವಾ ಆಲಸ್ಯದಿಂದ ಹೊದಿಕೆಯೊಳಗೇ ಬೆಚ್ಚಗೆ ಹುದುಗಿಕೊಂಡು ಮರಿನಿದ್ರೆ ಮಾಡಿಯೇ ಬಿಡುತ್ತೀರಾ? ವಿದ್ಯಾರ್ಥಿಗಳಾದ ನಿಮಗೆ ಯಾವುದು ಪ್ರಿಯ?

'ಏಳಯ್ಯ ಬೆಳಗಾಯಿತು ಪ್ರಬಂಧದಲ್ಲಿ ಲೇಖಕರು ನಿದ್ರೆಯ ಬೆನ್ನುಹತ್ತಿ ತಮ್ಮ ವಿದ್ಯಾರ್ಥಿ ಜೀವನದ ನೆನಪುಗಳನ್ನು ಮೆಲುಕು ಹಾಕಿದ್ದಾರೆ. ತಂದೆತಾಯಂದಿರು ತಮ್ಮ ಮಕ್ಕಳ ಮೇಲೆ ಸೇಡು ತೀರಿಸಿಕೊಳ್ಳಲೆಂದೇ ಬೆಳಗಿನ ಜಾವ ಎಬ್ಬಿಸುತ್ತಾರೆಯೇ ಎಂಬುದನ್ನು ಈ ಪಾಠದ ಮೂಲಕ ತಿಳಿದುಕೊಳ್ಳೋಣ.

ಬೆಳಗಿನ ಜಾವ ಎನ್ನುವುದಕ್ಕೆ ಬದಲಾಗಿ ಅನೇಕರು ಬೆಳಗಿನ ಝಾವ ಎಂದು ಜೋರಾಗಿ ಉಚ್ಚರಿಸುತ್ತಾರೆ. ಹೊಕ್ಕಳು ಸೀಳಿದ ಈ ಮಹಾಪ್ರಾಣಾಕ್ಷರ ಕಂಡಾಗ ಅಥವಾ ಕೇಳಿದಾಗಲೆಲ್ಲಾ ನಾನು ಗಾಬರಿಯಿಂದ ನಡುಗಿದ್ದೇನೆ. ಅದನ್ನು ಉಚ್ಚರಿಸಿದರೇ ಇಷ್ಟು ಅನಾಹುತವಾಗುವಾಗ ಇನ್ನು ಬೆಳಗಿನ ಜಾವಕ್ಕೆ ಏಳಬೇಕು ಎಂದರೆ ನನ್ನ ಗತಿ ಏನಾಗಬೇಕು? ನಮ್ಮನ್ನು ಎಬ್ಬಿಸುವವರ ದೃಷ್ಟಿಯಲ್ಲಿ ಬೆಳಗಿನ ಜಾವ ಅತ್ಯಂತ ಪವಿತ್ರವಿರಬಹುದು. ಆದರೆ ಅಂತಹ ಪವಿತ್ರ ಮುಹೂರ್ತಗಳನ್ನು ಹಾಳು ಮಾಡುವುದು ಸರಿಯೇ? ಅಂಥ ಪ್ರಶಾಂತ ಸಮಯದಲ್ಲಿ ಮಲಗುವುದಕ್ಕಿಂತಲೂ ಚೇತನಕ್ಕೆ ಸುಖದಾಯಕವಾದ ಅನುಭವ ಬೇರೊಂದು ಇದೆಯೇ? ಕಣ್ಣ ರೆಪ್ಪೆಗಳ ಅಪ್ಪುಗೆಯನ್ನು ಸಡಿಲಿಸಿ, ಕಣ್ಣನ್ನು ಕೆಟ್ಟದಾಗಿ ಉಜ್ಜಿ, ಆರಳಿಸಿ, ನಿದ್ದೆಯ ಹೊಕ್ಕಳನ್ನು ಸೀಳಿ ನಾನು ಯಾವ ನರಕಕ್ಕೆ ಹೋಗಲಿ. ಆದುದರಿಂದ ಇರುಳಿನ ನೀರವ ತಟಾಕದಲ್ಲಿ ಎಚ್ಚರದ ದೋಣಿಯನ್ನು ತೇಲಿಸಿ, ಓದಿನ ಹುಟ್ಟು ಹಾಕುವುದು ಸ್ವಲ್ಪವೂ ಇಷ್ಟವಿಲ್ಲದೆ ಹೊದಿಕೆ ಎಳೆದುಕೊಂಡು ಮಲಗಿಬಿಡುತ್ತೇನೆ.

ಆದರೆ ನನ್ನ ಸ್ನೇಹಿತನೊಬ್ಬನಿದ್ದಾನೆ. ಬೆಳಗಿನ ಜಾವದ ಮಹತ್ವದ ಬಗೆಗೆ ಅವನು ಯಾವಾಗಲೂ ನನಗೆ ಭಾಷಣ ಬಿಗಿಯುತ್ತಾನೆ. ಅವನು ನಿಶಾಚರನಲ್ಲದಿದ್ದರೂ ನಿಶೋತ್ತಿಷ್ಠ. ಅಂದರೆ ರಾತ್ರಿಯಲ್ಲೇ ನಿದ್ದೆಯ ಹೊಕ್ಕಳನ್ನು ಸೀಳಿ ಏಳತಕ್ಕವನು. ಅವನ ಮನೆಯಾಕೆಯೂ ಶೀಘ್ರೋದಯಿ! ಅವರ ಮಗುವಂತೂ ಮೂರು ಗಂಟೆಗೇ ಎದ್ದು ಸಣ್ಣದಾಗಿ ಉದಯರಾಗ ಪ್ರಾರಂಭಿಸುತ್ತದೆ. ಅಮ್ಮನ ನಿದ್ರೆಯನ್ನು ಕೆಡಿಸುತ್ತದೆ. ಈ ಕತ್ತಲಲ್ಲಿ ಮೂರುವರೆ ಗಂಟೆಗೆ ಎದ್ದು ನನ್ನ ಗೆಳೆಯ ಯಾವ ರಾಜ್ಯವನ್ನು ಉದ್ಧಾರ ಮಾಡಬೇಕಾಗಿದೆ ಎಂದು, ಒಂದು ಸಲ ನನಗೆ ರೇಗಿದ. ನಾನು ಬೇಕಾದರೆ ರಾತ್ರಿ ಒಂದು ಗಂಟೆಯವರೆಗೆ ಎಚ್ಚರವಾಗಿ ಇರಬಲ್ಲೆ.

ಆದರೆ ಬೆಳಗಿನ ಜಾವ ಏಳುವುದು ಮಾತ್ರ ನನ್ನ ಕೈಯಲ್ಲಿ ಆಗದ ಕೆಲಸ. ಈ ವಿಚಾರದಲ್ಲಿ ನನಗೂ ನನ್ನ ಸ್ನೇಹಿತನಿಗೂ ಒಮ್ಮೆ ವಾಗ್ಯುದ್ಧವೇ ನಡೆದುಹೋಯಿತು.

ನಾವು ಒಂದು ಊರಿಗೆ ಪ್ರವಾಸ ಹೊರಡಲು ನಿಶ್ಚಯಿಸಿದ್ದೆವು. ಬೆಳಗಿನ ಜಾವಕ್ಕೆ ಎದ್ದು ಊರಿಗೆ ಹೋಗುವ ರೈಲು ಹಿಡಿಯಬೇಕೆಂದು ಸ್ನೇಹಿತ ಸಲಹೆ ನೀಡಿದ. ದಾಕ್ಷಿಣ್ಯಕ್ಕೆ ಒಪ್ಪಿಕೊಂಡು ಒದ್ದಾಡುವುದು ನನ್ನ ಸ್ವಭಾವವಲ್ಲ. ಆದ್ದರಿಂದ ಬೆಳಗಿನ ಜಾವ ಏಳುವುದು ಮಾತ್ರ ಸಾಧ್ಯವಿಲ್ಲ, ನನ್ನ ಕೈಲಾಗುವುದಿಲ್ಲ ಎಂದು ಕಡ್ಡಿ ಮುರಿದ ಹಾಗೆ ತಿಳಿಸಿದೆ. ನನ್ನ ಸ್ನೇಹಿತನಿಗೆ ರೇಗಿರಬೇಕು.

'ಇಷ್ಟು ದೊಡ್ಡವನಾಗಿ ಹೀಗೆ ಹೇಳಲು ನಾಚಿಕೆಯಾಗುವುದಿಲ್ಲವೆ?' ಎಂದು ಅಣಕಿಸಿದ. ನಾನು ಶಾಂತವಾಗಿ 'ಉಹು ಆಗುವುದಿಲ್ಲ' ಎಂದೆ.

'ಬೆಳಗಿನ ಜಾವದ ಹೊತ್ತಿಗೆ ಕ್ಷುದ್ರಪ್ರಾಣಿಗಳಾದ ಕ್ರಿಮಿಕೀಟಗಳೆಲ್ಲಾ ಎದ್ದಿರುತ್ತವೆ. ನಿನಗೆ ಏಳುವುದಕ್ಕೆ ಏನು ಧಾಡಿ?' ಎಂದು ಚುಚ್ಚು ಮಾತನ್ನಾಡಿದ. ನಾನು ಮತ್ತೆ ಶಾಂತನಾಗಿಯೇ ಉತ್ತರಕೊಟ್ಟೆ.

'ಕ್ಷುದ್ರ ಪ್ರಾಣಿಗಳು ಕೂಡ ಎದ್ದಿರುತ್ತವೆಯೆ? ಇರಬಹುದು; ಅವು ಕ್ಷುದ್ರ ಪ್ರಾಣಿಗಳು, ನಾವು ಮನುಷ್ಯರು'

ನನ್ನ ಸ್ನೇಹಿತ ಮುಂದೆ ಮಾತನಾಡಲಿಲ್ಲ. ಆದರೆ ಆ ದಿನವೆಲ್ಲಾ ಗುರ್ ಎನ್ನುತ್ತಲೇ ಇದ್ದ. ಹುಡುಗನಾಗಿದ್ದಾಗ ಬೆಳಗಿನ ಜಾವ ಏಳುವುದು ಕಷ್ಟ ಎಂದು ಅಂದುಕೊಂಡಿರಲಿಲ್ಲ. ಇಂದಿಗೂ ಹಾಗೆಯೇ ಅಂದುಕೊಂಡಿದ್ದೇನೆ. ಏಳುವುದು ಬಹಳ ಸುಲಭ ಎಂದು ಯಾರಿಗೆ ಬೇಕಾದರೂ ಹೇಳಬಲ್ಲೆ. ಎಷ್ಟೋ ದಿನ ರಾತ್ರಿ ಮಲಗುವಾಗ ನಾನು ಬೆಳಗಿನ ಜಾವ ಏಳಬೇಕೆಂಬ ನಿರ್ಧಾರ ಮಾಡಿಕೊಂಡೇ ಮಲಗಿದ್ದೇನೆ. ಆದರೆ ಬೆಳಗಿನ ಜಾವದಲ್ಲಿ ಅದೇನು ಅನಿರೀಕ್ಷಿತ ಬದಲಾವಣೆ ಆಗಿರುತ್ತದೆಯೋ ಇನ್ನೂ ನನಗೆ ಅರ್ಥವಾಗಿಲ್ಲ. ಎಚ್ಚರಗೊಂಡ ಮನಸ್ಸು, ಸೋಮಾರಿಯಾದ ದೇಹ ಇವೆರಡಕ್ಕೂ ಸ್ವಲ್ಪ ಕಾಲ ಉಗ್ರ ಹೋರಾಟ ನಡೆಯುತ್ತಿರುತ್ತದೆ. ಎಚ್ಚರ ಖಂಡಿತ ಆಗಿರುತ್ತದೆ. ತಂದೆ ಎದ್ದು ದೀಪ ಹಾಕಿದ ವಿಷಯ ಗೊತ್ತು. ಅವರು ಕೂಗುತ್ತಿರುವುದೂ ಸ್ಪಷ್ಟವಾಗಿ ಕೇಳಿಸುತ್ತದೆ. ಎಲ್ಲಿ ಹತ್ತಿರ ಬಂದು ಹೊರಳಿಸುತ್ತಾರೋ ಎಂಬ ಭಯ. ಹಾಗೆ ಎಷ್ಟೋಸಲ ಆಗಿದೆ. ಕೊನೆಗೆ ತಂದೆಯವರೇ ಹೋಗಲಿ ಪಾಪ ತುಂಬಾ ನಿದ್ರೆ ಇರಬೇಕು ಎಂದು ಅಮ್ಮನೊಡನೆ ಹೇಳುತ್ತಿರುವುದೂ ಕೇಳಿಸುತ್ತದೆ. ಸದ್ಯ ಬದುಕಿದೆ ಎಂದು ಆನಂದದಿಂದ ಮುಸುಕೆಳೆದುಕೊಳ್ಳುತ್ತೇನೆ.

ಹಾಸ್ಟೆಲಿನಲ್ಲಿಯೂ ಹೀಗೆಯೇ. ಬೆಳಗಿನ ಜಾವ ಏಳಬೇಕೆಂದು ನನಗೂ ನನ್ನ

ರೂಂಮೇಟಿಗೂ ಆಸೆಯೇನೋ ಇತ್ತು. ಆದರೆ ಪ್ರತಿನಿತ್ಯವೂ ಅಲಾರಂಗೆ ಕೆಳಗಿವಿ ಮಾಡಿ ಮಲಗಿಬಿಡುತ್ತಿದ್ದೆವು. ಪರೀಕ್ಷೆ ಹತ್ತಿರ ಬಂದಂತೆ ನಮ್ಮಲ್ಲಿ ಒಂದು ಒಪ್ಪಂದವಾಯಿತು. ಬೆಳಗಿನ ಜಾವ ಯಾರು ಮೊದಲು ಏಳುತ್ತಾರೋ ಅವರು ಇನ್ನೊಬ್ಬರನ್ನು ಮೂರು ಸಲ ಕೂಗಬೇಕು. ಆದರೂ ಏಳದಿದ್ದರೆ ಒಂದು ಬೋಸಿ ತಣ್ಣೀರನ್ನು ನಿರ್ದಾಕ್ಷಿಣ್ಯವಾಗಿ ಮಲಗಿದವನ ಮುಖಕ್ಕೆ ಸುರಿದು ಎಬ್ಬಿಸಬೇಕು. ಇದು ಈ ಒಪ್ಪಂದದ ಸಾರಾಂಶ. ಆದರೆ ಆ ಒಪ್ಪಂದದಿಂದ ನನಗೆ ಬಹಳ ನಷ್ಟವಾಯಿತು ಎಂದು ಹೇಳಬೇಕಾಗಿಲ್ಲವಷ್ಟೆ!

ಅಂದಿನಿಂದ ಬೆಳಗಿನ ಜಾವದ ನನ್ನ ಶತ್ರುವೆಂದರೆ ನನ್ನ ರೂಂಮೇಟಿನ ಅಲಾರಂ ಗಡಿಯಾರ. ಉಳಿದ ಸಮಯಗಳಲ್ಲಿ ಗಡಿಯಾರದ ನಿಷ್ಠುರ ಕಾಲನಿಯಮವನ್ನು ನಾನು ಮೆಚ್ಚಿಕೊಂಡರೂ ಬೆಳಗಿನ ಜಾವದಲ್ಲಿ ಮಾತ್ರ ಅದರ ದಬ್ಬಾಳಿಕೆಯನ್ನು ಪ್ರತಿಭಟಿಸಬೇಕು. ಬ್ರಾಹ್ಮೀ ಮುಹೂರ್ತದಲ್ಲಿ ನಮ್ಮ ಸುಂದರ ಕನಸುಗಳ ಧ್ವಂಸಕನಾಗಿ ಸೈತಾನನಂತೆ ಈ ಗಡಿಯಾರ ಒಂದೇ ಸಮನೆ ಕೀರಲು ಕಂಠದಲ್ಲಿ ಹೊಡೆದುಕೊಳ್ಳುತ್ತದೆ. ನನಗೆ ಅದರ ಕುತ್ತಿಗೆಯನ್ನು ಹಿಸುಕಿ ಮಹಡಿಯಿಂದ ಕೆಳಗೆ ಆದಷ್ಟು, ದೂರ ಬಿಸಾಡಬೇಕು ಎನ್ನುವಷ್ಟು ಕೋಪ ಬರುತ್ತದೆ! ಅಥವಾ ಮಲಗಿದ್ದಂತೆಯೇ ಅದನ್ನು ಒದ್ದು 'ಹುಷಾರ್ ನಾನು ಗುಲಾಮನಲ್ಲ' ಎಂದು ಕೂಗೋಣ ಎನ್ನಿಸುತ್ತದೆ. ಆದರೆ ಗಡಿಯಾರ ನನ್ನದಲ್ಲ, ನನ್ನ ಗೆಳೆಯನದು. ಬಹಳ ದುಬಾರಿಯದು. ಅದೂ ಅಲ್ಲದೆ ಎದ್ದು ಎಸೆಯುವಷ್ಟು ಅಥವಾ ಒದೆಯುವಷ್ಟು ಚಟುವಟಿಕೆ ನನ್ನಲ್ಲಿದ್ದಿದ್ದರೆ ನಾನು ಎಂದೋ ಎದ್ದು ಕುಳಿತಿರುತ್ತಿದ್ದೆ. ಮೈಗಳ್ಳತನದಿಂದ ಅಥವಾ ಪೂರ್ತಿ ಎಚ್ಚರವಾದೀತು ಎಂಬ ಭಯದಿಂದ ನಾನು ಗಡಿಯಾರದ ಮೇಲೆ ಕಾರ್ಯಾಚರಣೆ ನಡೆಸಿಲ್ಲ.

ಸುಮ್ಮನೆ ಏಳುವುದಾದರೆ ಏಳಬಹುದೇನೋ! ಏಳುವ ಶಿಕ್ಷೆಯನ್ನು ಸಹಿಸುವುದೇ ಕಷ್ಟ. ಇನ್ನು ಎದ್ದು ಓದಬೇಕಂತೆ! ವಿದ್ಯಾರ್ಥಿಗಳಿಗೆ ರೇಗುವುದಿಲ್ಲವೇ? ವಿದ್ಯಾರ್ಥಿಗೆ ಗಡಿಯಾರದ ಮೇಲೆ ಕೋಪ ಬರಲು ಇನ್ನೂ ಒಂದು ಕಾರಣವಿದೆ. ಅಪ್ಪ, ಅಮ್ಮ, ಅಣ್ಣ, ಮಾವ ಇವರೆಲ್ಲಾ ವಿದ್ಯಾರ್ಥಿಯನ್ನು ಸೋಮಾರಿ, ದಡ್ಡ ಎಂದು ಮೂದಲಿಸಿ ಆನಂದಪಡುತ್ತಾರೆ. ಕಾಲೇಜಿನಲ್ಲಿ ಸದಾ ಓದುವ ಕೆಲವು 'ಕುಡುಮಿ' ವಿದ್ಯಾರ್ಥಿಗಳಿಂದಲೂ ಇವರಿಗೆ ಆಗಾಗ ಪರ್ಯಾಯವಾಗಿ ತೇಜೋಭಂಗವಾಗುವುದುಂಟು. ಇನ್ನು ಮೇಷ್ಟರುಗಳು, ವಾರ್ಡನರು ಎಲ್ಲರೂ ಎದುರಿಗೆ ಸಿಕ್ಕಿದಾಗಲೆಲ್ಲಾ 'ಹುಡುಗರ ಕರ್ತವ್ಯಗಳು ಜವಾಬ್ದಾರಿಗಳು' ಇದನ್ನು ಕುರಿತು ಉದ್ದುದ್ದನೆಯ ಭಾಷಣಗಳನ್ನು ಕೊರೆದು ತಲೆಚಿಟ್ಟು ಹಿಡಿಯುವಂತೆ ಮಾಡಿರುತ್ತಾರೆ. ಈ ಎಲ್ಲಾ ಸಹಜೀವಿಗಳ ಕಾಟ ಸಾಲದದೆಂದು ಬೆಳಗಿನ ಜಾವದಲ್ಲಿ ಗಡಿಯಾರವೂ ಕೊರಳುಬ್ಬಿಸಿ ಕೇಕೆ ಹಾಕಿ ರೇಗಿಸಿದರೆ ವಿದ್ಯಾರ್ಥಿಗೆ ಹೇಗಾಗಬೇಕು?

ನಿಜವಾಗಿ ನೋಡಿದರೆ ಬೆಳಗಿನ ಜಾವ ಏಳುವ ವಿಷಯದಲ್ಲಿ ವಿದ್ಯಾರ್ಥಿಗಳಿಗಿರಲಿ ಅವರ ತಂದೆ, ಅಣ್ಣ ಇವರುಗಳಿಗೆ ಆಸಕ್ತಿ ಇರುವುದಿಲ್ಲ. ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ತಾಯ್ತಂದೆಗಳು ಎಬ್ಬಿಸಿ ಗೋಳುಹುಯ್ದುಕೊಳ್ಳುತ್ತಿದ್ದುದರಿಂದ ಅದರ ಸೇಡನ್ನು ತೀರಿಸಿಕೊಳ್ಳಲು ಹಾಗೆ ಮಾಡುತ್ತಾರೆ ಅಷ್ಟೆ! ತಂದೆ ತಾಯಿಗಳಿರಲಿ ಮೈಸೂರು ದೇಶದಲ್ಲಿ ದೇವರು ಕೂಡ ಏಳು ಗಂಟೆಗೆ ಏಳುವುದಿಲ್ಲ. ಆಕಾಶವಾಣಿಯಲ್ಲಿ ಏಳು ನಾರಾಯಣ, ಏಳು ಲಕ್ಷ್ಮೀರಮಣ, ಏಳು ಗಿರಿಯೊಡೆಯ, ಏಳಯ್ಯ ಬೆಳಗಾಯಿತು! ಎಂದು ಬಗೆ ಬಗೆಯಾಗಿ ಕೂಡಿ ಉದಯರಾಗವನ್ನು ಹಾಡಿ ಎಬ್ಬಿಸಲು ಯತ್ನಿಸುತ್ತಾರೆ. ಹೊತ್ತು ಏರಿ, ಕತ್ತಲು ಆರಿ, ಸುತ್ತಲೂ ಕಾಗೆಗಳು ಅರಚಿ ತಣ್ಣಗಾದ ಮೇಲೂ ದೇವರು ಏಳದಿದ್ದರೆ ಭಕ್ತರು ಆಕ್ಷೇಪಣೆ ಮಾಡದೆ ಭಕ್ತಿಯಿಂದ ಮತ್ತೆ ಮತ್ತೆ ರಾಗವಾಗಿ ಹೆಸರು ಹಿಡಿದು ಕರೆದು ಎಬ್ಬಿಸುತ್ತಾರೆ. ಆದರೆ ವಿದ್ಯಾರ್ಥಿಗಳು 5.30 ಕ್ಕೆ ಏಳುವುದು ಸ್ವಲ್ಪ ತಡವಾದರೆ ಅಪ್ಪ, ಅಮ್ಮಂದಿರು ಗಡವ ಏಳೋ ಕಂಡಿದೀನಿ, ಎದ್ದು ಓದಿಕೋ ಎಂದು (ನಿದ್ದೆಗಣ್ಣಿನಲ್ಲೇ) ಆಶೀರ್ವದಿಸುತ್ತಾರೆ. ಆದರೂ ಮಕ್ಕಳು ಏಳದಿದ್ದರೆ ಹಾಳಾಗಿ ಹೋಗು ಎಂದು ಬಾಯಿ ತುಂಬಾ ಹರಸಿ ತಾವು ಮಲಗಿ ಬಿಡುತ್ತಾರೆ.

ಬೆಳಗಿನ ಜಾವ ಏಳಬೇಕೆನ್ನುವವರು, ಹಾಗೆ ಏಳದಿದ್ದವರನ್ನು ಸೋಮಾರಿಗಳ ಗುಂಪಿಗೆ ಸೇರಿಸಿ, ತಾವು ಬಹಳ ಕಾರ್ಯದಕ್ಷರೆಂದು ಕೊಚ್ಚಿಕೊಳ್ಳುತ್ತಾರೆ. The early bird catches the worm (ಬೇಗ ಏಳುವ ಹಕ್ಕಿ ಸುಲಭವಾಗಿ ಹುಳಗಳನ್ನು ಹಿಡಿದು ಆಹಾರ ದಕ್ಕಿಸಿಕೊಳ್ಳುತ್ತದೆ.) ಎಂಬ ಗಾದೆಯನ್ನು ಆಗಾಗ ಉದ್ಧರಿಸಿ, ಈ ಜನ ತಮ್ಮ ಕುಲದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಈ ಗಾದೆಯಲ್ಲಿ ಬರುವ ಹಕ್ಕಿಯ ಬಗ್ಗೆ ನನಗೆ ದ್ವೇಷವಿಲ್ಲ. ಅದು ಬೇಗ ಹುಳುವನ್ನು ಹಿಡಿಯಿತು. ಈ ದೃಷ್ಟಿಯಿಂದ ಅದು ಬೇಗ ಎದ್ದದ್ದು ಸಾರ್ಥಕ. ಆದರೆ ನನಗೆ ಆ ಬಡಹುಳುವಿನ ನಿರ್ಭಾಗ್ಯ ಸ್ಥಿತಿಯನ್ನು ಕಂಡು ಸಂಕಟವಾಗುತ್ತದೆ. ಈ ಸಂಪತ್ತಿಗೆ ಅದು ಬೆಳಗಿನ ಜಾವಕ್ಕೆ ಎದ್ದು ತನ್ನ ದೇಹವನ್ನು ಹಕ್ಕಿಗೆ ಅರ್ಪಿಸಿಕೊಂಡು ಹಕ್ಕಿಗೆ ಕೀರ್ತಿ ತಂದುಕೊಡಬೇಕಾಗಿತ್ತೆ? ಸೋಮಾರಿ ಎಂದು ಜಗತ್ತು ಬೈದರೂ ಚಿಂತೆಯಿಲ್ಲ ಎಂದುಕೊಂಡ ಆ ಹುಳು ಲಕ್ಷಣವಾಗಿ ಬೆಳಗಾಗುವವರೆಗೆ ಮಲಗಿರಬಾರದಾಗಿತ್ತೆ? ಇದರಿಂದ ಬೆಳಗಿನ ಜಾವದ ಬಗ್ಗೆ ನನ್ನ ತಿರಸ್ಕಾರ ಹೆಚ್ಚಾದೀತೇ ಹೊರತು ಬೇರೆಯಲ್ಲ. ಬೆಳಗಿನಲ್ಲಿ ಎದ್ದ ಕೂಡಲೇ ಇಂತಹ ವಿಪತ್ತಿಗೆ ಸಿಕ್ಕುವುದಕ್ಕಾಗಲೀ, ಇಂತಹ ಕ್ರೂರ ಬೇಟೆಗೆ ಹೊರಡುವುದಕ್ಕಾಗಲೀ ನನ್ನ ಮನಸ್ಸು ಒಪ್ಪುವುದಿಲ್ಲ.

'Dawn is the fountain head of light, hope and love' ಎಂದು ಒಬ್ಬ ಕವಿ ಹೊಗಳಿದ್ದಾನೆ. ಸಮಸ್ತ ಜೀವ ಜಾಲವೂ ನವಚೇತನ ಪಡೆದು ಮುಂದುವರಿಯಲು ಬೆಳಗಿನ

ಜಾವವೇ ಬಹಳ ಪ್ರಶಸ್ತವಾದ ಸಮಯವೆಂದು ಆತ ಹೇಳುತ್ತಾನೆ. ಬೆಳಗಿನ ಜಾವದಲ್ಲಿ ರಾತ್ರಿಯ ನಿಸ್ಸಾರ, ಭೀಕರ ಮೌನ ಕಳೆದ ಉಲ್ಲಾಸದಾಯಕವಾದ ಬೆಳಕು ಕಾಲಿಡುತ್ತದೆ. ಹಕ್ಕಿಗಳು ಆನಂದಗೀತೆ ಹಾಡುತ್ತಾ ಸಾಗುತ್ತವೆ. ತಂಗಾಳಿ ಮುದದಿಂದ ತೀಡುತ್ತದೆ. ಆದುದರಿಂದ ಅನಂತವಾದ ಹಾಗೂ ದಿವ್ಯವಾದ ಭಾವನೆಗಳು ತಮ್ಮ ತಲೆಯೊಳಗೆ ತೂರುವುದು ಬೆಳಗಿನ ಜಾವದಲ್ಲಿಯೇ ಎಂದು ಜನ ನಂಬಿದ್ದಾರೆ. ಇವರೆಲ್ಲರ ನಂಬಿಕೆ ಬುಡ ಭದ್ರವಿಲ್ಲವೆಂದು ಯಾರು ಬೇಕಾದರೂ ಸಾಧಿಸಬಲ್ಲರು. 'ಆತ್ಮ ನಿದ್ದೆಯ ಮೇಲುದನ್ನು ಹೊದ್ದು' ತನ್ನ ಸಹಜಸ್ಥಿತಿಯಲ್ಲಿ ಸ್ವತಂತ್ರವಾಗಿ ಬೆಚ್ಚಗೆ ಮಲಗಿದ್ದಾಗ ಅದನ್ನು ಬಡಿದೆಬ್ಬಿಸಿ, ದೇಹವನ್ನು ದಂಡಿಸಿ, ಕಣ್ಣರೆಪ್ಪೆಗಳ ಬಾಗಿಲಿಗೆ ಬಲವಾಗಿ ಹಾಕಿರುವ ಮುಚ್ಚುಬೀಗವನ್ನು ಮುರಿದು ಮನುಷ್ಯನ ಬದುಕಿನ ಅತ್ಯಂತ ಪ್ರಮುಖ ಕಾಲವನ್ನು ಹಾಳು ಮಾಡುವುದು ಸರಿಯೆಂದು ನಾನಂತೂ ಒಪ್ಪುವುದಿಲ್ಲ.

ವಿದ್ಯಾರ್ಥಿಗಳನ್ನು ಬಿಟ್ಟರೆ, ಇನ್ನು ಬೆಳಗಿನ ಜಾವ ಏಳುವ ಅಲ್ಪಸಂಖ್ಯಾತ ಮಿತ್ರರು ಕೆಲವರಿದ್ದಾರೆ. ಬೆಳಗಿನ ಜಾವ ಏಳಲೇಬೇಕಾದ ನತದೃಷ್ಟರೆಂದರೆ ಕೆಲವು ಕಾರ್ಖಾನೆ ಕೆಲಸಗಾರರು. ಉದರಂಭರಣಕ್ಕಾಗಿ ಅವರು (ಇಷ್ಟವಿರಲಿ ಇಲ್ಲದಿರಲಿ) ಕರ್ತವ್ಯ ಪ್ರಜ್ಞೆಯಿಂದ ಏಳುತ್ತಾರೆಯೇ ಹೊರತು ಸ್ವ–ಇಚ್ಛೆ ಪ್ರೇರಣೆಗಳಿಂದ ಅಲ್ಲ. ಇನ್ನು ಕೆಲವರು 'ಶಿಸ್ತಿನ ಸಿಪಾಯಿ' ಗಳೆಂದು ಹೆಮ್ಮೆಪಡುವ ನಾಗರಿಕರು. ಇವರು ನಾಲ್ಕು ಗಂಟೆಗೆ ಏಳುತ್ತಾರೆ. ವ್ಯಾಯಾಮ ಸ್ನಾನಾದಿಗಳನ್ನು ಮಾಡಿ ಶತಪಥ ಹಾಕುತ್ತಾ ಓದುತ್ತಾ ಕಾಲ ಕಳೆಯುತ್ತಾರೆ ಅಥವಾ ಒಂದೆರಡು ಮೈಲಿಗಳಷ್ಟು ಗಾಳಿ ಸವಾರಿ ಮಾಡಿಕೊಂಡು ಬರುತ್ತಾರೆ. ಇಂಥವರು ಬಹಳ ಸ್ವಲ್ಪ ಮಂದಿ. Pillars of Society (ಸಮಾಜದ ಸ್ತಂಭಗಳು) ಎಂದು ಕರೆಸಿಕೊಳ್ಳುವುದಕ್ಕಾಗಿ ಇವರು ತಮ್ಮ ಬೆಳಗಿನ ಜಾವದ ನಿದ್ರಾಸುಖವನ್ನು ಹೋಮ ಮಾಡುತ್ತಾರೆ. ಅಲ್ಲದೆ ಬೇಗ ಎದ್ದು ಲವಲವಿಕೆಯಿಂದ ಓಡಾಡುವುದರಿಂದ ತಮ್ಮ ಆರೋಗ್ಯ ವರ್ಧಿಸಿ ಬೇಗ ತಾವು ದೀರ್ಘಾಯುಗಳೂ ಬಲಿಷ್ಠರೂ ಆಗಬಹುದೆಂಬ ಕಲ್ಪನೆಯ ಭೂತ ಅವರನ್ನು ಹೊಕ್ಕು ಈ ಕೆಲಸ ಮಾಡಿಸುತ್ತದೆ. ನಾವೆಲ್ಲರೂ ಸಮಾಜದ ಸ್ತಂಭಗಳಾಗುವುದು ಬೇಡ. ಆದುದರಿಂದ ಅಂಥ ಕೆಲವರಿಗೇ ಇದನ್ನು ಬಿಟ್ಟು ಕೊಡೋಣ. ಇವರನ್ನು ಬಿಟ್ಟರೆ ಇನ್ನು ಬೆಳಗಿನ ಜಾವ ಏಳುವವರೆಂದರೆ ಕೆಲವರು ಮುದುಕರು ಮತ್ತು ಧಾರ್ಮಿಕರು. ಮುದುಕರು 'ಅಭಾವ ವೇದಾಂತ' ವಾದುದರಿಂದ ಅವರನ್ನು ಕೈಬಿಡಬಹುದು. ಧಾರ್ಮಿಕರು ಬೆಳಗಿನ ಜಾವಕ್ಕೇ ಎದ್ದು ಕೈಯಲ್ಲಿ ಒಂದು ಕೋಲನ್ನೂ ಬುಟ್ಟಿಯನ್ನೂ ಹಿಡಿದು ಹೊರಗೆ ಸುತ್ತಾಡಿ ಬರಲು ಹೊರಡುತ್ತಾರೆ. ಸುತ್ತಾಟಕ್ಕೆ ಸುತ್ತಾಟವೂ ಆಯಿತು. ಅದರ ಜತೆಗೆ ರಸ್ತೆಯ ಬದಿಯಲ್ಲಿ ಅವರಿವರ ಮನೆಯ ಕಾಂಪೌಂಡಿನ ಸುತ್ತ ಬೆಳೆದ 'ಮಲ್ಲಿಕಾ, ಬಕುಲ,

ಚಂಪಕ' ಹೂವುಗಳನ್ನು (ಆ ಮನೆಯವರು ಏಳುವುದಕ್ಕೆ ಮೊದಲೇ) ಬಿಡಿಸಿಕೊಂಡು ಮನೆಗೆ ಬಂದು ವೈಭವದಿಂದ ದೇವರ ಪೂಜೆಯನ್ನು ನೆರವೇರಿಸುತ್ತಾರೆ. ಈ ಬಗೆಯ ಸ್ವಾರ್ಥ, ಈ ಬಗೆಯ ವಿವಿಧೋದ್ದೇಶ ಯೋಜನೆ ನನಗೆ ಹಿಡಿಸುವುದಿಲ್ಲ.

ವಿದ್ಯಾರ್ಥಿ ದೆಸೆಯಲ್ಲಿ ಆರಂಭವಾದ ನನ್ನ ಬೆಳಗಿನ ಜಾವದ ವೈರವನ್ನೂ ನಿದ್ರೆಯ ಸ್ನೇಹವನ್ನೂ ಈಗ ಶ್ರದ್ಧೆಯಿಂದ ಯಶಸ್ವಿಯಾಗಿ ಮುಂದುವರಿಸಿಕೊಂಡು ಬರುತ್ತಿದ್ದೇನೆ. ಮೊದಲಾದರೆ ಎದ್ದು ಓದಬೇಕು ಎಂಬ ಹೆದರಿಕೆಯಾದರೂ ಇರುತ್ತಿತ್ತು. ಈಗ ಅನಿರ್ಬಾಧಿತನಾಗಿ ನಿದ್ರೆಯ ಸ್ವಾತಂತ್ರ್ಯವನ್ನು ಚಲಾಯಿಸುತ್ತಿದ್ದೇನೆ. Blessings on him that the first invented sleep 'ಮೊತ್ತಮೊದಲ ನಿದ್ದೆಯನ್ನು ಪತ್ತೆ ಹಚ್ಚಿದ ಮಹಾನುಭಾವನಿಗೆ ಮಂಗಳವಾಗಲಿ' ಎಂಬ 'ಸಾಂಕೋ'ನ ಮಾತುಗಳು, 'ತುಂಬು ನಿದ್ರೆಯಿಂದ ದೇಹಕ್ಕೆ ಪರಮಾರೋಗ್ಯ' ಎಂಬ ರಾಜಶೇಖರನ ಮಾತುಗಳು ಮತ್ತು 'ಔಕುವುದು ಬಲುನಿದ್ದೆ' ಎಂಬ ಕುಮಾರವ್ಯಾಸನ ವಾಣಿ ನನ್ನ ನಿರ್ಧಾರಕ್ಕೆ ಸ್ಫೂರ್ತಿಯನ್ನು ತಂದುಕೊಟ್ಟಿದೆ.

## ಅ.ರಾ. ಮಿತ್ರ



ಅ.ರಾ. ಮಿತ್ರರವರು ೧೯೩೫ ರಲ್ಲಿ ಹುಟ್ಟಿದರು. ಇವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಳು ರಾಮಣ್ಣ ಮಿತ್ರ. ನವೋದಯದ ಅನಂತರದ ಕಾಲದ ಪ್ರಮುಖ ಹಾಸ್ಯ ಬರೆಹಗಾರರು. ಇವರು ನಿವೃತ್ತ ಪ್ರಾಧ್ಯಾಪಕರು. ಇವರ ಪ್ರಮುಖ ಪ್ರಬಂಧ ಸಂಕಲನಗಳು 'ಬಾಲ್ಕನಿಯ ಬಂಧುಗಳು', 'ಯಾರೋ ಬಂದಿದ್ದರು' ಮತ್ತು 'ಸಂಕಲ್ಪಗಳು' 'ಒಳನೋಟಗಳು' ವಚನಕಾರರು ಮತ್ತು 'ಶಬ್ದ ಕಲ್ಪ' ವಿಮರ್ಶಾ ಗ್ರಂಥಗಳು. ಛಂದೋಮಿತ್ರ – ಛಂದಶ್ಶಾಸ್ತ್ರವನ್ನು ಸರಸವಾಗಿ ಪರಿಚಯಿಸುವ ವಿಶಿಷ್ಟ ಕೃತಿ. ಈ ಭಾಗವನ್ನು ಮಧುರಕನ್ನಡ ಕೃತಿಯಿಂದ ಆರಿಸಲಾಗಿದೆ.

### ಚಟುವಟಿಕೆಗಳು

- ಉತ್ತಮ ಆರೋಗ್ಯಕ್ಕೆ ನಿಗದಿತ ಸಮಯದ ನಿದ್ದೆ ಬೇಕು. ಆದರೆ ಉದಾಸೀನತೆಯೇ ಅತಿ ನಿದ್ದೆಗೆ ಕಾರಣವಾಗುತ್ತದೆ ಎಂಬುದನ್ನು ಹರಟೆಯ ಆಧಾರದಲ್ಲಿ ಬರೆಯಿರಿ.

- ಬೆಳಗಿನ ಜಾವದಲ್ಲಿ ಏಳುವ ಹವ್ಯಾಸವಿಲ್ಲದವರು ಕಳೆದುಕೊಳ್ಳುವ ಸ್ವಾರಸ್ಯಕರ ಘಟನೆಗಳನ್ನು ಲೇಖಕರು ನಿರೂಪಿಸಿದ ಬಗೆಯನ್ನು ತಿಳಿಸಿರಿ.
- ಆಧುನಿಕ ಯಾಂತ್ರಿಕ ಜೀವನದ ತರಾತುರಿಯಲ್ಲಿ ಬೆಳಗಿನ ಸೊಬಗನ್ನು ಆಸ್ವಾದಿಸುವ ಸದವಕಾಶವನ್ನು ಬಹುತೇಕ ಮಂದಿ ಕಳೆದುಕೊಳ್ಳುತ್ತಿದ್ದಾರೆಯೇ? – ಈ ವಿಷಯದ ಆಧಾರದಲ್ಲಿ ವಿಚಾರಗೋಷ್ಠಿಯಲ್ಲಿ ಮಂಡಿಸಲು ಪ್ರಬಂಧವೊಂದನ್ನು ತಯಾರಿಸಿರಿ.
- 'ಬೆಳೆವ ಸಿರಿ ಮೊಳಕೆಯಲ್ಲಿ' ಎಂಬ ಗಾದೆಮಾತಿನ ಆಧಾರದಲ್ಲಿ 'ಎಳವೆಯಲ್ಲಿಯೆ ಬೆಳಗಿನ ಜಾವದಲ್ಲಿ ಏಳುವ ಹವ್ಯಾಸವನ್ನು ಬೆಳೆಸಬೇಕು' ಎನ್ನುವುದರ ಕುರಿತು ನಿಮ್ಮ ಅಭಿಪ್ರಾಯವನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.
- 'ಏಳಯ್ಯಾ ಬೆಳಗಾಯಿತು' ಹರಟೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
- 'ಕೆಟ್ಟುಹೋದ ರಸ್ತೆಗಳು' ಎಂಬ ವಿಷಯದಲ್ಲಿ ಒಂದು ಹರಟೆ (ಲಲಿತ ಪ್ರಬಂಧ) ವನ್ನು ಬರೆದು ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಿರಿ. ಇದೇ ವಿಷಯದಲ್ಲಿ ಒಂದು ವೈಚಾರಿಕ (ಗಂಭೀರ) ಲೇಖನವೊಂದನ್ನು ಬರೆದು ಎರಡರ ವ್ಯತ್ಯಾಸಗಳನ್ನು ಕುರಿತು ತರಗತಿಯಲ್ಲಿ ಚರ್ಚೆ ನಡೆಸಿರಿ.

## ಭಾಷಾಭ್ಯಾಸ


- ಕ್ರಿಯಾವಿಶೇಷಣ : ಜೋರಾಗಿ ಉಚ್ಚರಿಸು – ಇಲ್ಲಿ ಜೋರಾಗಿ ಎಂಬುದು ಅವ್ಯಯ. ಇದು ಕ್ರಿಯೆಯ ವಿಶೇಷವನ್ನು ಸೂಚಿಸುತ್ತದೆ. ಈ ರೀತಿಯ ಪದಗಳನ್ನು ಪಟ್ಟಿ ಮಾಡಿರಿ.
- ಗಡಿಯಾರದ ನಿಷ್ಠುರ ಕಾಲನಿಯಮವನ್ನು ನಾನು ಮೆಚ್ಚಿಕೊಂಡರೂ ಬೆಳಗಿನ ಜಾವದಲ್ಲಿ ಮಾತ್ರ ಅದರ ದಬ್ಬಾಳಿಕೆಯನ್ನು ಪ್ರತಿಭಟಿಸುವೆನು. ಇದು ಮಿಶ್ರವಾಕ್ಯ. ಈ ವಾಕ್ಯವನ್ನು ಸರಳ ವಾಕ್ಯಗಳಾಗಿ ವಿಂಗಡಿಸಿ ಬರೆಯಿರಿ.

## ಹೆಚ್ಚಿನ ಓದಿಗೆ

ತಡವಾಗಿ ಏಳುವುದು (ಲೇಖನ) – ಸುರಗಿಸುರ ಹೊನ್ನೆ

# ಪತ್ರಿಕೋದ್ಯಮ

ಏಕಕಾಲದಲ್ಲಿ ಅನೇಕ ಜನರನ್ನು ತಲುಪುವ ಮಾಧ್ಯಮಗಳಿಗೆ ಸಮೂಹ ಮಾಧ್ಯಮಗಳೆಂದು ಹೆಸರು. ಸಮೂಹ ಸಂವಹನ ಮಾಧ್ಯಮಗಳಲ್ಲಿ ಪತ್ರಿಕೋದ್ಯಮಕ್ಕೆ ವಿಶಿಷ್ಟ ಸ್ಥಾನವಿದೆ. ಆಧುನಿಕ ಕಾಲದಲ್ಲಿ ರೇಡಿಯೋ, ದೂರದರ್ಶನ, ಗಣಕಯಂತ್ರ ಮೊದಲಾದ ವಿದ್ಯುನ್ಮಾನ ಮಾಧ್ಯಮಗಳ ಪ್ರಭಾವ ಹೇರಳವಾಗಿದ್ದರೂ, ಮುದ್ರಣ ಮಾಧ್ಯಮವಾಗಿರುವ ಪತ್ರಿಕೆಗಳ ಸ್ಥಾನಕ್ಕೆ ಯಾವುದೇ ಚ್ಯುತಿ ಬಂದಿಲ್ಲ. ಮುದ್ರಿತ ಪತ್ರಿಕೆಗಳನ್ನು ಎಲ್ಲಿ ಯಾವಾಗ ಬೇಕಾದರೂ ಓದಬಹುದು, ಸಂಗ್ರಹಿಸಿಡಬಹುದು. ಬೇಕಾದ ಕಡೆಗೆ ಕೊಂಡೊಯ್ಯಬಹುದು. ಬೆಲೆಯೂ ಅತಿ ಕಡಿಮೆ. ಇಂತಹ ಯಾವುದೇ ಸೌಲಭ್ಯಗಳು ವಿದ್ಯುನ್ಮಾನ ಮಾಧ್ಯಮಗಳಿಗಿಲ್ಲ. ಹೀಗಾಗಿ ಮುದ್ರಣ ಮಾಧ್ಯಮಗಳು ಇಂದಿಗೂ ಜೀವಂತವಾಗಿವೆ.



ಪತ್ರಿಕೋದ್ಯಮದ ಹುಟ್ಟು, ಬೆಳವಣಿಗೆ, ಪರಂಪರೆಯ ಇತಿಹಾಸ ರೋಚಕವಾದುದು. 15ನೇ ಶತಮಾನದಲ್ಲಿ ಇಂಗ್ಲೇಂಡಿನ ಕಾಫಿಹೌಸ್‌ಗಳಲ್ಲಿ ಜನರನ್ನು ಆಕರ್ಷಿಸುವುದಕ್ಕಾಗಿ ಸುದ್ದಿ ಪುಸ್ತಕಗಳ ಸೃಷ್ಟಿಯಾದುವು. ಇವುಗಳನ್ನೇ ಆಧುನಿಕ ಪತ್ರಿಕೋದ್ಯಮದ ಆರಂಭ ಎಂದು ವಿದ್ವಾಂಸರು ಗುರುತಿಸಿಕೊಂಡಿದ್ದಾರೆ. ಮುದ್ರಣ ಕಲೆಯ ಆವಿಷ್ಕಾರ ಪತ್ರಿಕೋದ್ಯಮದ ಬೆಳವಣಿಗೆಯಲ್ಲಿ ಒಂದು ಮಹತ್ವದ ಮೈಲಿಗಲ್ಲು ಎಂದು ಹೇಳಬಹುದು. ಏಕಕಾಲದಲ್ಲಿ ಪತ್ರಿಕೆಯ ಸಾವಿರಾರು ಪ್ರತಿಗಳನ್ನು ಅಚ್ಚು ಹಾಕಿಸಿ ವಿತರಣೆ ಮಾಡಲು ಇದರಿಂದ ಸಾಧ್ಯವಾಯಿತು. ಆರಂಭದಲ್ಲಿ ಕಲ್ಲಚ್ಚಿನ ಮುದ್ರಣ


ಯಂತ್ರಗಳಿದ್ದುವು. 16ನೇ ಶತಮಾನದ ಮಧ್ಯಭಾಗದಲ್ಲಿ ಜರ್ಮನಿಯ ಜೋಹಾನ್ಸ್ ಗಟೆನ್ ಬರ್ಗ್ ಎಂಬವನು ಚಲಿಸುವ ಮೊಳೆಗಳ ಅಚ್ಚುಕೂಟವನ್ನು ಕಂಡುಹಿಡಿದನು. ಇದರಿಂದಾಗಿ ಪತ್ರಿಕೋದ್ಯಮದ ಬೆಳವಣಿಗೆಯ ವೇಗ ಹೆಚ್ಚಾಯಿತು. ವೈವಿಧ್ಯಮಯವಾದ ಪತ್ರಿಕೆಗಳು ಹುಟ್ಟಿಕೊಂಡುವು. ದಿನಪತ್ರಿಕೆಗಳು, ವಾರಪತ್ರಿಕೆಗಳು, ಪಾಕ್ಷಿಕ ಪತ್ರಿಕೆಗಳು, ಮಾಸ ಪತ್ರಿಕೆಗಳು, ಷಾಣ್ಮಾಸಿಕಗಳು, ವಾರ್ಷಿಕ ಪತ್ರಿಕೆಗಳು ಎಂದು ವಿಷಯಕ್ಕೆ ಹೊಂದಿಕೊಂಡು ಸುದ್ದಿ, ಸಾಹಿತ್ಯ, ಕಲೆ, ಕ್ರೀಡೆ, ಕೃಷಿ, ಸಿನಿಮಾ, ಫ್ಯಾಶನ್ ವಿವಿಧ ವಿಷಯಗಳು ಎಂದೂ ಪತ್ರಿಕೆಗಳನ್ನು ವರ್ಗೀಕರಿಸಬಹುದು.

ಪತ್ರಿಕೆಗಳಿಗೆ ಬರೆಯುವ, ಸಂಪಾದಿಸುವ ಮತ್ತು ಅವುಗಳ ಆಡಳಿತಗಳನ್ನು ನಡೆಸುವ ಉದ್ಯಮವೇ ಪತ್ರಿಕೋದ್ಯಮವೆಂಬುದು ಪ್ರಸಿದ್ಧ ವೆಬ್‌ಸ್ಟರ್ ನಿಘಂಟಿನ ವಿವರಣೆ. ಆದಕಾರಣ ಪತ್ರಿಕೋದ್ಯಮವು ಹಲವಾರು ವಿದ್ಯಾವಂತರಿಗೆ ಉದ್ಯೋಗ ನೀಡುವ ವಿಶಾಲ ಕ್ಷೇತ್ರವಾಗಿ ಬೆಳೆದಿದೆ. ಒಂದು ಪತ್ರಿಕಾ ಸಂಸ್ಥೆಯಲ್ಲಿ ಆಡಳಿತ ವಿಭಾಗ, ಸಂಪಾದಕೀಯ ವಿಭಾಗ ಮತ್ತು ಮುದ್ರಣ ವಿಭಾಗ ಎಂಬ ಮೂರು ಮುಖ್ಯ ಘಟಕಗಳಿರುತ್ತವೆ. ಇವುಗಳಲ್ಲಿ ಸಂಪಾದಕೀಯ ವಿಭಾಗವು ಪತ್ರಿಕೆಯ ಜೀವಾಳ. ಸಂಪಾದಕೀಯ ವಿಭಾಗದ ಮುಖ್ಯಸ್ಥ ಸಂಪಾದಕನಾಗಿರುತ್ತಾನೆ. ಅವನ ಕೈಕೆಳಗೆ ಸುದ್ದಿ ಸಂಪಾದಕರು, ಉಪಸಂಪಾದಕರು, ವರದಿಗಾರರು ಮೊದಲಾದವರು ಕೆಲಸ ಮಾಡುತ್ತಾರೆ. ಪತ್ರಿಕೆಯ ಸುದ್ದಿ ಸಂಗ್ರಹದಿಂದ ತೊಡಗಿ, ಅವುಗಳನ್ನು ಪರಿಷ್ಕರಿಸಿ, ಯೋಗ್ಯ ಪುಟಗಳಲ್ಲಿ ಪ್ರಕಟಿಸುವ ಕೆಲಸವನ್ನು ಅವರು ಮಾಡುತ್ತಾರೆ. ಆದುದರಿಂದ ಸಂಪಾದಕೀಯ ಬಳಗದಲ್ಲಿ ದುಡಿಯುವ ಎಲ್ಲರನ್ನೂ ಪತ್ರಕರ್ತರು ಎಂದು ಕರೆಯುತ್ತಾರೆ.

ಪತ್ರಕರ್ತರು ಪತ್ರಿಕೆಯ ಜೀವನಾಡಿಯಂತೆ. ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ಸುದ್ದಿಗಳನ್ನು ಗುರುತಿಸುವ, ಸಂಗ್ರಹಿಸುವ, ಬರೆಯುವ ಕೌಶಲ್ಯ ಅವರಿಗಿರಬೇಕು. ಮಾತ್ರವಲ್ಲ, ಸಮಾಜದ ಲೋಪದೋಷಗಳನ್ನು ಗುರುತಿಸಿ, ಅವುಗಳನ್ನು ತಿದ್ದುವ, ತೀಡುವ ಕೆಲಸವನ್ನು ಅವರು ಮಾಡಬೇಕು. ಸಮಾಜದಲ್ಲಿ ವ್ಯಕ್ತಿಯಾಗಿ ಪತ್ರಕರ್ತ ಎಲ್ಲರಲ್ಲಿ ಒಬ್ಬ. ಆದರೆ ಪತ್ರಿಕೋದ್ಯಮಕ್ಕೆ ಹಲವಾರು ಸಾಮಾಜಿಕ ಜವಾಬ್ದಾರಿಗಳಿವೆ. ಪತ್ರಿಕೋದ್ಯಮದ ಸಾಮಾಜಿಕ ಜವಾಬ್ದಾರಿಗಳು ನಿಜವಾದ ಅರ್ಥದಲ್ಲಿ ಪತ್ರಕರ್ತನ ಹೆಗಲ ಮೇಲಿವೆ. ತನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ಬರೆಯುವುದು, ತನ್ನ ವೃತ್ತಿಯ ಘನತೆಯನ್ನೂ, ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವುದು, ಯಾವಾಗಲೂ ಸಮಾಜದ ಹಿತಕ್ಕೆ ಬದ್ಧನಾಗಿ ಬರೆಯುವುದು ಮತ್ತು ಬದುಕುವುದು ಪತ್ರಕರ್ತನ ನೀತಿಯಾಗಬೇಕು. ಪತ್ರಿಕೆಗಳು ಜಗತ್ತಿನಾದ್ಯಂತ ಎಷ್ಟೊ

ಸರಕಾರಗಳನ್ನು ಉರುಳಿಸಿವೆ. ಹೊಸ ಸರಕಾರಗಳನ್ನು ರೂಪಿಸಿವೆ. ನಿಷ್ಪಕ್ಷವಾದ ಪತ್ರಿಕೋದ್ಯಮಕ್ಕೆ ಮಾತ್ರ ಇದು ಸಾಧ್ಯ. ಆದುದರಿಂದಲೇ ಖಡ್ಗಕ್ಕಿಂತಲೂ ಲೇಖನ ಹರಿತ ಎಂಬ ಮಾತು ಜನಜನಿತವಾಗಿದೆ.


ಸುದ್ದಿ ಎಂದರೇನು? ಎಂಬ ಪ್ರಶ್ನೆಗೆ ಉತ್ತರಿಸುವುದು ಅಷ್ಟು ಸುಲಭದ ಕೆಲಸವಲ್ಲ. ಸುದ್ದಿಯ ಬಗೆಗೆ ಅನೇಕ ವ್ಯಾಖ್ಯಾನಗಳು ಹುಟ್ಟಿಕೊಂಡಿವೆ. ಆದರೆ ಅವು ಯಾವುವೂ ಪರಿಪೂರ್ಣವಲ್ಲ. ಹೊಸದಾಗಿರುವುದು ಎಲ್ಲವೂ ಸುದ್ದಿಯೇ ಎಂಬುದು ಒಂದು ಹಳೆಯ ವ್ಯಾಖ್ಯಾನ. ಇಂಗ್ಲಿಷಿನಲ್ಲಿ ಸುದ್ದಿಗೆ NEWS ಎನ್ನುತ್ತಾರೆ. ಈ ನಾಲ್ಕು ಅಕ್ಷರಗಳು ನಾಲ್ಕು ದಿಕ್ಕುಗಳನ್ನು ಪ್ರತಿನಿಧಿಸುತ್ತವೆ. ಆದುದರಿಂದ ಸುದ್ದಿ ಎನ್ನುವುದು ಸರ್ವವ್ಯಾಪಿಯಾದುದು ಎಂಬುದು ಇನ್ನೊಂದು ವ್ಯಾಖ್ಯಾನ. ಸುದ್ದಿಗೆ ವಸ್ತುವಾಗದಿರುವ ಸಂಗತಿ ಈ ಜಗತ್ತಿನಲ್ಲಿ ಯಾವುದೂ ಇಲ್ಲ. ರಾಜಕೀಯ, ಅಪಘಾತ, ದುರಂತ, ಯುದ್ಧ ಮತ್ತು ಸಂಘರ್ಷ, ಆಹಾರ, ಆರೋಗ್ಯ, ಹವಾಮಾನ, ಕೃಷಿ, ಕ್ರೀಡೆ, ಧರ್ಮ, ಹಣಕಾಸು, ಪ್ರೇಮಕಾಮ – ಹೀಗೆ ಮಾನವನ ಆಸಕ್ತಿಯನ್ನು ಕೆರಳಿಸುವ ಸಂಗತಿಗಳೆಲ್ಲ ಸುದ್ದಿಗಳಾಗುತ್ತವೆ.



ಸುದ್ದಿಗಳನ್ನು ಜನರಿಗೆ ತಿಳಿಸುವುದು ಪತ್ರಿಕೆಗಳ ಮೊದಲ ಕರ್ತವ್ಯ, ಒಬ್ಬ ಪತ್ರಕರ್ತನು ಸಮಾಜದಿಂದ ಸುದ್ದಿಯನ್ನು ಆರಿಸಿ, ವರದಿಯ ರೂಪದಲ್ಲಿ ಬರೆದು, ಪತ್ರಿಕೆಗಳ ಮೂಲಕ ಮತ್ತೆ ಸಮಾಜಕ್ಕೆ ಒದಗಿಸುತ್ತಾನೆ. ಪತ್ರಿಕೆಗಳು ಜನಾಭಿಪ್ರಾಯವನ್ನು ರೂಪಿಸುತ್ತವೆ. ಪ್ರಜಾಪ್ರಭುತ್ವ ಮತ್ತು ಪತ್ರಿಕೋದ್ಯಮ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಮೂರು ಸ್ತಂಭಗಳು. ಪತ್ರಿಕೋದ್ಯಮವು ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭ ಎಂದು ಪರಿಗಣಿತವಾಗಿದೆ. ಸ್ವತಂತ್ರ ನಿರ್ಭೀತ ಪತ್ರಿಕೋದ್ಯಮವು ಜನಾಭಿಪ್ರಾಯವನ್ನು ರೂಪಿಸಿ, ಪ್ರಭುತ್ವ ಮತ್ತು ಪ್ರಜೆಗಳ ನಡುವಿನ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತದೆ. ದೇಶದ ಅಭಿವೃದ್ಧಿಗೆ ವೇಗವರ್ಧಕವಾಗಿ ಕೆಲಸ ಮಾಡುತ್ತದೆ. ಸರಕಾರದ ನೀತಿ, ನಡೆವಳಿಕೆಗಳು, ಯೋಜನೆಗಳು ಹಾಗೂ ಶಾಸನಗಳ ಕುರಿತು ಜನರಿಗೂ, ಜನರ ಪ್ರತಿಕ್ರಿಯೆಗಳನ್ನು ಸರಕಾರಕ್ಕೂ ಸಮರ್ಥವಾಗಿ ತಲುಪಿಸುವ ಕೆಲಸವನ್ನು ಪತ್ರಿಕೆಗಳು ಮಾಡಿದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಪಾಯ ಗಟ್ಟಿಯಾಗಬಲ್ಲುದು.

ಬೇರೆಲ್ಲ ಬರವಣಿಗೆಗಳಿಗಿಂತ ಪತ್ರಿಕೆಯ ಸುದ್ದಿ ಬರವಣಿಗೆಯು ಭಿನ್ನವಾಗಿದೆ. ಸುದ್ದಿ ಬರವಣಿಗೆಯಲ್ಲಿ 5W1H ಅಡಕವಾಗಿರಬೇಕು ಎಂಬುದು ಒಂದು ಪರಿಕಲ್ಪನೆ. ಏನು, ಎಲ್ಲಿ, ಯಾವಾಗ, ಯಾಕೆ, ಯಾರು ಮತ್ತು ಹೇಗೆ ಎಂಬ ವಿವರಗಳಿಲ್ಲದೆ ಯಾವ ಸುದ್ದಿಯೂ

ಪೂರ್ಣವಾಗದು. ಸುದ್ದಿ ಬರವಣಿಗೆಯ ಸಮಕಾಲೀನ ಶೈಲಿಯನ್ನು 'ತಲೆಕೆಳಗಾದ ಪಿರಮಿಡ್ ಶೈಲಿ' ಎಂದು ಕರೆಯುತ್ತಾರೆ.




ಶೀರ್ಷಿಕೆ ಅಥವಾ ತಲೆಬರಹ ಸುದ್ದಿಯ ಶಿರೋಭಾಗ. ಸುದ್ದಿಯ ಶೀರ್ಷಿಕೆಯು ಸಂಕ್ಷಿಪ್ತವಾಗಿರಬೇಕು ಮತ್ತು ಆಕರ್ಷಕವಾಗಿರಬೇಕು. ಇಡೀ ಸುದ್ದಿಯ ಸಾರವನ್ನು ಒಳಗೊಂಡು ನೋಡಿದ ತಕ್ಷಣ ಓದುಗರನ್ನು ಆಕರ್ಷಿಸುವಂತಿರಬೇಕು. ಅದರ ಕೆಳಗೆ ಸುದ್ದಿಯ ಪ್ರಸ್ತಾವನೆ ಇರುತ್ತದೆ. ಪ್ರಸ್ತಾವನೆಯಲ್ಲಿ ಎಲ್ಲಿ, ಏನು, ಯಾವಾಗ, ಏಕೆ, ಯಾರು ಮತ್ತು ಹೇಗೆ ಎಂಬ ಪ್ರಶ್ನೆಗಳಿಗೆ ನಿಖರವಾಗಿ ಉತ್ತರಗಳಿರಬೇಕು. ಒಂದು ಸುದ್ದಿಯ ಪ್ರಸ್ತಾವನೆಯನ್ನು ಓದಿದ ಕೂಡಲೇ ಆ ಘಟನೆಯ ಪೂರ್ಣ ವಿವರಗಳು ತಿಳಿಯುವಂತಿರಬೇಕು. ಸುದ್ದಿಯ ಮುಂದಿನ ಭಾಗಗಳಲ್ಲಿ ಘಟನೆಯ ಪೂರಕ ವಿವರಗಳನ್ನು ಪ್ರಾಮುಖ್ಯದ ಆಧಾರದಲ್ಲಿ ಕೊಡುತ್ತಾರೆ. ಸುದ್ದಿಯ ಪ್ರಾಮುಖ್ಯತೆಯ ಇಳಿಕೆಯ ಕ್ರಮದಲ್ಲಿ ಸುದ್ದಿಯ ಅನೇಕ ವಿವರಗಳನ್ನು ಕೊಡಲಾಗುತ್ತದೆ. ಇದನ್ನು ಸುದ್ದಿಯ ದೇಹ ಎನ್ನುವರು. ಸುದ್ದಿ ಬರವಣಿಗೆಯ ಈ ಶೈಲಿಯು ಪತ್ರಿಕೆಯ ಪುಟ ವಿನ್ಯಾಸದ ದೃಷ್ಟಿಯಿಂದಲೂ ಮಹತ್ವದ್ದಾಗಿದೆ.

ಯಾವುದೇ ವೃತ್ತಿಯನ್ನು ಮಾಡಬೇಕಾದರೂ ಆ ಕ್ಷೇತ್ರದಲ್ಲಿ ವಿಶೇಷವಾದ ಕೌಶಲ್ಯ ಇರಬೇಕಾದುದು ಅಗತ್ಯವಾಗಿದೆ. ಪತ್ರಕರ್ತರಿಗೂ ಇಂತಹ ವೃತ್ತಿ ಕೌಶಲ್ಯಗಳ ಅಗತ್ಯವಿದೆ. ಸುದ್ದಿಯನ್ನು ಗುರುತಿಸುವ ಮತ್ತು ಬರೆಯುವ ಕೌಶಲ್ಯ ಇವುಗಳಲ್ಲಿ ಮುಖ್ಯವಾದುದು. ಸುದ್ದಿಯನ್ನು ಗುರುತಿಸಲು ಪತ್ರಕರ್ತನಿಗೆ 'ಸುದ್ದಿ ನಾಸಿಕ' ಬೇಕು ಎನ್ನುತ್ತಾರೆ. ಇದು ಯಾವುದೇ ಪ್ರತ್ಯೇಕವಾದ ಅಂಗವಲ್ಲ. ಯಾವುದು ಸುದ್ದಿ, ಯಾವುದು ಸುದ್ದಿ ಅಲ್ಲ ಎಂದು ಗುರುತಿಸುವ ವಿಶಿಷ್ಟವಾದ ಗುಣವನ್ನೇ ಸುದ್ದಿ ನಾಸಿಕ ಎನ್ನುವರು. ಪತ್ರಿಕೆಯನ್ನು ಸಾಮಾನ್ಯ ವ್ಯಕ್ತಿಯಿಂದ ಹಿಡಿದು ಉನ್ನತ ಶಿಕ್ಷಣವನ್ನು ಪಡೆದ ವಿದ್ವಾಂಸರ ವರೆಗೆ ಎಲ್ಲರೂ ಓದುತ್ತಾರೆ. ಎಲ್ಲ ವರ್ಗದ ಓದುಗರಿಗೆ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ಬರೆಯುವ ಸಾಮರ್ಥ್ಯ ಪತ್ರಕರ್ತನಿಗೆ ಇರಬೇಕು. ಕುತೂಹಲ, ಪ್ರಾಮಾಣಿಕತೆ, ಧೈರ್ಯ, ಪ್ರತಿಭೆ, ವ್ಯುತ್ಪತ್ತಿ ಮತ್ತು

ಕ್ರಿಯಾಶೀಲತೆಗಳು ಒಬ್ಬ ಪತ್ರಕರ್ತನಲ್ಲಿ ಇರಲೇಬೇಕಾದ ಗುಣಗಳಾಗಿವೆ.

ಪತ್ರಕರ್ತನ ಈ ಎಲ್ಲ ಗುಣಗಳು ಅವನ ಸುದ್ದಿ ಬರವಣಿಗೆಯಲ್ಲಿ ಪ್ರತಿಫಲಿಸಬೇಕು. ಬರೆಯುವ ಸುದ್ದಿ ಸತ್ಯವಾಗಿರಬೇಕು. ಪತ್ರಕರ್ತ ಮೂಲತಃ ಸತ್ಯವಂತನಾಗಿದ್ದರೆ ಮಾತ್ರ ಸತ್ಯವಾದ ಸುದ್ದಿಯನ್ನು ಬರೆಯಲು ಸಾಧ್ಯ. ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯನ್ನು ಜನರು ಸತ್ಯವೆಂದು ನಂಬುತ್ತಾರೆ. ವದಂತಿಗಳು ಸತ್ಯಸಂಗತಿಗಳಲ್ಲ. ಹೀಗಾಗಿ ಗಾಳಿಸುದ್ದಿಗಳನ್ನು ಇತರರು ಸ್ವೀಕರಿಸಿದಂತೆ ಪತ್ರಕರ್ತರು ಸ್ವೀಕರಿಸುವುದಿಲ್ಲ. ಕೆಲವೊಮ್ಮೆ ವರದಿಗಾರರು ಬರೆಯುವ ಸುದ್ದಿ ಸತ್ಯವಾಗಿದ್ದರೂ ನಿಖರವಾಗಿರುವುದಿಲ್ಲ. ನಿಖರತೆಯು ಸತ್ಯದ ಭಾಗವೇ ಆಗಿದೆ. ನಿಖರವಲ್ಲದ ಸುದ್ದಿ ಸುಳ್ಳಿಗೆ ಸಮ. ಅಂಕಿ ಅಂಶಗಳನ್ನು ಕೊಡುವ ಸಂದರ್ಭಗಳಲ್ಲಿ ವರದಿಗಾರನ ನಿಖರತೆಯ ಪರೀಕ್ಷೆ ಆಗುತ್ತದೆ. ಬರೆಯುವ ಸುದ್ದಿ ವಸ್ತುನಿಷ್ಠವಾಗಿರಬೇಕು. ವರದಿಗಳಲ್ಲಿ ಪತ್ರಕರ್ತನ ವೈಯಕ್ತಿಕ ಅಭಿಪ್ರಾಯಗಳು ಬರುವಂತಿಲ್ಲ. ವರದಿಗಾರ ತನ್ನತನವನ್ನು ಎಲ್ಲಿಯೂ ಬಿಂಬಿಸದ ವರದಿಯೇ ವಸ್ತುನಿಷ್ಠ ವರದಿ. ಬರೆಯುವ ಸುದ್ದಿ ಸಕಾಲಿಕವಾಗಿರಬೇಕು. ಪತ್ರಕರ್ತ ಕಾಲದ ದಾಸ. ಸುದ್ದಿಯನ್ನು ಗ್ರಹಿಸುವ ಮತ್ತು ಕ್ಷಣದಲ್ಲಿ ಬರೆಯುವ ಸಾಮರ್ಥ್ಯ ಅವನಿಗಿರಬೇಕು. ಇಂದು ಪ್ರಕಟವಾಗಬೇಕಾದ ಸುದ್ದಿಯನ್ನು ನಾಳೆಗೆ ಮೀಸಲಿಡುವುದು ಪತ್ರಕರ್ತನ ಲಕ್ಷಣವಲ್ಲ. ಸಾಹಿತಿಗಳ ಹಾಗೆ ಪತ್ರಕರ್ತರಿಗೆ 'ಮೂಡ್'ಗಾಗಿ ಕಾಯಲು ಸಾಧ್ಯವಿಲ್ಲ. ಆದುದರಿಂದಲೇ ಪತ್ರಿಕಾ ಬರಹಗಳನ್ನು 'ಅವಸರದ ಸಾಹಿತ್ಯ' ಎಂದು ಕರೆಯುತ್ತಾರೆ. ಬರೆಯುವ ಸುದ್ದಿಗೆ ಸಾಮಾಜಿಕ ಮುಖವಿರಬೇಕು. ವ್ಯಕ್ತಿಯ ಖಾಸಗಿ ಬದುಕನ್ನು ಕೆದಕುವುದು ಭೂಷಣವಲ್ಲ. ಆದರೆ ಸಾಮಾಜಿಕ ಮುಖವಿರುವ ವ್ಯಕ್ತಿಗಳ ಬದುಕಿನ ಸಣ್ಣ ಸಂಗತಿಗಳೂ ಸುದ್ದಿಗಳಾಗುತ್ತವೆ. ಉದಾಹರಣೆಗೆ ದೇಶದ ಪ್ರಧಾನಮಂತ್ರಿಯವರಿಗೆ ನೆಗಡಿಯಾದರೂ ಸುದ್ದಿಯಾಗುವುದು ಈ ಕಾರಣದಿಂದ.

– ಸಂಗ್ರಹ

## ಚಟುವಟಿಕೆಗಳು

- ಮಾಧ್ಯಮಗಳಲ್ಲಿ ಬಳಕೆಯಾಗುತ್ತಿರುವ ಕನ್ನಡ ಭಾಷೆಯು ಅನ್ಯಭಾಷೆಗಳ ಪ್ರಭಾವದಿಂದ ಹದಗೆಡುತ್ತಿರುವುದರ ಕಡೆಗೆ ಸಂಬಂಧಪಟ್ಟವರ ಗಮನ ಸೆಳೆಯುವ ಸಲುವಾಗಿ 'ಓದುಗರ ಓಲೆ'ಗೆ ಲೇಖನವನ್ನು ತಯಾರಿಸಿರಿ.
- ಸಾಮಾಜಿಕ ಸಮಸ್ಯೆಗಳ ಬಗ್ಗೆ ಸರಕಾರವು ಗಮನಹರಿಸುವಂತೆ ಮಾಡುವಲ್ಲಿ ಪತ್ರಿಕೆಗಳ ಪಾತ್ರವೇನು? ಎಂಬುವುದರ ಕುರಿತು ಪ್ರಬಂಧವನ್ನು ಬರೆಯಿರಿ.

- ‘ಪತ್ರಿಕೆಗಳಲ್ಲಿ ಜಾಹೀರಾತುಗಳು’ ಈ ವಿಷಯದ ಕುರಿತು ಕಾರ್ಯಯೋಜನೆಯನ್ನು ತಯಾರಿಸಿರಿ.
- ನೀವು ಮನೆಯಲ್ಲಿ ತಯಾರಿಸಿದ ಬಟ್ಟೆ ತೊಳೆಯುವ ಸಾಬೂನನ್ನು ಸಮಾಜಕ್ಕೆ ಪರಿಚಯಿಸಲು ಅಗತ್ಯವುಳ್ಳ ಜಾಹೀರಾತನ್ನು ಸಿದ್ಧಪಡಿಸಿರಿ.
- ನಿಮ್ಮ ಶಾಲೆಯ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭದ ವರದಿಯನ್ನು ಸಿದ್ಧಪಡಿಸಿರಿ.
- ಪತ್ರಿಕೆಯಲ್ಲಿ ಸಂಪಾದಕೀಯದ ಮಹತ್ವವೇನು? ಯಾವುದಾದರೂ ಪತ್ರಿಕೆಯ/ ಸಂಪಾದಕೀಯಗಳ ಆಧಾರದಲ್ಲಿ ಲೇಖನ ಸಿದ್ಧಪಡಿಸಿರಿ.
- ‘ಸಂಪಾದಕೀಯಗಳು ಪ್ರಜಾಪ್ರಭುತ್ವದ ಜೀವನಾಡಿ ಇದ್ದಂತೆ’ – ಈ ಹೇಳಿಕೆಯನ್ನು ಕುರಿತು ಚರ್ಚಾಗೋಷ್ಠಿ ನಡೆಸಿರಿ.
- ನಿಮ್ಮ ಶಾಲೆಯ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರವನ್ನು ಬರೆಯಿರಿ.

## ಭಾಷಾಭ್ಯಾಸ

- ಪಾಠಭಾಗದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಪಟ್ಟಿಮಾಡಿರಿ.
- ಮುಖ (ಸಂ) – ಮೊಗ (ತ) – ಇತರ ಕೆಲವು ಸಂಸ್ಕೃತ, ತದ್ಭವ ಪದಗಳನ್ನು ಆಯ್ದುಕೊಂಡು ಪಟ್ಟಿ ಮಾಡಿರಿ.

## ಭಾವನಾಮ


- ಉನ್ನತ – ಔನ್ನತ್ಯ – ಈ ರೀತಿಯ ಭಾವನಾಮಗಳನ್ನು ಸಂಗ್ರಹಿಸಿ ಬರೆಯಿರಿ.

# ಕನ್ನಡ ಭಾಷೆ ಮತ್ತು ಸಾಹಿತ್ಯ

## ಭಾಷೆ

ಭಾಷೆ ಮಾನವನಿಗೆ ಅವನ ಉಸಿರಿನಷ್ಟೇ ಅನಿವಾರ್ಯ. 'ಮಾತೆಂಬ ಜ್ಯೋತಿ ಬೆಳಗದಿದ್ದರೆ ಲೋಕವೆಲ್ಲ ಕತ್ತಲೆಯಿಂದ ತುಂಬಿರುತ್ತಿತ್ತು, ಅಂಧಕಾರದಲ್ಲಿಯೇ ತೊಳಲುತ್ತಿತ್ತು' ಎಂದಿದ್ದಾನೆ ಮಹಾಕವಿ ದಂಡಿ. ಭಾಷೆ ಎಂಬುದು ಧ್ವನಿ ಸಂಕೇತಗಳ ವ್ಯವಸ್ಥೆಯಾಗಿದೆ. ಭಾಷೆಯಲ್ಲಿ ಧ್ವನಿ, ಶಬ್ದ, ಅರ್ಥ, ವಾಕ್ಯ ಮುಂತಾದವು ವ್ಯವಸ್ಥಿತ ರೂಪದಲ್ಲಿ ಒಳಗೊಳ್ಳುತ್ತವೆ. ಪ್ರತಿಯೊಂದು ಭಾಷೆಗೆ ತನ್ನದೇ ಆದ ವ್ಯವಸ್ಥೆ ಇರುತ್ತದೆ. ಭಾಷೆಯಲ್ಲಿ ಧ್ವನಿಸಂಕೇತಗಳು ಮೌಖಿಕವಾಗಿದ್ದು ನಂತರ ಲಿಪಿರೂಪ ಪಡೆದು ಸಾಮಾಜಿಕ ಸಂಪರ್ಕಕ್ಕಾಗಿ ಬಳಕೆಯಾಗುತ್ತವೆ. ವ್ಯಕ್ತಿ, ವ್ಯಕ್ತಿಗಳಲ್ಲಿ ಸಾಮಾಜಿಕ ಸಹಕಾರವನ್ನು ಸಾಧಿಸುವುದೇ ಭಾಷೆಯ ಪ್ರಧಾನ ಉದ್ದೇಶವಾಗಿದೆ.

ಪ್ರಪಂಚದಾದ್ಯಂತ ಸುಮಾರು ೬೦೦೦ ಭಾಷೆಗಳಿವೆಯೆಂದು ಅಂದಾಜು ಮಾಡಲಾಗಿದೆ. ಭಾರತದಲ್ಲೇ ೩೦೦೦ ಭಾಷೆಗಳಿವೆ ಎಂದು ಭಾಷಾ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಕನ್ನಡ ಭಾಷೆಯು ದ್ರಾವಿಡ ಭಾಷಾವರ್ಗಕ್ಕೆ ಸೇರಿದೆ. ಕನ್ನಡ, ತಮಿಳು, ತೆಲುಗು, ಮಲೆಯಾಳಂ ಮತ್ತು ತುಳು ಭಾಷೆಗಳು ಸೇರಿ ಪಂಚದ್ರಾವಿಡ ಭಾಷೆಗಳೆನಿಸಿವೆ. ಈ ಐದೂ ಭಾಷೆಗಳ ಮೂಲವಾದ ಭಾಷೆಯನ್ನು ಮೂಲ ದ್ರಾವಿಡ ಭಾಷೆಯೆಂದು ಗುರುತಿಸಲಾಗಿದೆ. ಮೂಲ ದ್ರಾವಿಡದಿಂದ ಕವಲೊಡೆದು ಈ ಭಾಷೆಗಳು ಬೇರೆ ಬೇರೆ ಕಾಲಗಳಲ್ಲಿ ಸ್ವತಂತ್ರ ಭಾಷೆಗಳಾದುವೆಂದು ಹೇಳಲಾಗಿದೆ.



ಕನ್ನಡ ಭಾಷೆಯು ಪ್ರಾಚೀನತೆಯನ್ನು ನೋಡುವಾಗ ದೊರಕಿರುವ ಆಧಾರಗಳಿಂದ ಅದು

ಕ್ರಿಸ್ತಶಕ ೧ ಮತ್ತು ೨ನೆಯ ಶತಮಾನಕ್ಕೆ ಹೋಗುತ್ತದೆ. ಕನ್ನಡ ಭಾಷೆ ಗ್ರಂಥಸ್ಥವಾದಂದಿನಿಂದ ಹಾಗೆಯೆ ಶಾಸನ ಮತ್ತು ಶಾಸನೇತರ ಆಧಾರಗಳಿಂದ ಮಾತ್ರ ಕನ್ನಡದ ಪ್ರಾಚೀನತೆಯನ್ನು ತಿಳಿಯಬೇಕಾಗಿದೆಯೇ ಹೊರತು, ಕನ್ನಡದ ಅವಸ್ಥಾಂತರ ರೂಪವನ್ನಂತೂ ತಿಳಿಯಲಾಗಿಲ್ಲ. ಕ್ರಿ.ಶ. 2ನೇ ಶತಮಾನದ ತಮಿಳು ಕಾವ್ಯ 'ಶಿಲಪ್ಪದಿಗಾರಮ್'ನಲ್ಲಿ ಕನ್ನಡಿಗರನ್ನು 'ಕರುನಾಡರ್' ಎಂದು ಸಂಬೋಧಿಸಲಾಗಿದೆ. ಕ್ರಿ.ಪೂ.ದ ಅಶೋಕನ ಶಾಸನಗಳಲ್ಲಿ 'ಇಸಿಲ'ಪದ, ಮಹಾಭಾರತದ ಸಭಾಪರ್ವ ಮತ್ತು ಭೀಷ್ಮಪರ್ವಗಳಲ್ಲಿ 'ಕರ್ಣಾಟಾ' ಮತ್ತು 'ಕರ್ಣಾಟಕಾ' ಶಬ್ದಗಳು ಕಂಡುಬರುತ್ತವೆ. ಕ್ರಿ.ಪೂ. ೧ನೆಯ ಶತಮಾನದ್ದೆಂದು ಹೇಳಲಾದ 'ಮಾರ್ಕಂಡೇಯ ಪುರಾಣ'ದಲ್ಲಿ ಕರ್ಣಾಟ ದೇಶದ ಪ್ರಸ್ತಾಪವೂ ಬರುತ್ತದೆ. ಹೀಗೆ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನಕ್ಕೆ (ನಮಗೆ ದೊರೆತಿರುವ ಕನ್ನಡದ ಮೊಟ್ಟ ಮೊದಲ ಶಾಸನ) ಎರಡು – ಮೂರು ಶತಮಾನಗಳಷ್ಟು ಹಿಂದೆಯೇ ಕನ್ನಡ ಗ್ರಂಥಸ್ಥ ಭಾಷೆಯಾಗಿರಬಹುದೆಂದು ಊಹಿಸಲಾಗಿದೆ. ಕನ್ನಡದಲ್ಲಿ ನಮಗೆ ಸಿಕ್ಕುವ ಮೊದಲ ಕೃತಿಯೆಂದರೆ 'ಕವಿರಾಜಮಾರ್ಗ' ವೆಂಬ ಲಕ್ಷಣ ಗ್ರಂಥ. ಇದರ ಕಾಲ ಕ್ರಿ.ಶ. ೯ನೇ ಶತಮಾನ ಇದು ವ್ಯಾಕರಣ ವಿಚಾರಗಳನ್ನು ಒಳಗೊಂಡಿದೆ. ಇದಕ್ಕಿಂತ ಹಿಂದೆ ಸಾಹಿತ್ಯ ಕೃತಿಗಳು ಮತ್ತು ವ್ಯಾಕರಣ ಕೃತಿಗಳು ಇದ್ದವೆಂಬುದರ ಬಗ್ಗೆ 'ಕವಿರಾಜಮಾರ್ಗ' ದಲ್ಲಿಯೇ ಪುರಾವೆಗಳು ಸಿಕ್ಕುತ್ತವೆಯಾದರೂ ಅವು ಯಾವುವೂ ಉಪಲಬ್ಧವಿಲ್ಲ.

ಕನ್ನಡ ಭಾಷೆ ಕಾಲಕಾಲಕ್ಕೆ ಮಾರ್ಪಾಡು ಹೊಂದಿ ಅನೇಕ ಅವಸ್ಥೆಗಳನ್ನು ಹೊಂದಿದೆ. ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂದು ಭಾಷಾ ದೃಷ್ಟಿಯಿಂದ ವಿಭಾಗಿಸಲಾಗಿದೆ. ಜೀವಂತ ಭಾಷೆ ನಿಂತ ನೀರಲ್ಲ, ಸದಾ ಚಲಿಸುವ ' ಗುಣವುಳ್ಳದ್ದಾಗಿರುವುದರಿಂದ ಈ ಬದಲಾವಣೆ ಸಹಜವೂ ಆಗಿದೆ.

## ಸಾಹಿತ್ಯ

'ಸಾಹಿತ್ಯ'ದ ಭಾಷೆ ವ್ಯವಹಾರದ ಭಾಷೆಗಿಂತ ಬೇರೆಯಾಗಿರುತ್ತದೆ. ಇಲ್ಲಿ ಎರಡು ವಸ್ತುಗಳು ಸೇರಿರುತ್ತವೆ. 'ಭಾವ', 'ಭಾಷೆ' ಎರಡರ ಸಮ್ಮಿಲನವೇ ಈ ರೂಪವನ್ನು ತಾಳುವುದು.ಮಾನವ ತನ್ನ ರಾಗ, ದ್ವೇಷ, ನೋವು – ನಲಿವುಗಳನ್ನು ಇತರರೊಡನೆ ಹಂಚಿಕೊಳ್ಳುವ ಪ್ರಕ್ರಿಯೆ ಇಲ್ಲಿ ನಡೆದಿರುತ್ತದೆ. ಅಂದರೆ ಸಾಹಿತ್ಯವೆಂಬುದು ಮನೋವ್ಯಾಪಾರವನ್ನು ಅಭಿವ್ಯಕ್ತಗೊಳಿಸುವುದು, ಭಾವದ ವಸ್ತುವನ್ನು ಭಾಷೆಯಲ್ಲಿ ಮೂಡಿಸುವುದು ಎಂದರ್ಥ. ಕ್ಷಣ ಕಾಲದ ವಸ್ತುವನ್ನು ಚಿರಂತನ ಕಾಲದ್ದನ್ನಾಗಿ

ಮಾಡುವುದು ಎಂಬುದು ಕವಿ ರವೀಂದ್ರರ ವಿಚಾರ. ಇಲ್ಲಿ ಅವರು ಸಾಹಿತ್ಯದ ಅಮೂರ್ತತೆಯನ್ನು ಅದರ ಅನಂತತೆಯನ್ನು ಅರಿವಿಗೆ ತರುತ್ತಾರೆ.

## ಪ್ರೇರಣೆ, ಸ್ವರೂಪ

ಸಾಹಿತ್ಯ ಎನ್ನುವುದು ಕಾವ್ಯ, ಕಾದಂಬರಿ, ಕಥೆ, ನಾಟಕ ಎಲ್ಲವನ್ನೂ ಒಳಗೊಂಡಿರುತ್ತದೆ. ಇಂತಹ ಸಾಹಿತ್ಯ ರಚನೆಗೆ ಕೆಲವು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಸಾಹಿತ್ಯ ರಚನೆಗೆ ಅಂತರಂಗದ ಒತ್ತಡ ಹಾಗೂ ಅದರಿಂದ ಬಿಡುಗಡೆಯನ್ನು ಪಡೆಯುವ ಆಶಯವೇ ಕಾರಣವೆಂದು ಹೇಳಲಾಗುತ್ತದೆ. ಬದುಕಿನಲ್ಲಿ ಪಡೆಯುವ ಅಸಂಖ್ಯಾತ ಅನುಭವಗಳು, ಅವುಗಳಲ್ಲಿನ ಯಾವುದೋ ಒಂದು ಸನ್ನಿವೇಶ, ಒಂದು ವಸ್ತು ಪ್ರಚೋದನೆ ನೀಡಿ ಸಾಹಿತ್ಯ ರಚನೆಗೆ ಕಾರಣವಾಗುತ್ತದೆ.

ಸಾಹಿತ್ಯ ರಚನೆಗೆ ಮೂರು ಅಂಶಗಳು ಮುಖ್ಯವಾಗುತ್ತವೆ. ವಸ್ತು, ತಲ್ಲೀನತೆ, ಅನುಭವ. ತನ್ನ ಸುತ್ತ ತೆರೆದು ನಿಂತಿರುವ ವಾಸ್ತವ ಲೋಕವನ್ನು ಕಾಣುವ,ಕಂಡು ತಲ್ಲೀನತೆಯನ್ನು ಪಡೆಯುವ ಗುಣ ಸಾಹಿತಿಯಾದವನಿಗೆ ಇರಬೇಕಾಗುತ್ತದೆ. ಈ ತಲ್ಲೀನತೆಯಿಂದ ಪಡೆಯುವ ದಿವ್ಯಾನುಭೂತಿಯೇ ಅನುಭವ ವಿಶೇಷವೆನಿಸಿಕೊಳ್ಳುತ್ತದೆ. ಈ ಮೂರೂ ಯಾವುದೋ ಶುಭ ಮುಹೂರ್ತದಲ್ಲಿ ಒಂದಾಗಿ ಕೃತಿಯ ನಿರ್ಮಾಣವಾಗುತ್ತದೆ. ಕನ್ನಡ ಭಾಷೆಯಲ್ಲಿ ಸಾಹಿತ್ಯ ನಿರ್ಮಾಣ ಕಾರ್ಯವನ್ನು ಅವಲೋಕಿಸಿದಾಗ, ಸಹಜವಾಗಿಯೇ ಭಾಷೆಯಲ್ಲಿನ ಕಾಲಕಾಲದ ಬದಲಾವಣೆಗೆ ಸರಿಯಾಗಿ ಸಾಹಿತ್ಯ ರಚನೆಯಲ್ಲಿ ಕೂಡ ಬದಲಾವಣೆಯನ್ನು ಕಾಣುತ್ತೇವೆ. ಹೀಗಾಗಿ ಕನ್ನಡ ಸಾಹಿತ್ಯದ ಬೆಳವಣಿಗೆಯ ಚರಿತ್ರೆಯನ್ನು ಸಾಹಿತ್ಯದ ದೃಷ್ಟಿಯಿಂದ ಬೇರೆಯದೇ ರೀತಿಯಲ್ಲಿ ವರ್ಗೀಕರಣ ಮಾಡಲಾಗಿದೆ. ಪಂಪಪೂರ್ವ ಯುಗ, ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ, ಆಧುನಿಕಯುಗ ಎಂಬುದು ಅಂಥ ವರ್ಗೀಕರಣಗಳಲ್ಲಿ ಒಂದು.

ಹತ್ತನೇ ಶತಮಾನವು ಕನ್ನಡ ಸಾಹಿತ್ಯ ಪರಂಪರೆಯ ಸುವರ್ಣಯುಗವೆಂದು ಖ್ಯಾತವಾಗಿದೆ. ಕನ್ನಡ ಸಾಹಿತ್ಯದ ದಿಗ್ಗಜರು, ರತ್ನತ್ರಯರು ಎಂಬ ಖ್ಯಾತಿಗೆ ಪಾತ್ರರಾದ ಪಂಪ, ಪೊನ್ನ, ರನ್ನ ಈ ಶ್ರೇಷ್ಠ ಕವಿಗಳು ಅತ್ಯುತ್ತಮ ಮೌಲಿಕ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ೧೦ನೇ ಶತಮಾನದ ಪಂಪನ ಕೃತಿಗಳು ಕನ್ನಡ ಸಾಹಿತ್ಯದ ಉಪಲಬ್ಧ ಆದ್ಯ ಕಾವ್ಯ ಕೃತಿಗಳಾಗಿವೆ. ಈ ಯುಗದ ಸಾಹಿತ್ಯದ ಪ್ರಾತಿನಿಧಿಕ ವ್ಯಕ್ತಿಯಾಗಿ ಪಂಪನಿದ್ದು, ಈ ಕಾಲಘಟ್ಟವನ್ನು 'ಪಂಪಯುಗ'ವೆಂದೇ ಗುರುತಿಸಲಾಗಿದೆ. ಈ ಕಾಲದಲ್ಲಿ ಪ್ರಾಬಲ್ಯದಲ್ಲಿದ್ದ

ಮತ–ಜೈನಮತ. ಮಾರ್ಗ ಪರಂಪರೆಯ ಚಂಪೂ ಶೈಲಿಯ ಕಾವ್ಯಗಳ, ಶಾಸ್ತ್ರ ಗ್ರಂಥಗಳ ರಚನೆ ಈ ಅವಧಿಯಲ್ಲಿ ಕಂಡುಬರುತ್ತದೆ. ಕವಿಗಳಿಗೆ ರಾಜಾಶ್ರಯವಿದ್ದು, ಈ ಶತಮಾನದಲ್ಲಿ ಲೌಕಿಕ, ಆಗಮಿಕ ಎಂಬ ವಿಭಾಗಗಳನ್ನು ಕಾಣಬಹುದಾಗಿದೆ. ಧಾರ್ಮಿಕ ಕಾವ್ಯಗಳಲ್ಲಿ ಕಾವ್ಯಧರ್ಮ ಮತ್ತು ಧರ್ಮಗಳ ಸಂಯೋಜನೆಯನ್ನು ಕಾಯ್ದುಕೊಳ್ಳಲಾಗಿದೆ. ಕಾವ್ಯದ ಭಾಷೆ ಹಳಗನ್ನಡ. ಸಮಕಾಲೀನ ರಾಜಕೀಯ ಚರಿತ್ರೆ, ಜನಜೀವನವನ್ನು ಈ ಯುಗದ ಕವಿಗಳು ತಮ್ಮ ಕೆಲವು ಕಾವ್ಯಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಪಂಪನ ದಾರಿಯನ್ನು ಅನುಸರಿಸಿದ ಇತರ ಕವಿಗಳಲ್ಲಿ ಪ್ರಮುಖರೆನಿಸಿದವರು ರನ್ನ, ಪೊನ್ನ, ನಾಗವರ್ಮ, ಜನ್ನ, ನಯಸೇನ ಮುಂತಾದವರು. ಉಪಲಬ್ಧವಿರುವ ಕನ್ನಡದ ಮೊದಲ ಗದ್ಯಗ್ರಂಥ ಶಿವಕೋಟ್ಯಾಚಾರ್ಯರ 'ವಡ್ಡಾರಾಧನೆ'. ಇದು ಪಂಪಪೂರ್ವಯುಗದ ಸಾಹಿತ್ಯದ ಪರಿಚಯ ನೀಡುತ್ತದೆ. ಚಾವುಂಡರಾಯಪುರಾಣವು ಪಂಪಯುಗದ ಒಂದು ಗದ್ಯಗ್ರಂಥ.

ಕನ್ನಡ ಸಾಹಿತ್ಯದ ಮುಂದಿನ ಕಾಲಘಟ್ಟವನ್ನು ಬಸವಯುಗವೆಂದು ಗುರುತಿಸಲಾಗಿದೆ. ಕನ್ನಡ ಸಾಹಿತ್ಯ ಮಾರ್ಗದಿಂದ ದೇಸಿಗೆ ಸಂಕ್ರಮಣ ಹೊಂದಿದ ಯುಗ. ಈ ಕಾಲದ ಸಾಹಿತ್ಯದ ವೈಶಿಷ್ಟ್ಯವಿರುವುದೇ 'ವಚನಸಾಹಿತ್ಯ' ರೂಪದ ಉದಯದಲ್ಲಿ. ಇದು ಮನುಕುಲದ ಉದ್ಧಾರಕ್ಕಾಗಿ ಸರಳವೂ ಸುಲಲಿತವೂ ಆದ ರೀತಿಯಲ್ಲಿ ಅಭಿವ್ಯಕ್ತಿಗೊಂಡಪ್ರಕಾರ. ಹಳಗನ್ನಡದ ಕ್ಲಿಷ್ಟತೆ, ಸಂಕೀರ್ಣತೆಗಳಿಂದ ಮುಕ್ತವಾದ ಭಾಷೆ ಇಲ್ಲಿದೆ.

ಜೈನ ಧರ್ಮವು ಹಿಂದೆ ಸರಿದು, ವೀರಶೈವ ಧರ್ಮವು ತನ್ನ ಪ್ರಾಬಲ್ಯವನ್ನು ಹೊಂದಿ ಶಿವಶರಣರ ಆತ್ಮ ನಿರೀಕ್ಷಣೆ, ಅನುಭಾವ, ನೀತಿ, ಮತ, ತತ್ತ್ವಬೋಧೆಗಳು ವಚನಗಳ ಮೂಲಕ ಹೊರಹೊಮ್ಮಿವೆ. ವಚನಸಾಹಿತ್ಯ, ವಿಶ್ವಸಾಹಿತ್ಯಕ್ಕೆ ಕನ್ನಡದ ವಿಶಿಷ್ಟ ಕೊಡುಗೆಯೆನಿಸಿದೆ.

ಶರಣರು ತಮ್ಮ ಪರಿಸರದೊಂದಿಗೆ ಸ್ಪಂದಿಸಿದ ಕ್ರಿಯೆಯ ಫಲವೇ ಈ ವಚನ ಸಾಹಿತ್ಯ. ಜನಪರ ಸಾಹಿತ್ಯ ಸೃಷ್ಟಿಯ ಪ್ರಾತಿನಿಧಿಕ ವ್ಯಕ್ತಿಯಾಗಿ ಬಸವಣ್ಣನವರನ್ನು ಗುರುತಿಸುವುದರಿಂದಲೇ ಈ ಯುಗವನ್ನು 'ಬಸವಯುಗ'ಎಂದೇ ಕರೆಯಲಾಗಿದೆ. ಈ ಯುಗದ ಇತರ ಪ್ರಮುಖ ವಚನಕಾರರು ಅಲ್ಲಮ ಪ್ರಭು, ದೇವರದಾಸಿಮಯ್ಯ, ಅಕ್ಕಮಹಾದೇವಿ ಚೆನ್ನಬಸವಣ್ಣ ಮುಂತಾದವರು. ಸ್ತ್ರೀಯರೂ ಸೇರಿದಂತೆ ಹಲವರು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಈ ಕಾಲದ ಮತ್ತೊಂದು ಪ್ರಮುಖ ಅಂಶವೆನಿಸಿದೆ. ಕ್ಲಿಷ್ಟವಾದ ಚಂಪೂ ಶೈಲಿಯಿಂದ ಸರಳ ರೂಪಗಳಾದ ವಚನ, ರಗಳೆ, ತ್ರಿಪದಿ, ಷಟ್ಪದಿ, ಸಾಂಗತ್ಯಗಳೆಂಬ

ಅಚ್ಚಗನ್ನಡದ ದೇಶಿ ಛಂದೋರೂಪಗಳು ಈ ಕಾಲದಲ್ಲಿ ಮೈದಳೆದುವು. ಹರಿಹರ ಕವಿಯು ರಗಳೆಯೆಂಬ ವಿಶಿಷ್ಟ ಪ್ರಕಾರದಲ್ಲಿ ಕಾವ್ಯ ರಚಿಸಿದನು.

'ಷಟ್ಪದಿ' ಎಂಬ ಅಚ್ಚ ಕನ್ನಡದ ಛಂದೋರೂಪದಲ್ಲಿ ಅದ್ಭುತವಾದ ಕಾವ್ಯಗಳ ಸೃಷ್ಟಿಯಾಯಿತು. ರಾಘವಾಂಕ, ಭೀಮಕವಿ, ವಿರೂಪಾಕ್ಷ ಪಂಡಿತ ಮುಂತಾದವರು ಕಾವ್ಯ ರಚನೆ ಮಾಡಿದರು. ರಾಘವಾಂಕನನ್ನು 'ಷಟ್ಪದೀ ಬ್ರಹ್ಮ'ನೆಂದೇ ಗುರುತಿಸಲಾಗಿದೆ. ಷಟ್ಪದಿ ಪರಂಪರೆಯ ಅತ್ಯದ್ಭುತ ಕವಿಯೆನಿಸಿದ ಕುಮಾರವ್ಯಾಸನ ಕೃತಿ 'ಕಲಿಯದವರಿಗೆ ಕಾಮಧೇನು' ವೆನಿಸಿಕೊಂಡಿದೆ. ಕುಮಾರವ್ಯಾಸನ ಕೃತಿಗಿರುವ ಹಿರಿಮೆಯನ್ನು ಗುರುತಿಸಿಯೇ 'ಕುಮಾರವ್ಯಾಸ ಯುಗ'ವೆಂದು ಪ್ರತ್ಯೇಕವಾಗಿ ಕರೆಯಲಾಗಿದೆ.

ಕನ್ನಡ ಸಾಹಿತ್ಯದ ಮುಂದಿನ ಪ್ರಮುಖ ಘಟ್ಟವೆಂದರೆ ದಾಸಸಾಹಿತ್ಯ ಅಥವಾ ಕೀರ್ತನಸಾಹಿತ್ಯ. ಭಕ್ತಿ ಪ್ರಧಾನವಾಗಿರುವ ಈ ಪ್ರಕಾರವನ್ನು 'ಭಕ್ತಿಸಾಹಿತ್ಯ'ವೆಂದೂ ವೈದಿಕ ಧರ್ಮವನ್ನೊಳಗೊಂಡಿರುವುದರಿಂದ ವೈದಿಕಸಾಹಿತ್ಯವೆಂದೂ ಕರೆಯಲಾಗಿದೆ. ಆತ್ಮನಿವೇದನೆ, ಸ್ತುತಿ, ಉಪದೇಶ, ತತ್ತ್ವಚಿಂತನೆ ಇತ್ಯಾದಿ ವಿಷಯ ವೈವಿಧ್ಯವು ಸಂಗೀತ ಮಾಧ್ಯಮದ ಮೂಲಕ ವ್ಯಕ್ತಗೊಂಡಿದ್ದು ಹರಿಭಕ್ತಿ ಮತ್ತು ಮಾಧ್ವತತ್ತ್ವದ ಪ್ರತಿಪಾದನೆಯನ್ನು ಇಲ್ಲಿ ಕಾಣುತ್ತೇವೆ. ಈ ಹರಿದಾಸರ ಕೀರ್ತನ ಸಾಹಿತ್ಯಕ್ಕೆ ಮಧ್ವಾಚಾರ್ಯರು ಪ್ರತಿಪಾದಿಸಿದ ದ್ವೈತ ಸಿದ್ಧಾಂತವೇ ಪ್ರೇರಣೆಯಾಗಿದೆ. ವೇದ, ಉಪನಿಷತ್ತುಗಳನ್ನು ತಿರುಳುಗನ್ನಡದಲ್ಲಿ ಜನಸಾಮಾನ್ಯರಿಗೆ ಅನಾವರಣಗೊಳಿಸಿದವರು ಈ ಹರಿದಾಸರು; ಹಾಗಾಗಿ ಇದು ಹರಿದಾಸ ಸಾಹಿತ್ಯ. ಇದರ ಪ್ರೇರಣೆ ಪ್ರಭಾವಗಳು ಮುಂದಿನ ಕಾಲಘಟ್ಟದಲ್ಲೂ ಸಶಕ್ತವಾಗಿದ್ದವು. ನವ ವಸಾಹತುಶಾಹಿ ಆಕ್ರಮಣದ ಸಂದರ್ಭದಲ್ಲಿ ನಮ್ಮ ಸಾಂಸ್ಕೃತಿಕ ನೆಲೆಗಳನ್ನು ಉಳಿಸಿಕೊಳ್ಳುವ ಮಹತ್ವದ ಕಾರ್ಯದಲ್ಲಿ ಪಾಲ್ಗೊಳ್ಳುತ್ತ ಜನರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವಲ್ಲಿ ಕೂಡ ಇದು ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದು ಕಂಡುಬರುತ್ತದೆ. ಈ ಪ್ರಕಾರದಲ್ಲಿನ ಪ್ರಮುಖರೆಂದರೆ ನರಹರಿತೀರ್ಥರು, ಪುರಂದರದಾಸರು, ಕನಕದಾಸರು, ವಿಜಯದಾಸರು ಮುಂತಾದವರು. ರತ್ನಾಕರವರ್ಣಿಯು ಸಾಂಗತ್ಯದಲ್ಲಿ ಭರತೇಶ ವೈಭವ ಎಂಬ ಮನೋಹರವಾದ ಕಾವ್ಯವನ್ನು ರಚಿಸಿದನು.

೧೯ನೇ ಶತಮಾನ ದೇಶದ ಚರಿತ್ರೆಯಲ್ಲಿ ಒಂದು ಪರ್ವಕಾಲ. ನಮ್ಮ ಸ್ವಾತಂತ್ರ್ಯ ಪೂರ್ಣಹರಣವಾದದ್ದು ಮತ್ತು ಅದನ್ನು ಮತ್ತೆ ಪಡೆಯಬೇಕೆಂಬ ಛಲ ಮೂಡಿ ಬಂದದ್ದು ಈ ಕಾಲದಲ್ಲಿಯೇ. ಅನೇಕ ಕ್ರಾಂತಿಕಾರಕ ವಿಚಾರಗಳು ತಲೆ ಎತ್ತಿದ್ದು ಈ ಅವಧಿಯಲ್ಲಿಯೇ. ಹಳತು, ಹೊಸತರ ಘರ್ಷಣೆಯಿಂದ ಹೊಸ ಹೊಸ ವಿಚಾರಗಳು

ಮೂಡಿ ಅವು ಭಾರತೀಯ ಸಾಹಿತ್ಯದಲ್ಲಿಯೂ ಬದಲಾವಣೆಗಳನ್ನು ತಂದುವು. ಹೊಸ ಹೊಸ ಸಾಹಿತ್ಯ ಪ್ರಕಾರಗಳು ಕಾಣಿಸಿಕೊಂಡು ಸಾಹಿತ್ಯದ ವಸ್ತು ದೇವರು, ಧರ್ಮ, ಪುರಾಣ, ಇತಿಹಾಸಗಳ ಸಂಬಂಧವನ್ನು ತೊರೆದು ವರ್ತಮಾನದ ಜೀವನಕ್ಕೆ ಹತ್ತಿರವಾಯಿತು. ಸಾಹಿತ್ಯ ರಾಜಾಶ್ರಯವನ್ನು ಸಂಪೂರ್ಣವಾಗಿ ಬಿಟ್ಟು ಜನರಿಂದ, ಜನರಿಗಾಗಿ ಎನ್ನುವಂತಾಯಿತು. ಕನ್ನಡ ಸಾಹಿತ್ಯವೂ ತನ್ನನ್ನು ಈ ಬದಲಾವಣೆಗೆ ತೆರೆದುಕೊಂಡಿತು. ಹೊಸ ಬಗೆಯ ಸಾಹಿತ್ಯ ರಚನೆಯಲ್ಲಿ ಅನುವಾದ ಸೇರಿಕೊಂಡಿತು. ಸಂಸ್ಕೃತ, ಆಂಗ್ಲ ಸಾಹಿತ್ಯಗಳ ಶ್ರೇಷ್ಠ ಕೃತಿಗಳು ಕನ್ನಡ ಭಾಷೆಗೆ ಅನುವಾದಗೊಂಡು, ರೂಪಾಂತರಗೊಂಡು ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದವು ಆಧುನಿಕ ಯುಗದಲ್ಲಿ ನವೀನ ಪಂಥಗಳೂ ಹೊಸ ಸಾಹಿತ್ಯ ಪ್ರಕಾರಗಳೂ ಕಾಣಿಸಿಕೊಂಡುವು. ನವೋದಯ, ಪ್ರಗತಿಶೀಲ, ನವ್ಯ, ದಲಿತ – ಬಂಡಾಯ ಎಂಬಿವು ಮುಖ್ಯವಾದ ಪಂಥಗಳು.

ಕಾವ್ಯ, ಕಾದಂಬರಿ, ನಾಟಕ, ಕಥೆ, ಪ್ರಬಂಧ, ವಿಮರ್ಶೆ ಎಂದು ಹೀಗೆ ಹತ್ತು ಹಲವು ಬಗೆಗಳಲ್ಲಿ ಸಾಹಿತ್ಯವು ವೈವಿಧ್ಯವನ್ನು ಪಡೆಯಿತು. ತನ್ನ ಆಯಾಮವನ್ನು ವಿಸ್ತರಿಸಿಕೊಂಡಿತು. ಕಾವ್ಯಕ್ಕಿಂತ ಗದ್ಯ ಪ್ರಕಾರ ಹೆಚ್ಚು ಜನಪ್ರಿಯತೆಯನ್ನು ಗಳಿಸಿತು.

ಬಿ.ಎಂ.ಶ್ರೀ, ಬೇಂದ್ರೆ , ಕುವೆಂಪು, ಮಾಸ್ತಿ, ಗೋಪಾಲಕೃಷ್ಣ ಅಡಿಗ, ಗೋವಿಂದಪೈ, ಶಿವರಾಮ ಕಾರಂತ, ಕೈಲಾಸಂ, ಅನಕೃ, ಎ.ಎನ್. ಮೂರ್ತಿರಾವ್, ನಿರಂಜನ, ಜಿ.ಸಿದ್ಧಲಿಂಗಯ್ಯ, ಮ. ನ. ಜವರಯ್ಯ, ಜಯದೇವಿತಾಯಿ ಲಿಗಾಡೆ, ತ್ರಿವೇಣಿ, ಎಂ.ಕೆ. ಇಂದಿರಾ, ಸಾರಾ ಅಬೂಬಕ್ಕರ್, ವೈದೇಹಿ ಮೊದಲಾದವರು ಪ್ರಸಿದ್ಧ ಲೇಖಕರಲ್ಲಿ ಕೆಲವರು. ಸಾಹಿತ್ಯ ನಿರ್ಮಾಣದ ಕಾರ್ಯಕ್ಕೆ ಪ್ರೇರಣೆ ನೀಡುವ ವಸ್ತು ಈ ಲೋಕದಿಂದ ಲಭಿಸಿದ್ದು, ಅದನ್ನು ವ್ಯಕ್ತಗೊಳಿಸುವ ಭಾಷೆಯೂ ಈ ಸಮಾಜದ ಕೊಡುಗೆಯೇ ನಿಜ. ಆದರೂ ವಸ್ತುವಿಗೆ ತಕ್ಕ ಭಾಷೆ, ಆಲೋಚನೆ, ಕಲ್ಪನಾಂಶ ಹಾಗೂ ಸಾಹಿತ್ಯ ಪ್ರಕಾರದ ತಿಳಿವಳಿಕೆ ಅಂದರೆ ಶೈಲಿ, ಛಂದಸ್ಸು ಮುಂತಾದುವು ಅಗತ್ಯವಾಗುತ್ತವೆ. ಏಕೆಂದರೆ ಸಾಹಿತ್ಯ ಎಂಬ ಪದದ ವ್ಯಾಪ್ತಿ ವಿಶಾಲವಾದುದು. ಬರವಣಿಗೆಗೆ ಇಳಿದ ರೂಪ ಮಾತ್ರವಲ್ಲದೆ ಬಾಯಿಂದ ಬಾಯಿಗೆ ಪ್ರಸಾರವಾಗುವ ಜನಪದ ಸಾಹಿತ್ಯಕ್ಕೂ ಈ ಹೆಸರು ಅನ್ವಯವಾಗುತ್ತದೆ.

ಸಾಹಿತ್ಯವೆಂದರೆ ಅದು ಕೇವಲ ಪುಸ್ತಕವಲ್ಲ. ಲಲಿತ ಕಲೆಗಳಲ್ಲಿ ಸಾಹಿತ್ಯವೂ ಒಂದು. ರೂಪ ಮತ್ತು ಶಿಲ್ಪಗಳಲ್ಲಿ ಕಲೆಗಳೊಂದಿಗೆ ಸೇರಿಸಿದರೂ ಸಾಹಿತ್ಯ ಮಿಕ್ಕ ಕಲೆಗಳಿಗಿಂತ ವಿಶಿಷ್ಟವಾದುದು. ಏಕೆಂದರೆ ಮಿಕ್ಕ ಕಲೆಗಳಿಗೆ ಇರುವಂತೆ ಇದಕ್ಕೆ ತನ್ನದೇ ಆದ ನಿರ್ದಿಷ್ಟ ಮಾಧ್ಯಮ ಭಾಷೆಯಾಗಿದೆ. ರಸರೂಪದಲ್ಲಿ ಕವಿಯ ಮನಸ್ಸಿನಲ್ಲಿ ಮೊಳೆತು ಸಾಹಿತ್ಯ

ರೂಪದಲ್ಲಿ ಸಹೃದಯರ ಮನಸ್ಸನ್ನು ಪ್ರವೇಶಿಸಿ ಅದ್ಭುತವಾದ ಪರಿಣಾಮವನ್ನು ಉಂಟುಮಾಡುತ್ತದೆ. ಹಾಗಾಗಿ ಸಾಹಿತ್ಯವೆಂಬುದು ಬದುಕಿನ ಎಲ್ಲ ಅಂಶಗಳನ್ನು ಒಳಗೊಂಡಿರುತ್ತದೆ.

## ಪ್ರಯೋಜನ

ಸಾಹಿತ್ಯದ ಪ್ರಯೋಜನದ ಕುರಿತು ಹಲವರು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಸಾಹಿತ್ಯದಿಂದ ದೊರೆಯುವ ಆನಂದ, ಆ ಮೂಲಕ ನೀಡುವ ಸತ್ಪ್ರೇರಣೆ ಸಮಾಜವನ್ನು ತಿದ್ದುವ, ಶುದ್ಧಗೊಳಿಸುವ ಸಾಮರ್ಥ್ಯ ಸಾಹಿತ್ಯಕ್ಕಿದೆ ಎಂಬ ನಂಬಿಕೆಯಿಂದ ಬದುಕಿನ ಬಗ್ಗೆ ನಿರ್ದಿಷ್ಟ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವಂತೆ ಮಾಡುತ್ತದೆ.

'ಸಾಹಿತ್ಯ ಬದುಕಿನ ವಿಮರ್ಶೆಯಲ್ಲ, ಅದರ ಪರಿವರ್ತನೆ' ಎಂದು ಡಾ. ರಾಧಾಕೃಷ್ಣನ್ ಹೇಳಿದ್ದಾರೆ. ಸಾಹಿತ್ಯ 'ವಾಚಕರ ಹೃದಯವನ್ನು ಪರಿಪಾಕಗೊಳಿಸುತ್ತದೆ' ಎನ್ನುತ್ತಾರೆ ಮಾಸ್ತಿಯವರು. 'ಪುಸ್ತಕಗಳು ಮೃಗೀಯತೆಯಿಂದ ಮಾನವೀಯತೆಯತ್ತ ಮುನ್ನಡೆಸುತ್ತವೆ' ಎನ್ನುವ ಮಾತು ಮ್ಯಾಕ್ಸಿಂ ಗಾರ್ಕಿಯವರದು. ಈ ಎಲ್ಲರ ಮಾತುಗಳು ಸಾಹಿತ್ಯದ ಪ್ರಯೋಜನವನ್ನೇ ಎತ್ತಿ ಹೇಳುತ್ತವೆ. ಕವಿಗೆ ಯಶಸ್ಸನ್ನು ಹಾಗೂ ಸಹೃದಯರಿಗೆ ವ್ಯವಹಾರ ಜ್ಞಾನವನ್ನು, ಲೋಕಾನುಭವವನ್ನು ಈ ಈರ್ವರಿಗೂ ಅವರ್ಣನೀಯ ಆನಂದವನ್ನು ಸಾಹಿತ್ಯ ನೀಡುತ್ತದೆ. ದೇಶದ ಇತಿಹಾಸವನ್ನೇ ಸಾಹಿತ್ಯ ಕೃತಿಗಳು ಬದಲಾಯಿಸಿದ ಉದಾಹರಣೆಗಳಿವೆ. 'ಒಂದು ಹನಿ ಮಸಿ ಕೋಟಿ ಜನರಿಗೆ ಬಿಸಿ' ಎಂಬ ಮಾತು ಈ ಹಿನ್ನೆಲೆಯಲ್ಲಿಯೇ ಮೂಡಿಬಂದಿದೆ.

ಸಂಗ್ರಹ : ಕನ್ನಡ ಸಾಹಿತ್ಯ ಸಾಂಸ್ಕೃತಿಕ ಕೋಶ (ಸಂ) – ಡಾ. ಚಿ.ಸಿ. ನಿಂಗಣ್ಣ

## ಚಟುವಟಿಕೆಗಳು

- ಕನ್ನಡ ಭಾಷೆಯ ಬೆಳವಣಿಗೆಯ ಕುರಿತು ಟಿಪ್ಪಣಿ ಬರೆಯಿರಿ
- ಕನ್ನಡ ಸಾಹಿತ್ಯದ ಹುಟ್ಟು ಬೆಳವಣಿಗೆಯ ಕುರಿತು ಸಂಕ್ಷಿಪ್ತವಾಗಿ ವಿವರಿಸಿರಿ.
- ಸಾಹಿತ್ಯ ಪ್ರಕಾರಗಳ ವೈವಿಧ್ಯತೆಯನ್ನು ಗುರುತಿಸಿ ಟಿಪ್ಪಣಿ ಬರೆಯಿರಿ.
- ನಡುಗನ್ನಡ ಸಾಹಿತ್ಯದಲ್ಲಿ ನಿಮ್ಮ ನೆಚ್ಚಿನ ಕವಿ/ಕೃತಿಯ ಕುರಿತು ಪರಿಚಯಾತ್ಮಕ ಲೇಖನವನ್ನು ಬರೆಯಿರಿ.

- ಪಠ್ಯಭಾಗದಲ್ಲಿ ಬಂದಿರುವ ಗದ್ಯ ಸಾಹಿತ್ಯ ಪ್ರಕಾರಗಳಲ್ಲಿ ನಿಮಗೆ ಮೆಚ್ಚುಗೆಯಾದ ಒಂದರ ಕುರಿತು ಲೇಖನ ಬರೆಯಿರಿ.
- ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳನ್ನು ಪರಿಚಯಿಸಿ ಒಂದು ಕಾರ್ಯಯೋಜನೆಯನ್ನು ತಯಾರಿಸಿರಿ.

## ಹೆಚ್ಚಿನ ಓದಿಗೆ


- ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ.ಮುಗಳಿ, ಮೈಸೂರು ವಿಶ್ವವಿದ್ಯಾನಿಲಯ.
- ದ್ರಾವಿಡ ಭಾಷಾ ವಿಜ್ಞಾನ – ಲೇ : ಡಾ. ಸಂಗಮೇಶ ಸವದತ್ತಿಮಠ.

### ಕಲಿಕಾ ಸಾಧನೆಗಳು

- ಕಥೆ, ಕಾದಂಬರಿ, ವಿಮರ್ಶೆ, ಹರಟೆ, ಪತ್ರಿಕೋದ್ಯಮ, ಕಲಾ ಪ್ರಕಾರ ಮುಂತಾದ ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಆಳವಾಗಿ ಅಭ್ಯಾಸಮಾಡುತ್ತಾರೆ.
- ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ, ದಲಿತ, ಬಂಡಾಯ ಸಾಹಿತ್ಯಗಳನ್ನು ಪರಿಚಯಮಾಡಿಕೊಳ್ಳುತ್ತಾರೆ, ಅವುಗಳ ಆಶಯಗಳನ್ನು ತಿಳಿದು, ವಿಮರ್ಶಾ ಲೇಖನಗಳನ್ನು ತಯಾರಿಸುತ್ತಾರೆ.
- ಸಾಹಿತ್ಯ ಕೃತಿಗಳನ್ನು ಅವಲೋಕಿಸಿ ಅವುಗಳಲ್ಲಿನ ಸಾಮಾಜಿಕ ಜೀವನ, ಸಮಾಜ ವಿಮರ್ಶೆ, ಸಾಮಾಜಿಕ ಮೌಲ್ಯಗಳನ್ನು ತಿಳಿದುಕೊಳ್ಳುತ್ತಾರೆ.
- ಸಾಹಿತ್ಯ ಕೃತಿಗಳ ವಿವಿಧ ರಚನಾ ತಂತ್ರಗಳನ್ನು ಕರಗತ ಮಾಡಿಕೊಳ್ಳುವ ನೈಪುಣ್ಯವನ್ನು ಗಳಿಸುತ್ತಾರೆ.
- ಪತ್ರಿಕೋದ್ಯಮ, ದೃಶ್ಯ ಮಾಧ್ಯಮ, ಕಂಪ್ಯೂಟರ್, ಅಂತರ್ಜಾಲ ಎಂಬಿವುಗಳಿಗೆ ಅಗತ್ಯವಾದ ಭಾಷಾ ನೈಪುಣ್ಯವನ್ನು ಗಳಿಸುತ್ತಾರೆ.
- ಜಾಹೀರಾತು, ಕಲೆ, ಅತಿಥಿ ಸತ್ಕಾರ, ಕೃತಿ ರಚನೆ, ಪ್ರಕಾಶನ, ಸಂಘಸಂಸ್ಥೆಗಳು, ಇತರ ವಾಣಿಜ್ಯ ವಲಯಗಳಿಗೆ ಅಗತ್ಯವಾದ ಭಾಷಾ ಪ್ರಾವಿಣ್ಯ ಗಳಿಸುತ್ತಾರೆ.
- ಬರಹಗಾರರ, ಕಲಾವಿದರ, ದೃಷ್ಟಿಕೋನಗಳನ್ನು ವಿಶ್ಲೇಷಿಸಿ ಅಲ್ಲಿನ ಆಶಯಗಳನ್ನು ಗುರುತಿಸಿ ಸೂಕ್ತವಾಗಿ ನಿರೂಪಿಸಲು ಸಮರ್ಥರಾಗುತ್ತಾರೆ.



# ಅನುಬಂಧ – ಅರ್ಥಕೋಶ



## ಬಾಶಿಂಗ ಬಲ

ಮುಂಜಾಲಿಸುಟ್ಟೊ – ಮುಂಜಾನೆಯಿಂದ
ಗೌಜಿ – ಗದ್ದಲ
ತರಬಿ – ನಿಲ್ಲಿಸಿ

ಹಂತರದಾಗನ – ಅಂತಹುದರಲ್ಲಿ
ಹರೇದ – ಹರೆಯದ, ಪ್ರಾಯದ
ಅಯ್ತಿ – ಇದೆ

ಪಾಸಿಂದರಗೋಳ – ಪ್ರಯಾಣಿಕರು
ನಡಬರಕ – ಮಧ್ಯದಲ್ಲಿಯೇ
ತೇಟ – ಅದರಂತೆ

ಹೋಕ್ಕೈತೇನ್ರಿ – ಹೋಗುತ್ತದೆಯೇ
ಕಟಾಪು – ಕಟಾವು
ಪರಬೂ – ಪ್ರಭು

ಇತ್ತಂತೋ – ಇರಬಹುದೇನೋ
ಶಮನಾ – ಚುಂಗ
ಪೆಟಗಾ – ಪೇಟಾ

ಡಬ್ಬಣ ಕಾಟೀಧೋತ್ರ – ಡಬ್ಬಣ ಗಾತ್ರದ ಅಂಚಿನ ಚಿತ್ತಾರದ ಧೋತರ
ಫೈಸು – (ಸ್ಥಳ) ವಿಸ್ತಾರವಾಗು

ಕೀಸರಾ ಬಾಸರಾ – ಗದ್ದಲ, ಶಬ್ದ ಮಾಲಿನ್ಯ
ಗತೆ – ರೀತಿ
ಅಟs – ಅಷ್ಟೆ (ಸ್ವಲ್ಪವೇ)

ಎಷ್ಟಿ – ಕೆ.ಎಸ್.ಆರ್.ಟಿ.ಸಿ. ಬಸ್ಸು
ಕುಂದ್ರಾಕ – ಕುಳಿತುಕೊಳ್ಳಲು

ಹಿಂತಾ – ಇಂತಹ
ದಂಡಿಗೆ ಹತ್ತಿ – ದಡಕ್ಕೆ ಹೊಂದಿ
ಚಲೋತ್ನಾಗಿ – ಚೆನ್ನಾಗಿ

ಕಾರದಾಣಿ – ಸೇವ (ಖಾರ ಬುಂದಿ)
ಅತ್ತಿಕಾಯಿ ಪುಗ್ಗಿ – ಅತ್ತಿಮರದ ಕಾಯಿಯ ಗಾತ್ರದ ಭಜಿ

ಮಿರ್ಚಿ – ಹಸಿಮೆಣಸಿನಕಾಯಿ ಭಜಿ
ಚೊಲೋ – ಒಳ್ಳೆಯ
ಪಾನ – ಎಲೆಅಡಿಕೆ

ಬಾಗದ – ಭಾಗದ; ಪ್ರದೇಶದ
ಹೋಕ್ಕಾರು – ಹೋಗುತ್ತಾರೆ, ಹೋಗುವವರು

ಬರಾಣಾ – ಬಂದ ಕೂಡಲೆ
ಸೈತ – ಸಹಿತ
ಮಜೇಶೀರ – ಮೋಜಿನ

ಮುಕರತೈತಿ – ಆವರಿಸುತ್ತದೆ, ಮುತ್ತಿಗೆ ಹಾಕು
ಹೊಂದೆ – ಹೊಂದಿಕೊಂಡು

ಆಟ ಅಲ್ಲದ – ಅಷ್ಟೇ ಅಲ್ಲದ
ಮಜಕೂರು – ಗುಟ್ಟಿನ ವಿಷಯ
ಹಕೀಕತ್ತ – ಸಂಗತಿ

ಬಾಜೂಕ – ಪಕ್ಕದಲ್ಲಿ
ಚಕಡಿ – ಎತ್ತಿನ ಗಾಡಿ, ಬಂಡಿ

ಕೊಳ್ಳಹರದ – ಕೊರಳು ಹರದ, ಗಾಡಿಗೆ ಹೂಡಿದ ಎತ್ತನ್ನು ಬಿಚ್ಚಿದ
ಆತು – ಒರಗಿಕೊಂಡು

ಹಗರಕ – ಸಾವಕಾಶವಾಗಿ, ನಿಧಾನ
ಪೋರಿ – ಹರೆಯದ ಹುಡುಗಿ
ತೆಪ್ಪ – ತಪ್ಪು

ದೇಖಾವೇನ – ನೋಡತಕ್ಕಂಥವಳು, ಆಕರ್ಷಕ
ಹಂತೇಕ – ಹತ್ತಿರ

ಗ್ವಾಡಿ ನೆಳ್ಳಿಗೆ – ಗೋಡೆ ನೆರಳಿಗೆ
ಮೋತಿ ಮ್ಯಾಗಿನ – ಮುಖದ ಮೇಲಿನ

ನಾಕಬಟ್ಟ – ನಾಲ್ಕು ಬೆರಳು
ಗಿರಕಿ ಮಛ್ಛಿ – ಗಿರಕ್ ಗಿರಕ್ ಎಂದು ಶಬ್ದ ಮಾಡುವ ಚಪ್ಪಲಿ

ಕೆದಕಾಕ – ಕೂಲಂಕಷ ವಿಚಾರಿಸು
ಖುದ್ದ – ನಿಜವಾಗಿ
ಲಗ್ಗಣಕಾರೇ – ಲಗ್ನದ ಕಾರ್ಯ

ಮನ್ನಿ – ಮೊನ್ನೆ
ಕಡಿಂದ – ಕಡಿಯಿಂದ
ಹತಗಡ್ಯಾವರಿಗೆ – ಸಂಬಂಧಿಕರಿಗೆ

ಯಾಳೇ – ವೇಳೆ
ಯರ್ತ – ವ್ಯರ್ಥ
ಅದೆಂಗ – ಅದು ಹೇಗೆ

ಕರೇವ – ಸತ್ಯ
ಅಂಥಂಗ – ಅಂದ ಹಾಗೆ
ಹೆಸರುದೆಶಿ – ಗುರುತು ಪರಿಚಯ

ಗೆಬರ್‍ಯಾಡು – ಹೆಕ್ಕಿ ಹೆಕ್ಕಿ ತೆಗೆ
ಇಚ್ಚೀಕಡಿಂದ – ಈ ಕಡೆಯಿಂದ
ಬಗಾನ್ನ – ಬೇಗನೆ

ದಣೀ ಅಂತ – ಪೂರ್ಣ ತುಂಬಿಕೊಂಡು, ಆಯಾಸಗೊಂಡು
ಥ್ವಾಡೆ – ಸ್ವಲ್ಪ

ಮುರಕಾ – ಸೋಗು, ಡೌಲು, ಒಯ್ಯಾರ
ಮಲಕಟ್ಟು – ಕಂಚುಕ
ಒಂದೀಟ – ಒಂದು ಸ್ವಲ್ಪ

ಮದಲ – ಮೊದಲು, ಪ್ರಾರಂಭದಲ್ಲಿ
ಹಿಂಬಾಲೆ – ಹಿಂದಿನಿಂದ, ಹಿಂಬಾಲಿಸಿ

ಚಂಚ – ಎಲೆ ಅಡಿಕೆ ಇಟ್ಟುಕೊಳ್ಳುವ ಚಿಕ್ಕ ಚೀಲ, ಸಂಚಿ
ಹೊಳ್ಳಿ – ಹೊರಳಿ, ಮರಳಿ

ತಾ ಆಟ – ತಾನು ಸ್ವಲ್ಪ
ಸುಣ್ಣದ ಕಾಯಿ – ಸುಣ್ಣದ ಡಬ್ಬಿ
ಸೆಟಸಿ – ನೆಟ್ಟಗೆ

ಅಂಗಟ್ಟಿಬಳ್ಳ – ಹೆಬ್ಬೆರಳು
ಗಾತನ – ಆಘಾತ
ಹೊಡ್ಯಾಣಾ – ಹೊಡೆದಾಗ

ಒಮಿಗಿತಲೆ – ಒಮ್ಮೆಲೇ
ಬ್ಯಾನಿದ – ರೋಗದವ
ಎಡ್ಡು – ಎರಡು

ಚೀಟಿ ಎತ್ತಬೇಕೆ – ದಿವಾಳಿ ಆಗಬೇಕೆ
ಒತ್ತರ – ಜೋರು, ತೀವ್ರ
ಹೋಕ್ಕಿದ್ರ – ಹೋಗುವುದಿದ್ದರೆ

ಇರದಿಕ್ಕ – ಇಲ್ಲದಿದ್ದರೆ
ಬೆಯ್ಯತೈತಲ್ಲ – ಬಯ್ಯುತ್ತದೆಯಲ್ಲ
ತೊಟ್ಟೊ – ಸಮಯದಿಂದ

ಧೇನಿಸು – ಯೋಚಿಸು
ಕಾರೇದ ಯಾಳೆ – ಮದುವೆ ಕಾರ್ಯದ ವೇಳೆ

ಹಿರ್‍ಯಾಗೊಟಕ್ ಅಂದ – ಗಂಡ ಸತ್ತುಹೋದ
ಗೈರ ಆತ – ತಪ್ಪಾಯಿತು, ಲೋಪ ಆಯಿತು

ಬರಾಬ್ಬರಿ – ಸರಿ
ಅನ್ನೆ – ಅನ್ಯಾಯ
ದೌಡ – ಬೇಗನೆ

ಉತಾವಳಿ ಆಗಿದ್ದ – ಉತ್ಸುಕನಾಗಿದ್ದ, ಸಿದ್ಧನಾಗಿದ್ದ
ಆಟರಾಗ – ಅಷ್ಟರಲ್ಲಿ

ಲಂಡಚಣ್ಣ – ಗಿಡ್ಡ ಪ್ಯಾಂಟ್ (Half pant)
ಕಿಲನರ ಗತೆ – ಕ್ಲೀನರ್ ತರಹ
ಹೊಳ್ಳಿಕೆ – ತಿರುವು

ಲೇನ ಮ್ಯಾಲ – ಲೈನ ಮೇಲೆ, ರಸ್ತೆ ಮೇಲೆ
ಮುಕರಾಕ – ಮುತ್ತಿಗೆ ಹಾಕು
ಒಂದಳತೀ – ಒಂದೇ ಸಮನೆ

ಹತ್ತಂಡಿಯಾಗಿ – ಹತ್ತಿಕೊಂಡು, ಒತ್ತಿಕೊಂಡು
ಎರಡರ ಮಟ – ಎರಡರ ತನಕ

ಕಟರಾ – ರಿಪೇರಿಗೆ ಬಂದ, ಹಳೆಯ, ಅರ್ಧಮರ್ಧ ಹಾಳಾದ

ಫಟಫಟಿ – ಮೋಟರ್ ಸೈಕಲ್

ಅಡ್ಡಮಳಿ ದಿವ್ಸ – ಮಳೆಗಾಲದ ಆರಂಭದ ದಿನಗಳು

ಯಾಳೆಸೀರ – ವೇಳೆಗೆ ಸರಿಯಾಗಿ

ಚಾಲೂ – ಆರಂಭ, ಶುರು, ಪ್ರಾರಂಭ

ನಶೀಬನ ಹರಕೈತಿ – ಅದೃಷ್ಟ ಚೆನ್ನಾಗಿಲ್ಲ

ಖಜೀಲ – ಕಸಿವಿಸಿ, ವಿಷಾದ, ವ್ಯಥೆ

ಕಟ್ಟಿನ ಜ್ವರ – ಟೈಫೈಡ್

ಉಡಕೀ ಹೆಂಗಸು – ವಿಧವೆ

ಏನತೆಪ್ಪ – ಏನು ತಪ್ಪು?

ಇಮನೀ ಗಂಡ – ವಿಧುರ

ಕೂರಿಗೆ – 4 ಎಕರೆ (ಹೊಲ)

ನಾಲಕೆತ್ತಿನ ಕಮತ – ನಾಲ್ಕು ಎತ್ತು ಇದ್ದವರ ವ್ಯವಸಾಯ

ನೀ ಅರ – ನೀನಾದರೂ

ಸೋಸತಿ – ಕಷ್ಟಪಡುವೆ

ಕಮ ಕಮ – ಅಸ್ಪಷ್ಟವಾಗಿ

ತಿಳೀದಟ – ತಿಳಿದಷ್ಟು

ದುರಗಮರಗಿ ಆಟ – ವಿಚಾರಗಳ ತಾಕಲಾಟ

ಚಪ್ಪರ ಬದನಿಕಾಯಿ – ಟೊಮೆಟೋ ಹಣ್ಣು

ಆಡಿಸ್ಯಾನಂತ – ಹೇಳಿಸಿದ್ದಾನೆಂದು

ಗಿರಮಿಟ್ – ಗೀರು ಹಾಕು

ಗುಳದಾಳಿ – ಮಂಗಳಸೂತ್ರ

ಬೆರಕಿ – ಜಾಣ, ಜಾಣಾಕ್ಷ, ಚುರುಕಾದ

ಹತಗಡೆಯವರು – ಸಂಬಂಧಿಕರು

ಪಾವಣೆಗೋಳು – ಬೀಗರು, ನೆಂಟರು

ಹಚಿಗೊಟ್ಟ – ಕಳಿಸಿಕೊಟ್ಟ

ಆಗೂಮಟ – ಆಗುವವರೆಗೆ

ಯಚ್ಛಾವತ್ – ಇಚ್ಛಾನುಸಾರ

ದಾಗೀಣ – ಒಡವೆ, ಆಭರಣ

ವಸ್ತಿ – ವಸತಿ

ಬೇತಲ ಮಣಿ – ಬೈತಲೆ ಮಣಿ

ಚೌಘಡಾ – ನಗಾರಿ, ಚರ್ಮದ ವಾದ್ಯ

ಪರಾತ – ಹರಿವಾಣ

ಡಬಗಳ್ಳಿ – ದಪ್ಪ ಕಳ್ಳಿಗಿಡ

ಭಾನಗಡಿ – ಹಗರಣ

ಬಂದ ಅಕ್ಯಾವು – ಮುಚ್ಚತ್ತವೆ

ಕಿತಬಿ – ಕಿತಾಪತಿ

ಹೋಳಾಗರಿ – ಪಕ್ಕಕ್ಕೆ ಸರಿಯಿರಿ

ಚಿಟಗಿ ಹೊಡೆಯೂದರಾಗ – ತತ್‌ಕ್ಷಣದಲ್ಲಿ, ಕ್ಷಣಮಾತ್ರದಲ್ಲಿ.

ಇರದಿಕ್ಕರ – ಇಲ್ಲದಿದ್ದರೆ

## ಏಳಯ್ಯಾ ಬೆಳಗಾಯಿತು

ಜಾವ – ಹೊತ್ತು

ಪವಿತ್ರ – ಶ್ರೇಷ್ಠ

ಅನಾಹುತ – ತೊಂದರೆ

ಪ್ರಶಾಂತ – ಶಾಂತ

ಚೇತನ – ಜೀವ

ನೀರವ – ನಿಶ್ಶಬ್ದ

ತಟಾಕ – ಕೊಳ, ಕೆರೆ, ಜಲಾಶಯ

ನಿಶಾಚರ – ರಾತ್ರಿಯಲ್ಲಿ ಸುತ್ತಾಡುವ

ವಾಗ್ಯುದ್ಧ – ಮಾತಿನ ಕಲಹ

ದಾಕ್ಷಿಣ್ಯ – ಹಂಗು

ನಾಚಿಕೆ – ಅವಮಾನ

ಕ್ಷುದ್ರಪ್ರಾಣಿ – ಸಣ್ಣ ಪ್ರಾಣಿ

ರೂಂಮೇಟ್ – ಕೊಠಡಿಯ ಸಹಪಾಠಿ

| | | |
|---|---|---|
| ಒಪ್ಪಂದ – ತೀರ್ಮಾನ | ಬೋಸಿ – ತಂಬಿಗೆ | ದಬ್ಬಾಳಿಕೆ – ದೌರ್ಜನ್ಯ |
| ಬ್ರಾಹ್ಮೀ ಮುಹೂರ್ತ – ಪ್ರಾತಃಕಾಲ | ಮೈಗಳ್ಳತನ – ಸೋಮಾರಿತನ | ಮೂದಲಿಸಿ – ಹೀಯಾಳಿಸಿ |
| ಕುಡುಮಿ – ಗತ್ತು ಮಾಡುವವ | ವಾರ್ಡನ್ – ಹಾಸ್ಟೆಲ್ ಮೇಲ್ವಿಚಾರಕ | |
| ತೇಜೋಭಂಗ – ಅವಮಾನಪಡಿಸು | ಗಿರಿಯೊಡೆಯ – ಬೆಟ್ಟದ ಒಡೆಯ | |
| ಉದಯರಾಗ – ಮಗುವಿನ ಅಳು | ಆಕ್ಷೇಪಣೆ – ದೂಷಣೆ, ಅಡ್ಡಿ | ಹೆಮ್ಮೆ – ಹಿರಿಮೆ |
| ಕಾರ್ಯದಕ್ಷ – ಕಾರ್ಯದಲ್ಲಿ ನುರಿತವನು | ಸಾರ್ಥಕ – ಪ್ರಯೋಜನ | ತಿರಸ್ಕಾರ – ಅನಾದರ |
| ನವಚೇತನ – ಹೊಸಉತ್ಸಾಹ | ಪ್ರಶಸ್ತ – ಶ್ರೇಷ್ಠ | ನಿಸ್ಸಾರ – ಸಾರರಹಿತ |
| ಮುದ – ಸಂತೋಷ | ಅನಂತ – ಕೊನೆಯಿಲ್ಲದ | ಸ್ತಂಭ – ಕಂಬ |
| ಮೇಲುದ – ಮೇಲೆ ಹೊದೆಯುವ ವಸ್ತ್ರ | ಅಲ್ಪಸಂಖ್ಯಾತ – ಕಡಿಮೆ ಸಂಖ್ಯೆಯ | |
| ನತದೃಷ್ಟ – ಅದೃಷ್ಟವಿಲ್ಲದ | ಶಿಸ್ತಿನ ಸಿಪಾಯಿ – ಶಿಸ್ತು ಪಾಲಿಸುವವ | |
| ವಿವಿಧೋದ್ದೇಶ – ವಿಧವಿಧದ ಉದ್ದೇಶ | ವೈರ – ಹಗೆತನ | ಶ್ರದ್ಧೆ – ಆಸಕ್ತಿ |
| ಅನಿರ್ಬಾಧಿತ – ತಡೆಯಿಲ್ಲದ | ಪರಮಾರೋಗ್ಯ – ಒಳ್ಳೆಯ ಆರೋಗ್ಯ | |
| ಔಕುವುದು – ಮುತ್ತುವುದು | ವಾಣಿ – ಮಾತು | ಸ್ಫೂರ್ತಿ – ಉಲ್ಲಾಸ. |

